
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪ್ರಕಟಣೆ

# ಪಾಠಶಾಲಾ

## ಒಳಗು - ಹೊರಗು

Azim Premji University

ಸಂಚಿಕೆ 27 | ಮಾರ್ಚ್ 2026 | ತ್ರೈಮಾಸಿಕ



# ಪಾಠಶಾಲಾ
## ಒಳಗು - ಹೊರಗು

**ಮಾರ್ಚ್ 2026 | ಸಂಚಿಕೆ 27**



### ಸಂಪಾದಕರ ತಂಡ

**ಪ್ರತಿಭಾ ಕಟಿಯಾರ್ (ಮುಖ್ಯ ಸಂಪಾದಕರು)**
pratibha.katiyar@azimpremjifoundation.org

**ಶೆಫಾಲಿ ತ್ರಿಪಾಠೀ ಮೆಹ್ತಾ (ಸಹ ಸಂಪಾದಕರು)**
shefali.mehta@apu.edu.in

**ಗೌತಮ್ ಪಾಂಡೆ**
gautam@azimpremjifoundation.org

**ದಶರಥ್ ಕುಮಾರ್ ಪರೀಕ್**
dashrath.pareek@azimpremjifoundation.org

**ಸುನೀಲ್ ಕುಮಾರ್ ಸಾಹ್**
sunil@azimpremjifoundation.org

**ಭಾಸ್ಕರ್ ಉಪ್ರೆತಿ**
bhaskar.upreti@azimpremjifoundation.org

**ಜಗಮೋಹನ್ ಸಿಂಗ್ ಕಠೈತ್**
jagmohan@azimpremjifoundation.org

**ಗುರುಬಚನ್ ಸಿಂಗ್**
gurbachan.singh@azimpremjifoundation.org

**ಸಿದ್ಧಾರ್ಥ್ ಕುಮಾರ್ ಜೈನ್**
siddharth.jain@azimpremjifoundation.org

**ರಜನಿ ದ್ವಿವೇದಿ**
rajni.dwivedi@azimpremjifoundation.org

**ರಾಘವೇಂದ್ರ ಹೇರ್ಲೆ ಜಿ.**
Raghavendra.herle@azimpremjifoundation.org

**ಶೋಭಾ ಲೋಕನಾಥನ್ ಕವೂರಿ**
shobha.kavoori@azimpremjifoundation.org

**Managing Editor**
ಸುಧೀಶ್ ವೆಂಕಟೇಶ್

**ಪ್ರಕಾಶನ ತಂಡ**
ಮೀರಾ ಪ್ರಭು
ಶಹನಾಜ಼್ ಬೇಗಂ
ಲೋಕರಾಮ್ ವಿ. ಜಿ.
ಸಂಬಿತ್ ಮಹಾಪಾತ್ರ

**ಸಂಪಾದಕರ ಕಛೇರಿ**
ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸರ್ವೆ ನಂ. 66, ಬೂರುಗುಂಟೆ ಗ್ರಾಮ
ಚಿಕ್ಕನಹಳ್ಳಿ, ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು - 562125

**ಅನುವಾದ ಸಂಪಾದಕರು**
ಮಧುಕರ ಎಸ್ ಪುಟ್ಟಿ (ಕನ್ನಡ)
ರಾಜೇಶ್ ಉತ್ಸಾಹೀ (ಹಿಂದಿ)
ಶೆಫಾಲಿ ತ್ರಿಪಾಠೀ ಮೆಹ್ತಾ (ಇಂಗ್ಲಿಷ್)

**ಪುಟವಿನ್ಯಾಸ**
ಪುಟವಿನ್ಯಾಸ (ಹಿಂದಿ): ಗಣೇಶ್ ಗ್ರಾಫಿಕ್ಸ್, ಭೋಪಾಲ, ಮಧ್ಯ ಪ್ರದೇಶ
ಪುಟವಿನ್ಯಾಸ (ಕನ್ನಡ ಮತ್ತು ಇಂಗ್ಲಿಷ್): ಎಮ್‌ಎಪಿ ಸಿಸ್ಟಮ್ಸ್, ಬೆಂಗಳೂರು

**ವಿನ್ಯಾಸ**
ವಿನ್ಯಾಸ ತಂಡ, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಚಿತ್ರಗಳು: ಅಜೀಂ ಪ್ರೇಮ್‌ಜಿ ಫೌಂಡೇಷನ್ ಆರ್ಕೈವ್ಸ್, ಲೇಖಕರು
ಮುಖಪುಟ ಚಿತ್ರ: ಪುರುಷೋತ್ತಮ್ ಸಿಂಗ್ ಠಾಕೂರ್

**ಮುದ್ರಣ**
ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು



**ಸಂಪರ್ಕ:** pathshala@apu.edu.in (ಸಂಪಾದಕರು) or publications@apu.edu.in (ಪ್ರಕಟಣೆಗಳು)


ಪಾಠಶಾಲಾ ಒಳಗು-ಹೊರಗು, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಿಂದ ಪ್ರಕಟವಾಗುವ, ಪ್ರಾಥಮಿಕ ಶಿಕ್ಷಣವನ್ನು ಕುರಿತಾದ ಒಂದು ತ್ರೈಮಾಸಿಕ ಪತ್ರಿಕೆ. ಈ ಪತ್ರಿಕೆಯು ದೇಶದಾದ್ಯಂತ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮತ್ತು ಹಿರಿಯ ಪ್ರಾಥಮಿಕ ಹಂತಗಳ ಸರ್ಕಾರಿ ಶಾಲಾ ಶಿಕ್ಷಕರಿಗೆ ಅಭ್ಯಾಸ ಆಧಾರಿತ ಲೇಖನಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020, ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಬುನಾದಿ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳೊಂದಿಗೆ ಹೊಂದಿಕೊಂಡಿರುವ ಪರಿಣಾಮಕಾರಿ ಬೋಧನಾ ವಿಧಾನಗಳ ಮೇಲೆ ಬೆಳಕು ಚೆಲ್ಲುವ ದೃಷ್ಟಿಕೋನಗಳು, ಅನುಭವಗಳು, ಪರ್ಯಾಲೋಚನೆಗಳು ಮತ್ತು ತರಗತಿ ಪ್ರಕ್ರಿಯೆಗಳನ್ನು ಶಿಕ್ಷಕರು ಹಂಚಿಕೊಳ್ಳಲು ಇರುವ ಒಂದು ವೇದಿಕೆ ಇದು. ಈ ಪತ್ರಿಕೆಯು ಮೊದಲು ಹಿಂದಿಯಲ್ಲಿ ಪ್ರಕಟಗೊಂಡು, ನಂತರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಿಸಲ್ಪಡುತ್ತದೆ.


- ಲೇಖನದಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರದ್ದಾಗಿರುತ್ತವೆ. ಅವು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ದೃಷ್ಟಿ ಅಥವಾ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.
- ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಶೈಕ್ಷಣಿಕ ಮತ್ತು ಲಾಭರಹಿತ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಆದರೆ, ಬಳಸುವ ಮುನ್ನ ಕಡ್ಡಾಯವಾಗಿ ಲೇಖಕರ ಮತ್ತು ಪ್ರಕಾಶಕರ ಅನುಮತಿಯನ್ನು ಪಡೆಯಬೇಕು ಮತ್ತು ಬಳಸುವಾಗ ಮೂಲ ಲೇಖನವನ್ನು ಉಲ್ಲೇಖಿಸಬೇಕು.
- ಮಕ್ಕಳ ಗುರುತನ್ನು ಕಾಪಾಡುವ ದೃಷ್ಟಿಯಿಂದ ಅವರ ಹೆಸರುಗಳನ್ನು ಬದಲಾಯಿಸಲಾಗಿದೆ.

# ಸಂಪಾದಕೀಯ

ವಿದ್ಯಾರ್ಥಿಗಳಿಗೆ ಕಲಿಸಲು ಮತ್ತು ಶಾಲೆಯನ್ನು ಆನಂದದಾಯಕ ಸ್ಥಳವಾಗಿಸಲು, ಸಕಾರಾತ್ಮಕ ಶಕ್ತಿಯಿಂದ ತುಂಬಿದ ಶಿಕ್ಷಕರು ಬಗೆಬಗೆಯ ವಿಶಿಷ್ಟ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾರೆ. ಇವುಗಳನ್ನು ಕಂಡಾಗ, "ಇಷ್ಟೊಂದು ಭರವಸೆಯ ಶಕ್ತಿ ಅವರಿಗೆ ಎಲ್ಲಿಂದ ಬರುತ್ತದೆ?" ಎಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಮೂಡುವುದು ಸಹಜ. ಶಿಕ್ಷಕರೊಂದಿಗೆ ನಡೆಸಿದ ನಿರಂತರ ಸಂವಾದಗಳು ಮತ್ತು ಅವರ ಶಾಲಾ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿದಾಗ ಸಿಗುವ ಏಕೈಕ ಉತ್ತರವೆಂದರೆ—'ಆ ಶಕ್ತಿ ಅವರಿಗೆ ವಿದ್ಯಾರ್ಥಿಗಳ ಕಲಿಕೆಯಿಂದಲೇ ದೊರೆಯುತ್ತದೆ!'

ವಿದ್ಯಾರ್ಥಿಗಳಿಗೆ ಸರಿಯಾಗಿ ಕಲಿಯಲು ಸಾಧ್ಯವಾಗದಿದ್ದಾಗ ಶಿಕ್ಷಕರು ಚಡಪಡಿಸುತ್ತಾರೆ; ಅದೇ ಮಕ್ಕಳು ಚೆನ್ನಾಗಿ ಕಲಿತು ಯಶಸ್ವಿಯಾದಾಗ ಅವರಿಗೆ ಅಪಾರ ತೃಪ್ತಿ ಸಿಗುತ್ತದೆ. ಕಲಿಕೆಯಿಂದ ಸಿಗುವ ಈ ಆತ್ಮತೃಪ್ತಿಯೇ ಶಿಕ್ಷಕರು ತಮ್ಮನ್ನು ತಾವು ನಿರಂತರವಾಗಿ ಸುಧಾರಿಸಿಕೊಳ್ಳಲು ಮತ್ತು ಬೋಧನೆಯ ಹೊಸ ಹಾಗೂ ಪರಿಣಾಮಕಾರಿ ಮಾರ್ಗಗಳನ್ನು ಹುಡುಕುತ್ತಿರಲು ಪ್ರೇರಣೆ ನೀಡುತ್ತದೆ.

*ಪಾಠಶಾಲಾ – ಒಳಗೂ ಹೊರಗೂ* ಪತ್ರಿಕೆಯು ದೇಶಾದ್ಯಂತ ಇರುವ ಇಂತಹ ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರ ತರಗತಿಯ ಅನುಭವಗಳನ್ನು ಲೇಖನಗಳ ರೂಪದಲ್ಲಿ ಸಂಗ್ರಹಿಸಿ ಹಂಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಪಾಠಶಾಲಾ ಪತ್ರಿಕೆಯ ಬದ್ಧ ಬರಹಗಾರರು ಮತ್ತು ಪ್ರಬುದ್ಧ ಓದುಗರ ಕುಟುಂಬವು ನಿರಂತರವಾಗಿ ಬೆಳೆಯುತ್ತಿರುವುದು ನಮಗೆ ಅಪಾರ ಸಂತೋಷ ತಂದಿದೆ. ಪತ್ರಿಕೆಯ ಲೇಖನಗಳ ಕುರಿತು ನೀವು ನೀಡುವ ಪ್ರತಿಕ್ರಿಯೆಗಳು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ. ಪಾಠಶಾಲಾದಲ್ಲಿ ಪ್ರಕಟವಾಗುವ ಲೇಖನಗಳು ನಿಮ್ಮ ತರಗತಿಯ ಬೋಧನಾ ಪ್ರಕ್ರಿಯೆಗಳಲ್ಲಿ ಉಪಯುಕ್ತವಾಗುತ್ತಿವೆ ಎಂದು ತಿಳಿದಾಗ ನಮಗೆ ತೃಪ್ತಿಯೆನಿಸುತ್ತದೆ.

*ಪಾಠಶಾಲಾದ* ಈ ಸಂಚಿಕೆಯಲ್ಲಿಯೂ ನಾವು ಬೋಧನೆಗೆ ಉಪಯುಕ್ತವಾದ ಅನುಭವಜನ್ಯ ವಿಷಯಗಳನ್ನು ಕ್ರೋಢೀಕರಿಸಿದ್ದೇವೆ. ವಿದ್ಯಾರ್ಥಿಗಳು ಮೇಲಿನ ತರಗತಿಗಳಿಗೆ ಉತ್ತೀರ್ಣರಾಗುತ್ತಾರೆ, ಆದರೆ ಅನೇಕ ಮಕ್ಕಳ ಕಲಿಕಾ ಮಟ್ಟವು ಅವರ ತರಗತಿಗೆ ಅನುಗುಣವಾಗಿ ಇರುವುದಿಲ್ಲ ಎಂಬ ಕಳಕಳಿಯ ಅಂಶವನ್ನು ಈ ಸಂಚಿಕೆಯಲ್ಲಿ ನೀವು ಗಮನಿಸಬಹುದು. ಅಂತಹ ಸಂದರ್ಭಗಳಲ್ಲಿ ಶಿಕ್ಷಕರೆದುರಿಗಿರುವ ಸವಾಲುಗಳನ್ನು ಹೇಗೆ ಪರಿಹರಿಸುವುದು? ವಿದ್ಯಾರ್ಥಿಗಳು ಮೌಖಿಕವಾಗಿ ಕೇಳಿದ ಪ್ರಶ್ನೆಗಳನ್ನು ಸುಲಭವಾಗಿ ಬಿಡಿಸಿದರೂ, ಲಿಖಿತ ರೂಪದ ಪ್ರಶ್ನೆಗಳು ಎದುರಾದಾಗ ಗೊಂದಲಕ್ಕೀಡಾಗುವ ಸಮಸ್ಯೆಯನ್ನು ಗುರುತಿಸಿ ಪರಿಹರಿಸುವ ಯತ್ನವನ್ನು ಒಂದು ಲೇಖನದಲ್ಲಿ ಮಾಡಲಾಗಿದೆ. ಪಾಠದ ಯೋಜನೆಯನ್ನು ಸಿದ್ಧಪಡಿಸಿ ಬೋಧಿಸುವುದು ಎಷ್ಟು ಪ್ರಯೋಜನಕಾರಿ ಎಂಬುದರ ಕುರಿತು ಶಿಕ್ಷಕಿಯೊಬ್ಬರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಹಾಗೆಯೇ, ವಿದ್ಯಾರ್ಥಿಗಳ ಕಲಿಕೆಯಲ್ಲಿ *ಸಹವರ್ತಿ ಕಲಿಕೆ* (ಪಿಯರ್ ಲರ್ನಿಂಗ್) ಹೇಗೆ ಪರಿಣಾಮಕಾರಿ ಪಾತ್ರ ವಹಿಸುತ್ತದೆ ಎಂಬುದಕ್ಕೆ ಕೆಲವು ಸ್ವಾರಸ್ಯಕರ ಉದಾಹರಣೆಗಳು ಇಲ್ಲಿವೆ. ಎಂದಿನಂತೆ, ಒಂದು ಲೇಖನವು ಪೂರ್ವ ಪ್ರಾಥಮಿಕ ಶಿಕ್ಷಣದ ಮೇಲೆ ಬೆಳಕು ಚೆಲ್ಲಿದ್ದು, ಅಂಗನವಾಡಿ ಕೇಂದ್ರವನ್ನು ಸುಂದರ ಕಲಿಕಾ ತಾಣವನ್ನಾಗಿ ಹೇಗೆ ಮಾರ್ಪಡಿಸಬಹುದು ಎಂಬುದನ್ನು ವಿವರಿಸುತ್ತದೆ. ಈ ವಿಶೇಷ ಲೇಖನಗಳ ಜೊತೆಗೆ ಪತ್ರಿಕೆಯ ಎಲ್ಲಾ ಕಾಯಂ ಅಂಕಣಗಳೂ ಸಹ ಮೂಡಿಬಂದಿವೆ.

ಹಿಂದಿನ ಸಂಚಿಕೆಗಳಂತೆಯೇ ಈ ಸಂಚಿಕೆಯೂ ನಿಮಗೆ ಇಷ್ಟವಾಗುತ್ತದೆ ಮತ್ತು ಉಪಯುಕ್ತವಾಗಲಿದೆ ಎಂದು ಆಶಿಸುತ್ತೇವೆ. ನಿಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ಖಂಡಿತವಾಗಿಯೂ ನಮ್ಮೊಂದಿಗೆ ಹಂಚಿಕೊಳ್ಳಿ. ಒಂದು ವೇಳೆ ಪಾಠಶಾಲಾ ಪತ್ರಿಕೆಯ ಲೇಖನಗಳು ನಿಮ್ಮ ಬೋಧನಾ ಶೈಲಿಯಲ್ಲಿ ಏನಾದರೂ ಧನಾತ್ಮಕ ಬದಲಾವಣೆ ತಂದಿದ್ದರೆ ಅಥವಾ ಸಹಕಾರಿಯಾಗಿದ್ದರೆ, ಅದನ್ನು ನಮಗೆ ಬರೆದು ತಿಳಿಸಲು ಮರೆಯಬೇಡಿ.

ಓದುತ್ತಿರಿ, ಸಂಪರ್ಕದಲ್ಲಿರಿ!

ಶುಭಾಶಯಗಳೊಂದಿಗೆ,
**ಪ್ರತಿಭಾ ಕಟಿಯಾರ್**
ಪ್ರಧಾನ ಸಂಪಾದಕರು

# ಪರಿವಿಡಿ

ಸಂಪಾದಕೀಯ


1. ಹಲವು ವಿಷಯಗಳ ಮೇಲೆ ಕೆಲಸ ಮಾಡುವ ಮೂಲಕ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವುದು — 3
   ಶ್ವೇತಾ ವಿಶ್ವಕರ್ಮ

2. ಚಿಂತನಶೀಲ ಶಿಕ್ಷಕರು ಬೋಧನಾ ಪ್ರಕ್ರಿಯೆಗೆ ಜೀವ ತುಂಬುತ್ತಾರೆ — 9
   ಪಿ ಸತೀಶ್‌ಕುಮಾರ್

3. ಪರಿಸರ ಸಂರಕ್ಷಣೆಯ ಮನೋಭಾವದಿಂದ ಶುರುವಾದ ಇಕೋ ಕ್ಲಬ್ — 12
   ಕೀರ್ತಿ ಲಾಂಬಾ

4. ಹೇಳಿಕೆ ಸಮಸ್ಯೆಗಳನ್ನು ಬಿಡಿಸಲು ಮಕ್ಕಳು ಏಕೆ ಕಷ್ಟಪಡುತ್ತಾರೆ? — 16
   ಮೀನು ಪಾಲಿವಾಲ್

5. ಪಾಠದ ಯೋಜನೆ ಮತ್ತು ಬೋಧನಾ ಅನುಭವಗಳು — 20
   ಆರತಿ ಪಾಂಡೆ

6. ಕಥೆಗಳು ಸಾಮಾಜಿಕ ವಾಸ್ತವಗಳನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಕರಿಸುತ್ತವೆ — 24
   ಮಂಜು ರೇವರಿಯಾ

7. ಸಹವರ್ತಿ ಕಲಿಕೆ: ಒಂದು ಪರಿಣಾಮಕಾರಿ ಕಲಿಕಾ ವಿಧಾನ — 28
   ಶಮೀಮ್ ಭಾಟಿ

8. ಭಾಷಾ ಬೋಧನೆಗೆ ಸಂದರ್ಭೋಚಿತ ಸಾಮಗ್ರಿಗಳ ಬಳಕೆ — 32
   ಪೊಂಪಾ ಘೋಷಾಲ್

9. ಶಾಲಾ ಗ್ರಂಥಾಲಯ ಅಭಿವೃದ್ಧಿಗೆ ಒಂದಿಷ್ಟು ಪರಿಣಾಮಕಾರಿ ಕ್ರಮಗಳು — 36
   ಕಮಲೇಶ್ ಚಂದ್ರ ಜೋಷಿ

10. ಅಂಗನವಾಡಿಯನ್ನು ಕಲಿಕೆಯ ಕೇಂದ್ರವನ್ನಾಗಿ ಪರಿವರ್ತಿಸಿದ ಶಿಕ್ಷಕಿ — 39
    ಅನನ್ಯ. ಡಿ


ಅಂಕಣಗಳು


1. ಶಿಕ್ಷಕರ ದಿನಚರಿಯಿಂದ — 43
   ಮೊಖ್ತರ್ ಜಮಾನ್, ದ್ರೋಣ್ ಸಾಹು, ಪೂನಂ

2. ಭರವಸೆ ಮೂಡಿಸುವ ಶಿಕ್ಷಕರು — 48
   ಮನೀಶ್ ಕಿಶೋರ್

3. ಪುಸ್ತಕಗಳೊಂದಿಗೆ ಸ್ನೇಹ — 52
   ಪ್ರಭಾತ್, ದಿನೇಶ್ ಮಡಗಾಂವ್ಕರ್

4. ಚಟುವಟಿಕೆ ಸಮಯ — 55

5. ಸಂಪಾದಕರಿಗೆ ಪತ್ರ — 58

# ಹಲವು ವಿಷಯಗಳನ್ನು ಕುರಿತು ಕೆಲಸ ಮಾಡುವ ಮೂಲಕ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವುದು

**ಶ್ವೇತಾ ವಿಶ್ವಕರ್ಮ**

**ಭಾಷೆಯ ಬೋಧನೆಯು ಕೇವಲ ಭಾಷಾ ತರಗತಿಗಳಿಗೆ ಮಾತ್ರ ಸೀಮಿತವಾಗಿಲ್ಲ; ವಿಜ್ಞಾನ, ಸಮಾಜವಿಜ್ಞಾನ ಅಥವಾ ಗಣಿತದಂತಹ ವಿಷಯಗಳ ತರಗತಿಗಳು ಸಹ ಒಂದು ರೀತಿಯಲ್ಲಿ ಭಾಷಾ ತರಗತಿಗಳೇ ಆಗಿವೆ. ಇದನ್ನು ಗಮನದಲ್ಲಿಟ್ಟುಕೊಂಡು, ಮಾಧ್ಯಮಿಕ ಹಂತದಲ್ಲಿ ನಿರೀಕ್ಷಿತ ಮಟ್ಟದ ಭಾಷಾ ಕೌಶಲಗಳನ್ನು ಹೊಂದಿರದ ವಿದ್ಯಾರ್ಥಿಗಳಲ್ಲಿ ಓದಿ ಅರ್ಥೈಸಿಕೊಳ್ಳುವ ಮತ್ತು ಬರವಣಿಗೆಯ ಮೂಲಕ ಅಭಿಪ್ರಾಯ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಈ ಲೇಖನವು ಪ್ರಾಯೋಗಿಕ ವಿಧಾನಗಳನ್ನು ಸೂಚಿಸುತ್ತದೆ.**

ವಿದ್ಯಾರ್ಥಿಗಳಲ್ಲಿ ಮೂಲಭೂತ ಕೌಶಲಗಳನ್ನು ಬೆಳೆಸುವುದೇ ಪ್ರಾಥಮಿಕ ಹಂತದ ಭಾಷಾ ಬೋಧನೆಯ ಮುಖ್ಯ ಉದ್ದೇಶ. ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಹಂತವನ್ನು ತಲುಪುವಷ್ಟರಲ್ಲಿ ಅವರ ಓದುವ ಮತ್ತು ಬರೆಯುವ ಸಾಮರ್ಥ್ಯಗಳು ಪೂರ್ಣವಾಗಿ ವಿಕಸನಗೊಂಡಿರುತ್ತವೆ ಎಂದು ನಿರೀಕ್ಷಿಸಲಾಗುತ್ತದೆ. ಆದಾಗ್ಯೂ, ಹೆಚ್ಚಿನ ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಹಂತಕ್ಕೆ ಬಂದರೂ ಓದುವುದು, ಗ್ರಹಿಕೆ ಮತ್ತು ಬರವಣಿಗೆಯಲ್ಲಿ ಅಗತ್ಯವಾದ ಕೌಶಲಗಳನ್ನು ಗಳಿಸುವುದಿಲ್ಲ. ಇದರಿಂದಾಗಿ, ಭಾಷಾ ವಿಕಾಸದ ಜೊತೆಗೆ, ವಿದ್ಯಾರ್ಥಿಗಳು ಸಮಾಜ ವಿಜ್ಞಾನ, ಗಣಿತ ಮತ್ತು ವಿಜ್ಞಾನದಂತಹ ವಿಷಯಗಳಲ್ಲಿ ಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು, ಪಠ್ಯದೊಂದಿಗೆ ಸಂಪರ್ಕ ಸಾಧಿಸಲು ಮತ್ತು ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸಲು ಕಷ್ಟಪಡುತ್ತಾರೆ. ಇದು ಅವರ ಕಲಿಕೆಯನ್ನು ಕುಂಠಿತಗೊಳಿಸಿ, ಅವರ ಬೆಳವಣಿಗೆಯನ್ನು ನಿಧಾನಿಸುತ್ತದೆ. ಈ ಕಾರಣದಿಂದಾಗಿ, ಮಾಧ್ಯಮಿಕ ತರಗತಿಗಳಲ್ಲಿ ಪಾಠ ಮಾಡುವ ಶಿಕ್ಷಕರು ಎದುರಿಸುವ ಕೆಲವು ಪ್ರಮುಖ ಸವಾಲುಗಳು ಹೀಗಿವೆ:

- ಓದಲು-ಬರೆಯಲು ಕಷ್ಟಪಡುತ್ತಿರುವ ಮಕ್ಕಳೊಂದಿಗೆ ಪಠ್ಯವಿಷಯದ ಪರಿಕಲ್ಪನೆಗಳು ಹಾಗೂ ಗ್ರಹಿಕೆಗಳ ಕುರಿತು ಕೆಲಸ ಮಾಡುವುದು ಹೇಗೆ?
- ಈ ಮಕ್ಕಳಿಗೆ ಆರಂಭಿಕ ಓದು-ಬರಹದ ಕೌಶಲಗಳ ಬಗ್ಗೆ ಪ್ರತ್ಯೇಕವಾಗಿ ತರಬೇತಿ ನೀಡಲು ಆರಂಭಿಸಿದರೆ, ಅವರು ತಮ್ಮ ತರಗತಿಯ ಮಟ್ಟದಲ್ಲಿ ಕಲಿಯಬೇಕಾದ ವಿಷಯಗಳಲ್ಲಿ ಇತರ ವಿದ್ಯಾರ್ಥಿಗಳಿಗಿಂತ ಹಿಂದೆ ಬೀಳುತ್ತಾರೆ.
- ಒಂದು ವೇಳೆ ನೇರವಾಗಿ ತರಗತಿ ಮಟ್ಟದ ವಿಷಯಗಳ ಬೋಧನೆ ಆರಂಭಿಸಿದರೆ, ಓದಲು-ಬರೆಯಲು ತೊಂದರೆ ಎದುರಿಸುತ್ತಿರುವ ಮಕ್ಕಳಿಗೆ ವಿಷಯ ಗ್ರಹಿಸಲು ಸಾಧ್ಯವಾಗದೆ ಅವರು ಹಿಂದೆ ಉಳಿಯುತ್ತಾರೆ.

> **“ತರಗತಿಯಲ್ಲಿ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮೌಲ್ಯಾಂಕನವು ಒಂದು ಪರಿಣಾಮಕಾರಿ ಪ್ರಕ್ರಿಯೆಯಾಗಿದೆ. ಮಕ್ಕಳ ಭಾಷಾ ಕೌಶಲಗಳನ್ನು ಮೌಲ್ಯಾಂಕನ ಮಾಡುವಾಗ ಅದರ ಜೊತೆಗೆ, ವಿಷಯಾಧಾರಿತ ಪರಿಕಲ್ಪನೆಗಳು ಮತ್ತು ಸಾಮರ್ಥ್ಯಗಳ ದೃಷ್ಟಿಯಿಂದಲೂ ನಾವು ಅವರ ಕಲಿಕೆಯ ಮಟ್ಟವನ್ನು ನಿರ್ಣಯಿಸಬೇಕು.”**


ಮಾಧ್ಯಮಿಕ ಹಂತದಲ್ಲಿ ಓದುವ-ಬರೆಯುವ ಕೌಶಲಗಳು ಮತ್ತು ವಿಷಯ ಆಧಾರಿತ ಸಾಮರ್ಥ್ಯಗಳ ಬಗ್ಗೆ ಪ್ರತ್ಯೇಕವಾಗಿ ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿ, ವಿಷಯವನ್ನು ಬೋಧಿಸುವಾಗ ವಿದ್ಯಾರ್ಥಿಗಳ ಹಿಂದಿನ ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡು, ಭಾಷೆ ಮತ್ತು ವಿಷಯ ಎರಡನ್ನೂ ಜೊತೆಜೊತೆಯಾಗಿಯೇ ಕೊಂಡೊಯ್ಯುವುದು ಮುಖ್ಯವಾಗಿದೆ. ಇದಕ್ಕಾಗಿ ವೇಳಾಪಟ್ಟಿಯಲ್ಲಿನ ತರಗತಿಗಳಲ್ಲದೆ, ಹೆಚ್ಚುವರಿ ತರಗತಿಗಳನ್ನು ತೆಗೆದುಕೊಳ್ಳುವ ಮೂಲಕ ಪರಿಣಾಮಕಾರಿ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿದೆ. ಸರಳವಾಗಿ ಹೇಳುವುದಾದರೆ, ಕಲಿಕೆಯ ಸವಾಲುಗಳನ್ನು ಎದುರಿಸುತ್ತಿರುವ ಮಕ್ಕಳನ್ನು ಯೋಜಿತ ಮತ್ತು ವ್ಯವಸ್ಥಿತವಾಗಿ ಬೆಂಬಲಿಸಬೇಕಾದ ಅಗತ್ಯವನ್ನು ನಾವು ಮೊದಲು ಮನಗಾಣಬೇಕು. ಇಷ್ಟೆಲ್ಲಾ ಪ್ರಯತ್ನಗಳ ನಂತರವೂ ಮಗುವು ಮೂಲಭೂತ ಕೌಶಲಗಳನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ, ಒಬ್ಬ ಶಿಕ್ಷಕರಾಗಿ ಆ ಮಗುವಿನ ನಿರ್ದಿಷ್ಟ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಅನುಗುಣವಾಗಿ ಅಗತ್ಯವಾದ ವೈಯಕ್ತಿಕ ಬೆಂಬಲವನ್ನು ನೀಡಬೇಕಾಗುತ್ತದೆ.

ಮೇಲೆ ತಿಳಿಸಿದ ಸಂದರ್ಭಗಳು ನಿಜಕ್ಕೂ ಸಂಕೀರ್ಣವಾಗಿವೆ. ಈಗಿರುವ ಮುಖ್ಯ ಪ್ರಶ್ನೆಯೆಂದರೆ, ಈ ಸವಾಲುಗಳನ್ನು ನಿಭಾಯಿಸುವುದು ಹೇಗೆ? ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪೂರಕವಾದ ವಿಧಾನಗಳು ಯಾವುವು?

ಈ ನಿಟ್ಟಿನಲ್ಲಿ, ಮಾಧ್ಯಮಿಕ ಶಾಲೆಯ ಕೆಲವು ಶಿಕ್ಷಕರು ತಮ್ಮ ತರಗತಿಗಳಲ್ಲಿ ಕೈಗೊಂಡಿರುವ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಯಿತು. ಈ ಸವಾಲುಗಳನ್ನು ನಿವಾರಿಸಿ ಮಕ್ಕಳ ಕಲಿಕೆಯನ್ನು ಖಚಿತಪಡಿಸಿಕೊಳ್ಳಲು ಅವರು ಅನುಸರಿಸುತ್ತಿರುವ ಕಾರ್ಯವಿಧಾನಗಳನ್ನು ಇಲ್ಲಿ ಗಮನಿಸಬಹುದು. ತರಗತಿಗಳಲ್ಲಿ ಅಳವಡಿಸಿಕೊಳ್ಳಬಹುದಾದ ಕೆಲವು ವಿಷಯಾಧಾರಿತ ಉದಾಹರಣೆಗಳು ಮತ್ತು ಚಟುವಟಿಕೆಗಳನ್ನು ನಾವು ಈಗ ನೋಡೋಣ:

## ಮೌಲ್ಯಾಂಕನ

ತರಗತಿಯಲ್ಲಿ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮೌಲ್ಯಾಂಕನವು ಒಂದು ಪರಿಣಾಮಕಾರಿ ಪ್ರಕ್ರಿಯೆಯಾಗಿದೆ. ಮಕ್ಕಳ ಭಾಷಾ ಕೌಶಲಗಳನ್ನು ಮೌಲ್ಯಾಂಕನ ಮಾಡುವಾಗ ಅದರ ಜೊತೆಗೆ, ವಿಷಯಾಧಾರಿತ ಪರಿಕಲ್ಪನೆಗಳು ಮತ್ತು ಸಾಮರ್ಥ್ಯಗಳ ದೃಷ್ಟಿಯಿಂದಲೂ ನಾವು ಅವರ ಕಲಿಕೆಯ ಮಟ್ಟವನ್ನು ನಿರ್ಣಯಿಸಬೇಕು. ಮಕ್ಕಳು ತಮ್ಮ ಸುತ್ತಮುತ್ತಲಿನ ಅನುಭವಗಳ ಆಧಾರದ ಮೇಲೆ ಉದಾಹರಣೆಗಳನ್ನು ನೀಡಲು ಸಮರ್ಥರಾಗಿದ್ದಾರೆಯೇ ಎಂಬ ತಿಳುವಳಿಕೆಯು ಶಿಕ್ಷಕರಿಗೆ ಅವರೊಂದಿಗೆ ಮುಂದಿನ ಕೆಲಸ ಮಾಡಲು ಸಹಾಯ ಮಾಡುತ್ತದೆ. ಉದಾಹರಣೆಗೆ, ವಿಜ್ಞಾನದಲ್ಲಿ 'ವಿದ್ಯುತ್ ಮಂಡಲದಲ್ಲಿ ಶಾಖದ ಪರಿಣಾಮ'




*ಚಿತ್ರ 1: ಯಾವ ವಸ್ತು ಯಾವ ಪದಾರ್ಥದಿಂದ ಮಾಡಲ್ಪಟ್ಟಿದೆ ಮತ್ತು ಯಾವ ವಸ್ತು ಅಯಸ್ಕಾಂತದಿಂದ ಆಕರ್ಷಿಸಲ್ಪಡುತ್ತದೆ ಎಂಬುದರ ಕುರಿತು ವಿದ್ಯಾರ್ಥಿಗಳೊಂದಿಗೆ ಮಾಡಿದ ಚಟುವಟಿಕೆ*

ವಿಷಯವನ್ನು ಅರ್ಥಮಾಡಿಕೊಳ್ಳುವ ಕುರಿತು ಕೆಲಸ ಮಾಡುವಾಗ, ಎಂಟನೇ ತರಗತಿಯ ವಿದ್ಯಾರ್ಥಿಗೆ ವಿದ್ಯುತ್ ಮಂಡಲದ ಯಾವ ಅಂಶಗಳನ್ನು ಗ್ರಹಿಸಲು ಸಾಧ್ಯವಾಗುತ್ತಿದೆ ಎಂಬುದನ್ನು ಗಮನಿಸಬೇಕು. ಅಂದರೆ, ವಿದ್ಯುತ್ ಮಂಡಲದಲ್ಲಿ ಶಾಖದ ಪರಿಣಾಮವನ್ನು ಅವನು ಸ್ವತಃ ವಿಶ್ಲೇಷಿಸಲು ಶಕ್ತನಾಗಿದ್ದಾನೆಯೇ? ಇಲ್ಲದಿದ್ದರೆ, ಮೊದಲು ಅವನಿಗೆ ವಿದ್ಯುತ್ ಮಂಡಲದ ವಿವಿಧ ಘಟಕಗಳನ್ನು ಪರಿಚಯಿಸಿ, ಅವುಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಬೇಕಾಗುತ್ತದೆ.

ಇದಿಷ್ಟು ವಿಜ್ಞಾನ ವಿಷಯಕ್ಕೆ ಸಂಬಂಧಪಟ್ಟಿದ್ದಾಯಿತು. ಇನ್ನು ಭಾಷಾ ಸಾಮರ್ಥ್ಯಗಳ ಮೌಲ್ಯಾಂಕನಕ್ಕೆ ಯಾವುದೇ ಹೆಚ್ಚುವರಿ ಸಾಮಗ್ರಿಗಳ ಅಗತ್ಯವಿಲ್ಲ; ಇದನ್ನು ವಿಷಯದ ಬೋಧನೆಯ ಸಮಯದಲ್ಲೇ ಮಾಡಿಕೊಳ್ಳಬಹುದು. ಒಬ್ಬ ಶಿಕ್ಷಕರು ಸೂಚಿಸಿದ ಕೆಲವು ವಿಧಾನಗಳು ಇಲ್ಲಿವೆ:

- ಯಾವುದೇ ಒಂದು ಪಾಠದ ಬಗ್ಗೆ ಚರ್ಚೆ ಮಾಡುತ್ತಿರುವಾಗ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವುದು ಮತ್ತು ಅವರ ಉತ್ತರಗಳನ್ನು ಗಮನಿಸುವುದು. ಮಕ್ಕಳು ಕೇವಲ ಮಾಹಿತಿ ಹೊಂದಿರುವುದರಿಂದ ಉತ್ತರಿಸುತ್ತಿದ್ದಾರೆಯೇ ಅಥವಾ ಆ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಸ್ಪಷ್ಟವಾಗಿ ವಿವರಿಸುತ್ತಿದ್ದಾರೆಯೇ ಎಂಬುದನ್ನು ಇಲ್ಲಿ ಗಮನಿಸಬೇಕು.
- ಮಕ್ಕಳಿಗೆ ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಪಠ್ಯಪುಸ್ತಕವನ್ನು ಓದಲು ಅವಕಾಶ ನೀಡುವುದು. ಈ ಸಮಯದಲ್ಲಿ ಅವರ ಓದುವ ವೇಗ ಮತ್ತು ನಿರರ್ಗಳತೆಯನ್ನು ಗಮನಿಸುವುದು. ಯಾರು ಸರಾಗವಾಗಿ ಓದಬಲ್ಲರು, ಯಾರಿಗೆ ಅಡಚಣೆಗಳಿವೆ ಮತ್ತು ಯಾರಿಗೆ ಓದಿದ ಪಠ್ಯದ ಸಾರಾಂಶ ಅಥವಾ ಮುಖ್ಯ ಅಂಶಗಳನ್ನು ತಿಳಿಸಲು ಮಕ್ಕಳಿಗೆ ಸಾಧ್ಯವಾಗುತ್ತಿದೆ ಎಂಬುದನ್ನು ಪರೀಕ್ಷಿಸುವುದು.
- ಯಾವುದಾದರೂ ಒಂದು ವಿಷಯ ಅಥವಾ ಪರಿಕಲ್ಪನೆಯನ್ನು ಚಿತ್ರ, ಫ್ಲೊ ಚಾರ್ಟ್ ಇತ್ಯಾದಿಗಳ ರೂಪದಲ್ಲಿ ಪ್ರಸ್ತುತಪಡಿಸಲು ಮತ್ತು ಅದರ ವಿವರಣೆಯನ್ನು ಬರೆಯಲು ಸೂಚಿಸುವುದು. ಉದಾಹರಣೆಗೆ: ಸ್ವಿಚ್ ಆನ್ ಆಗಿರುವಾಗ ವಿದ್ಯುತ್ ಮಂಡಲ ಹೇಗೆ ಕಾರ್ಯನಿರ್ವಹಿಸುತ್ತದೆ ಅಥವಾ ರಕ್ತಪರಿಚಲನಾ ವ್ಯವಸ್ಥೆಯಂತಹ ಪರಿಕಲ್ಪನೆಗಳನ್ನು ರೇಖಾಚಿತ್ರದ ಮೂಲಕ ವಿವರಿಸಲು ತಿಳಿಸಬಹುದು.

ಇವೆಲ್ಲದರ ಹೊರತಾಗಿಯೂ ವಿವಿಧ ಯೋಜನೆಗಳು, ಅವುಗಳ ಮಂಡನೆ ಮತ್ತು ಪ್ರಶ್ನೋತ್ತರ ರೂಪದ ಚರ್ಚೆಗಳ ಮೂಲಕವೂ ಮಕ್ಕಳ ತಿಳುವಳಿಕೆಯನ್ನು ಮೌಲ್ಯಾಂಕನ ಮಾಡಬಹುದು. ಮಕ್ಕಳು ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತಕ್ಕೆ ತಲುಪುವ ಹೊತ್ತಿಗೆ, ಅವರ ಅನುಭವ ಮತ್ತು ಕೌಶಲಗಳಲ್ಲಿ ನಿರೀಕ್ಷಿತ ಮಟ್ಟದ ಬೆಳವಣಿಗೆಯಾಗಿರುತ್ತದೆ. ಒಂದು ವೇಳೆ ಮಕ್ಕಳು ಓದು-ಬರಹದಲ್ಲಿ ಅಷ್ಟೊಂದು ಸಮರ್ಥರಲ್ಲದಿದ್ದರೂ, ಹೊಸ ಪರಿಕಲ್ಪನೆಗಳನ್ನು ಗ್ರಹಿಸುವ ಮತ್ತು ಅರ್ಥಮಾಡಿಕೊಳ್ಳುವ ಅವರ ವೇಗವು ಹಿಂದಿನ ಹಂತಗಳಿಗಿಂತ ಹೆಚ್ಚಿರುತ್ತದೆ. ವಿಷಯದ ಪರಿಕಲ್ಪನೆಗಳ ಆಧಾರದ ಮೇಲೆ ಆಯಾ ವಿಷಯಕ್ಕೆ ಸಂಬಂಧಿಸಿದ ಮೌಲ್ಯಾಂಕನ ಮಾಡುವುದು ಅವಶ್ಯಕ. ಇದು ಶಿಕ್ಷಕರಿಗೆ ತರಗತಿಯ ಮಟ್ಟಕ್ಕೆ ಅನುಗುಣವಾಗಿ, ನಿರ್ದಿಷ್ಟ ವಿಷಯ ಅಥವಾ ಥೀಮ್‌ಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಫಲಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಈ ಮೌಲ್ಯಾಂಕನದ ಆಧಾರದ ಮೇಲೆ ಮಕ್ಕಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ, ಆಯಾ ಗುಂಪಿನ ಅಗತ್ಯಕ್ಕೆ ತಕ್ಕಂತೆ ಸೂಕ್ತ ಕಲಿಕಾ ಯೋಜನೆಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ.

## ಸಾಮಾನ್ಯ ಭಾಷೆಯಿಂದ ವಿಷಯದ ಭಾಷೆಯ ಕಡೆಗೆ

ಮಾಧ್ಯಮಿಕ ಹಂತದಲ್ಲಿ ಕೇವಲ ಭಾಷಾ ಪ್ರಾವೀಣ್ಯತೆ ಇದ್ದರೆ ಸಾಕಾಗುವುದಿಲ್ಲ; ಏಕೆಂದರೆ ಪ್ರತಿಯೊಂದು ವಿಷಯಕ್ಕೂ ತನ್ನದೇ ಆದ ವಿಶಿಷ್ಟ ಭಾಷೆ ಮತ್ತು ಶಬ್ದಕೋಶವಿರುತ್ತದೆ. ಆದ್ದರಿಂದ, ಮಕ್ಕಳೊಂದಿಗೆ ಕೆಲಸ ಮಾಡುವಾಗ ಸಾಮಾನ್ಯ ಆಡುಭಾಷೆಯನ್ನು ಬಳಸುತ್ತಲೇ, ಕ್ರಮೇಣ ಅವರನ್ನು ಆಯಾ ವಿಷಯಕ್ಕೆ ಸಂಬಂಧಿಸಿದ ತಾಂತ್ರಿಕ ಭಾಷೆ ಮತ್ತು ಶಬ್ದಕೋಶದತ್ತ ಕೊಂಡೊಯ್ಯುವುದು ಅವಶ್ಯಕ. ಇದು ಮಕ್ಕಳಿಗೆ ಕಠಿಣ ವಿಷಯದ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಒಂದು ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ವಿಧಾನವು ಮೌಖಿಕ ಅಭಿವ್ಯಕ್ತಿಯನ್ನು ಸುಧಾರಿಸುವುದರ ಜೊತೆಗೆ, ಓದಿದ್ದನ್ನು ಅರ್ಥೈಸಿಕೊಳ್ಳುವ ಗ್ರಹಿಕೆಯ ಕೌಶಲಗಳ (Comprehension skills) ಬೆಳವಣಿಗೆಯಲ್ಲೂ ಸಹಕಾರಿಯಾಗುತ್ತದೆ.

ಒಬ್ಬ ಶಿಕ್ಷಕರು ವಿಜ್ಞಾನ ತರಗತಿಯಲ್ಲಿ ಉಸಿರಾಟದ ವ್ಯವಸ್ಥೆಯ ಬಗ್ಗೆ ಬೋಧಿಸುವಾಗ ಮಾಡುವ ಮೊದಲ ಕೆಲಸವೆಂದರೆ, ಆ ಪರಿಕಲ್ಪನೆಗೆ ಸಂಬಂಧಿಸಿದ ಪದಕೋಶವನ್ನು ಸಿದ್ಧಪಡಿಸುವುದು. ಇದರಲ್ಲಿ ಅವರು ಕಠಿಣ ಶಬ್ದಕೋಶವನ್ನು ಸುಲಭವಾದ ಆಡುಮಾತಿನ ಪದಗಳೊಂದಿಗೆ ಸೇರಿಸಿ ಪಾಠ ಮಾಡುತ್ತಾರೆ. ಅವರು ಬೋರ್ಡ್‌ನಲ್ಲಿ ಸಾಮಾನ್ಯ ಭಾಷೆಯ ಪದಗಳನ್ನು ಮತ್ತು ಪಾಠಕ್ಕೆ ಸಂಬಂಧಿಸಿದ ತಾಂತ್ರಿಕ ಪದಗಳನ್ನು ಬರೆದು ಅವುಗಳ ಬಗ್ಗೆ ಚರ್ಚಿಸುತ್ತಾರೆ; ನಂತರ ಪಾಠವನ್ನು ಮುಂದುವರಿಸುತ್ತಾರೆ. ತದನಂತರ, ಈ ಪರಿಭಾಷೆಗಳನ್ನು ದೊಡ್ಡ ಹಾಳೆಯಲ್ಲಿ ಬರೆದು ಗೋಡೆಯ ಮೇಲೆ ನೇತುಹಾಕಲಾಗುತ್ತದೆ. ಇಂತಹ ಪದಗಳ ಕೆಲವು ಉದಾಹರಣೆಗಳೆಂದರೆ, ಉಷ್ಣಕ್ಕೆ ಬಿಸಿ, ಟ್ರಕಿಯ ಪದಕ್ಕೆ ಉಸಿರಾಟದ ಕೊಳವೆ ಅಥವಾ ಉಸಿರಿನ ನಾಳ, ಲ್ಯಾರಿಂಕ್ಸ್‌ಗೆ ಧ್ವನಿ ವ್ಯವಸ್ಥೆ, ಕಾಂತೀಯ ವಸ್ತು ಎಂದರೆ ಅಯಸ್ಕಾಂತವು ಯಾವುದನ್ನು ಆಕರ್ಷಿಸುತ್ತದೆಯೋ ಆ ವಸ್ತು, ವಿದ್ಯುತ್ ಮಂಡಲ ಎಂದರೆ ವಿದ್ಯುತ್ ಹರಿಯುವ ದಾರಿ, ಶಕ್ತಿ ಎಂದರೆ ಕೆಲಸ ಮಾಡಲು ಬೇಕಾದ ಸಾಮರ್ಥ್ಯ, ಪ್ರತಿಫಲನ ಎಂದರೆ ಬೆಳಕು ಡಿಕ್ಕಿ ಹೊಡೆದು ವಾಪಸ್ ಬರುವುದು, ವಕ್ರೀಭವನ ಎಂದರೆ ಬೆಳಕು ಒಂದು ವಸ್ತುವಿನ ಒಳಗಿಂದ ಹಾದುಹೋಗುವುದು ಮತ್ತು ಪಾರದರ್ಶಕ ಎಂದರೆ ಒಂದು ವಸ್ತುವಿನ ಒಳಗಿನಿಂದ ಆಚೆಗಿನ ವಸ್ತುಗಳನ್ನು ನೋಡಲು ಸಾಧ್ಯವಾಗುವುದು ಇತ್ಯಾದಿ.

ಈ ಪ್ರಕ್ರಿಯೆಯು ಕೇವಲ ಪರಿಭಾಷೆಗೆ ಸಂಬಂಧಿಸಿದ ಪದಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅದು ಪಾಠದ ಬಗ್ಗೆ ಚರ್ಚಿಸುವುದು ಮತ್ತು ಅದನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ಅದು ಮಕ್ಕಳಿಗೆ ಓದಲು ಮತ್ತು ಬರೆಯಲು ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುತ್ತಿತ್ತು. ಓದಲು ಮತ್ತು ಬರೆಯಲು ಕಷ್ಟಪಡುವ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ, ಅವರು ನೀಡಿದ

ಉತ್ತರಗಳನ್ನು ಕಪ್ಪುಹಲಗೆಯ ಮೇಲೆ ಬರೆಯಲಾಯಿತು. ನಂತರ ಹಲಗೆಯ ಮೇಲಿದ್ದ ಆ ಉತ್ತರಗಳನ್ನು ತಮ್ಮ ನೋಟ್‌ಬುಕ್‌ಗಳಲ್ಲಿ ಬರೆದುಕೊಳ್ಳಲು ಮಕ್ಕಳಿಗೆ ಸೂಚಿಸಲಾಯಿತು. ಪಾಠದ ಮುಕ್ತಾಯದ ನಂತರ ಪರಿಕಲ್ಪನೆಗಳಿಗೆ ಸಂಬಂಧಿಸಿದ ಕೆಲವು ಸಣ್ಣ ಪ್ರಶ್ನೆಗಳನ್ನು ಕೇಳಲಾಯಿತು. ಉದಾಹರಣೆಗೆ: "ವಿದ್ಯುತ್ ಮಂಡಲದಿಂದ ಸ್ವಿಚ್ ಅನ್ನು ತೆಗೆದರೆ ಬಲ್ಬ್ ಬೆಳಗುತ್ತದೆಯೇ? ಹೌದು ಅಥವಾ ಇಲ್ಲ? ಹೌದಾದರೆ ಏಕೆ ಮತ್ತು ಇಲ್ಲವಾದರೆ ಏಕೆ?", "ವಿದ್ಯುತ್ ಮಂಡಲದಿಂದ ತಂತಿಯನ್ನು ತೆಗೆದರೆ ಬಲ್ಬ್ ಬೆಳಗುವುದೇ?" ಅಥವಾ "ಒಂದು ವೇಳೆ ಬಲ್ಬ್ ಅನ್ನೇ ತೆಗೆದರೆ ಏನಾಗುತ್ತದೆ?". ಇಂತಹ ಚರ್ಚೆಗಳ ಜೊತೆಗೆ ವಿದ್ಯಾರ್ಥಿಗಳು ನೀಡಿದ ಉತ್ತರಗಳನ್ನೂ ಸಹ ಹಲಗೆಯ ಮೇಲೆ ಬರೆಯಲಾಯಿತು. ಈ ಪ್ರಕ್ರಿಯೆಗಳಿಂದ ಪಾಠವನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುವುದಲ್ಲದೆ, ತರಗತಿಯ ಮಟ್ಟಕ್ಕೆ ಇನ್ನೂ ಸಿದ್ಧರಾಗದ ಮಕ್ಕಳು ಇತರ ವಿದ್ಯಾರ್ಥಿಗಳೊಂದಿಗೆ ಸಮಾನವಾಗಿ ಪಾಲ್ಗೊಳ್ಳಲು ಇದು ಅನುವು ಮಾಡಿಕೊಡುತ್ತದೆ.

## ತರಗತಿಯ ಪರಿಸರ

ಪರಿಸರ ಎಂದರೆ, ಇಲ್ಲಿ ನಾನು ತರಗತಿಯಲ್ಲಿ ಲಭ್ಯವಿರುವ ಮುದ್ರಣ ಸಮೃದ್ಧ ಪರಿಸರ ಎಂದು ಅರ್ಥೈಸುತ್ತೇನೆ. ಮಕ್ಕಳ ಸುತ್ತಮುತ್ತಲಿನ ಗೋಡೆಗಳಿಗೆ ಅಂಟಿಸಿದ ಅಥವಾ ನೇತುಹಾಕಿದ ಚಿತ್ರ-ವಿವರಗಳಿರುವ ಹಾಳೆಗಳು ಮತ್ತೆ ಮತ್ತೆ ಕಣ್ಣಿಗೆ ಬೀಳುತ್ತಲೇ ಇರುತ್ತವೆ. ಇದು ವಿಭಿನ್ನ ಪದಗಳು ಮತ್ತು ಪರಿಕಲ್ಪನೆಗಳನ್ನು ಪದೇಪದೇ ನೆನಪಿಸಿಕೊಳ್ಳುವ ಅವಕಾಶವನ್ನು ಮಕ್ಕಳಿಗೆ ನೀಡುತ್ತದೆ. ಪಠ್ಯಪುಸ್ತಕದಲ್ಲಿರುವ ಸುದೀರ್ಘವಾದ ಪಾಠಗಳನ್ನು ಓದಲು ಕಷ್ಟಪಡುವ ಮಕ್ಕಳು, ಗೋಡೆಯ ಮೇಲೆ ಅಂಟಿಸಿದ ಇಂತಹ ಸರಳ ಹಾಳೆಗಳ ಮೂಲಕ ಓದುವ ಅನುಭವವನ್ನು ಪಡೆಯುತ್ತಾರೆ. ಆದರೆ, ಈ ಮುದ್ರಿತ ಪರಿಸರದ ವಿಷಯವು ಮಕ್ಕಳ ಕಲಿಕೆಯ ಮಟ್ಟ ಮತ್ತು ಅವಶ್ಯಕತೆಗೆ ಅನುಗುಣವಾಗಿರುವುದು ಬಹಳ ಮುಖ್ಯ. ಉದಾಹರಣೆಗೆ, ಶಿಕ್ಷಕರು ಮಕ್ಕಳಿಗೆ ಕಲಿಸಿದ ಹೊಸ ಪದಗಳನ್ನು ಗೋಡೆಯ ಮೇಲೆ ಪ್ರದರ್ಶಿಸಬಹುದು, ಪ್ರತಿ ಪರಿಕಲ್ಪನೆಯ ಮೇಲೆ ಕೆಲಸ ಮಾಡುವಾಗ ಸಿಕ್ಕ ಪ್ರಮುಖ ಪದಗಳನ್ನು ಪಟ್ಟಿ ಮಾಡಿ ಚಾರ್ಟ್‌ಗಳಲ್ಲಿ ಬರೆದು ಅಂಟಿಸಬಹುದು ಅಥವಾ ಯಾವುದೇ ಪರಿಕಲ್ಪನೆಯನ್ನು ಫ್ಲೋ ಚಾರ್ಟ್ ಮೂಲಕ ಪ್ರಸ್ತುತಪಡಿಸಬಹುದು. ಇಂತಹ ಕ್ರಮಗಳಿಂದ ಮಕ್ಕಳು ಗೋಡೆಯ ಮೇಲಿರುವ ಪದಗಳನ್ನು ಆಸಕ್ತಿಯಿಂದ ಓದುತ್ತಾರೆ. ಫ್ಲೋ ಚಾರ್ಟ್‌ಗಳ ಮೂಲಕ ವಿದ್ಯಾರ್ಥಿಗಳಿಗೆ ಹದಿಹರೆಯ ಮತ್ತು ವಿದ್ಯುಚ್ಛಕ್ತಿಯಂತಹ ಕಠಿಣ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ವಿಶೇಷವೆಂದರೆ, ಈ ಮುದ್ರಣ ಸಮೃದ್ಧ ಪರಿಸರವು ಕೇವಲ ಗೋಡೆಗಳಿಗಷ್ಟೇ ಸೀಮಿತವಾಗಿರಲಿಲ್ಲ.

ಉದಾಹರಣೆಗೆ, ಶಿಕ್ಷಕರು ಮಕ್ಕಳೊಂದಿಗೆ ಸೇರಿ ನೆಲದ ಮೇಲೆ ರಕ್ತಪರಿಚಲನಾ ವ್ಯವಸ್ಥೆಯ ಚಿತ್ರವನ್ನು ರಚಿಸಿದರು; ಅದರ ವಿವಿಧ ಘಟಕಗಳನ್ನು ಹೆಸರಿಸಿ, ಇಡೀ ಪ್ರಕ್ರಿಯೆಯಲ್ಲಿ ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಿಕೊಂಡರು. ಸರಿಯಾಗಿ ಓದಲು ಮತ್ತು ಬರೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗೂ ಈ ಚಟುವಟಿಕೆಯಿಂದಾಗಿ ಇಡೀ ಪ್ರಕ್ರಿಯೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಅಷ್ಟೇ ಅಲ್ಲದೆ, ಚಿತ್ರದಲ್ಲಿ ಗುರುತಿಸಲಾದ ಪದಗಳನ್ನು ಗುರುತಿಸಿ ಓದುವುದನ್ನೂ ಅವರು ಕಲಿತರು. ಇಲ್ಲಿ ಶಿಕ್ಷಕರು ಪಾಠದ ವಿಷಯದ ಜೊತೆಜೊತೆಗೆ ಭಾಷಾ ಕಲಿಕೆಗೂ ಒತ್ತು ನೀಡುವ ಮೂಲಕ, ಮಕ್ಕಳಿಗೆ ಓದುವ ನೈಜ ಅವಕಾಶಗಳನ್ನು ಸೃಷ್ಟಿಸಿಕೊಟ್ಟರು.


## ವಿದ್ಯಾರ್ಥಿಗಳ ಕಲಿಕೆಯ ಮಟ್ಟಕ್ಕೆ ತಕ್ಕ ಬೋಧನಾ ಕಲಿಕಾ ಸಾಮಗ್ರಿಗಳ ಬಳಕೆ

ಕಲಿಕೆಯ ಹಂತಕ್ಕೆ ತಕ್ಕ ಸಾಮಗ್ರಿಗಳು ಮತ್ತು ಚಟುವಟಿಕೆಗಳ ಸಂಯೋಜನೆಯು ಮಕ್ಕಳು ಹಂತ ಹಂತವಾಗಿ ಪ್ರಗತಿ ಸಾಧಿಸಲು




*ಚಿತ್ರ 2: ನೆಲದ ಮೇಲೆ ಬಿಡಿಸಿದ ಚಿತ್ರದ ನೆರವಿನಿಂದ ರಕ್ತ ಪರಿಚಲನಾ ವ್ಯೂಹವನ್ನು ಅರ್ಥಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಗಳು.*

ಸಹಾಯ ಮಾಡುತ್ತದೆ. ಯಾವುದೇ ವಿಷಯದ ಪರಿಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಪಠ್ಯಸಾಮಗ್ರಿಗಳನ್ನು ಸಿದ್ಧಪಡಿಸುವುದರಿಂದ ಅಥವಾ ಬಳಸುವುದರಿಂದ ಮಕ್ಕಳಿಗೆ ಕಲಿಕೆಯು ಸುಲಭವಾಗುತ್ತದೆ. ಉದಾಹರಣೆಗೆ, ಸಮಾಜ ವಿಜ್ಞಾನದಲ್ಲಿ ನಕ್ಷೆಯ ಪರಿಕಲ್ಪನೆಯನ್ನು ಬೋಧಿಸುವಾಗ ತರಗತಿಯಲ್ಲಿ ನಕ್ಷೆಗಳು ಲಭ್ಯವಿರಬೇಕು. ಅವುಗಳ ಸಹಾಯದಿಂದ ನಕ್ಷೆಗಳನ್ನು ಓದುವ ಮೂಲಭೂತ ಕೌಶಲಗಳನ್ನು ಬೆಳೆಸಬಹುದು; ಅಂದರೆ ದಿಕ್ಕುಗಳನ್ನು ಗುರುತಿಸುವುದು, ಯಾವ




ರಕ್ತಪರಿಚಲನಾ ವ್ಯವಸ್ಥೆಯ ಈ ಕಲಿಕಾ ಬೋಧನಾ ಸಾಮಗ್ರಿಯಲ್ಲಿ ರೇಖಾಚಿತ್ರ ಮತ್ತು ಅದಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ನೀಡಲಾಗಿದೆ. ಚಿತ್ರಕ್ಕೆ ಸಂಬಂಧಿಸಿದ ಪದಗಳನ್ನು ಪ್ರತ್ಯೇಕ ಚೀಟಿಗಳಲ್ಲಿ ಬರೆಯಲಾಗಿದ್ದು, ಮಕ್ಕಳು ಆ ಚೀಟಿಗಳನ್ನು ಓದಿ ಚಿತ್ರದ ಸರಿಯಾದ ಭಾಗಕ್ಕೆ ಜೋಡಿಸಬೇಕು. ಮುಂದಿನ ಹಂತದಲ್ಲಿ, ಮಕ್ಕಳಿಗೆ ಕೇವಲ ಖಾಲಿ ರೇಖಾಚಿತ್ರವನ್ನು ನೀಡಲಾಗುತ್ತದೆ. ಆಗ ಮಕ್ಕಳು ತಮ್ಮ ಹಿಂದಿನ ಅನುಭವದ ಆಧಾರದ ಮೇಲೆ, ಚೀಟಿಗಳ ರಾಶಿಯಲ್ಲಿ ಸರಿಯಾದ ಪದವನ್ನು ಹುಡುಕಿ ಸೂಕ್ತ ಸ್ಥಳದಲ್ಲಿ ಇರಿಸುತ್ತಾರೆ.




*ಚಿತ್ರ 3: ಕಪ್ಪೆಯ ಜೀವನ ಚಕ್ರವನ್ನು ಅರ್ಥಮಾಡಿಕೊಳ್ಳಲು ತಯಾರಿಸಲಾದ ಕಲಿಕಾ ಬೋಧನಾ ಸಾಮಗ್ರಿ.*

> **ಯೋಜನಾ ಆಧಾರಿತ ಕೆಲಸಗಳ ಮೂಲಕ ಮಕ್ಕಳನ್ನು ಪಾಠದ ಆಳವನ್ನು ಅರಿಯುವ, ವಿಷಯವನ್ನು ಅರ್ಥಮಾಡಿಕೊಳ್ಳುವ ಮತ್ತು ಅದನ್ನು ವಿವರಿಸುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು.**

ರಾಜ್ಯ ಎಲ್ಲಿದೆ ಎಂದು ಪತ್ತೆಹಚ್ಚುವುದು ಮತ್ತು ನಕ್ಷೆಯಲ್ಲಿನ ವಿವಿಧ ಸಂಕೇತಗಳನ್ನು ಅರ್ಥಮಾಡಿಕೊಳ್ಳುವುದನ್ನು ಕಲಿಸಬಹುದು. ಹಾಗೆಯೇ, ಗ್ಲೋಬ್ ಬಳಸಿ ಭೂಮಿಯು ಸುತ್ತುವ ದಿಕ್ಕು, ಸೂರ್ಯನ ಸುತ್ತ ಪ್ರದಕ್ಷಿಣೆ ಹಾಕಲು ತೆಗೆದುಕೊಳ್ಳುವ ಸಮಯ ಹಾಗೂ ಹಗಲು-ರಾತ್ರಿ ಸಂಭವಿಸುವ ಪ್ರಕ್ರಿಯೆಗಳನ್ನು ಮನವರಿಕೆ ಮಾಡಿಕೊಡಬಹುದು. ಈ ಬೋಧನಾ ಸಾಮಗ್ರಿಗಳು ಮಕ್ಕಳಿಗೆ ಸ್ವತಃ ಚಟುವಟಿಕೆಗಳನ್ನು ಮಾಡಲು ಹೆಚ್ಚಿನ ಅವಕಾಶಗಳನ್ನು ನೀಡಿದಷ್ಟೂ, ಓದುವ ಕೌಶಲವನ್ನು ವೃದ್ಧಿಸಲು ನೆರವಾಗುತ್ತವೆ. ಓದುವ ಮತ್ತು ಬರೆಯುವ ಈ ಪ್ರಕ್ರಿಯೆಯಲ್ಲಿ ಪದಗಳನ್ನು ಅವುಗಳ ವಿನ್ಯಾಸದ ಆಧಾರದ ಮೇಲೆ ಗುರುತಿಸುವುದು, ಚಿತ್ರಗಳಿಗೆ ಪೂರಕವಾದ ಪದಗಳನ್ನು ಹೊಂದಿಸುವುದು ಹಾಗೂ ಚಿತ್ರಗಳನ್ನು ಲೇಬಲ್ ಮಾಡುವುದು-ಹೀಗೆ ಹತ್ತು ಹಲವು ಚಟುವಟಿಕೆಗಳ ಮೂಲಕ ಮಕ್ಕಳಿಗೆ ಓದಲು ಮತ್ತು ಬರೆಯಲು ಸಾಕಷ್ಟು ಸಂದರ್ಭಗಳನ್ನು ಒದಗಿಸುವುದು ಅವಶ್ಯಕ. ಇದಕ್ಕೆ ಒಂದು ಉದಾಹರಣೆಯನ್ನು *ಕೋಷ್ಟಕ 1*ರಲ್ಲಿ ನೋಡಬಹುದು.

## ಯೋಜನಾ ಆಧಾರಿತ ಚಟುವಟಿಕೆಗಳು

ಯೋಜನಾ ಆಧಾರಿತ ಕೆಲಸಗಳ ಮೂಲಕ ಮಕ್ಕಳನ್ನು ಪಾಠದ ಆಳವನ್ನು ಅರಿಯುವ, ವಿಷಯವನ್ನು ಅರ್ಥಮಾಡಿಕೊಳ್ಳುವ ಮತ್ತು ಅದನ್ನು ವಿವರಿಸುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು. ನಮ್ಮ ಪಠ್ಯಪುಸ್ತಕಗಳು ತರಗತಿಯ ಹೊರತಾಗಿಯೂ ಕಲಿಕೆಯ ಪ್ರಕ್ರಿಯೆಯೊಂದಿಗೆ ಮಕ್ಕಳನ್ನು ಬೆಸೆಯಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತವೆ. ಯಾವುದೇ ವಿಷಯಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಮಕ್ಕಳಿಗೆ ಮೌಖಿಕ ಅಭಿವ್ಯಕ್ತಿಯ (ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವುದು) ಜೊತೆಗೆ ಬರವಣಿಗೆ, ಚಿತ್ರಗಳು ಮತ್ತು ಪದಗಳ ಚೀಟಿಗಳ ಮೂಲಕ ತಮ್ಮನ್ನು ತಾವು ವ್ಯಕ್ತಪಡಿಸಲು ಅವಕಾಶ ನೀಡಬೇಕು ಎಂಬುದು ಗಮನಿಸಬೇಕಾದ ಸಂಗತಿ. ಒಂದೇ ಚಟುವಟಿಕೆಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಸಂಯೋಜಿಸಲೂ ಸಹ ಪ್ರಯತ್ನಿಸಬಹುದು. ಇಂತಹ ಯೋಜಿತ ಮತ್ತು ವ್ಯವಸ್ಥಿತ ವಿಧಾನವು ಮಕ್ಕಳಲ್ಲಿ ಭಾಷೆ ಹಾಗೂ ವಿಷಯದ ಪರಿಕಲ್ಪನೆಗಳ ಸಾಮರ್ಥ್ಯವನ್ನು ಏಕಕಾಲದಲ್ಲಿ ಬಲಪಡಿಸುತ್ತದೆ.

## ವಿಷಯವಸ್ತು ಮತ್ತು ಓದು-ಬರವಣಿಗೆಯ ಸಮನ್ವಯ

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ, ವಿಷಯದ ಕಲಿಕೆ ಮತ್ತು ಓದು-ಬರಹದ ಕೌಶಲಗಳ ಅಭಿವೃದ್ಧಿಯನ್ನು ಸಮನ್ವಯಗೊಳಿಸುವುದು ಅತ್ಯಂತ ಮುಖ್ಯವಾಗಿದೆ. ತರಗತಿಯ ಬೋಧನೆಯ ಸಮಯದಲ್ಲಿ ಓದಲು ಮತ್ತು ಬರೆಯಲು ಕಷ್ಟಪಡುವ ಮಕ್ಕಳೊಂದಿಗೆ ಕೆಲಸ ಮಾಡುವಾಗ, ಈ ಕೆಳಗಿನ ಅಂಶಗಳನ್ನು ನಿಮ್ಮ ಯೋಜನೆಯಲ್ಲಿ ಸೇರಿಸಿಕೊಳ್ಳಬಹುದು:

ಯಾವುದೇ ಪರಿಕಲ್ಪನೆಯನ್ನು ಮಗುವು ಅರ್ಥಮಾಡಿಕೊಳ್ಳಲು ಮತ್ತು ಅದನ್ನು ಸ್ವತಂತ್ರವಾಗಿ ನಿರ್ವಹಿಸಲು ಶಿಕ್ಷಕರು ಪೂರಕವಾದ ದಾರಿಗಳನ್ನು ಕಂಡುಕೊಳ್ಳಬಹುದು. ಉದಾಹರಣೆಗೆ: ಒಂದು ಪಾಠದ ಕುರಿತು ಕೆಲಸ ಮಾಡುತ್ತಿರುವಾಗ ಕಪ್ಪುಹಲಗೆಯ ಮೇಲೆ ಪ್ರಮುಖ ಪದಗಳನ್ನು ಬರೆಯುವುದು, ಆ ಪದಗಳನ್ನು ಪಠ್ಯಪುಸ್ತಕದಲ್ಲಿ ಹುಡುಕಲು ಸೂಚಿಸುವುದು ಮತ್ತು ಹಾಗೆ ಪತ್ತೆಹಚ್ಚಿದ ಪದಗಳನ್ನು ಬರೆಯುವಂತೆ ಮಕ್ಕಳಿಗೆ ಉತ್ತೇಜಿಸುವುದು.

ಕೆಲವು ಚಟುವಟಿಕೆಗಳನ್ನು 'ಮಿಶ್ರ ಗುಂಪು'ಗಳಲ್ಲಿ (ವಿವಿಧ ಕಲಿಕಾ ಮಟ್ಟದ ಮಕ್ಕಳಿರುವ ಗುಂಪು) ನಡೆಸಲು ಪ್ರಯತ್ನಿಸಿ. ಈ ಗುಂಪಿನಲ್ಲಿರುವ ಎಲ್ಲಾ ಮಕ್ಕಳು ಒಟ್ಟಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ: ಪ್ರಶ್ನೆಗಳಿಗೆ ಬರಬಹುದಾದ ಸಂಭವನೀಯ ಉತ್ತರಗಳನ್ನು ಚರ್ಚಿಸಿ ಬರೆಯುವುದು, ಚಿತ್ರಗಳ ಬಗ್ಗೆ ಚರ್ಚಿಸುತ್ತಲೇ ವಿವರಣೆಯನ್ನು ಬರೆಯುವುದು, ಪಾಠವನ್ನು ಒಟ್ಟಿಗೆ ಓದುವುದು ಮತ್ತು ಮುಖ್ಯವಾದ ಪದಗಳ ಪಟ್ಟಿ ಸಿದ್ಧಪಡಿಸುವುದು.

ಮಕ್ಕಳ ಕಲಿಕಾ ಕಾರ್ಯಗಳನ್ನು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಹಂತ ಹಂತವಾಗಿ ವಿಂಗಡಿಸಬಹುದು. ಬರವಣಿಗೆಯಲ್ಲಿ ಸಮಸ್ಯೆ ಇರುವ ಮಕ್ಕಳಿಗೆ ಮೊದಲು ಚಿತ್ರಗಳನ್ನು ಗುರುತಿಸಿ ಹೆಸರಿಸಲು (Labeling) ನೀಡುವುದು, ರೇಖಾಚಿತ್ರ ಬಿಡಿಸಲು ಅಥವಾ ವಿಷಯವನ್ನು ಮೌಖಿಕವಾಗಿ ವಿವರಿಸಲು ಪ್ರೋತ್ಸಾಹಿಸುವುದು. ಇಂತಹ ಚಟುವಟಿಕೆಗಳ ಮೂಲಕ ಅವರ ಅಭಿವ್ಯಕ್ತಿಗೆ ಅವಕಾಶ ನೀಡಿ, ನಂತರ ಅವುಗಳನ್ನು ಲಿಖಿತ ರೂಪಕ್ಕೆ ತರಲು ಅಗತ್ಯವಾದ ಬೆಂಬಲವನ್ನು ನೀಡಬೇಕು. ಓದು-ಬರಹದಲ್ಲಿ ಪ್ರೌಢಿಮೆ ಹೊಂದಿರುವ ಮಕ್ಕಳನ್ನು ಇತರ ಮಕ್ಕಳಿಗೆ ನೆರವಾಗುವಂತೆ 'ಮಿಶ್ರ ಕಲಿಕಾ ಗುಂಪು'ಗಳಲ್ಲಿ ಸೇರಿಸುವುದು ಹೆಚ್ಚು ಪರಿಣಾಮಕಾರಿ.

ಒಬ್ಬ ಶಿಕ್ಷಕರಾಗಿ, ಸಂಕೀರ್ಣವಾದ ವಿಷಯಗಳನ್ನು ಸರಳೀಕರಿಸಿ ಬೋಧಿಸುವುದು ಅತ್ಯಗತ್ಯ. ಪಾಠದ ಮುಖ್ಯ ಅಂಶಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವುದು, ವಿಷಯಕ್ಕೆ ಸಂಬಂಧಿಸಿದ ರೇಖಾಚಿತ್ರಗಳನ್ನು ಬಿಡಿಸುವುದು ಮತ್ತು ಮಾಹಿತಿಗಳನ್ನು ಸುಲಭವಾಗಿ ಗ್ರಹಿಸಲು ಕೋಷ್ಟಕಗಳನ್ನು (Tables) ಸಿದ್ಧಪಡಿಸುವುದರ ಮೂಲಕ ವಿಷಯವಸ್ತುವನ್ನು ಪರಿಣಾಮಕಾರಿಯಾಗಿ ಮನವರಿಕೆ ಮಾಡಿಕೊಡಬಹುದು.

*ಕೋಷ್ಟಕ 1: ಭಾಷೆ ಮತ್ತು ವಿಷಯಕ್ಕೆ ಸಂಬಂಧಿಸಿದ ಕೌಶಲಗಳನ್ನು ಬೆಳೆಸುವ ಚಟುವಟಿಕೆಗಳ ಉದಾಹರಣೆಗಳು.*

| ವಿಷಯ | ವಿಜ್ಞಾನ | ಸಮಾಜವಿಜ್ಞಾನ | ಭಾಷೆಯೊಂದಿಗೆ ಬೆಸೆಯುವುದು |
|---|---|---|---|
| ಮಣ್ಣು ಮತ್ತು ಬೆಳೆ | • ನಿಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಇರುವ ವಿವಿಧ ರೀತಿಯ ಮಣ್ಣಿನ ಬಗ್ಗೆ ಮಾಹಿತಿ ಸಂಗ್ರಹಿಸಿ.<br>• ಮಣ್ಣಿನಲ್ಲಿ ಉಂಟಾಗುವ ಬದಲಾವಣೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.<br>• ವಿವಿಧ ರೀತಿಯ ಮಣ್ಣಿನ ಫಲವತ್ತತೆಗೆ ಸಂಬಂಧಿಸಿದ ಅಂಶಗಳನ್ನು ಅರ್ಥಮಾಡಿಕೊಳ್ಳಿ.<br>• ಸ್ಥಳೀಯವಾಗಿ ಬೆಳೆದ ಬೆಳೆಗಳ ಬಗ್ಗೆ ಮಾಹಿತಿ ಸಂಗ್ರಹಸಿ, ಅವುಗಳಿಂದ ತಯಾರಿಸಲ್ಪಡುವ ಆಹಾರ ಪದಾರ್ಥಗಳ ಪಟ್ಟಿಯನ್ನು ತಯಾರಿಸಿ. | • ವಿವಿಧ ರೀತಿಯ ಮಣ್ಣಿನ ಬಗ್ಗೆ ಮಾಹಿತಿ ಸಂಗ್ರಹಿಸಿ, ಯಾವ ಮಣ್ಣಿನಲ್ಲಿ ಯಾವ ಬೆಳೆಗಳನ್ನು ನೆಡಲಾಗುತ್ತದೆ ಎಂದು ತಿಳಿಯಿರಿ.<br>• ಯಾವ ಪ್ರದೇಶದಲ್ಲಿ ಯಾವ ಮಣ್ಣು ಕಂಡುಬರುತ್ತದೆ ಮತ್ತು ಅದಕ್ಕೆ ಕಾರಣಗಳೇನು?<br>• ಬೆಳೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಬೆಳೆ ತೆಗೆಯುವಲ್ಲಿ ಇರುವ ಹಲವು ಹಂತಗಳನ್ನು ತಿಳಿದು, ಒಂದು ಪಟ್ಟಿ ತಯಾರಿಸಿ.<br>• ನಿಮ್ಮ ನಗರ, ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವ ಬೆಳೆಗಳನ್ನು ಬೆಳೆಯಲಾಗುತ್ತದೆ ಎಂಬ ಮಾಹಿತಿಯನ್ನು ಸಂಗ್ರಹಿಸಿ. | • ಮಾಹಿತಿಯನ್ನು ಸಂಗ್ರಹಣೆ ಮತ್ತು ಅದನ್ನು ಬರವಣಿಗೆ ರೂಪದಲ್ಲಿ ಪ್ರಸ್ತುತಪಡಿಸಿ.<br>• ಮಣ್ಣಿನಲ್ಲಿ ಆಗುವ ಬದಲಾವಣೆಗಳನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.<br>• ಮಣ್ಣಿಗೆ ಸಂಬಂಧಿಸಿದ ಕವಿತೆಯನ್ನು ಹುಡುಕಿ, ಅದನ್ನು ತರಗತಿಯಲ್ಲಿ ಓದಿ. |
| ಊಟ | • ಆಹಾರದ ವಿವಿಧ ಘಟಕಗಳ ಬಗ್ಗೆ ತಿಳಿದು, ಯಾವ ಆಹಾರದಿಂದ ಯಾವ ಪೋಷಕಾಂಶಗಳು ದೊರೆಯುತ್ತವೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ.<br>• ಹೊಲದಿಂದ ಊಟದ ತಟ್ಟೆಯವರೆಗಿನ ಹಂತಗಳನ್ನು ವಿವರವಾಗಿ ಬರೆಯಿರಿ. | • ಜನರು ಸೇವಿಸುವ ಹಲವು ರೀತಿಯ ಆಹಾರಗಳು ಯಾವುವು?<br>• ಯಾವ ಪ್ರದೇಶದಲ್ಲಿ ಯಾವ ಆಹಾರವನ್ನು ಸೇವಿಸಲಾಗುತ್ತದೆ? ಉದಾಹರಣೆಗೆ: ಗುಜರಾತ್, ಮಧ್ಯಪ್ರದೇಶ, ಉತ್ತರಾಖಂಡ ಇತ್ಯಾದಿ ರಾಜ್ಯಗಳಲ್ಲಿ ಬಳಸುವ ಆಹಾರ ಪದಾರ್ಥಗಳು | • ಕೆಲಸವನ್ನು ಬರಹ ರೂಪದಲ್ಲಿ ಸಲ್ಲಿಸಿ.<br>• ಯಾವುದಾದರೂ ಒಂದು ಖಾದ್ಯವನ್ನು ತಯಾರಿಸುವ ವಿಧಾನವನ್ನು ಬರೆಯಿರಿ. |
| ನೀರು | • ನೀರಿನ ಚಕ್ರವನ್ನು ಅರ್ಥಮಾಡಿಕೊಳ್ಳಲು ಮನೆಯಲ್ಲಿ ಅಥವಾ ನಿಮ್ಮ ಹತ್ತಿರದ ಜನರೊಂದಿಗೆ ಚರ್ಚಿಸಿ. | • ನಿಮ್ಮ ಸುತ್ತಮುತ್ತಲಿನ ನೀರಿನ ಮೂಲಗಳ ಬಗ್ಗೆ ಮಾಹಿತಿ ಸಂಗ್ರಹಿಸಿ. ಅಂದರೆ, ಕೆರೆಯು ಹೇಗೆ ರೂಪುಗೊಂಡಿತು, ಅದು ಎಷ್ಟು ಹಳೆಯದು; ಮೆಟ್ಟಿಲು ಬಾವಿಯನ್ನು ಹೇಗೆ ನಿರ್ಮಿಸಲಾಯಿತು, ಅದನ್ನು ಯಾರು ನಿರ್ಮಿಸಿದರು, ಅದು ಎಷ್ಟು ಹಳೆಯದು ಇತ್ಯಾದಿ. | • ನೀರಿನ ಚಕ್ರದ ಚಿತ್ರವನ್ನು ಬಿಡಿಸಿ ಅದನ್ನು ಲೇಬಲ್ ಮಾಡಿ.<br>• ಚೆನ್ನಾಗಿ ಓದಲು ಮತ್ತು ಬರೆಯಲು ಬರುವ ಮಕ್ಕಳು ನೀರಿನ ಚಕ್ರದ ಪ್ರಕ್ರಿಯೆಯ ಬಗ್ಗೆ ವಿವರವಾಗಿ ಬರೆಯಬಹುದು.<br>• ನೀರಿನ ಮೂಲಗಳು, ಅವುಗಳ ಬಳಕೆ, ಇತಿಹಾಸ ಮುಂತಾದವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸ್ವಂತ ಪದಗಳಲ್ಲಿ ಬರೆಯಿರಿ. ಅದನ್ನು ತರಗತಿಯಲ್ಲಿ ಎಲ್ಲರೊಂದಿಗೆ ಓದಿ ಹಂಚಿಕೊಳ್ಳಬಹುದು.<br>• ನೀರಿನ ಬಗ್ಗೆ ಒಂದು ಹಾಡನ್ನು ಹುಡುಕಿ ಹಾಡಿ ಮತ್ತು ಬರೆಯಿರಿ. |
| ಲೋಹ | • ನಿಮ್ಮ ಸುತ್ತಮುತ್ತ ಲಭ್ಯವಿರುವ ಪಾತ್ರೆ/ಸಾಮಾನುಗಳ ಪಟ್ಟಿ ಮಾಡಿ. ಉದಾಹರಣೆಗೆ: ಚೆಂಡು, ಸುತ್ತಿಗೆ, ಚಮಚ, ಬಾಟಲಿ, ಮಡಕೆ, ಕೊಡ, ಇತ್ಯಾದಿ.<br>• ಯಾವ ವಸ್ತುವು ಯಾವ ಪದಾರ್ಥದಿಂದ ಮಾಡಲ್ಪಟ್ಟಿದೆ, ಯಾವುದು ಆಯಸ್ಕಾಂತಕ್ಕೆ ಆಕರ್ಷಿತವಾಗುತ್ತದೆ ಮತ್ತು ಯಾವುದು ಆಗುವುದಿಲ್ಲ ಇತ್ಯಾದಿಗಳನ್ನು ಅನ್ವೇಷಿಸಿ. | • ಗೃಹೋಪಯೋಗಿ ಪಾತ್ರೆಗಳ ವಿನ್ಯಾಸ, ಅವುಗಳನ್ನು ಯಾವುದರಿಂದ ಮಾಡಲ್ಪಟ್ಟಿದೆ, ಅವುಗಳ ಉಪಯೋಗ, ಅವು ಯಾವ ಕಾಲದ್ದು ಇತ್ಯಾದಿ ಮಾಹಿತಿ ಸಂಗ್ರಹಿಸಿ. ಉದಾಹರಣೆಗೆ, ಹಿಂದೆ ಯಾವ ಲೋಹದ ಪಾತ್ರೆಗಳನ್ನು ಹೆಚ್ಚು ಬಳಸಲಾಗುತ್ತಿತ್ತು, ಪ್ರಸ್ತುತ ಯಾವ ಲೋಹದ ಪಾತ್ರೆಗಳನ್ನು ಹೆಚ್ಚು ಬಳಸಲಾಗುತ್ತಿದೆ? | • ಸಂಗ್ರಹಿಸಿದ ಮಾಹಿತಿಯನ್ನು ನಿಮ್ಮ ಸ್ವಂತ ಪದಗಳಲ್ಲಿ ಬರೆಯಿರಿ.<br>• ಯಾವುದಾದರೂ ಒಂದು ವಸ್ತು ಹೇಗೆ ತಯಾರಾಗುತ್ತದೆ, ಅದರ ಬಳಕೆ ಇತ್ಯಾದಿಗಳ ಬಗ್ಗೆ ಬರೆಯಿರಿ.<br>• ಪಾತ್ರೆಗಳ ಇತಿಹಾಸವನ್ನು ಕಥೆಯ ರೂಪದಲ್ಲಿ ಬರೆಯಿರಿ. |

**ವಿಷಯದ ಕಲಿಕೆ ಮತ್ತು ಓದು-ಬರಹದ ಕೌಶಲಗಳ ಅಭಿವೃದ್ಧಿಯನ್ನು ಸಮನ್ವಯಗೊಳಿಸುವುದು ಅತ್ಯಂತ ಮುಖ್ಯವಾಗಿದೆ.**

ಓದು ಮತ್ತು ಬರಹದಲ್ಲಿ ಸವಾಲುಗಳನ್ನು ಎದುರಿಸುತ್ತಿರುವ ಮಕ್ಕಳ ಮೇಲೆ ವಿಶೇಷ ಗಮನಹರಿಸುವುದು ಬಹಳ ಮುಖ್ಯ. ತರಗತಿಯ ಪ್ರತಿಯೊಂದು ಪ್ರಕ್ರಿಯೆಯಲ್ಲೂ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ಈ ನಿರಂತರ ಪ್ರೋತ್ಸಾಹ ಮತ್ತು ವ್ಯವಸ್ಥಿತ ಅವಕಾಶಗಳು ಅವರು ಕ್ರಮೇಣ ಭಾಷಾ ಕೌಶಲಗಳನ್ನು ಮೈಗೂಡಿಸಿಕೊಳ್ಳಲು ದಾರಿಯಾಗುತ್ತವೆ.

---



**ಶ್ವೇತಾ ವಿಶ್ವಕರ್ಮ** ಅವರು ಕಳೆದ 11 ವರ್ಷಗಳಿಂದ ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದು, ಪ್ರಸ್ತುತ ಮಧ್ಯಪ್ರದೇಶದ ಖಾರ್ಗೋನ್ ಜಿಲ್ಲೆಯಲ್ಲಿ ನಿಯೋಜಿತರಾಗಿದ್ದಾರೆ. ಅವರು ಬೆಂಗಳೂರಿನ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಶಿಕ್ಷಣಶಾಸ್ತ್ರದಲ್ಲಿ ಎಂ.ಎ. ಪದವಿ ಪೂರ್ಣಗೊಳಿಸಿದ್ದಾರೆ. ಶ್ವೇತಾ ಅವರಿಗೆ ಭಾಷೆ ಮತ್ತು ಭಾಷಾ ಬೋಧನೆಗೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಆಸಕ್ತಿಯಿದೆ.

**ಸಂಪರ್ಕ:** shweta.vishwakarma@azimpremjifoundation.org

ಅನುವಾದ: ಆಶಾ ಮಹೇಶ್ವರ ಸಿಂಗ್ | ಪರಿಶೀಲನೆ: ಅನುರೂಪ ರವೀಂದ್ರ

# ಚಿಂತನಶೀಲ ಶಿಕ್ಷಕರು ಬೋಧನಾ ಪ್ರಕ್ರಿಯೆಗೆ ಜೀವ ತುಂಬುತ್ತಾರೆ

**ಪಿ ಸತೀಶ್‌ಕುಮಾರ್**

**ಶಿಕ್ಷಕರಲ್ಲಿ ವೈಚಾರಿಕ ಪ್ರಜ್ಞೆ ಅಥವಾ ಚಿಂತನಶೀಲತೆಯನ್ನು ಮೂಡಿಸುವ ವಿಧಾನಗಳ ಕುರಿತಾದ ಪ್ರಶ್ನೆಯು ಅತ್ಯಂತ ಜಟಿಲವಾದುದು. ಈ ವಿಧಾನಗಳನ್ನು ಕೇವಲ ಕೆಲವು ಸಿದ್ಧ ಸೂತ್ರಗಳ ಮೂಲಕ ವ್ಯಾಖ್ಯಾನಿಸಲು ಸಾಧ್ಯವಿಲ್ಲ; ಏಕೆಂದರೆ ಶಿಕ್ಷಕರು ಕಾರ್ಯನಿರ್ವಹಿಸುವ ಸಂದರ್ಭಗಳು ಮತ್ತು ಭೌತಿಕ ಪರಿಸ್ಥಿತಿಗಳು ವೈವಿಧ್ಯಮಯವಾಗಿದ್ದು, ಅವರು ನಿರಂತರ ಸುಧಾರಣೆಗೆ ಬದ್ಧರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ, ಶಿಕ್ಷಕರು ಹಾಗೂ ಶಿಕ್ಷಕ ತರಬೇತುದಾರರು ಆತ್ಮಚಿಂತನೆಗಾಗಿ ಅಳವಡಿಸಿಕೊಳ್ಳುತ್ತಿರುವ ಪ್ರಾಯೋಗಿಕ ತಂತ್ರಗಳು ಮತ್ತು ಅವುಗಳ ಅನುಷ್ಠಾನದ ಅನುಭವಗಳ ಮೇಲೆ ಮಂಥನ ನಡೆಯುವುದು ಅವಶ್ಯಕ. ಈ ಲೇಖನವು ಅಂತಹ ಗಟ್ಟಿ ಅನುಭವಗಳನ್ನು ಮತ್ತು ಅವುಗಳ ಆಧಾರದ ಮೇಲೆ ರೂಪಿತವಾದ ಬೋಧನಾ ಕ್ರಮಗಳನ್ನು ನಮಗೆ ಪರಿಚಯಿಸುತ್ತದೆ.**



*ಚಿತ್ರ 1: ಸೂರ್ಯನ ಬೆಳಕಿನಲ್ಲಿ ನೆರಳುಗಳು ಪ್ರತಿ ಗಂಟೆಗೆ ಹೇಗೆ ಬದಲಾಗುತ್ತವೆ ಎಂದು ಗಮನಿಸಿ ಚಿತ್ರ ಬಿಡಿಸುತ್ತಿರುವ ವಿದ್ಯಾರ್ಥಿಗಳು. (ಈ ಚಿತ್ರವನ್ನು AI ಸಹಾಯದಿಂದ ರಚಿಸಲಾಗಿದೆ.)*

ಪ್ರಾಥಮಿಕ ಶಾಲಾ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಾರೆ ಎಂಬುದನ್ನು ಅವರೊಂದಿಗೆ ಕೆಲಸ ಮಾಡುವಾಗ ನಾನು ಗಮನಿಸಿದ್ದೇನೆ. ಆದರೆ ಅವರಿಗೆ ತಮ್ಮ ಕಲಿಕಾ ಕ್ರಮಗಳ ಬಗ್ಗೆ ಯೋಚಿಸಲು ಸಿಗುವ ಸಮಯ ತುಂಬಾ ಕಡಿಮೆ. ಪಾಠದ ತಯಾರಿ, ದಾಖಲೆ ಪತ್ರಗಳ ಕೆಲಸಗಳು ಮತ್ತು ದೊಡ್ಡ ತರಗತಿಗಳ ನಿರ್ವಹಣೆಯ ನಡುವೆ ಶಿಕ್ಷಕರಿಗೆ ತಮ್ಮ ಕಲಿಕಾ ಕ್ರಮಗಳ ಬಗ್ಗೆ ಯೋಚಿಸಲು ಪುರಸೊತ್ತೇ ಇರುವುದಿಲ್ಲ. ಆದರೆ ಇನ್ನೊಂದೆಡೆ, ಶಿಕ್ಷಕರು ಸ್ವಲ್ಪ ಸಮಯವನ್ನು ಆತ್ಮಾವಲೋಕನಕ್ಕೆಂದು ಮೀಸಲಿಟ್ಟರೆ, ಅರ್ಥಾತ ನೋಟ್ ಬುಕ್ಕಿನಲ್ಲಿ ಕೆಲವು ಸಾಲುಗಳನ್ನು ಬರೆಯುವುದು, ಮಧ್ಯಾಹ್ನದ ಊಟದ ಸಮಯದಲ್ಲಿ ಸಹೋದ್ಯೋಗಿಗಳೊಂದಿಗೆ ಮಾತನಾಡುವುದು ಅಥವಾ ತರಗತಿಯ ನಂತರ ಸ್ಟಾಫ್ ರೂಂನಲ್ಲಿ ಸುಮ್ಮನೆ ಶಾಂತವಾಗಿ ಕುಳಿತು ಯೋಚಿಸುವುದು ಮುಂತಾದ ಸಣ್ಣ ಪ್ರಯತ್ನಗಳು ಅವರ ಆತ್ಮವಿಶ್ವಾಸ ಮತ್ತು ಬೋಧನೆಯಲ್ಲಿ ನೈಜ ಬದಲಾವಣೆಯನ್ನು ತರಬಲ್ಲವು.

ಕೆಲವು ವರ್ಷಗಳ ಹಿಂದೆ, ಶಿಕ್ಷಕರ ಕಾರ್ಯಾಗಾರವೊಂದರಲ್ಲಿ ನಾನು 3ನೇ ತರಗತಿಗೆ ಪಾಠ ಮಾಡುತ್ತಿದ್ದ ರಹಾನಾ ಅವರನ್ನು ಭೇಟಿಯಾಗಿದ್ದೆ. ಆಗ ಅವರು ಹಿಂದೆ ಕುಳಿತು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದರು. ಒಂದು ಸೆಷನ್‌ನಲ್ಲಿ, ನಾನು ಶಿಕ್ಷಕರಿಗೆ, ಅವರ ತರಗತಿಯಲ್ಲಿ ನಡೆದ ಯಾವುದಾದರೂ ಒಂದು ಮರೆಯಲಾಗದ ಘಟನೆಯನ್ನು ನೆನಪಿಸಿಕೊಳ್ಳಲು ಹೇಳಿದೆ. ಅದು ನಿರೀಕ್ಷೆ ಮೀರಿ ಖುಷಿಯನ್ನು ಕೊಟ್ಟಿದ್ದಿರಬಹುದು ಅಥವಾ ಅಂದುಕೊಂಡ ಹಾಗೆ ಆಗದೇ ಇರಬಹುದು ಎಂದೆ. ಆರಂಭದಲ್ಲಿ ರಹಾನಾ ಸ್ವಲ್ಪ ಹಿಂಜರಿದರು, ನಂತರ ಅವರು ವಿಜ್ಞಾನ ತರಗತಿಯಲ್ಲಿ ಮಾಡಿಸಿದ ಒಂದು ಚಟುವಟಿಕೆಯ ಬಗ್ಗೆ ತಿಳಿಸಿದರು. ಸೂರ್ಯನ ಬೆಳಕಿನ ಚಲನೆಗೆ ಅನುಗುಣವಾಗಿ ನೆರಳು ಹೇಗೆ ಬದಲಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ತಮ್ಮ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತಿದ್ದಾಗ ಅವರು ಮಾಡಿಸಿದ್ದ ಚಟುವಟಿಕೆ ಅದಾಗಿತ್ತು.

ಅವರು ಹೇಳಿದರು, 'ವಿದ್ಯಾರ್ಥಿಗಳು ಸರಿಯಾಗಿ ಕೇಳಿಸಿಕೊಳ್ಳುತ್ತಿಲ್ಲ ಎಂದು ಆರಂಭದಲ್ಲಿ ನನಗೆ ಅನ್ನಿಸಿತ್ತು. ಆದರೆ ಆಮೇಲೆ ಗೊತ್ತಾಯ್ತು, ನಾನು ಆ ಚಟುವಟಿಕೆಯನ್ನು ತುಂಬಾ ವೇಗವಾಗಿ ಮಾಡಿ ಮುಗಿಸಿದ್ದೆ'. ಇದು ನನಗರಿವಾದ ಬಳಿಕ ಆ ಬಗ್ಗೆ ಇನ್ನಷ್ಟು ಯೋಚಿಸಿದಾಗ, ತಾನು ಆ ಚಟುವಟಿಕೆಯನ್ನು ಕೇವಲ ಒಂದು ಬಾರಿ ಮಾಡಿ ತೋರಿಸಿದ್ದೆ ಹಾಗೂ ಕೂಡಲೇ ಮುಂದಿನ ಹಂತಕ್ಕೆ ತೆರಳಿದ್ದೆ ಎನ್ನುವುದು ನನಗೆ ಅರಿವಾಯಿತು.

ಅಸಲಿಗೆ, ದಿನದ ಬೇರೆ ಬೇರೆ ಸಮಯಗಳಲ್ಲಿ ನೆರಳು ಹೇಗೆ ಬದಲಾಗುತ್ತದೆ ಎಂಬುದನ್ನು ಗಮನಿಸಲು ವಿದ್ಯಾರ್ಥಿಗಳಿಗೆ ಸಮಯವೇ ಸಿಕ್ಕಿರಲಿಲ್ಲ. ಸಂಕೀರ್ಣವಾದ ಆ ಪರಿಕಲ್ಪನೆಯನ್ನು ವಿದ್ಯಾರ್ಥಿಗಳು ತಕ್ಷಣವೇ ಗ್ರಹಿಸುವರು ಎಂಬುದು ನನ್ನ ನಿರೀಕ್ಷೆಯಾಗಿತ್ತು, ಆದರೆ ವಾಸ್ತವವಾಗಿ ಅದಕ್ಕೆ ಪುನರಾವರ್ತಿತ ವೀಕ್ಷಣೆ ಮತ್ತು ಪದೇ ಪದೇ ನೋಡಿ ಕಲಿಯಬೇಕಾದ ಅಗತ್ಯವಿತ್ತು. ಇದರಿಂದ ನನಗೆ ತಿಳಿದುಬಂದ ಸತ್ಯವೇನೆಂದರೆ, ಸಮಸ್ಯೆ ವಿದ್ಯಾರ್ಥಿಗಳ ಆಸಕ್ತಿಯಲ್ಲಿ ಇರಲಿಲ್ಲ, ಬದಲಾಗಿ ಪ್ರಾಯೋಗಿಕ ಪ್ರದರ್ಶನದ ವಿಧಾನದಲ್ಲಿತ್ತು ಎಂದು.

ಆಗ ನಾನು ಪ್ರಶ್ನಿಸಿದೆ, 'ಮತ್ತೊಮ್ಮೆ ಅದೇ ವಿಷಯವನ್ನು ಬೋಧಿಸುವ ಸಂದರ್ಭ ಒದಗಿಬಂದರೆ ನಿಮ್ಮ ಬೋಧನಾ ಕ್ರಮದಲ್ಲಿ ಯಾವ ಬದಲಾವಣೆ ತರುತ್ತೀರಿ?'. ಆ ಪ್ರಶ್ನೆಗೆ ಅವರು ನಸುನಗುತ್ತಾ, "ವಿದ್ಯಾರ್ಥಿಗಳು ಆ ಪರಿಕಲ್ಪನೆಯನ್ನು ಸಮಗ್ರವಾಗಿ ಗ್ರಹಿಸಲು ಅನುವಾಗುವಂತೆ, ಪ್ರತಿ ಗಂಟೆಗೊಮ್ಮೆ ಸೂರ್ಯನ ಬೆಳಕಿನಲ್ಲಿ ತಮ್ಮ ನೆರಳಿನ ಬದಲಾವಣೆಯನ್ನು ವೀಕ್ಷಿಸಲು ಮತ್ತು ಅದನ್ನು ದಾಖಲಿಸಲು ಅವರಿಗೆ ಸಂಪೂರ್ಣ ಅವಕಾಶವನ್ನು ನೀಡುತ್ತೇನೆ" ಎಂದು ಉತ್ತರಿಸಿದರು.

ನಾನು ಆ ಕ್ಷಣವನ್ನು ಎಂದಿಗೂ ಮರೆಯಲಾರೆ. ಏಕೆಂದರೆ ಅದು ಕೇವಲ ವಿಜ್ಞಾನ ಪಾಠವನ್ನು ಕಲಿಸುವ ಕಥೆಯಾಗಿರಲಿಲ್ಲ. ಅದು ಯಾವುದೇ ಪೂರ್ವಾಗ್ರಹಗಳಿಲ್ಲದೆ ಶೈಕ್ಷಣಿಕ ಸುಧಾರಣೆಯ ಕುರಿತು ಜಿಜ್ಞಾಸೆ ಹೊಂದಿದ್ದ ಒಬ್ಬ ಶಿಕ್ಷಕಿಯ ವೃತ್ತಿಪರ ಬದ್ಧತೆಯ ಸಂಕೇತವಾಗಿತ್ತು. ಒಂದು ವಾರದ ನಂತರ, ರಹಾನಾ ನನಗೆ ಕೆಲವು ಫೋಟೋಗಳನ್ನು ಕಳುಹಿಸಿದರು. ಅದರಲ್ಲಿ ಅವರ ವಿದ್ಯಾರ್ಥಿಗಳು ನೆಲದ ಮೇಲೆ ತಮ್ಮ ನೆರಳಿನ ರೇಖಾಚಿತ್ರಗಳನ್ನು ಬಿಡಿಸಿದ್ದರು. ಆ ಚಿತ್ರಗಳನ್ನು ಬಿಡಿಸುವಾಗ ವಿದ್ಯಾರ್ಥಿಗಳು ಎಷ್ಟು ಆನಂದಿಸಿರಬಹುದು ಎಂಬುದನ್ನು ಊಹಿಸಲು ನನಗೆ ಸ್ವಲ್ಪವೂ ಕಷ್ಟವಾಗಲಿಲ್ಲ!

## ಅಸಲಿಗೆ, ಚಿಂತನೆ ಎಂದರೇನು?

'ಚಿಂತನಶೀಲ ಅಭ್ಯಾಸ' ಎಂಬ ಪದವು ಸಂಕೀರ್ಣ ಹಾಗೂ ಅಪ್ರಸ್ತುತವೆಂದು ಭಾಸವಾಗಬಹುದು. ಅಸಲಿಗೆ, ಬೋಧನೆಯ ಸಂದರ್ಭದಲ್ಲಿ, ಚಿಂತನೆ ಎಂದರೆ ನಿಮ್ಮ ಬೋಧನಾ ಪ್ರಕ್ರಿಯೆಯ ಮೇಲೆ ಗಮನ ನೀಡುವುದು ಎಂದು. ಯಾವ ಕ್ರಮವು ಪರಿಣಾಮಕಾರಿಯಾಯಿತು, ಯಾವುದು ವಿಫಲವಾಯಿತು ಮತ್ತು ಅದರ ಹಿಂದಿನ ಕಾರಣಗಳೇನು ಎಂಬುದಕ್ಕೆ ಉತ್ತರ ಪಡೆಯಲು ಶಿಕ್ಷಕರು ಈ ಕೆಳಗಿನ ಸರಳ ಪ್ರಶ್ನೆಗಳ ಮೂಲಕ ಆತ್ಮಾವಲೋಕನ ಮಾಡಿಕೊಳ್ಳಬಹುದು

- ಇಂದಿನ ಬೋಧನೆಯಲ್ಲಿ ನನ್ನನ್ನು ವಿಸ್ಮಯಗೊಳಿಸಿದ ಅಥವಾ ಮರುಚಿಂತನೆಗೆ ಹಚ್ಚಿದ ಅಂಶ ಯಾವುದು?
- ಮುಂದಿನ ಸಲ ನಾನು ನನ್ನ ಬೋಧನಾ ಕ್ರಮದಲ್ಲಿ ತರಬಹುದಾದ ಬದಲಾವಣೆಗಳೇನು?
- ನಾನು ನನ್ನ ಇಂದಿನ ತರಗತಿಯಲ್ಲಿ ಏನೇನೆಲ್ಲ ಗಮನಿಸಿದೆ?

ಈ ಪ್ರಶ್ನೆಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳಲು ಕನಿಷ್ಠ ಐದು ನಿಮಿಷಗಳ ಕಾಲಾವಕಾಶ ಸಾಕು. ಶಿಕ್ಷಕರು ತಮ್ಮ ಉತ್ತರಗಳನ್ನು ನಿಯಮಿತವಾಗಿ ಡೈರಿಯಲ್ಲಿ ದಾಖಲಿಸಿದಾಗ, ಬೋಧನೆಯಲ್ಲಿನ ಕೆಲವು ಮಾದರಿಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಯಾವ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಆಸಕ್ತಿಯಿಂದ ಇರುವಂತೆ ಮಾಡುತ್ತವೆ, ಯಾವಾಗ ಅವರ ಗಮನ ಬೇರೆಡೆಗೆ ಹೋಗುತ್ತದೆ ಮತ್ತು ಸಣ್ಣ ಬದಲಾವಣೆಗಳು ಕೂಡ ಹೇಗೆ ದೊಡ್ಡ ಬದಲಾವಣೆಯನ್ನು ಉಂಟುಮಾಡಬಲ್ಲವು ಎಂಬುದು ಅರಿವಾಗುತ್ತದೆ.

ಶಿಕ್ಷಕರು ತಮ್ಮ ತಮ್ಮ ತರಗತಿಯ ಅನುಭವಗಳನ್ನು ತಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳುವುದು ಚಿಂತನ ಮಂಥನದ ಮತ್ತೊಂದು ಪರಿಣಾಮಕಾರಿ ವಿಧಾನವಾಗಿದೆ. ಒಂದು ಕ್ಲಸ್ಟರ್ ಮಟ್ಟದ ಸಭೆಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ, ತಮ್ಮ ತರಗತಿಗೆ ಸಂಬಂಧಿಸಿದ ಸಣ್ಣ ಘಟನೆ ಅಥವಾ ಅನುಭವಗಳನ್ನು ಹಂಚಿಕೊಳ್ಳಬೇಕೆಂದು ನಾನು ಸೂಚಿಸಿದೆ. ಆಗ ರಮೇಶ್ ಎಂಬ ಶಿಕ್ಷಕರು, ವನ್ಯಜೀವಿಗಳ ಕುರಿತಾದ ಪಾಠ ಮುಗಿದ ಮೇಲೆ ಮಕ್ಕಳಿಗೆ ತಮ್ಮ ಇಷ್ಟದ ಪ್ರಾಣಿಗಳಿಗೆ ಪತ್ರ ಬರೆಯಲು ಹೇಳಿದ್ದಾಗಿ ತಿಳಿಸಿದರು. ಈ ಸೃಜನಾತ್ಮಕ ಪ್ರಯತ್ನವು ತರಗತಿಯಲ್ಲಿ ಸಂಚಲನ ಮೂಡಿಸಿತಲ್ಲದೆ, ಮೌನವಾಗಿರುತ್ತಿದ್ದ ವಿದ್ಯಾರ್ಥಿಗಳೂ ಸಹ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿತು ಎಂದು ಅವರು ವಿವರಿಸಿದರು.

ರಮೇಶ್ ಅವರ ಅನುಭವ ಹಂಚಿಕೆಯ ನಂತರ, ಸುಮಾ ಎಂಬ ಇನ್ನೊಬ್ಬ ಶಿಕ್ಷಕಿ ತಾವೂ ಸಹ ತಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಶಾಲಾ ಮೈದಾನದಲ್ಲಿರುವ ಮರಗಳಿಗೆ ಪತ್ರ ಬರೆಯಲು ಹೇಳಿದ್ದಾಗಿ ತಿಳಿಸಿದರು. ಶೀಘ್ರದಲ್ಲೇ ಈ ಸಂವಾದವು ಸೃಜನಾತ್ಮಕ ವಿಚಾರಗಳ ವಿನಿಮಯಕ್ಕೆ ವೇದಿಕೆಯಾಗಿ ಬದಲಾಯಿತು. ಆ ಸಭೆಯಲ್ಲಿ ಹೊಸದೊಂದು ಚೈತನ್ಯ ತುಂಬಿಕೊಂಡಿತು. ಶಿಕ್ಷಕರು ಈಗ ಕೇವಲ ತಮ್ಮ ಶಿಕ್ಷಕ ತರಬೇತುದಾರರ ಮಾತುಗಳಿಗೆ ಸೀಮಿತವಾಗದೆ, ಪರಸ್ಪರರಿಂದಲೂ ಕಲಿಯಲಾರಂಭಿಸಿದ್ದರು.

ಆ ದಿನ ನನಗೆ ಮನವರಿಕೆಯಾದ ಅಂಶವೆಂದರೆ, ತಮ್ಮ ಬೋಧನಾ ಪ್ರಕ್ರಿಯೆಯ ಕುರಿತಾದ ಚಿಂತನೆಯು ಯಾವಾಗಲೂ ಕೇವಲ ವೈಯಕ್ತಿಕ ಚಟುವಟಿಕೆ ಅಥವಾ ಅಭ್ಯಾಸವಾಗಿ ಉಳಿಯಬಾರದು. ಶಿಕ್ಷಕರು ತಮ್ಮ ಬೋಧನಾ ಯಶಸ್ಸು ಮತ್ತು ವೈಫಲ್ಯಗಳ ಅನುಭವಗಳೆರಡನ್ನೂ ಮುಕ್ತವಾಗಿ ವಿನಿಮಯ ಮಾಡಿಕೊಂಡಾಗ, ಜ್ಞಾನದ ಒಂದು ದೊಡ್ಡ ಭಂಡಾರವೇ ನಿರ್ಮಾಣವಾಗುತ್ತದೆ. ಈ ಪ್ರಾಯೋಗಿಕ ಜ್ಞಾನಕ್ಕೆ ಯಾವುದೇ ಪಠ್ಯಪುಸ್ತಕ ಅಥವಾ ತರಬೇತಿ ಕೈಪಿಡಿಯು ಪರ್ಯಾಯವಾಗಲಾರದು.

## ಶಿಕ್ಷಕ ತರಬೇತುದಾರರು ಹೇಗೆ ಸಹಾಯ ಮಾಡಬಹುದು?

ಚಿಂತನೆ ಮಾಡುವುದು ಅಥವಾ ಆತ್ಮಾವಲೋಕನ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ತಮಗೆ ಸಮಯದ ಕೊರತೆಯಿದೆ ಅಥವಾ ಮುಕ್ತ ಚರ್ಚೆಗೆ ಸಾಂಸ್ಥಿಕ ಪ್ರೋತ್ಸಾಹ ದೊರಕುತ್ತಿಲ್ಲ ಎಂದು ಶಿಕ್ಷಕರಿಗೆ ಅನಿಸಬಹುದು. ತಮ್ಮ ಲೋಪದೋಷಗಳನ್ನು ಒಪ್ಪಿಕೊಳ್ಳುವುದು ತಮ್ಮ ದೌರ್ಬಲ್ಯದ ಸಂಕೇತವೆಂದು ಭಾವಿಸಬಹುದು ಎಂದು ಕೆಲವರಿಗೆ ಅನಿಸಬಹುದು. ಹಾಗಾಗಿಯೇ ತಮ್ಮ ಬೋಧನೆಯ ಕುರಿತು ಆಲೋಚಿಸುವುದು ಬಹಳ ಮಹತ್ವಪೂರ್ಣವಾಗಿದ್ದು, ಈ ಪ್ರಕ್ರಿಯೆಗೆ ವ್ಯವಸ್ಥಿತ ಬೆಂಬಲದ ಅವಶ್ಯಕತೆಯಿದೆ. ಇದು ಶಿಕ್ಷಕರು ತಮ್ಮ ಬೋಧನೆಯ ಜವಾಬ್ದಾರಿಯನ್ನು ಹೊರಲು ಸಶಕ್ತರನ್ನಾಗಿ ಮಾಡುತ್ತದೆ. ಇದರಿಂದ ತರಗತಿಯ ನಿತ್ಯದ ಕೆಲಸಗಳು ಕೂಡ ಕಲಿಕೆಯ ವೇದಿಕೆಯಾಗಿ ಬದಲಾಗುತ್ತವೆ. ಅಲ್ಲದೆ, ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಇದು ಪೂರಕವಾಗಿ ಸಹಕರಿಸುತ್ತದೆ.

ಉದಾಹರಣೆಗೆ—ಒಬ್ಬ ಶಿಕ್ಷಕನಿಗೆ ತಾನು ಪಾಠ ಮಾಡಿದ ನಂತರ, ಕೆಲವು ವಿದ್ಯಾರ್ಥಿಗಳು ಮಾತ್ರ ಉತ್ತರಿಸಿದ್ದಾರೆ, ಬಹುತೇಕರು ಸುಮ್ಮನೇ ಕುಳಿತಿದ್ದಾರೆ ಎಂದು ಅನಿಸಬಹುದು. ಹೆಚ್ಚು ವಿದ್ಯಾರ್ಥಿಗಳಿಗೆ ಮಾತನಾಡಲು ಅವಕಾಶ ನೀಡುವುದು ಹೇಗೆಂದು ಯೋಚಿಸಿದ ನಂತರ, ಅವರು ಮರುದಿನ ಜೋಡಿ ಕಲಿಕೆ ಅಥವಾ ಗುಂಪು ಚಟುವಟಿಕೆಯನ್ನು ಮಾಡಿಸಲು ನಿರ್ಧರಿಸಬಹುದು. ಇಂತಹ ಉದ್ದೇಶಪೂರ್ವಕ ಬದಲಾವಣೆಗಳು ವಿದ್ಯಾರ್ಥಿಗಳ ಗ್ರಹಿಕೆಯನ್ನು ಮತ್ತು ಸಕ್ರಿಯ ಸಹಭಾಗಿತ್ವವನ್ನು ಗಮನಾರ್ಹವಾಗಿ ಹೆಚ್ಚಿಸಬಲ್ಲವು. ಶಿಕ್ಷಕರು ತಮ್ಮ ಪಾಠ ಮುಗಿಸಿದ ನಂತರ 'ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ'ದ ಬಗ್ಗೆ ಕೇವಲ ಐದು ನಿಮಿಷಗಳ ಕಾಲ ಯೋಚಿಸಿದರೂ ಕೂಡ, ಇಡೀ ಶೈಕ್ಷಣಿಕ ಪ್ರಕ್ರಿಯೆಯು ಮತ್ತಷ್ಟು ಪರಿಣಾಮಕಾರಿಯಾಗುತ್ತದೆ.

ಶಿಕ್ಷಕ ತರಬೇತುದಾರರ ಕೆಲಸವು ಕೇವಲ 'ತರಬೇತಿ'ಗೆ ಸೀಮಿತವಾಗದೆ, ಶಿಕ್ಷಕರು ತಮ್ಮ ಬೋಧನಾ ವಿಧಾನಗಳ ಬಗ್ಗೆ ಮುಕ್ತವಾಗಿ ಯೋಚಿಸಲು ಮತ್ತು ಸುರಕ್ಷಿತವಾಗಿ ಚರ್ಚಿಸಲು ಪೂರಕವಾದ ವಾತಾವರಣವನ್ನು ಸೃಷ್ಟಿಸಬೇಕಾಗುತ್ತದೆ. ಶಾಲಾ ಭೇಟಿಯ ಸಂದರ್ಭದಲ್ಲಿ ಆರಂಭದಲ್ಲೇ ನಾನು ಕೇಳುತ್ತೇನೆ, 'ಈ ವಾರ ನಿಮ್ಮ ತರಗತಿಯಲ್ಲಿ ನಡೆದ ಯಾವುದಾದರೂ ಒಂದು ಒಳ್ಳೆಯ ವಿಷಯವನ್ನು ನನ್ನೊಂದಿಗೆ ಹಂಚಿಕೊಳ್ಳಿ' ಎಂದು.

ಮೇಲ್ನೋಟಕ್ಕೆ ಈ ಪ್ರಶ್ನೆಯು ಸರಳವೂ ಸಣ್ಣದೂ ಆಗಿದೆ ಅನ್ನಿಸಿದರೂ, ಇದು ಸುದೀರ್ಘ ವೈಚಾರಿಕ ಚರ್ಚೆಗೆ ಅಡಿಪಾಯವಾಗುತ್ತದೆ. ಶಿಕ್ಷಕರು ತಮ್ಮ ತರಗತಿಯ 'ವಾಹ್-ವಾಹ್' ಕ್ಷಣಗಳ ಬಗ್ಗೆ ಮಾತನಾಡುತ್ತಾರೆ. ಉದಾಹರಣೆಗೆ, ಒಬ್ಬ ನಾಚಿಕೆ ಸ್ವಭಾವದ ವಿದ್ಯಾರ್ಥಿ ಆತ್ಮವಿಶ್ವಾಸದಿಂದ ಉತ್ತರಿಸಲಾರಂಭಿಸಿದ್ದು, ಅಥವಾ ಒಂದು ಗುಂಪು ಚಟುವಟಿಕೆ ಯಶಸ್ವಿಯಾಗಿದ್ದು, ಅಥವಾ ಹಳೆಯ ಚಾರ್ಟ್‌ಗಳಿಂದ ಏನನ್ನಾದರೂ ಸೃಜನಾತ್ಮಕವಾಗಿ ಮಾಡಿದ್ದು, ಇತ್ಯಾದಿ. ತದನಂತರ ನಾವು ಎಲ್ಲೆಲ್ಲಿ ಏನೇನು ಎಡವಟ್ಟಾಗಿದೆ ಹಾಗೂ ಮುಂದಿನ ಬಾರಿ ಮಾಡಬಹುದಾದ ಸುಧಾರಣಾ ಕ್ರಮಗಳ ವಿಷಯದ ಕಡೆಗೆ ನಿಧಾನವಾಗಿ ಸಾಗುತ್ತೇವೆ. ಉದಾಹರಣೆಗೆ, ವರ್ಕ್‌ಶೀಟ್ ಆಧಾರಿತ ಚಟುವಟಿಕೆಯು ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಫಲವಾಯಿತು ಮತ್ತು ಅದು ಅವರ ಗಮನವನ್ನು ಬೇರೆಡೆಗೆ ಸೆಳೆಯಿತು ಎಂದು ಯಾರೋ ಶಿಕ್ಷಕ ಹೇಳಿದರು ಎಂದಿಟ್ಟುಕೊಳ್ಳಿ. ಮುಂದಿನ ಬಾರಿ ಅದರ ಬದಲಿಗೆ ಯಾವುದಾದರೂ ಪ್ರಾಯೋಗಿಕ ಕಾರ್ಯ ಅಥವಾ ನೇರ ಸಂವಾದ ನಡೆಸಲು ಈ ಚರ್ಚೆಯ ಸಂದರ್ಭದಲ್ಲಿ ಆ ಶಿಕ್ಷಕ ನಿರ್ಧರಿಸಬಹುದು. ಮತ್ತೊಬ್ಬ ಶಿಕ್ಷಕರಿಗೆ ತಮ್ಮ ಬೋಧನಾ ಸೂಚನೆಗಳಲ್ಲಿ ಸ್ಪಷ್ಟತೆ ಇರದೇ ಇದ್ದ ವಿಷಯ ಗಮನಕ್ಕೆ ಬಂದಿರಬಹುದು. ಇದರ ಪರಿಣಾಮವಾಗಿ, ಅವರು ಭವಿಷ್ಯದ ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ನಿಖರ ಹಾಗೂ ಸ್ಪಷ್ಟವಾದ ನಿರ್ದೇಶನಗಳನ್ನು ಒದಗಿಸಬೇಕು ಎಂದು ಅವರಿಗೆ ಅನ್ನಿಸಬಹುದು.

ತಮ್ಮ ಬೋಧನೆಯ ಬಗ್ಗೆ ಆಲೋಚಿಸುವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದು ಅತ್ಯಗತ್ಯ. ಶಿಕ್ಷಕರು ತಮ್ಮ ಸ್ವಂತ ಅನುಭವಗಳ ಮೂಲಕ ಕಲಿಯುವುದಕ್ಕೆ ನಾವು ಅವರಿಗೆ ನೆರವಾಗಬೇಕು. ಈ ಪ್ರಕ್ರಿಯೆಯನ್ನು ಕೇವಲ ಬೋಧನೆಯಿಂದ ಕಲಿಸಲಾಗದು.

## ಆತ್ಮಚಿಂತನದ ಅಭ್ಯಾಸ

ಆರಂಭದಲ್ಲಿ ಚಿಂತನೆ ಮಾಡಲು ಹಿಂಜರಿಯುತ್ತಿದ್ದ, ಆದರೆ ಈಗ ಅದನ್ನು ಸ್ವತಃ ಅಳವಡಿಸಿಕೊಳ್ಳಲಾರಂಭಿಸಿರುವ ಅನೇಕ ಶಿಕ್ಷಕರನ್ನು ಕಳೆದ ಕೆಲವು ವರ್ಷಗಳಲ್ಲಿ ನಾನು ಗಮನಿಸಿದ್ದೇನೆ. ಕೆಲವು ಶಿಕ್ಷಕರು ತಮ್ಮ ಡೈರಿಯಲ್ಲಿ ಪ್ರತಿದಿನ ಎರಡು ಅಥವಾ ಮೂರು ಸಾಲುಗಳ ಟಿಪ್ಪಣಿಗಳನ್ನು ಬರೆಯುತ್ತಿದ್ದರೆ, ಇನ್ನು ಕೆಲವರು ಸಣ್ಣ ಗುಂಪುಗಳನ್ನು ಮಾಡಿಕೊಂಡು ಸಮಯ ನಿಗದಿಪಡಿಸಿ, ನಿಯಮಿತವಾಗಿ ಸಂವಾದ ನಡೆಸಿ ತಮ್ಮ ಶೈಕ್ಷಣಿಕ ಅನುಭವಗಳ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಒಂದಿಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ 'ಇಂದು ನಿಮ್ಮ ಕಲಿಕೆಯಲ್ಲಿ ನಿಮಗೆ ಅತ್ಯಂತ ಇಷ್ಟವಾದ ವಿಷಯ ಯಾವುದು?' ಎಂದು ಕೇಳುವ ಮೂಲಕ ಅವರೂ ಕೂಡ ಆಲೋಚಿಸುವಂತೆ ಮಾಡಲು ಪ್ರೇರೇಪಿಸುತ್ತಾರೆ.

ಹೀಗೆ ಕ್ರಮೇಣ ಈ ಚಿಂತನ ಮಂಥನವು ಶಾಲಾ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ರೂಪಾಂತರಗೊಳ್ಳುತ್ತದೆ. ಅಲ್ಲಿ ಶಿಕ್ಷಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಉತ್ಸುಕರಾಗುತ್ತಾರೆ. ಸಿಬ್ಬಂದಿ ಸಭೆಗಳು, ಕ್ಲಸ್ಟರ್ ಸಭೆಗಳು ಅಥವಾ ಸಾಂಸ್ಥಿಕ ಸಂವಾದದ ಸಮಯದಲ್ಲಿ ಚಿಂತನ ಮಂಥನಕ್ಕೆ ಮಹತ್ವ ನೀಡಿದಾಗ ಮತ್ತು ಶಿಕ್ಷಕರು ಯಾವುದೇ ಭಯವಿಲ್ಲದೆ ಮಾತನಾಡಲು ಪೂರಕವಾದ ವಾತಾವರಣ ನಿರ್ಮಾಣವಾದಾಗ ಅದು ಸಾಧ್ಯವಾಗುತ್ತದೆ. ಕಾಲಕ್ರಮೇಣ ಶಿಕ್ಷಕರಿಗೆ ಚಿಂತನ ಮಂಥನವು ಮಾಡುವುದು ಹೆಚ್ಚುವರಿ ಕೆಲಸವಲ್ಲ, ಬದಲಾಗಿ ವೃತ್ತಿಯ ಸಹಜ ಗುಣಲಕ್ಷಣ ಎಂದು ಅನಿಸಲು ಶುರುವಾಗುತ್ತದೆ. ಇದರಿಂದ ತರಗತಿಗಳು ಹೆಚ್ಚು ಕ್ರಿಯಾಶೀಲವೂ ಆಗುತ್ತದೆ ಹಾಗೂ ಜೀವಂತಿಕೆಯಿಂದಲೂ ಕೂಡಿರುತ್ತದೆ.

## ಅಂತಿಮ ನುಡಿ

ನನ್ನ ಹಿಂದಿನ ಕಾರ್ಯಾಗಾರವೊಂದರಲ್ಲಿ, 4ನೇ ತರಗತಿಯ ಶಿಕ್ಷಕಿಯಾಗಿರುವ ಮಗಥಿ ಅವರಿಗೆ ಅವರ ತರಗತಿ ಹೇಗೆ ನಡೆಯುತ್ತಿದೆ ಎಂದು ಕೇಳಿದೆ. ಅವರು, 'ನಾನು ಮಾಡುವ ಪಾಠದ ಬಗ್ಗೆ ಡೈರಿಯಲ್ಲಿ ಬರೆಯುತ್ತೇನೆ. ಹಳೆಯ ವಿಷಯಗಳನ್ನು ಓದಿದಾಗ ನಾನೀಗ ಎಷ್ಟು ಬದಲಾಗಿದ್ದೇನೆ ಎಂದು ಗೊತ್ತಾಗುತ್ತದೆ' ಎಂದರು. ಮೊದಮೊದಲಿಗೆ ತಾನು ಪಠ್ಯಪುಸ್ತಕಗಳು ಮತ್ತು ಶಿಕ್ಷಕರ ಮಾತುಗಳ ಮೇಲೆ ಹೆಚ್ಚು ಅವಲಂಬಿತಳಾಗಿದ್ದೆ. ಆದರೆ ಈಗೀಗ ತನ್ನ ನೋಟ್ಸ್‌ಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದನ್ನು ಗಮನಿಸಿರುವುದಾಗಿ ಆಕೆ ವಿವರಿಸಿದರು. ಸದ್ಯ ಅವರು ವಿದ್ಯಾರ್ಥಿಗಳೊಂದಿಗಿನ ಸಂವಾದ, ಗುಂಪು ಚಟುವಟಿಕೆಗಳು ಮತ್ತು ಪ್ರಶ್ನೋತ್ತರಗಳ ಕಡೆಗೆ ಹೆಚ್ಚಿನ ಗಮನ ನೀಡುತ್ತಾರೆ. ಇದು ಅವರ ವೃತ್ತಿಪರ ಬೆಳವಣಿಗೆಯನ್ನು ಗುರುತಿಸಲು ಸಹಾಯ ಮಾಡಿದೆ.

ಅವರ ಮಾತುಗಳು ಚಿಂತನ ಮಂಥನದ ಭಾವನೆಯನ್ನು ಸಂಪೂರ್ಣವಾಗಿ ವ್ಯಕ್ತಪಡಿಸಿದವು. ನಾವು ಯಾವಾಗಲೂ ನೂರಕ್ಕೆ ನೂರರಷ್ಟು ಸರಿಯಾಗಿದ್ದೇವೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ, ಬದಲಿಗೆ ನಮ್ಮ ಬೆಳವಣಿಗೆಯ ಬಗ್ಗೆ ನಮಗೆ ಅರಿವಿದೆಯೇ ಇಲ್ಲವೇ ಎಂಬುದಷ್ಟೇ ಮುಖ್ಯ.

ಶಿಕ್ಷಕರ ಬಳಿ ತಾವು ಅತ್ಯುತ್ತಮವಾಗಿ ಬೋಧಿಸಿದ ಪಾಠಗಳು ಹಾಗೂ ಸುಧಾರಣೆಗೆ ಅವಕಾಶವಿರುವ ಪಾಠಗಳ ಸಹಿತ ಅಸಂಖ್ಯಾತ ಅನುಭವಗಳಿರುತ್ತವೆ. ವೃತ್ತಿಪರ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳುವ ಸುಪ್ತ ಅವಕಾಶಗಳು ಈ ಅನುಭವಗಳಲ್ಲೇ ಅಡಗಿರುತ್ತವೆ. ಆತ್ಮಾವಲೋಕನ ಎಂಬುದು ತಮಗೆ ತಾವೇ ಮಾಡಿಕೊಳ್ಳುವ ಒಂದು ಪ್ರಶಾಂತ ಸಂಭಾಷಣೆಯಾಗಿದೆ. ಜೊತೆಗೆ ಸ್ವಲ್ಪ ನಿಂತು ಕಲಿಯುವ ಪ್ರಕ್ರಿಯೆಯಾಗಿದೆ. ಉದಾಹರಣೆಗೆ, ಶಾಲಾ ಅವಧಿಯ ನಂತರದಲ್ಲಿ ಟಿಪ್ಪಣಿ ಬರೆದಿಡುವುದು, ಸಹೋದ್ಯೋಗಿ ಶಿಕ್ಷಕರೊಂದಿಗೆ ಸಮಾಲೋಚಿಸುವುದು ಅಥವಾ ಶಾಂತ ಮನಸ್ಸಿನಿಂದ ತಮಗೆ ತಾವೇ ಪ್ರಶ್ನೆ ಕೇಳಿಕೊಳ್ಳುವುದು. ಹೀಗೆ ಪ್ರತಿಯೊಂದು ಚಿಂತನೆಯೂ ಶಿಕ್ಷಕರ ವೃತ್ತಿಪರ ಸಾಮರ್ಥ್ಯವನ್ನು ಆಂತರಿಕವಾಗಿ ಗಟ್ಟಿಗೊಳಿಸುತ್ತದೆ.



**ಸತೀಶ್ ಕುಮಾರ್** ಅವರು ತಮಿಳುನಾಡಿನ ಈರೋಡ್‌ನಲ್ಲಿ ಶಿಕ್ಷಕರಾಗಿ ಮತ್ತು ಶಿಕ್ಷಕ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ಅವರು ಶಾಲಾ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪರಿಣಾಮಕಾರಿ ಬೋಧನೆ ಮತ್ತು ಕ್ರಿಯಾಶೀಲ ತರಗತಿಯ ವಾತಾವರಣವನ್ನು ಸೃಷ್ಟಿಸಲು ಚಿಂತನೆಯು ಅತ್ಯಗತ್ಯ ಎಂಬುದು ಅವರ ದೃಢವಾದ ಅಭಿಪ್ರಾಯವಾಗಿದೆ.

**ಸಂಪರ್ಕ:** engsathish.kumar@gmail.com

ಅನುವಾದ: ರಾಕೇಶ್ ಪೂಂಜಾ | ಪರಿಶೀಲನೆ: ಕಿರಣ್ ಮಂಜುನಾಥ್

# ಪರಿಸರ ಸಂರಕ್ಷಣೆಯ ಮನೋಭಾವದಿಂದ ಶುರುವಾದ ಇಕೋ ಕ್ಲಬ್

**ಕೀರ್ತಿ ಲಾಂಬಾ**

**ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸಲು ಭಾರತ ಸರ್ಕಾರದ 'ಮಿಷನ್ ಲೈಫ್' ಅಡಿಯಲ್ಲಿ ರೂಪಿಸಲಾದ ಇಕೋ ಕ್ಲಬ್ ಅತ್ಯಂತ ಪ್ರಭಾವಶಾಲಿ ವೇದಿಕೆಯಾಗಿದೆ. ಸುಸ್ಥಿರ ಬದುಕಿಗೆ ಬೇಕಾದ ಮೌಲ್ಯ ಮತ್ತು ಸಂಸ್ಕಾರಗಳನ್ನು ಮಕ್ಕಳಲ್ಲಿ ಬೆಳೆಸುವುದು ಈ ಕ್ಲಬ್‌ನ ಮುಖ್ಯ ಉದ್ದೇಶವಾಗಿದೆ. ಇದರ ಮೂಲಕ ವಿದ್ಯಾರ್ಥಿಗಳನ್ನು ಪರಿಸರ ಸ್ನೇಹಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಇದರಿಂದ ಸಹಜವಾಗಿಯೇ ಅವರಲ್ಲಿ ಪ್ರಕೃತಿಯ ಬಗ್ಗೆ ಮಮತೆ ಮತ್ತು ಜವಾಬ್ದಾರಿಯ ಪ್ರಜ್ಞೆ ಮೂಡುತ್ತದೆ. ದೆಹಲಿಯ ಸರ್ಕಾರಿ ಶಾಲೆಯ ಶಿಕ್ಷಕಿಯೊಬ್ಬರು ಕೈಗೊಂಡ ಇಂತಹದ್ದೇ ವಿಶಿಷ್ಟ ಪ್ರಯತ್ನದ ಅನುಭವದ ಸಾರವನ್ನು ಈ ಲೇಖನವು ಪ್ರಸ್ತುತಪಡಿಸುತ್ತದೆ.**

ತರಗತಿಯಲ್ಲಿ ಕಲಿಸುವ ವಿಷಯಗಳು ವಿದ್ಯಾರ್ಥಿಗಳ ನೈಜ ಜೀವನಕ್ಕೆ ಸಂಬಂಧಿಸಿದ್ದಾಗ ಅವರ ಕಲಿಕೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ನನ್ನ ತರಗತಿಗಳಲ್ಲೂ ನಾನು ಇಂತಹ ಬೆಸುಗೆಯನ್ನು ಏರ್ಪಡಿಸಲು ಪ್ರಯತ್ನಿಸಿದಾಗ ದೊರೆತ ಫಲಿತಾಂಶಗಳು ನಿಜಕ್ಕೂ ಆಶ್ಚರ್ಯಕರವಾಗಿದ್ದವು. 7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ 'ಪರಿಸರ' ಮತ್ತು 8ನೇ ತರಗತಿಯಲ್ಲಿ 'ಸಂಪನ್ಮೂಲಗಳು' ಎಂಬ ಪಾಠಗಳಿವೆ. ಈ ಎರಡೂ ಪಾಠಗಳು 'ಇಕೋ ಕ್ಲಬ್' ರಚಿಸುವ ಮೂಲಕ ಸುಸ್ಥಿರ ಅಭಿವೃದ್ಧಿಗಾಗಿ ಶಿಕ್ಷಣ (Education for Sustainable Development—ESD) ನೀಡಲು ಅತ್ಯುತ್ತಮ ಶೈಕ್ಷಣಿಕ ತಳಹದಿಯನ್ನು ಒದಗಿಸುತ್ತವೆ.

ಈ ಎರಡೂ ಪಾಠಗಳ ಆಶಯದಂತೆ, ನಾನು ನನ್ನ ವಿದ್ಯಾರ್ಥಿಗಳಿಗಾಗಿ LiFE (ಪರಿಸರಕ್ಕಾಗಿ ಜೀವನಶೈಲಿ - Lifestyle for Environment) ಅಭಿಯಾನವನ್ನು ಪ್ರಾರಂಭಿಸಿದೆ. ಇದರ ಅಡಿಯಲ್ಲಿ, ಶಾಲೆಯಲ್ಲಿ ಇಕೋ ಕ್ಲಬ್‌ಗಳನ್ನು ಸ್ಥಾಪಿಸಲಾಯಿತು. ಇದೀಗ ಇವುಗಳನ್ನು 'ಇಕೋ ಕ್ಲಬ್ಸ್ ಫಾರ್ ಮಿಷನ್ ಲೈಫ್' (Eco Clubs for Mission LiFE) ಎಂಬ ಹೆಸರಿನಿಂದ ಕರೆಯಲಾಗುತ್ತದೆ.

> **"ಮರುದಿನ ಬೆಳಗ್ಗೆ, ಯಾವುದೇ ಶಿಕ್ಷಕರು ಹೇಳದಿದ್ದರೂ ವಿದ್ಯಾರ್ಥಿಗಳು ತಾವು ನೆಟ್ಟ ಗಿಡಗಳನ್ನು ನೋಡಲೆಂದು ಬೇಗನೆ ಶಾಲೆಗೆ ಬಂದಿದ್ದರು. ಇನ್ನು ಕೆಲವರು ಗಿಡಗಳಿಗೆ ನೀರು ಹಾಕಲು ಸ್ವಯಂಪ್ರೇರಿತರಾಗಿ ಮುಂದಾದರು."**

ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮತ್ತು ಪ್ರಜ್ಞೆಯನ್ನು ಮೂಡಿಸುವುದು ಈ ಕ್ಲಬ್‌ನ ಪ್ರಮುಖ ಉದ್ದೇಶವಾಗಿದೆ.

## ಕ್ಲಬ್ ಸ್ಥಾಪನೆ ಮತ್ತು ಅದರ ಉದ್ದೇಶಗಳು

7ನೇ ತರಗತಿಯ ವಿದ್ಯಾರ್ಥಿಗಳಿಗೆ ಜೈವಿಕ ಮತ್ತು ಅಜೈವಿಕ ಪರಿಸರದ ಪರಿಕಲ್ಪನೆಗಳನ್ನು ಮನದಟ್ಟು ಮಾಡಿಕೊಡಲು 'ವಾಕ್ ಅಂಡ್ ಟಾಕ್' ಚಟುವಟಿಕೆಯೊಂದಿಗೆ ಈ ಅಭಿಯಾನ ಆರಂಭವಾಯಿತು. 'ಏಕ್



*ಚಿತ್ರ 1: ಶಾಲೆಯ ಆವರಣದಲ್ಲಿ ಗಿಡ ನೆಡಲು ಭೂಮಿಯನ್ನು ಸಿದ್ಧಪಡಿಸುತ್ತಿರುವ ವಿದ್ಯಾರ್ಥಿಗಳು.*

ಪೇಡ್ ಮಾ ಕೆ ನಾಮ್' (ಅಮ್ಮನ ಹೆಸರಲ್ಲೊಂದು ಗಿಡ) ಅಭಿಯಾನದ ಮೂಲಕ ವಿದ್ಯಾರ್ಥಿಗಳು ತಮ್ಮ ತಾಯಂದಿರಿಗೆ ಸಮರ್ಪಿಸಿ ಒಂದೊಂದು ಸಸಿಯನ್ನು ನೆಟ್ಟು, ಅವುಗಳನ್ನು ಪೋಷಿಸುವ ಸಂಕಲ್ಪ ಮಾಡಿದರು. ಕೆಲವು ವಿದ್ಯಾರ್ಥಿಗಳು ತಾವೇ ಸ್ವತಃ ಸಸಿಗಳ ಹೆಸರು ಮತ್ತು ವೈಜ್ಞಾನಿಕ ಮಾಹಿತಿಯುಳ್ಳ ಫಲಕಗಳನ್ನು ತಯಾರಿಸಿ ಗಿಡಗಳ ಪಕ್ಕದಲ್ಲಿ ಹಾಕಿದರು. ಮರುದಿನ ಬೆಳಗ್ಗೆ, ಯಾವುದೇ ಶಿಕ್ಷಕರು ಹೇಳದಿದ್ದರೂ ವಿದ್ಯಾರ್ಥಿಗಳು ತಾವು ನೆಟ್ಟ ಗಿಡಗಳನ್ನು ನೋಡಲೆಂದು ಬೇಗನೆ ಶಾಲೆಗೆ ಬಂದಿದ್ದರು. ಇನ್ನು ಕೆಲವರು ಗಿಡಗಳಿಗೆ ನೀರು ಹಾಕಲು ಸ್ವಯಂಪ್ರೇರಿತರಾಗಿ ಮುಂದಾದರು. ತಮ್ಮ ಗಿಡಗಳು ಬೆಳೆಯುವುದನ್ನು ನೋಡಲು ಮಕ್ಕಳು ತೋರುತ್ತಿದ್ದ ಕುತೂಹಲ ಬಹಳ ಸೊಗಸಾಗಿತ್ತು. ಇದು ಪ್ರಕೃತಿಯ ಬಗ್ಗೆ ಒಲವು ಬೆಳೆಸಿಕೊಳ್ಳಲು ಮತ್ತು ಅದರೊಂದಿಗೆ ಗಾಢವಾದ ಸಂಬಂಧವನ್ನು ಹೊಂದಲು ನಾಂದಿಯಾಯಿತು. ಈ ಅನುಭವದ ಮೂಲಕ ವಿದ್ಯಾರ್ಥಿಗಳು ಕೇವಲ ನಿಷ್ಕ್ರಿಯವಾಗಿ ಮಾಹಿತಿ ಪಡೆಯುವವರಾಗದೆ, ಪರಿಸರಕ್ಕಾಗಿ ಕೆಲಸ ಮಾಡುವ ಜವಾಬ್ದಾರಿಯುತ ವ್ಯಕ್ತಿಗಳಾದರು. ಒಟ್ಟಾರೆಯಾಗಿ, ಈ ಕ್ಲಬ್ ಸಾಮೂಹಿಕವಾದ ಜ್ಞಾನದ ಹಸಿವು ಹಾಗೂ ಪರಿಸರ ಪೋಷಣೆಯ ಉದಾತ್ತ ಭಾವನೆಯೊಂದಿಗೆ ಕಾರ್ಯಾರಂಭ ಮಾಡಿತು.

> **ಕ್ರಮೇಣ ಇಕೋ ಕ್ಲಬ್‌ನ ಚಟುವಟಿಕೆಗಳ ಜೊತೆಜೊತೆಗೆ ವಿದ್ಯಾರ್ಥಿಗಳ ಜ್ಞಾನವೂ ವೃದ್ಧಿಯಾಯಿತು. ಕ್ಲಬ್‌ನ ಸಂಪೂರ್ಣ ಜವಾಬ್ದಾರಿಯನ್ನು ವಿದ್ಯಾರ್ಥಿಗಳೇ ವಹಿಸಿಕೊಳ್ಳುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿತ್ತು; ನನ್ನ ಪಾತ್ರ ಕೇವಲ ಮಾರ್ಗದರ್ಶನ ಮತ್ತು ಪ್ರೋತ್ಸಾಹಕ್ಕೆ ಸೀಮಿತವಾಗಿತ್ತು.**

ಇದೇ ರೀತಿ, 8ನೇ ತರಗತಿಯ 'ಸಂಪನ್ಮೂಲಗಳು' ಎಂಬ ಪಾಠದಲ್ಲಿರುವ ಸುಸ್ಥಿರ ಅಭಿವೃದ್ಧಿಯ ವಿಷಯವು ಕ್ಲಬ್‌ನ ಉದ್ದೇಶದ ಕುರಿತು ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತು. ವಿದ್ಯಾರ್ಥಿಗಳು ಈ ವಿಷಯದ ಬಗ್ಗೆ ಗಂಭೀರವಾಗಿ ಯೋಚಿಸಿ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದರು. ಅವರ ಆ ಪ್ರಶ್ನೆಗಳು ನನ್ನ ಉತ್ಸಾಹವನ್ನು ಹೆಚ್ಚಿಸುವಂತಿದ್ದವು. ಉದಾಹರಣೆಗೆ—

7ನೇ ತರಗತಿಯ ವಿದ್ಯಾರ್ಥಿನಿ ಆಯೇಷಾ ಕೇಳಿದಳು: "ಮೇಡಂ, ನವೀಕರಿಸಬಹುದಾದ ಸಂಪನ್ಮೂಲವಾಗಿದ್ದರೂ ನೀರು ಏಕೆ ಇಷ್ಟೊಂದು ವಿರಳವಾಗಿದೆ? ಈ ವಿರೋಧಾಭಾಸವೇಕೆ? ನಾವು ಪ್ರತಿದಿನ ಸುದ್ದಿಗಳಲ್ಲಿ ನೀರಿನ ಅಭಾವದ ಬಗ್ಗೆ ಕೇಳುತ್ತಿರುತ್ತೇವಲ್ಲ, ಇದು ಏಕೆ?" ಆಯೇಷಾ ಕೇಳಿದ ಈ ತಾರ್ಕಿಕ ಪ್ರಶ್ನೆಯು ತರಗತಿಯಲ್ಲಿ ಗಂಭೀರವಾದ ಚರ್ಚೆಗೆ ನಾಂದಿ ಹಾಡಿತು. ಈ ಕುತೂಹಲವು 7ನೇ ತರಗತಿಯ 'ಪರಿಸರ' ಪಾಠದ ಚರ್ಚೆಯ ಸಂದರ್ಭದಲ್ಲಿ ಹುಟ್ಟಿಕೊಂಡಿತ್ತು. ಆಯೇಷಾಳ ಪ್ರಶ್ನೆಯು ವಿದ್ಯಾರ್ಥಿಗಳನ್ನು "ಪುಸ್ತಕದ ಸಿದ್ಧಾಂತ"ದಿಂದ "ನೆಲದ ವಾಸ್ತವ"ದೆಡೆಗೆ ತಿರುಗಿಸಿತು. ಲಭ್ಯವಿರುವ ಸಿಹಿನೀರಿನ ಪ್ರಮಾಣ ಎಷ್ಟು ಕಡಿಮೆ ಇದೆ ಮತ್ತು ನಾವು ಅದನ್ನು ಎಷ್ಟು ವ್ಯರ್ಥ ಮಾಡುತ್ತಿದ್ದೇವೆ ಎಂಬ ವಿಷಯದ ಕುರಿತು ನಡೆದ ಈ ಚರ್ಚೆಯು, ನೇರವಾಗಿ ನಮ್ಮ 'ಮಿಷನ್ ಲೈಫ್ ಇಕೋ-ಕ್ಲಬ್'ನ ಪ್ರಮುಖ ಉದ್ದೇಶವಾದ 'ಜಲ ಸಂರಕ್ಷಣೆ'ಯನ್ನು ತಲುಪಿತು. ವಿದ್ಯಾರ್ಥಿಗಳು ಕೇವಲ ನೀರನ್ನು ಸಂರಕ್ಷಿಸುವ ಪ್ರತಿಜ್ಞೆ ಮಾಡಿದ್ದಲ್ಲದೆ, ಅದನ್ನು ತಮ್ಮ ಜೀವನಶೈಲಿಯ ಭಾಗವಾಗಿಸಿಕೊಳ್ಳಲು ಸಾಮೂಹಿಕವಾಗಿ ಸಂಕಲ್ಪ ಮಾಡಿದರು.

8ನೇ ತರಗತಿಯ ನಿಶಾ ಕೇಳಿದಳು: "ಮೇಡಂ, ನಾವು ನೈಸರ್ಗಿಕ ಸಂಪನ್ಮೂಲಗಳನ್ನು ಹೇಗೆ ಉಳಿಸಬಹುದು?" ಅವಳ ಮುಗ್ಧ ಪ್ರಶ್ನೆಯಲ್ಲೂ ಕಳವಳವು ಎದ್ದು ಕಾಣಿಸುತ್ತಿತ್ತು. "ಪ್ರಾಕೃತಿಕ ಸಂಪನ್ಮೂಲಗಳನ್ನು ಉಳಿಸಲು ನಾವು ಅವುಗಳ ಬಳಕೆಯನ್ನೇ ನಿಲ್ಲಿಸಬೇಕೇ?" ಎಂದು ಅವಳು



*ಚಿತ್ರ 2: ಸಸ್ಯದ ಕುರಿತು ವೈಜ್ಞಾನಿಕ ಮಾಹಿತಿಯನ್ನು ಹೊಂದಿರುವ ಕಾರ್ಡ್ ಒಂದನ್ನು ಹಾಕುತ್ತಿರುವ ವಿದ್ಯಾರ್ಥಿಗಳು.*

ಮುಂದುವರಿಸಿದಳು. ತಕ್ಷಣವೇ ಆಯೇಷಾ ಮಧ್ಯಪ್ರವೇಶಿಸಿ ಅವಳನ್ನು ತಿದ್ದುತ್ತಾ ಹೇಳಿದಳು: "ಅರೇ, ಅದರ ಅರ್ಥ ಬಳಸಬಾರದು ಎಂದಲ್ಲ, ಬದಲಿಗೆ ದುರುಪಯೋಗ ಮಾಡಬಾರದು ಎಂದಾಗಿದೆ."

ನಿಶಾಗೆ ಅದು ಪೂರ್ತಿ ಅರ್ಥವಾಗಲಿಲ್ಲ. ಆಗ ಆಯೇಷಾ ವಿವರಿಸಿದಳು: "ನದಿಗಳಿಗೆ ಕಸ ಹಾಕುವುದು ದುರುಪಯೋಗ, ಆದರೆ ಅದೇ ನದಿಯಿಂದ ಜಮೀನಿಗೆ ನೀರು ಹರಿಸುವುದು ಬಳಕೆ. ನೀರನ್ನು ಕುಡಿಯುವುದು ಉಪಯೋಗ, ಆದರೆ ಸುಮ್ಮನೆ ವ್ಯರ್ಥವಾಗಿ ಹರಿಯಲು ಬಿಡುವುದು ದುರುಪಯೋಗ."

ಆಗ ನಿಶಾ ನಿರಾಳವಾಗಿ, "ಓಹೋ! ಅಷ್ಟೇನಾ? ಇದು ನನಗೆ ಗೊತ್ತಿದೆ. ನಾನು ಬೇರೇನೋ ಇರಬಹುದು ಅಂದುಕೊಂಡಿದ್ದೆ!" ಎಂದಳು.

ವಿದ್ಯಾರ್ಥಿಗಳು ಹೀಗೆ ಪರಸ್ಪರ ಪ್ರಶ್ನಿಸುತ್ತಾ, ಉತ್ತರಿಸುತ್ತಾ ಇರುವುದನ್ನು ಕಂಡು, ನಮ್ಮ ಇಕೋ ಕ್ಲಬ್ ತನ್ನ ಗುರಿಯತ್ತ ಯಶಸ್ವಿಯಾಗಿ ಸಾಗುತ್ತಿದೆ ಎಂದು ನನಗೆ ಅನ್ನಿಸಿತು.

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ನಾನೇ ನೇರವಾಗಿ ಉತ್ತರಿಸುವ ಬದಲು, ಅವರೇ ಉತ್ತರಗಳನ್ನು ಕಂಡುಕೊಳ್ಳುವಂತಹ ಕೆಲವು ಚಟುವಟಿಕೆಗಳನ್ನು ಇಕೋ ಕ್ಲಬ್‌ನಲ್ಲಿ ಆಯೋಜಿಸಿದೆ. ಉದಾಹರಣೆಗೆ, ಅವರ ಪ್ರಶ್ನೆಗಳನ್ನೇ ಚರ್ಚಾ ಸ್ಪರ್ಧೆಯ ವಿಷಯವನ್ನಾಗಿ ಮಾಡಿದೆ. ಆಗ ವಿದ್ಯಾರ್ಥಿಗಳು ನೀರಿನ ಅಭಾವ ಏಕೆ ಉಂಟಾಗುತ್ತಿದೆ ಎಂಬ ಬಗ್ಗೆ ಸ್ವತಃ ಅಂಕಿ-ಅಂಶಗಳನ್ನು ಸಂಗ್ರಹಿಸಿದರು. ಚರ್ಚೆಯ ಜೊತೆಗೆ ಪೋಸ್ಟರ್ ತಯಾರಿಕೆ, ಪ್ರಬಂಧ ಲೇಖನ ಮತ್ತು ಗೊಂಬೆಯಾಟ ಪ್ರದರ್ಶನಕ್ಕಾಗಿ ಸ್ಕ್ರಿಪ್ಟ್ ಬರೆಯುವಂತಹ ವೈವಿಧ್ಯಮಯ ಚಟುವಟಿಕೆಗಳನ್ನೂ ಈ ಕ್ಲಬ್‌ನಲ್ಲಿ ಅಳವಡಿಸಿಕೊಳ್ಳಲಾಯಿತು.

'ಕೌಶಲ ಬೋಧ್' ವಿಷಯದ ಅಡಿಯಲ್ಲಿ ಜೀವವೈವಿಧ್ಯದ ಪ್ರಾಜೆಕ್ಟ್ ಕುರಿತು ಚರ್ಚಿಸುತ್ತಿರುವಾಗ ಜಾಹ್ನವಿ ಅತ್ಯಂತ ಮಾರ್ಮಿಕವೂ ತಾರ್ಕಿಕವೂ ಆದ ಪ್ರಶ್ನೆಯೊಂದನ್ನು ಎತ್ತಿದಳು: "ಈಗೀಗ ನಮಗೆ ಗುಬ್ಬಚ್ಚಿಗಳೇಕೆ ಹೆಚ್ಚಾಗಿ ಕಾಣಿಸುತ್ತಿಲ್ಲ?"

ಅವಳ ಈ ಪ್ರಶ್ನೆಯು ಇಡೀ ತರಗತಿಯಲ್ಲಿ 'ಭಾವನಾತ್ಮಕ ಜಾಗೃತಿ'ಯನ್ನು ಉಂಟುಮಾಡಿ, ಎಲ್ಲರನ್ನೂ ಆಳವಾಗಿ ಯೋಚಿಸುವಂತೆ ಮಾಡಿತು. ಗೂಡು ಕಟ್ಟಲು ಜಾಗವಿಲ್ಲದ ಆಧುನಿಕ ಕಾಂಕ್ರೀಟ್ ಕಟ್ಟಡಗಳು ಮತ್ತು ಮೊಬೈಲ್ ಟವರ್‌ಗಳ ವಿಕಿರಣವು ನಮ್ಮ ನಗರ ಪರಿಸರ ವ್ಯವಸ್ಥೆಯನ್ನು ಹೇಗೆ ಸಂಕಷ್ಟಕ್ಕೆ ದೂಡುತ್ತಿವೆ ಎಂಬ ಬಗ್ಗೆ ನಾವು ವಿಶ್ಲೇಷಿಸಿದೆವು. ನಮ್ಮ ಈ ಸಾಮೂಹಿಕ ಚರ್ಚೆಯ ಸಾರಾಂಶವನ್ನು 'ಮಿಷನ್ LiFE'ನ

ಅಧಿಕೃತ ಉದ್ದೇಶಗಳೊಂದಿಗೆ ಬೆಸೆದಾಗ ಈ ಸಂವಾದಕ್ಕೆ ಪೂರ್ಣ ಅರ್ಥ ಸಿಕ್ಕಿತು.

ಪರಿಸರದ ಈ ಕಾಳಜಿಯನ್ನು ಪ್ರಜಾಪ್ರಭುತ್ವದ ಸಿದ್ಧಾಂತಗಳೊಂದಿಗೆ ಬೆಸೆಯುತ್ತಾ, 'ಮೂಲಭೂತ ಪ್ರಜಾಪ್ರಭುತ್ವ: ಗ್ರಾಮೀಣ ಭಾಗದ ಸ್ಥಳೀಯ ಸರ್ಕಾರ' ಎಂಬ 6ನೇ ತರಗತಿಯ ಸಮಾಜ ವಿಜ್ಞಾನದ ಪಾಠದ ಕುರಿತು ವಿದ್ಯಾರ್ಥಿಗಳು ಅರ್ಥಪೂರ್ಣವಾದ 'ಬಾಲ ಪಂಚಾಯಿತಿ'ಯನ್ನು ಆಯೋಜಿಸಿದರು. ಜಾಹ್ನವಿ ತಲೆಗೆ ಪೇಟ ತೊಟ್ಟು 'ಸರಪಂಚ'ಳ (ಅಧ್ಯಕ್ಷೆ) ಪಾತ್ರ ನಿರ್ವಹಿಸಿದರೆ, 'ಸಾಮಾನ್ಯ ಜನ'ರನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳು ನೈರ್ಮಲ್ಯ ಮತ್ತು ನೀರಿನ ಅಭಾವದಂತಹ ಗಂಭೀರ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಸರಪಂಚಳಾಗಿ ಜಾಹ್ನವಿ ಅತ್ಯಂತ ಪರಿಪಕ್ವವಾದ ಪರಿಹಾರವನ್ನು ಮಂಡಿಸುತ್ತಾ, "ಕಸದ ವಿಂಗಡಣೆ ಕೇವಲ ಸರ್ಕಾರದ ಕೆಲಸವಲ್ಲ, ಅದು ಪ್ರತಿ ನಾಗರಿಕನ ಜವಾಬ್ದಾರಿ ಕೂಡ ಆಗಿದೆ. ಸರ್ಕಾರದ ಜೊತೆಗೆ ಜನರ ಸಹಕಾರವೂ ಅಷ್ಟೇ ಮುಖ್ಯ" ಎಂದು ಉತ್ತರಿಸಿದಳು. ಇದನ್ನು ಆಲಿಸಿದ ವಿದ್ಯಾರ್ಥಿಗಳು, ಪರಿಸರದ ಸಮಸ್ಯೆಗಳು ಮತ್ತು ಸಮಾಜದ ಸಮಸ್ಯೆಗಳು ಬೇರೆ ಬೇರೆಯಲ್ಲ, ಎರಡೂ ಒಂದಕ್ಕೊಂದು ಬೆಸೆದುಕೊಂಡಿವೆ ಎಂಬುದನ್ನು ಮನಗಂಡರು.

ಕ್ರಮೇಣ ಇಕೋ ಕ್ಲಬ್‌ನ ಚಟುವಟಿಕೆಗಳ ಜೊತೆಜೊತೆಗೆ ವಿದ್ಯಾರ್ಥಿಗಳ ಜ್ಞಾನವೂ ವೃದ್ಧಿಯಾಯಿತು. ಕ್ಲಬ್‌ನ ಸಂಪೂರ್ಣ ಜವಾಬ್ದಾರಿಯನ್ನು ವಿದ್ಯಾರ್ಥಿಗಳೇ ವಹಿಸಿಕೊಳ್ಳುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿತ್ತು; ನನ್ನ ಪಾತ್ರ ಕೇವಲ ಮಾರ್ಗದರ್ಶನ ಮತ್ತು ಪ್ರೋತ್ಸಾಹಕ್ಕೆ ಸೀಮಿತವಾಗಿತ್ತು. ವಿದ್ಯಾರ್ಥಿಗಳ ಪ್ರಶ್ನೆಗಳು ದಿನೇ ದಿನೇ ಗಂಭೀರವಾಗುತ್ತಿರುವುದನ್ನು ನಾನು ಗಮನಿಸಿದೆ. ತಮ್ಮ ಪ್ರಶ್ನೆಗಳ ಬಗ್ಗೆ ಪರಸ್ಪರ ಚರ್ಚಿಸುವುದು ಮತ್ತು ತಮ್ಮ ವಿಚಾರಗಳನ್ನು ಸಮರ್ಥವಾಗಿ ಮಂಡಿಸಲು ಪಠ್ಯಪುಸ್ತಕಗಳಿಂದ ಹಿಡಿದು ಗ್ರಂಥಾಲಯದ ಪುಸ್ತಕಗಳವರೆಗೆ ಹುಡುಕಾಡುವುದು ಅವರ ದಿನಚರಿಯಾಯಿತು. ಆಗೀಗ ನಾನು ಅವರಿಗೆ ಹೊಸ ವಿಚಾರಗಳ ಕಡೆಗೆ ಗಮನ ಸೆಳೆಯುತ್ತಿದ್ದೆ. ಉದಾಹರಣೆಗೆ—"ಒಂದು ನಲ್ಲಿಯನ್ನು ಸರಿಯಾಗಿ ಮುಚ್ಚುವುದರಿಂದ ಎಷ್ಟು ನೀರನ್ನು ಉಳಿಸಬಹುದು?" ಅಥವಾ "ಅಗತ್ಯವಿಲ್ಲದಿದ್ದಾಗ ಒಂದು ಸ್ವಿಚ್ ಆಫ್ ಮಾಡುವುದರಿಂದ ಎಷ್ಟು ವಿದ್ಯುತ್ ಉಳಿಸಬಹುದು?" ಮುಂತಾದ ವಿಷಯಗಳ ಬಗ್ಗೆ ಯೋಚಿಸಲು ಹೇಳುತ್ತಿದ್ದೆ. ಮರುದಿನ ವಿದ್ಯಾರ್ಥಿಗಳು ನಿಖರವಾದ ಅಂಕಿ-ಅಂಶಗಳೊಂದಿಗೆ ಬಂದಿದ್ದು ನನಗೆ ಅಚ್ಚರಿ ಮೂಡಿಸಿತು. ನಲ್ಲಿಯನ್ನು ಒಂದು ಗಂಟೆ ತೆರೆದಿಟ್ಟರೆ ಎಷ್ಟು ನೀರು ಪೋಲಾಗುತ್ತದೆ ಮತ್ತು ಸ್ವಿಚ್ ಆನ್ ಆಗಿದ್ದರೆ ಎಷ್ಟು ವಿದ್ಯುತ್ ವ್ಯರ್ಥವಾಗುತ್ತದೆ ಎಂದು ಅವರು ನಿಖರವಾಗಿ ಲೆಕ್ಕ ಹಾಕಿದ್ದರು. ಶಾಲೆಯ ಪ್ರತಿ ವಿದ್ಯಾರ್ಥಿ ಕೇವಲ ಒಂದು ಬಕೆಟ್ ನೀರು ವ್ಯರ್ಥ ಮಾಡಿದರೂ, ಇಡೀ ನಗರ ಅಥವಾ ರಾಜ್ಯದ ಜನರು ವ್ಯರ್ಥ ಮಾಡುವ ನೀರಿನ ಪ್ರಮಾಣ ಎಷ್ಟಾಗಬಹುದು ಎಂದು ಲೆಕ್ಕ ಹಾಕಿದರು.

ವಿದ್ಯಾರ್ಥಿಗಳ ಚಿಂತನೆಯಲ್ಲಿ ಸ್ಪಷ್ಟತೆ ತರಲು ನಾನು ಶಾಲಾ ಮಟ್ಟದಲ್ಲಿ ಜಲಸಂಪನ್ಮೂಲಗಳ ನಿರ್ವಹಣೆಯ ಬಗ್ಗೆ ಯೋಚಿಸಲು ಅವರನ್ನು ಪ್ರೋತ್ಸಾಹಿಸಿದೆ. ಇದರಿಂದ ವಿದ್ಯಾರ್ಥಿಗಳ ಉತ್ಸಾಹ ಇಮ್ಮಡಿಯಾಯಿತು. ಅವರು ಇಕೋ ಕ್ಲಬ್‌ಗಾಗಿ ಕೆಲವು ಪ್ರಮುಖ ವಿಷಯಗಳನ್ನು ಸೂಚಿಸಿದರು:

1. ಆರೋಗ್ಯಕರವಾದ ಜೀವನಶೈಲಿಯನ್ನು ಅಳವಡಿಸಿ ಕೊಳ್ಳುವುದು.
2. ನೈಸರ್ಗಿಕ ಸಂಪನ್ಮೂಲಗಳ ಮೇಲೆ ಆಧಾರಿತವಾದ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳುವುದು.
3. ಆಹಾರ, ವಿದ್ಯುತ್, ನೀರು ಅಥವಾ ಯಾವುದೇ ನೈಸರ್ಗಿಕ ಸಂಪನ್ಮೂಲವಿರಲಿ, ಯಾವುದನ್ನೂ ಪೋಲು ಮಾಡದಿರುವುದು.
4. ಪ್ಲಾಸ್ಟಿಕ್ ಮುಕ್ತ ಜೀವನವನ್ನು ಅಳವಡಿಸಿಕೊಳ್ಳುವುದು.

ಶಾಲೆಯಲ್ಲಿ ಎಲ್ಲೆಲ್ಲಿ ಸಂಪನ್ಮೂಲಗಳು ಪೋಲಾಗುತ್ತಿವೆ ಮತ್ತು ಎಲ್ಲಿ ಸುಧಾರಣೆಯ ಅಗತ್ಯವಿದೆ ಎಂಬುದನ್ನು ವಿದ್ಯಾರ್ಥಿಗಳು ಮೊದಲು ಗಮನಿಸಿದರು. ಆ ಸಂದರ್ಭದಲ್ಲಿ ಕಂಡುಬಂದ ಕೆಲವು ಪ್ರಮುಖ ಅಂಶಗಳು ಹೀಗಿವೆ:

- ಮಧ್ಯಾಹ್ನದ ಬಿಸಿಯೂಟದ ಸಮಯದಲ್ಲಿ ಸಾಕಷ್ಟು ನೀರು ವ್ಯರ್ಥವಾಗುತ್ತಿದೆ.
- ಶೌಚಾಲಯ ಬಳಸುವ ಸಂದರ್ಭದಲ್ಲೂ ನೀರಿನ ಮಿತ ಬಳಕೆ ಮಾಡುವ ಅಗತ್ಯವಿದೆ.
- ಅನಗತ್ಯವಾಗಿ ವಿದ್ಯುತ್ ವ್ಯರ್ಥವಾಗುವುದನ್ನು ತಡೆಗಟ್ಟಬೇಕು.
- ಶಾಲೆಯಲ್ಲಿ ವ್ಯರ್ಥವಾಗುತ್ತಿರುವ ವಸ್ತುಗಳನ್ನು ಪುನರ್ಬಳಕೆ ಮಾಡಬಹುದು.
- ಗಿಡಗಳು ಒಣಗದಂತೆ ನೋಡಿಕೊಳ್ಳುವುದು ಮತ್ತು ಯಾರೂ ಹೂವುಗಳನ್ನು ಕೀಳದಂತೆ ಜಾಗೃತಿ ಮೂಡಿಸುವುದು.

ಈ ಎಲ್ಲಾ ಸಮಸ್ಯೆಗಳನ್ನು ಗುರುತಿಸಿದ ನಂತರ, ವಿದ್ಯಾರ್ಥಿಗಳು ಯೋಜಿತ ರೀತಿಯಲ್ಲಿ ಒಂದು ತಂಡವನ್ನು ರಚಿಸಿದರು ಮತ್ತು ಸಂಪನ್ಮೂಲಗಳು ದುರುಪಯೋಗವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಂಡರು. ಮಕ್ಕಳಲ್ಲಿ ಆತ್ಮೀಯತೆ, ಒಗ್ಗಟ್ಟು ಮತ್ತು ಹೊಣೆಗಾರಿಕೆಯ ಭಾವನೆಯನ್ನು ಬೆಳೆಸಲು ಪರಿಸರ ಪ್ರಜ್ಞೆಯುಳ್ಳ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ವಿವಿಧ ತಂಡಗಳಾಗಿ ವಿಂಗಡಿಸಲಾಯಿತು ಹಾಗೂ 'ಡ್ಯೂಟಿ ಚಾರ್ಟ್' ಸಿದ್ಧಪಡಿಸಲಾಯಿತು. ಕಾರ್ಯಗಳನ್ನು ಸರದಿಯ ಪ್ರಕಾರ ಹಂಚಿಕೊಳ್ಳುವುದರಿಂದ ತಂಡವು ಸಕ್ರಿಯವಾಗಿರುತ್ತದೆ ಮತ್ತು ಕೆಲಸದಲ್ಲಿನ ಹೊಸತನವು ಅವರಲ್ಲಿ ನಿರಂತರ ಉತ್ಸಾಹವನ್ನು ಕಾಪಾಡುತ್ತದೆ.

## ಮುಂದಿನ ಪಯಣ ಮತ್ತು ಫಲಿತಾಂಶಗಳು

ಒಬ್ಬ ಸಂಯೋಜಕಿಯಾಗಿ, ಇಕೋ ಕ್ಲಬ್ ಪ್ರಾರಂಭಿಸುವಾಗ ಎದುರಾಗುವ ಆರಂಭಿಕ ಸವಾಲುಗಳನ್ನು ನಿಭಾಯಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ನನ್ನ ಕರ್ತವ್ಯವಾಗಿತ್ತು. ಪೋಷಕರು, ಸಮಾಜದ ಗಣ್ಯರು ಮತ್ತು ಶಾಲಾ ಸಹೋದ್ಯೋಗಿಗಳಿಗೆ ಇಕೋ ಕ್ಲಬ್‌ನ ಉದ್ದೇಶಗಳ ಬಗ್ಗೆ ಮಾಹಿತಿ ನೀಡಿದಾಗ, ಅವರೆಲ್ಲರೂ ಶಾಲೆಯ ಏಳಿಗೆಗಾಗಿ ಸಹಕರಿಸಲು ಮುಂದಾದರು. ಕ್ಲಬ್‌ನ ಸದಸ್ಯರು ತಮ್ಮ ಓದಿಗೆ ತೊಂದರೆಯಾಗದಂತೆ ಮಧ್ಯಾಹ್ನದ ಭೋಜನದ ಸಮಯ, ಬೆಳಗಿನ ಪ್ರಾರ್ಥನಾ ಸಭೆ ಮತ್ತು ಶಾಲಾ ಅವಧಿಯ ನಂತರದ ಸಮಯವನ್ನು ಬಳಸಿಕೊಂಡು, 'ಸಮಯ ನಿರ್ವಹಣೆ' ಮತ್ತು 'ಅನುಷ್ಠಾನ ಕೌಶಲ'ಗಳನ್ನು ಬೆಳೆಸಿಕೊಂಡರು. ಹೀಗೆ ಸಕಾರಾತ್ಮಕ ಪ್ರೋತ್ಸಾಹ ಮತ್ತು ಎದುರಾದ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಕಂಡುಕೊಂಡಿದ್ದರಿಂದ ಉತ್ತಮ ಫಲಿತಾಂಶಗಳು ಬರಲಾರಂಭಿಸಿದವು. ವಿದ್ಯಾರ್ಥಿಗಳಿಗೆ ಈಗ ಪಠ್ಯಪುಸ್ತಕಗಳೊಂದಿಗಿನ ಒಡನಾಟ ಹೆಚ್ಚಾಯಿತು. ಅವರ ಕೆಲವು ಜಿಜ್ಞಾಸೆಗಳು ಶಮನವಾಗುತ್ತಿದ್ದರೆ, ಇನ್ನು ಕೆಲವು ಹೊಸ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿದ್ದವು. ಒಬ್ಬ ಶಿಕ್ಷಕಿಯಾಗಿ, ಅವರಲ್ಲಿ ಮೂಡುತ್ತಿದ್ದ ಹೊಸ ಹೊಸ ಪ್ರಶ್ನೆಗಳು ಮತ್ತು ಹೆಚ್ಚುತ್ತಿರುವ ಕುತೂಹಲವು ನನಗೆ ಭರವಸೆಯನ್ನು ಮೂಡಿಸಿದವು.




*ಚಿತ್ರ 3: ಯಮುನಾ ನದಿಯ ಸ್ವಚ್ಛತೆಯ ಕುರಿತು ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ.*

## ಆಸಕ್ತಿ ಮತ್ತು ನಿರಂತರ ಭಾಗವಹಿಸುವಿಕೆ

ಕ್ಲಬ್‌ನ ಸದಸ್ಯರನ್ನು ಯಾವಾಗಲೂ ಉತ್ಸಾಹದಿಂದ ಇಡುವುದು ಖಂಡಿತವಾಗಿಯೂ ಒಂದು ಸವಾಲಿನ ಕೆಲಸ. ಈ ಸವಾಲನ್ನು ಎದುರಿಸಲು ನಾನು ಆಗಾಗ ಸಭೆಗಳನ್ನು ಆಯೋಜಿಸುತ್ತೇನೆ. ಇದರ ಜೊತೆಗೆ ಪ್ರಕೃತಿಯ ಒಡನಾಟದಲ್ಲಿ ಸಮಯ ಕಳೆಯಲು ಮತ್ತು ಒಬ್ಬರಿಗೊಬ್ಬರು ಮುಕ್ತವಾಗಿ ಸಂವಹನ ನಡೆಸಲು ಪ್ರೋತ್ಸಾಹಿಸುವುದು ಕೂಡ ನನ್ನ ಪ್ರಯತ್ನದ ಭಾಗವಾಗಿದೆ. 'ಸರ್ಕಲ್ ಟೈಮ್' ಹಾಗೂ ತಮಗಿಷ್ಟವಾದ ಗಿಡವನ್ನು ದತ್ತು ಪಡೆದು ಅದಕ್ಕೊಂದು ಹೆಸರಿಡುವಂತಹ 'ಐಸ್-ಬ್ರೇಕಿಂಗ್' ಚಟುವಟಿಕೆಗಳನ್ನು ಆಯೋಜಿಸಲಾಯಿತು. ನಾವೆಲ್ಲರೂ ಸೇರಿ ಚರ್ಚಿಸಿ ಹೊಸ ಚಟುವಟಿಕೆಗಳನ್ನು ಸಿದ್ಧಪಡಿಸುತ್ತೇವೆ. ನಮ್ಮ ತಂಡದಲ್ಲಿ "ಪ್ರತಿಯೊಬ್ಬ ಸದಸ್ಯನಿಗೂ ಸಮಾನ ಧ್ವನಿ ಮತ್ತು ಅವಕಾಶ" ಎಂಬ ಪದ್ಧತಿಯನ್ನು ಪಾಲಿಸುತ್ತೇವೆ. ಅಂದರೆ, ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಅವಕಾಶವಿರುತ್ತದೆ. ಉದಾಹರಣೆಗೆ, ಶಾಲೆಯ ಗೋಡೆಗಳಿಗೆ ಬಣ್ಣ ಹಚ್ಚಿದ ನಂತರ ಉಳಿದಿದ್ದ ಪೇಂಟ್ ಅನ್ನು ನೋಡಿದ ವಿದ್ಯಾರ್ಥಿಗಳು ತೋರಿದ ಜವಾಬ್ದಾರಿಯುತ ನಡವಳಿಕೆ ಅದ್ಭುತವಾಗಿತ್ತು. ಬಣ್ಣವನ್ನು ವ್ಯರ್ಥ ಮಾಡುವ ಬದಲು, ಶಾಲಾ ಆವರಣವನ್ನು ಸುಂದರಗೊಳಿಸಲು ಅವರು ಒಟ್ಟಾಗಿ ನಿರ್ಧರಿಸಿದರು. ಅವರು ಸ್ವಯಂಪ್ರೇರಿತರಾಗಿ ಕುಂಡಗಳಿಗೆ ಬಣ್ಣ ಹಚ್ಚಿ ಅಲಂಕರಿಸಿದರು. ಇದು ಯಾವುದೇ ಶಿಕ್ಷಕರು ನೀಡಿದ 'ಅಸೈನ್‌ಮೆಂಟ್' ಆಗಿರಲಿಲ್ಲ; ಬದಲಾಗಿ ತಂಡವಾಗಿ ಕೆಲಸ ಮಾಡುವ ಪ್ರೇರಣೆ ಅವರಲ್ಲಿ ಸಹಜವಾಗಿ ಮೂಡಿಬಂದಿತ್ತು.

## ಕಿಚನ್ ಗಾರ್ಡನ್: ಕಠಿಣ ಪರಿಶ್ರಮದ ಫಲಗಳು

'ಮಿಷನ್ ಲೈಫ್'ನ ಉದ್ದೇಶಗಳನ್ನು ಈಡೇರಿಸಲು ನಮ್ಮ ಇಕೋ ಕ್ಲಬ್‌ನಲ್ಲಿ 'ಕಿಚನ್ ಗಾರ್ಡನ್' ಯೋಜನೆಯನ್ನು ಆರಂಭಿಸಿದ್ದೇವೆ. ಇಲ್ಲಿ ಕೈತೋಟದ ನಿರ್ವಹಣೆಯನ್ನು ಪ್ರಾಯೋಗಿಕವಾಗಿ ಕಲಿಯುವುದಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಗಿಡ ನೆಡುವುದರಿಂದ ಹಿಡಿದು ಅವುಗಳ ಪೂರ್ಣ ಆರೈಕೆಯವರೆಗೆ ಎಲ್ಲವನ್ನೂ ಕಲಿಯುವ ಈ ಹಾದಿಯು ವಿದ್ಯಾರ್ಥಿಗಳಿಗೆ ಹೊಸ ರೀತಿಯ ವೃತ್ತಿಪರ ಅನುಭವವನ್ನು ನೀಡುತ್ತದೆ. ಅಷ್ಟೇ ಅಲ್ಲದೆ, ಇದು ಮಕ್ಕಳಲ್ಲಿ ಶ್ರಮದ ಮಹತ್ವ ಮತ್ತು ತಾಳ್ಮೆಯ ಗುಣವನ್ನು ಬೆಳೆಸುತ್ತದೆ.

ಆರಂಭದಲ್ಲಿ, ಒಂದು ತಂಡವು ಮಣ್ಣಿನಲ್ಲಿ ಬಿತ್ತುವ ಮೊದಲು ಜಾಡಿಯಲ್ಲಿ ಬೀಜಗಳು ಹೇಗೆ ಮೊಳಕೆಯೊಡೆಯುತ್ತವೆ ಎಂಬುದನ್ನು ಪರೀಕ್ಷಿಸುತ್ತದೆ. ನಂತರ ಮಕ್ಕಳು ಕೈತೋಟದ ಜಾಗವನ್ನು ಅಳತೆ ಮಾಡುತ್ತಾರೆ. ಜಾಗವನ್ನು ಆಯ್ಕೆ ಮಾಡುವಾಗ ಗಮನಿಸಬೇಕಾದ ಪ್ರಮುಖ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗುತ್ತದೆ. ತದನಂತರ, ಆಯ್ದ ಜಾಗವನ್ನು ವಿವಿಧ ತಂಡಗಳಿಗೆ ಹಂಚಲಾಗುತ್ತದೆ. ಬೆಳೆಸಬೇಕಾದ ಗಿಡಗಳ ಆಯ್ಕೆಯಿಂದ ಹಿಡಿದು, ಸ್ಥಳೀಯವಾಗಿ ಲಭ್ಯವಿರುವ ಪೈಪುಗಳು ಮತ್ತು ಕೋಲುಗಳಿಂದ ನಿರ್ಮಿಸುವ ಬೇಲಿಯ ಎತ್ತರದವರೆಗೆ ಪ್ರತಿಯೊಂದು ನಿರ್ಧಾರದಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲಾಗುತ್ತದೆ. ಗಿಡ ನೆಡುವಾಗ ಗುಂಡಿಗಳಲ್ಲಿ ಮಣ್ಣನ್ನು ಜೋರಾಗಿ ಒತ್ತುವ ಬದಲಿಗೆ ಮೆಲ್ಲಗೆ ತುಂಬಲು ಅವರಿಗೆ ಸೂಚಿಸಲಾಗುತ್ತದೆ. ಬೀಜ ಮೊಳಕೆಯೊಡೆಯುವುದು, ಗಿಡದ ಎತ್ತರ, ಕೀಟಗಳ ಬಾಧೆ, ಎಲೆಗಳ ಬಣ್ಣದಲ್ಲಿನ ಬದಲಾವಣೆ ಹಾಗೂ ಹೂ ಬಿಡುವುದು ಮುಂತಾದ ಪ್ರಮುಖ ಹಂತಗಳನ್ನು ವಿದ್ಯಾರ್ಥಿಗಳು ಸೂಕ್ಷ್ಮವಾಗಿ ಗಮನಿಸಿ ವಿಶ್ಲೇಷಿಸುತ್ತಾರೆ.

ಬೀಜಗಳ ಮೊಳಕೆಯೊಡೆಯುವಿಕೆಯ ಪ್ರಯೋಗದಿಂದ ಕಲಿತ ಪಾಠವನ್ನು ಗಮನದಲ್ಲಿಟ್ಟುಕೊಂಡು, ಗಿಡಗಳಿಗೆ ನೀರುಣಿಸುವ ಯೋಜನೆಯನ್ನು ರೂಪಿಸಲಾಗುತ್ತದೆ. ನೀರಿನ ಪ್ರಮಾಣ, ಸಮಯ ಮತ್ತು ಎಷ್ಟು ಬಾರಿ ನೀರು ಹಾಕಬೇಕು ಎಂಬ ಅಂಶಗಳನ್ನು ಇಲ್ಲಿ ಪರಿಗಣಿಸಲಾಗುತ್ತದೆ. ನೀರು ಹಾಕುವ ಮೊದಲು ಮಣ್ಣಿನ ತೇವಾಂಶವನ್ನು ಪರೀಕ್ಷಿಸಲು, ತಮ್ಮ ಬೆರಳುಗಳಿಂದ ಮಣ್ಣನ್ನು ಮುಟ್ಟಿ ನೋಡಲು ವಿದ್ಯಾರ್ಥಿಗಳಿಗೆ ಸೂಚಿಸಲಾಗುತ್ತದೆ. ಏಕೆಂದರೆ, ಮಣ್ಣು ಹಸಿಯಾಗಿರಬೇಕೇ ಹೊರತು ಕೆಸರಾಗಬಾರದು. ಈ ಪ್ರಕ್ರಿಯೆಯು ಮೊಳಕೆಯೊಡೆಯುವಿಕೆಯ ಪ್ರಯೋಗಕ್ಕೆ ನೇರ ಸಂಬಂಧ ಹೊಂದಿದೆ. ಅತಿಯಾದ ಅಥವಾ ಅತ್ಯಂತ ಕಡಿಮೆ ತೇವಾಂಶವಿದ್ದಾಗ ಬೀಜಗಳು ಹೇಗೆ ಮೊಳಕೆಯೊಡೆಯಲು ಸಾಧ್ಯವಿಲ್ಲವೋ, ಹಾಗೆಯೇ ಸಸ್ಯಗಳ ಜೀವನವೂ ನೀರಿನ ಸಮತೋಲನವನ್ನು ಅವಲಂಬಿಸಿರುತ್ತದೆ. ಬೇರೆ ಬೇರೆ ಗಿಡಗಳಿಗೆ ನೀರುಣಿಸಲು ಯಾವುದೇ ನಿರ್ದಿಷ್ಟ ನಿಯಮಗಳಿರುವುದಿಲ್ಲ; ಇದು ಅನುಭವದಿಂದ ಕಲಿಯುವ ಪ್ರಕ್ರಿಯೆಯಾಗಿದೆ. ಇದು ಇಕೋ ಕ್ಲಬ್‌ನ ಸಕ್ರಿಯ ಹಸ್ತಕ್ಷೇಪದ ಮೂಲಕ ನಡೆಯುತ್ತಿರುವ ಕಲಿಕೆಗೆ ಒಂದು ಜೀವಂತ ಉದಾಹರಣೆಯಾಗಿದೆ.

ಕಿಚನ್ ಗಾರ್ಡನ್‌ನಲ್ಲಿ ನಾವೇ ಬೆಳೆಸಿದ ಗಿಡಗಳಿಂದ ಫಲ ಪಡೆಯುವುದು ಎಷ್ಟು ಸಂತೋಷ ನೀಡುತ್ತದೆ ಎಂದರೆ ಅದನ್ನು ಅನುಭವಿಸಿಯೇ ತಿಳಿಯಬೇಕು. ಪ್ರತಿ ವರ್ಷ ವಿದ್ಯಾರ್ಥಿಗಳು ತಮ್ಮ ಪಾಲಿನ ಭೂಮಿಯಲ್ಲಿ ಬೆಳೆದ ಫಸಲನ್ನು ನೋಡುವಷ್ಟರಲ್ಲಿ, ಹವಾಮಾನ ವೈಪರೀತ್ಯ ಮತ್ತು ಪರಿಸರ ನಾಶದ ಪರಿಣಾಮಗಳನ್ನು ಆಳವಾಗಿ ಅರ್ಥಮಾಡಿಕೊಂಡಿರುತ್ತಾರೆ. ಪರಿಸರವನ್ನು ಕಾಪಾಡಲು ಏನನ್ನಾದರೂ ಮಾಡಬೇಕೆನ್ನುವ ಅವರ ಆಸಕ್ತಿ ಮತ್ತು ಸಂಕಲ್ಪಕ್ಕೆ ಮಕ್ಕಳ ಮಣ್ಣಾದ ಕೈಗಳೇ ಸಾಕ್ಷಿಯಾಗುತ್ತವೆ.

ಆರಂಭದಲ್ಲಿ, ಕೆಲವು ವಿದ್ಯಾರ್ಥಿಗಳು ಕೇವಲ ವಿನೋದಕ್ಕಾಗಿ ಗಿಡಗಳಿಂದ ಹೂವುಗಳನ್ನು ಕೀಳುತ್ತಿದ್ದ ಒಂದು ಸಣ್ಣ ಸಮಸ್ಯೆ ಎದುರಾಯಿತು. ಆದರೆ ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡುವ ಮೂಲಕ ಸಮಸ್ಯೆಯನ್ನು ಬಗೆಹರಿಸಲಾಯಿತು. 'ಹೂವುಗಳನ್ನು ಕೀಳಬೇಡಿ' ಎಂಬಂತಹ ಬರೀ ಬುದ್ಧಿವಾದ ಹೇಳುವ ಬದಲು, ವಿದ್ಯಾರ್ಥಿಗಳು ಮತ್ತು ಗಿಡಗಳ ನಡುವೆ ಒಂದು ಭಾವನಾತ್ಮಕ ಸಂಬಂಧ ಮೂಡುವಂತೆ ಮಾಡಲಾಯಿತು.

ವಿದ್ಯಾರ್ಥಿಗಳು ಹೂವುಗಳ ಮೇಲೆ ಹಾರಾಡುವ ಜೇನುನೊಣಗಳು ಮತ್ತು ಚಿಟ್ಟೆಗಳಂತಹ ಅತಿಥಿಗಳನ್ನು ಗಮನಿಸಲು ಪ್ರಾರಂಭಿಸಿದರು. ತಾವು ಹೂವುಗಳನ್ನು ಕೀಳುವುದರಿಂದ ಸಸ್ಯಗಳಿಗೆ ಪರಾಗಸ್ಪರ್ಶಕಗಳನ್ನು ಆಹ್ವಾನಿಸಲು ಸಾಧ್ಯವಾಗುವುದಿಲ್ಲ ಎಂಬ ಸತ್ಯವನ್ನು ಅವರು ಅರಿತುಕೊಂಡರು. ಈಗ ಅವರೆಲ್ಲರೂ ಯಾವುದೇ ಕಟ್ಟುನಿಟ್ಟಿನ ನಿಯಮಗಳಿಲ್ಲದೆಯೇ ಪ್ರಕೃತಿಯನ್ನು ಕಾಳಜಿಯಿಂದ ನೋಡಿ ಕೊಳ್ಳುತ್ತಿದ್ದಾರೆ. ಶಾಲೆಯಲ್ಲಿ ನಿಶ್ಶಬ್ದವಿರುವಾಗ ಒಂದು ಜೊತೆ ಗಿಳಿಗಳು ಮತ್ತು ನವಿಲು ಶಾಲಾ ಆವರಣದಲ್ಲಿ ಮುಕ್ತವಾಗಿ ಓಡಾಡುತ್ತಿರುತ್ತವೆ. ಈ ದೃಶ್ಯಗಳು ನಮ್ಮ ಶಾಲೆಯ ಪರಿಸರ ವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಜೀವವೈವಿಧ್ಯಕ್ಕೆ ಸಾಕ್ಷಿಯಾಗಿವೆ. ಇದು ಪ್ರಕೃತಿಯನ್ನು ಉಳಿಸಲು ನಮ್ಮ ತಂಡವು ಮಾಡುತ್ತಿರುವ ಪ್ರಯತ್ನಗಳಿಗೆ ಸಂದ ಜಯವಾಗಿದೆ.

---



**ಕೀರ್ತಿ ಲಾಂಬಾ** ಅವರು ದೆಹಲಿಯ ಶಾಲಿಮಾರ್ ಬಾಗ್‌ನ ಬಿಎಲ್ ಬ್ಲಾಕ್‌ನಲ್ಲಿರುವ ಸಿಎಂ ಶ್ರೀ ಶಾಲೆಯಲ್ಲಿ, ಸಮಾಜ ವಿಜ್ಞಾನದಲ್ಲಿ ತರಬೇತಿ ಪಡೆದ ಪದವೀಧರ ಶಿಕ್ಷಕಿಯಾಗಿ (TGT) ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಕಳೆದ 19 ವರ್ಷಗಳಿಂದ ಬೋಧನಾ ವೃತ್ತಿಯಲ್ಲಿದ್ದಾರೆ. ಕೀರ್ತಿ ಅವರು ತಮ್ಮ ಶಾಲೆಯಲ್ಲಿ 'ಇಕೋ ಕ್ಲಬ್ ಫಾರ್ ಮಿಷನ್ ಲೈಫ್'ನ ಸಂಯೋಜಕಿಯಾಗಿದ್ದು, 'ಪರಿಸರ ಯೋಧರ' ತಂಡವನ್ನು ರಚಿಸುವ ಮೂಲಕ ಪ್ರಕೃತಿ ಸಂರಕ್ಷಣೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ.

**ಸಂಪರ್ಕ:** kirtilamba25@gmail.com

ಅನುವಾದ: ರಾಕೇಶ್ ಪೂಂಜಾ | ಪರಿಶೀಲನೆ: ಕಿರಣ್ ಮಂಜುನಾಥ್

# ಹೇಳಿಕೆ ಸಮಸ್ಯೆಗಳನ್ನು ಬಿಡಿಸಲು ಮಕ್ಕಳು ಏಕೆ ಕಷ್ಟಪಡುತ್ತಾರೆ?

ಮೀನು ಪಾಲಿವಾಲ್

**ಬಹುತೇಕ ಮಕ್ಕಳು ಕೂಡುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದನ್ನು ಸುಲಭವಾಗಿ ಮಾಡಿಬಿಡುತ್ತಾರೆ; ಆದರೆ ಹೇಳಿಕೆ ಪ್ರಶ್ನೆಗಳನ್ನು ಓದಿದಾಗ, ಆ ಪ್ರಶ್ನೆಯಲ್ಲಿ ತಾವು ಯಾವ ಗಣಿತದ ಪ್ರಕ್ರಿಯೆಯನ್ನು ಬಳಸಬೇಕು ಎಂದು ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ. ಇದು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಜನರ ಅನುಭವ.**

ದಿನನಿತ್ಯದ ಜೀವನದಲ್ಲಿ ಮಕ್ಕಳು ಸುಲಭವಾಗಿ ಮಾಡುವ ಲೆಕ್ಕಾಚಾರಗಳೇ, ತರಗತಿಯಲ್ಲಿ ಹೇಳಿಕೆ ಸಮಸ್ಯೆಯ ರೂಪದಲ್ಲಿ ಬಂದಾಗ ಅವರಿಗೆ ಏಕೆ ಕಷ್ಟವಾಗುತ್ತದೆ ಎಂಬುದನ್ನು ಈ ಲೇಖನದಲ್ಲಿ ತಿಳಿದುಕೊಳ್ಳೋಣ.

## ಗಣಿತ ಎಂದರೆ ಕೇವಲ ಕ್ರಿಯೆ ಮತ್ತು ಸರಿಯಾದ ಉತ್ತರಕ್ಕೆ ಸೀಮಿತವೇ?

ನನ್ನ ಗಣಿತ ತರಗತಿಯಲ್ಲಿದ್ದ ಕೆಲವು ಹುಡುಗಿಯರು, 5-6ನೇ ತರಗತಿಯ ನಂತರ ಶಾಲೆ ಬಿಟ್ಟಿದ್ದರು. 3-4 ವರ್ಷಗಳ ನಂತರ ಈ ಹೆಣ್ಣುಮಕ್ಕಳು ಮತ್ತೆ ಓದಲು ಶುರು ಮಾಡಿದರು. ಮೊದಲ 3 ತಿಂಗಳು ಅವರಿಗೆ 3ನೇ ತರಗತಿಯ ಮಟ್ಟದ ಗಣಿತವನ್ನು ಕಲಿಸಿ ಕೊಡಲಾಗುತ್ತಿತ್ತು. ಈ ಮಕ್ಕಳು ಬಾಯಿ ಲೆಕ್ಕದ ಪ್ರಶ್ನೆಗಳನ್ನು ಸುಲಭವಾಗಿ ಬಿಡಿಸುತ್ತಿದ್ದರು, ಆದರೆ ಬರೆದು ಲೆಕ್ಕ ಮಾಡಲು ಕಷ್ಟಪಡುತ್ತಿದ್ದರು. ಅದರಲ್ಲೂ ಓದಿ ಅರ್ಥ ಮಾಡಿಕೊಂಡು ಲೆಕ್ಕ ಮಾಡುವುದು ಅವರಿಗೆ ಇನ್ನೂ ಕಷ್ಟವಾಗುತ್ತಿತ್ತು. ಉದಾಹರಣೆಗೆ: “ರಮಾ ಬಳಿ ಸ್ವಲ್ಪ ಹಣವಿತ್ತು. ತಾಯಿ 38 ರೂಪಾಯಿ ಕೊಟ್ಟರು. ಈಗ ಅವಳ ಬಳಿ 59 ರೂಪಾಯಿಗಳಿವೆ. ಹಾಗಾದರೆ, ಆರಂಭದಲ್ಲಿ ರಮಾಳ ಬಳಿ ಎಷ್ಟು ಹಣವಿತ್ತು?” - ಇಂತಹ ಲೆಕ್ಕಗಳು ಅವರಿಗೆ ಬಹಳ ಕಷ್ಟವಾಗುತ್ತಿದ್ದವು.

ಇಲ್ಲಿರುವ ಪ್ರಶ್ನೆಯೆಂದರೆ, ಹೇಳಿಕೆ ಸಮಸ್ಯೆಗಳನ್ನು ಬಳಸಿಕೊಂಡು ಅವರಿಗೆ ಏಕೆ ಕಲಿಸಬೇಕು? ಮತ್ತು ಮಗು ಕ್ರಿಯೆಯನ್ನು ಸರಿಯಾಗಿ ಮಾಡುತ್ತಿರುವಾಗ ಹೇಳಿಕೆ ಸಮಸ್ಯೆಯ ಅಗತ್ಯವೇನಿದೆ? ಇದಕ್ಕೆ ಒಂದು ಉತ್ತರ "ನಾವು ಏನು ಕಲಿಸಲು ಬಯಸುತ್ತಿದ್ದೇವೆ ಮತ್ತು ಏಕೆ ಕಲಿಸಲು ಬಯಸುತ್ತಿದ್ದೇವೆ?" ಎಂಬ ಪ್ರಶ್ನೆಗಳ ರೂಪದಲ್ಲಿದೆ.

ಗಣಿತ ಎಂದರೆ ಬರೀ ಲೆಕ್ಕ ಮಾಡುವುದು ಮಾತ್ರವಲ್ಲ. ಅದು ಬೇರೆ ಬೇರೆ ಸಂಖ್ಯೆಗಳ ನಡುವಿನ ಸಂಬಂಧವನ್ನು ಯೋಚಿಸಿ, ಸಾಮಾನ್ಯೀಕರಿಸುವ ಮೂಲಕ ನಿಯಮ ಮತ್ತು ಸಿದ್ಧಾಂತಗಳನ್ನು ರೂಪಿಸಿ ಮತ್ತು ನಂತರ ಅವುಗಳನ್ನು ವಿಭಿನ್ನ ಸಂದರ್ಭಗಳಲ್ಲಿ ಅನ್ವಯಿಸುವುದಾಗಿದೆ. ಹೇಳಿಕೆ ಸಮಸ್ಯೆಗಳು ಮಕ್ಕಳಿಗೆ ಪರಿಚಿತವಾದ ಸಂದರ್ಭವನ್ನು ಒದಗಿಸುತ್ತವೆ ಮತ್ತು ಗಣಿತದ ಸಂಖ್ಯೆಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಸಂದರ್ಭವು ಪರಿಚಿತವಾಗಿದ್ದರೆ ಮಕ್ಕಳು ಬಾಯಿಲೆಕ್ಕಗಳನ್ನು ಸುಲಭವಾಗಿ ಮಾಡುತ್ತಾರೆ. ಆದರೆ ಇಂತಹ ಪ್ರಶ್ನೆಯನ್ನು ಓದಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವುದು ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತದೆ.

> **“ಹೇಳಿಕೆ ಸಮಸ್ಯೆಗಳು ಮಕ್ಕಳಿಗೆ ಪರಿಚಿತವಾದ ಸಂದರ್ಭವನ್ನು ಒದಗಿಸುತ್ತವೆ ಮತ್ತು ಗಣಿತದ ಸಂಖ್ಯೆಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ.”**

ಸಾಮಾನ್ಯವಾಗಿ ಸರಿಯಾಗಿ ಓದಲು ಬರುವ ಮಕ್ಕಳೂ ಸಹ, ಈ ಲೆಕ್ಕದಲ್ಲಿ ಏನು ಮಾಡಬೇಕೆಂದು ಶಿಕ್ಷಕರೇ ಹೇಳಲಿ ಎಂದು ನಿರೀಕ್ಷಿಸುತ್ತಾರೆ. ಉದಾಹರಣೆಗೆ, ನನ್ನ ಶಾಲಾ ಭೇಟಿಯೊಂದರಲ್ಲಿ 5ನೇ ತರಗತಿಯ ಮಗುವೊಂದು ತಡೆಯಿಲ್ಲದೆ ಒಂದು ಪ್ರಶ್ನೆಯನ್ನು ಓದಿತು— “ರೇವತಿ ತನ್ನ ಹುಟ್ಟುಹಬ್ಬದಂದು ತರಗತಿಯಲ್ಲಿ ಚಾಕೊಲೇಟ್ ಹಂಚಿದಳು. ಅವಳು 55 ಚಾಕೊಲೇಟ್ ತಂದಿದ್ದಳು ಮತ್ತು ತರಗತಿಯ 42 ಮಕ್ಕಳಿಗೆ ತಲಾ 1 ಚಾಕೊಲೇಟ್ ನೀಡಿದಳು. ಹಾಗಾದರೆ, ಈಗ ಅವಳ ಬಳಿ ಎಷ್ಟು ಚಾಕೊಲೇಟ್‌ಗಳಿವೆ?”

ಪ್ರಶ್ನೆ ಓದಿದ ನಂತರ ಆ ಮಗು “ಈಗ ಏನು ಮಾಡಬೇಕು?” ಎಂಬಂತೆ ನನ್ನ ಮುಖ ನೋಡತೊಡಗಿತು. ನಾನು ಸಹಾಯ ಮಾಡದಿದ್ದಾಗ ಅವಳು ಮತ್ತೆ ಪುಸ್ತಕ ತೆರೆದು ನೋಡತೊಡಗಿದಳು. ಅವಳು ಪ್ರಶ್ನೆಯನ್ನು ಮತ್ತೊಮ್ಮೆ




*ಚಿತ್ರ 1: ಪಠ್ಯಪುಸ್ತಕದಲ್ಲಿ ಕೊಟ್ಟಿರುವ ಹೇಳಿಕೆ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಮಗ್ನರಾಗಿರುವ ವಿದ್ಯಾರ್ಥಿಗಳು.*

ಓದುತ್ತಿದ್ದಾಳೆ ಎಂದು ನನಗನ್ನಿಸಿತು, ಆದರೆ ಅವಳು ಪ್ರಶ್ನೆಯನ್ನು ಓದುತ್ತಿರಲಿಲ್ಲ. ನಾನು ಅವಳನ್ನು ಕೇಳಿದೆ, "ನೀನು ಪ್ರಶ್ನೆ ಓದುತ್ತಿಲ್ಲವಲ್ಲ, ಪುಸ್ತಕದಲ್ಲಿ ಏನು ಹುಡುಕುತ್ತಿದ್ದೀಯಾ?". ಅದಕ್ಕೆ ಅವಳು, ಈ ಪ್ರಶ್ನೆಯು ಪುಸ್ತಕದ ಯಾವ ಪುಟದಲ್ಲಿದೆ ಎಂದು ನೋಡುತ್ತಿರುವುದಾಗಿ ಹೇಳಿದಳು. ಪುಸ್ತಕದಲ್ಲಿ ಕೂಡಿಸುವ ಲೆಕ್ಕಗಳಿದ್ದವು ಮತ್ತು ಮುಂದಿನ ಪುಟದಲ್ಲಿ ಕಳೆಯುವ ಲೆಕ್ಕಗಳಿದ್ದವು. ಆ ಮಗು ಪ್ರಶ್ನೆಯನ್ನು ಓದಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು. ಅವಳು ಸರಿಯಾದ ಉತ್ತರ ಪಡೆಯಲು ಆ ಪ್ರಶ್ನೆಯು ಕೂಡಿಸುವ ಪಾಠದಲ್ಲಿದೆಯೇ ಅಥವಾ ಕಳೆಯುವ ಪಾಠದಲ್ಲಿದೆಯೇ ಎಂದು ಪತ್ತೆ ಮಾಡಲು ಯತ್ನಿಸುತ್ತಿದ್ದಳು.

## ಪ್ರಶ್ನೆಗಳನ್ನು ಬಿಡಿಸುವ ಯಾಂತ್ರಿಕ ವಿಧಾನ

ಸಾಮಾನ್ಯವಾಗಿ ಮಕ್ಕಳು ಲೆಕ್ಕ ಮಾಡುವ ಕೆಲವು ಹಂತಗಳನ್ನು ನೆನಪಿಟ್ಟುಕೊಳ್ಳುತ್ತಾರೆ ಮತ್ತು ನಂತರ ಏನೂ ಯೋಚಿಸದೆ, ತರಗತಿಯಲ್ಲಿ ಕಲಿತ ಈ ಹಂತಗಳನ್ನು ಯಾಂತ್ರಿಕವಾಗಿ ಪುನರಾವರ್ತಿಸುತ್ತಾರೆ. ಹೀಗೆ ಮಾಡುವಾಗ ಅವರಿಂದ ಹಲವು ತಪ್ಪುಗಳಾಗುತ್ತವೆ. ಉದಾಹರಣೆಗೆ, *ಚಿತ್ರ 2*ರಲ್ಲಿ ನೀವು ನೋಡುವಂತೆ, ಮಗು ಭಾಗಾಕಾರದ 3 ಪ್ರಶ್ನೆಗಳನ್ನು ಸರಿಯಾಗಿ ಮಾಡಿದೆ, ಆದರೆ 535 ಅನ್ನು 5ರಿಂದ ಭಾಗಿಸಿದಾಗ 17 ಎಂದು ಉತ್ತರ ಬರೆದಿದೆ. ಇಂತಹ ತಪ್ಪುಗಳನ್ನು ಮಕ್ಕಳು ಸಾಮಾನ್ಯ ಜೀವನದಲ್ಲಿ ಮಾಡುವುದಿಲ್ಲ. ವಾಸ್ತವವಾಗಿ, ಲೆಕ್ಕವನ್ನು ಯಾಂತ್ರಿಕವಾಗಿ ಮಾಡಿದ್ದೇ ಈ ತಪ್ಪಿಗೆ ಕಾರಣವಾಗಿದೆ. ಯಾಂತ್ರಿಕವಾಗಿ ಪ್ರಶ್ನೆಯನ್ನು ಪರಿಹರಿಸುವಾಗ ಮಕ್ಕಳಿಗೆ ಸಂಖ್ಯೆಗಳ ನಡುವಿನ ಸಂಬಂಧ ಅರ್ಥವಾಗುವುದಿಲ್ಲ. ಅಲ್ಲದೆ,




*ಚಿತ್ರ 2: ವಿದ್ಯಾರ್ಥಿಯು ಮೂರು ಲೆಕ್ಕಗಳನ್ನು ಸರಿಯಾಗಿ ಮಾಡಿ ನಾಲ್ಕನೇ ಲೆಕ್ಕದಲ್ಲಿ ಗೊಂದಲಕ್ಕೀಡಾದನು.*

ಯಾಂತ್ರಿಕವಾಗಿ ಕೆಲವು ಹಂತಗಳನ್ನು ಪುನರಾವರ್ತಿಸುವುದರಿಂದ, ಶಾಲೆಯ ಗಣಿತಕ್ಕೂ ಹೊರಗಿನ ಪ್ರಪಂಚದ ಗಣಿತಕ್ಕೂ ಇರುವ ಸಂಬಂಧ ಅವರಿಗೆ ತಿಳಿಯುವುದಿಲ್ಲ.


**"ಉತ್ತರ ನೀಡುವುದಕ್ಕಿಂತ ಪ್ರಶ್ನೆ ಕೇಳುವುದು ದೊಡ್ಡ ಕೌಶಲ. ಏಕೆಂದರೆ ಪ್ರಶ್ನೆಯೇ ಇಲ್ಲದಿದ್ದರೆ ಉತ್ತರ ಹುಡುಕುವ ಪ್ರಕ್ರಿಯೆ ಶುರುವಾಗುವುದಾದರೂ ಹೇಗೆ!"**


ಇದರಿಂದ ಮಕ್ಕಳಲ್ಲಿ "ನಮಗೆ ಕೇವಲ ಉತ್ತರ ಬಂದರೆ ಸಾಕು" ಮತ್ತು "ನಮ್ಮ ಉತ್ತರ ಸರಿಯಿದೆಯೇ ಎಂದು ಶಿಕ್ಷಕರಿಂದ ತಿಳಿದುಕೊಂಡರೆ ಸಾಕು" ಎನ್ನುವ ಮನೋಭಾವ ಬೆಳೆಯುತ್ತದೆ. ತಮ್ಮ ಎಷ್ಟು ಉತ್ತರಗಳು ಸರಿಯಾಗಿವೆ ಮತ್ತು ಇತರರದ್ದು ಎಷ್ಟು ತಪ್ಪುಗಳಿವೆ ಎಂಬುದರಲ್ಲೇ ಮಕ್ಕಳು ಸಂತೋಷಪಡುತ್ತಾರೆ. ನೀವು ಹಲವು ಬಾರಿ ಮಕ್ಕಳು ಹೀಗೆ ಹೇಳುವುದನ್ನು ಕೇಳಿರಬಹುದು, "ಮೇಡಂ, ನಾನು ಮೊದಲು ಹೇಳಿದೆ ಅಲ್ವಾ?"; "ಮೇಡಂ, ನನ್ನ ಉತ್ತರ ಸರಿಯಿದೆ ಅಲ್ವಾ, ಅವನದು ತಪ್ಪಲ್ವಾ?" ಇತ್ಯಾದಿ. ಎಲ್ಲಾ ಪ್ರಯತ್ನಗಳು ಯಾರು ಮೊದಲು ಉತ್ತರ ನೀಡುತ್ತಾರೆ ಎಂಬುದರ ಮೇಲೆ ಇರುತ್ತವೆ. ಮಕ್ಕಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರಶ್ನೆಗಳನ್ನು ಬಿಡಿಸಲು ಅವಕಾಶ ಸಿಗುವುದಿಲ್ಲ, ಆದ್ದರಿಂದ ಮಗು ಪ್ರಶ್ನೆಗೆ ಉತ್ತರ ಹುಡುಕಿದ ವಿಧಾನ ಯಾವುದು ಎಂಬ ಬಗ್ಗೆ ಚರ್ಚೆಯೇ ನಡೆಯುವುದಿಲ್ಲ. ಅವರಿಗೆ ಹೊಸ ಪ್ರಶ್ನೆಗಳನ್ನು ಸೃಷ್ಟಿಸುವ ಅಥವಾ ಅವುಗಳನ್ನು ಪರಿಹರಿಸುವ ಅವಕಾಶವೂ ಸಿಗುವುದಿಲ್ಲ. ಒಂದೇ ಸಮಯದಲ್ಲಿ ಒಂದೇ ರೀತಿಯ ಪ್ರಶ್ನೆಗಳನ್ನು ನೀಡಲಾಗುತ್ತದೆ, ಹೀಗಾಗಿ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಬಿಡಿಸಲು ಅವಕಾಶವೇ ಇರುವುದಿಲ್ಲ. "ಎಷ್ಟೊಂದು ಒಳ್ಳೆಯ ಪ್ರಶ್ನೆ ಕೇಳಿದ್ದೀಯಾ!" ಎಂಬ ಮಾತು ತರಗತಿಗಳಲ್ಲಿ ಕೇಳಿಬರುವುದು ಬಹಳ ಅಪರೂಪ. ನಾನು ಪದವಿ ಓದುತ್ತಿದ್ದಾಗ ನನ್ನ ಶಿಕ್ಷಕರು ಒಬ್ಬ ವಿದ್ಯಾರ್ಥಿನಿಗೆ "ನೀನು ಬಹಳ ಒಳ್ಳೆಯ ಪ್ರಶ್ನೆಗಳನ್ನು ಕೇಳುತ್ತೀಯಾ" ಎಂದು ಹೇಳುವುದನ್ನು ಕೇಳಿದ್ದೆ. ಅಂದಿನಿಂದ ಇಂದಿನವರೆಗೆ ನನಗೆ ಅನಿಸುವುದೇನೆಂದರೆ, ಉತ್ತರ ನೀಡುವುದಕ್ಕಿಂತ ಪ್ರಶ್ನೆ ಕೇಳುವುದು ದೊಡ್ಡ ಕೌಶಲ. ಏಕೆಂದರೆ ಪ್ರಶ್ನೆಯೇ ಇಲ್ಲದಿದ್ದರೆ ಉತ್ತರ ಹುಡುಕುವ ಪ್ರಕ್ರಿಯೆ ಶುರುವಾಗುವುದಾದರೂ ಹೇಗೆ!

ನಾನು ನನ್ನ ತರಗತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ/ಪ್ರತಿಕ್ರಿಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದೇನೆ:

1. ನೀನು ಈ ಸಮಸ್ಯೆಯನ್ನು ಹೇಗೆ ಪರಿಹರಿಸಿದೆ?
2. ನಿನಗೆ ಈ ಉತ್ತರ ಸರಿಯೆಂದು ಅನ್ನಿಸುತ್ತದೆಯೇ? ಏಕೆ?
3. ನಿನ್ನ ಗೆಳೆಯರಿಗೆ ಈ ಸಮಸ್ಯೆಯನ್ನು ವಿವರಿಸಬಲ್ಲೆಯಾ?
4. ನಿನ್ನ ಪ್ರಶ್ನೆ ಬಹಳ ಚೆನ್ನಾಗಿದೆ!

ನಿಜ, ಈ ಪ್ರಶ್ನೆಗಳನ್ನು ತರಗತಿಯಲ್ಲಿ ಚರ್ಚಿಸಲು ಸಾಕಷ್ಟು ಸಮಯ ಹಿಡಿಯುತ್ತದೆ. ಆದರೆ ನಾವು ಏನನ್ನು ಕಲಿಸಲು ಬಯಸುತ್ತಿದ್ದೇವೆಯೋ ಅದಕ್ಕಾಗಿ ಇಷ್ಟು ಸಮಯವನ್ನು ವ್ಯಯಿಸಲೇಬೇಕಲ್ಲವೇ? ಕೆಲವೊಮ್ಮೆ ಸಮಯದ ಕೊರತೆ ಕಾಡುವುದೇನೋ ನಿಜ, ಆದರೆ ನಾವು ಈ ರೀತಿ ಚರ್ಚಿಸದಿದ್ದರೆ ಮಕ್ಕಳು ತಾರ್ಕಿಕವಾಗಿ ಯೋಚಿಸುವುದನ್ನು ಕಲಿಯುವುದಿಲ್ಲ. ಇದರಿಂದ ಮಕ್ಕಳ ಯೋಚಿಸುವ ಸಾಮರ್ಥ್ಯ ಸೀಮಿತವಾಗುವುದಲ್ಲದೆ, ಪಠ್ಯಪುಸ್ತಕ ಮತ್ತು ಅವರ ಅನುಭವಗಳ ನಡುವೆ, ವಿಭಿನ್ನ ಸಂಬಂಧಗಳನ್ನು ರೂಪಿಸುವ ಸಾಮರ್ಥ್ಯವೂ ಸೀಮಿತವಾಗುತ್ತದೆ. ಕ್ರಮೇಣ ಗಣಿತದಿಂದ ಮತ್ತು ಗಣಿತದ ಚಿಂತನೆಯಿಂದ ಮಕ್ಕಳು ದೂರವಾಗುತ್ತಾ ಹೋಗುತ್ತಾರೆ.


## ಇನ್ನೊಂದಿಷ್ಟು ಅನುಭವಗಳು

ನಾನು ಹೇಳಿಕೆ ಸಮಸ್ಯೆಗಳ ಕಾರ್ಯಹಾಳೆಯೊಂದಿಗೆ 4ನೇ ತರಗತಿಯ ಮಕ್ಕಳೊಂದಿಗೆ ಕುಳಿತಿದ್ದೆ. ತಾವು ಗುಣಾಕಾರ ಕಲಿಯುತ್ತಿದ್ದೇವೆ ಎಂಬುದು ಮಕ್ಕಳಿಗೆ ತಿಳಿದಿತ್ತು. ಹಾಗಾಗಿ ಅವರಿಗೆ ಪ್ರಶ್ನೆಯಲ್ಲಿ ಗುಣಾಕಾರ ಮಾಡಲು ಕೇವಲ 2 ಸಂಖ್ಯೆಗಳನ್ನು ಹುಡುಕಬೇಕಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ನಾನು ಪ್ರಶ್ನೆಗಳಲ್ಲಿ 2ಕ್ಕಿಂತ ಹೆಚ್ಚು ಸಂಖ್ಯೆಗಳನ್ನು ನೀಡಲು ಪ್ರಯತ್ನಿಸಿದೆ. ಉದಾಹರಣೆಗೆ: "ಒಂದು ಹಸು ದಿನಕ್ಕೆ ಎರಡು ಬಾರಿ ಹಾಲು ನೀಡುತ್ತದೆ. ಒಂದು ಬಾರಿಗೆ ಅದು 4 ಲೀಟರ್ ಹಾಲು ಕೊಟ್ಟರೆ, ಅದು 5 ದಿನಗಳಲ್ಲಿ ಒಟ್ಟು ಎಷ್ಟು ಹಾಲು ಕೊಡುತ್ತದೆ?" ಈ ಪ್ರಶ್ನೆಗೆ ಮಗು 5 ಮತ್ತು 4 ಅನ್ನು ಗುಣಿಸಿ 20 ಎಂದು ಉತ್ತರ ನೀಡಿತು, ಆದರೆ ವಾಸ್ತವವಾಗಿ ಅಲ್ಲಿ 2 x 4 x 5 ಎಂದು ಮಾಡಬೇಕಿತ್ತು. *ಚಿತ್ರ 3*ರಲ್ಲಿ ನೀವು ಇಂತಹ ಇನ್ನೂ ಹೆಚ್ಚಿನ ಉದಾಹರಣೆಗಳನ್ನು ನೋಡಬಹುದು.

*ಚಿತ್ರ 3*ರಲ್ಲಿ ಮಗು ಅನೇಕ ಸಮಸ್ಯೆಗಳನ್ನು ಸರಿಯಾಗಿ ಬಿಡಿಸಿರುವುದನ್ನು ನೀವು ನೋಡಬಹುದು. ಕೆಲವು ಸಮಸ್ಯೆಗಳ ಕುರಿತು ಮಗುವಿನೊಂದಿಗೆ ಚರ್ಚೆಯನ್ನೂ ಮಾಡಲಾಯಿತು. ಇದರಿಂದ ಯಾವ ಎರಡು ಸಂಖ್ಯೆಗಳನ್ನು ಗುಣಿಸಬೇಕು ಎಂದು ಅರ್ಥಮಾಡಿಕೊಳ್ಳಲು ಮಗುವಿಗೆ ಸಹಾಯವಾಯಿತು. ಆದರೆ ಒಂದು ಸಮಸ್ಯೆಯಲ್ಲಿ ಅದು 121 ಅನ್ನು 1ರಿಂದ ಗುಣಿಸಿದೆ. ಗುಣಾಕಾರ ಅರ್ಥವಾಗಿದ್ದರೆ ಅಥವಾ ಪ್ರಶ್ನೆ ಸರಿಯಾಗಿ ಅರ್ಥವಾಗಿದ್ದರೆ ಅದು 121 ಅನ್ನು 1ರಿಂದ ಗುಣಿಸುತ್ತಿರಲಿಲ್ಲ. ಇಂತಹ ಸಮಸ್ಯೆಗೆ ಹೇಳಿಕೆ ಸಮಸ್ಯೆಗಳನ್ನು ಕೇಳದಿರುವುದೇ ಒಂದು ಕಾರಣ ಎಂದು ನನಗೆ ಅನ್ನಿಸುತ್ತದೆ. ಹಾಗಂತ ಇಲ್ಲಿ ಹೇಳಿಕೆ ಸಮಸ್ಯೆಯೇ ಇದೆ— "ಒಂದು ಶಾಲೆಯಲ್ಲಿ 121 ಮಕ್ಕಳಿದ್ದಾರೆ. ಪ್ರತಿಯೊಬ್ಬ ಮಗುವಿಗೆ 1 ತಟ್ಟೆ, 4 ಬಟ್ಟಲು ಮತ್ತು 2 ಚಮಚಗಳ ಅಗತ್ಯವಿದೆ. ಹಾಗಾದರೆ, ಒಟ್ಟು ಎಷ್ಟು ತಟ್ಟೆ, ಬಟ್ಟಲು ಮತ್ತು ಚಮಚಗಳ ಅಗತ್ಯವಿದೆ?" ಇಷ್ಟಾದರೂ ಒಂದು ಮಗು 121 ಅನ್ನು 1ರಿಂದ ಗುಣಿಸಿದೆ. ಮತ್ತೊಂದು ಪ್ರಶ್ನೆಯಲ್ಲೂ ಆ ಮಗು 1ರಿಂದಲೇ ಗುಣಿಸಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಮಗು ತರಗತಿಯಲ್ಲಿ ಕಲಿತ ಗುಣಾಕಾರದ ಹಂತಗಳನ್ನು ಯಾಂತ್ರಿಕವಾಗಿ ಪುನರಾವರ್ತಿಸುತ್ತಿರುವುದಾಗಿದೆ. ಎರಡನೇ ಕಾರಣವೆಂದರೆ ಅತಿ ವೇಗವಾಗಿ ಲೆಕ್ಕ ಮುಗಿಸಿ ತೋರಿಸಬೇಕೆಂಬ ಆತುರ ತೋರಿಸುವುದು ಅಥವಾ ಹೆಚ್ಚು ಸಮಸ್ಯೆಗಳನ್ನು ನೀಡಿರುವುದರಿಂದ ಕೆಲಸವನ್ನು ಬೇಗ ಮುಗಿಸಲೂ ಹೀಗೆ ಮಾಡಿರಬಹುದು. ಇಲ್ಲವೇ ಹೇಗಾದರೂ ಮಾಡಿ ಲೆಕ್ಕ ಬಿಡಿಸಿ ತೋರಿಸಬೇಕು ಎಂಬ ಕಾರಣಕ್ಕೆ ಮನಸ್ಸಿಗೆ ತೋಚಿದ್ದನ್ನು ಮಾಡಿರಬಹುದು.

ಈ ಪುಟದಲ್ಲಿ (*ಚಿತ್ರ 3*) ಇನ್ನೂ ಅನೇಕ ತಪ್ಪುಗಳಿವೆ. ಉದಾಹರಣೆಗೆ, 128 ಅನ್ನು 8ರಿಂದ ಗುಣಿಸುವಾಗ, ಆ ಮಗು ಬಿಡಿ ಸ್ಥಾನದಲ್ಲಿ 6 ಎಂದು ಬರೆದು, 4 ಅನ್ನು ಹತ್ತರ ಸ್ಥಾನಕ್ಕೆ ಸೇರಿಸಿತು. ಆದರೆ ಮಗು ಎಲ್ಲಾ ಕಡೆ ಈ ತಪ್ಪು ಮಾಡಿಲ್ಲ. 122 ಅನ್ನು 6ರಿಂದ ಗುಣಿಸುವಂತಹ ಬೇರೆ ಸಮಸ್ಯೆಗಳಲ್ಲಿ ಆ ತಪ್ಪು ಮಾಡಿಲ್ಲ ಮತ್ತು ಗುಣಿಸಿದ ಬಳಿಕ ಸರಿಯಾದ ಉತ್ತರ ಪಡೆದಿದೆ. ಇದರಿಂದ ತಿಳಿಯುವುದೇನೆಂದರೆ, ಯಾವುದೇ ಪರಿಕಲ್ಪನೆಯ ಮೇಲೆ ಕೆಲಸ ಮಾಡುವಾಗ ಮಕ್ಕಳು ವಿಭಿನ್ನ ರೀತಿಯಲ್ಲಿ ಸಮಸ್ಯೆಗಳನ್ನು ಬಿಡಿಸುತ್ತಾರೆ ಮತ್ತು ಕಾಲಕ್ರಮೇಣ ಕಲಿಯುತ್ತಾರೆ. ಇದರ ಹೊರತಾಗಿ, ಗಣಿತದಲ್ಲಿ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಮುಖ್ಯವೋ, ಆ ಸಮಸ್ಯೆಯನ್ನು ಬಿಡಿಸುವಾಗ ಹೇಗೆ ಬರೆಯಬೇಕು ಮತ್ತು ಯಾವೆಲ್ಲಾ ವಿಷಯಗಳ ಕಡೆ ಗಮನ ಹರಿಸಬೇಕು ಎಂಬುದು ಕೂಡ ಅಷ್ಟೇ ಮುಖ್ಯವಾಗುತ್ತದೆ.


ಅದಕ್ಕಾಗಿಯೇ ಅದಾದ ನಂತರ ನಾನು ಆ ಮಗುವಿಗೆ ಪ್ರತಿ ಪ್ರಶ್ನೆಯನ್ನು ಓದಿ ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಲು ಹೇಳಿದೆ. ಕೆಳಗಿನ *ಚಿತ್ರ 4*ರಲ್ಲಿ ನೀವು ನೋಡುವಂತೆ, ಅದೇ ಮಗು ಪ್ರಶ್ನೆಯನ್ನು ಸರಿಯಾಗಿ ಬರೆದು ಪೂರ್ಣ ವಾಕ್ಯದಲ್ಲಿ ಉತ್ತರ ಬರೆದಿದೆ. ಇದರಿಂದ ಮಕ್ಕಳು ಪ್ರಶ್ನೆಯಲ್ಲಿ ಏನು ಮಾಡಬೇಕಿತ್ತು ಮತ್ತು ಏನು ಮಾಡಿದ್ದೇವೆ ಎಂಬುದರ ಬಗ್ಗೆ ಯೋಚಿಸಲು ಸಾಧ್ಯವಾಗುತ್ತದೆ ಮತ್ತು ಆಗ ಗಣಿತವು ಅರ್ಥಪೂರ್ಣವಾಗುತ್ತದೆ.




1. ಒಂದು ಗಿಡ ಪ್ರತಿ ವರ್ಷ 10 cm ಬೆಳೆಯುತ್ತದೆ. ಅದರ ಎತ್ತರವು 30 ವರ್ಷಗಳವರೆಗೆ ಹೆಚ್ಚಾಗುತ್ತದೆ. ಹಾಗಾದರೆ 25 ವರ್ಷಗಳ ನಂತರ ಗಿಡ ಎಷ್ಟು ಎತ್ತರವಾಗಿರುತ್ತದೆ?
2. ರಾಜೀವ್ ನಗರದಲ್ಲಿ ಮನೆಗಳಿರುವ 19 ಬೀದಿಗಳಿವೆ. ಪ್ರತಿಯೊಂದು ಬೀದಿಯಲ್ಲಿ 29 ಮನೆಗಳಿವೆ. ಹಾಗಾದರೆ ಆ ಬಡಾವಣೆಯಲ್ಲಿ ಒಟ್ಟು ಎಷ್ಟು ಮನೆಗಳಿವೆ?
3. ಒಂದು ಹೋಟೆಲ್‌ನಲ್ಲಿ 4 ಬಗೆಯ ಪರೋಟಾಗಳು (ಆಲೂಗಡ್ಡೆ, ಹೂಕೋಸು, ಬಟಾಣಿ ಮತ್ತು ಪನೀರ್) ಸಿಗುತ್ತವೆ. ಈ ಹೋಟೆಲ್ ಈ ಪರೋಟಾಗಳನ್ನು 4 ಬಗೆಯ ಚಟ್ನಿಗಳೊಂದಿಗೆ (ಕೆಂಪು, ಹಸಿರು, ಬಿಳಿ, ಹಳದಿ) ಮಾರಾಟ ಮಾಡುತ್ತದೆ. ಹಾಗಾದರೆ ಒಬ್ಬ ವ್ಯಕ್ತಿಯು ಈ ಪರೋಟಾಗಳನ್ನು ಎಷ್ಟು ರೀತಿಗಳಲ್ಲಿ ತಿನ್ನಬಹುದು?
4. ಒಂದು ಶಾಲೆಯಲ್ಲಿ 128 ಮಕ್ಕಳಿದ್ದಾರೆ. ಎಲ್ಲ ಮಕ್ಕಳು ಪ್ರಾರ್ಥನೆಗಾಗಿ ಸಾಲುಗಳಲ್ಲಿ ನಿಂತಿದ್ದರು. ಅಲ್ಲಿ ಒಟ್ಟು 8 ಸಾಲುಗಳಿದ್ದವು. ಹಾಗಾದರೆ ಪ್ರತಿಯೊಂದು ಸಾಲಿನಲ್ಲಿ ಎಷ್ಟು ಮಕ್ಕಳು ನಿಂತಿದ್ದರು?
5. ಅಪ್ನಾ ಘರ್ ಶಾಲೆಯಲ್ಲಿ 23 ಕೊಠಡಿಗಳಿವೆ. ಪ್ರತಿಯೊಂದು ಕೊಠಡಿಯಲ್ಲಿ 3 ಫ್ಯಾನ್‌ಗಳು ಮತ್ತು 4 ಟ್ಯೂಬ್ ಲೈಟ್‌ಗಳಿವೆ. ಹಾಗಾದರೆ ಆ ಶಾಲೆಯಲ್ಲಿ ಒಟ್ಟು ಎಷ್ಟು ಫ್ಯಾನ್‌ಗಳು ಮತ್ತು ಟ್ಯೂಬ್ ಲೈಟ್‌ಗಳಿವೆ?
6. ಒಂದು ಎಮ್ಮೆ ದಿನಕ್ಕೆ ಎರಡು ಬಾರಿ ಹಾಲು ಕೊಡುತ್ತದೆ. ಆ ಎಮ್ಮೆ ಒಂದು ಬಾರಿಗೆ 5 ಲೀಟರ್ ಹಾಲು ಕೊಟ್ಟರೆ, 90 ದಿನಗಳಲ್ಲಿ ಆ ಎಮ್ಮೆ ಎಷ್ಟು ಹಾಲು ಕೊಡುತ್ತದೆ?
7. ಒಂದು ಪುಸ್ತಕದ ಬೆಲೆ ₹26. ಶಾರದಾ ಮಂದಿರ ಶಾಲೆಗೆ ಅದರ 56 ಪ್ರತಿಗಳು (ಪ್ರತಿಗಳು/ಪುಸ್ತಕಗಳು) ಬೇಕಾಗಿವೆ. ಹಾಗಾದರೆ 56 ಪ್ರತಿಗಳಿಗಾಗಿ ಶಾಲೆ ಎಷ್ಟು ಹಣವನ್ನು ಪಾವತಿಸಬೇಕಾಗುತ್ತದೆ?
8. ಅಪ್ನಾ ಘರ್ ಶಾಲೆಯಲ್ಲಿ 121 ಮಕ್ಕಳಿದ್ದಾರೆ. ಪ್ರತಿಯೊಬ್ಬ ಮಗುವಿಗೂ 1 ತಟ್ಟೆ, 4 ಬಟ್ಟಲುಗಳು ಮತ್ತು 2 ಚಮಚಗಳು ಬೇಕಾಗುತ್ತದೆ. ಹಾಗಾದರೆ ಶಾಲೆಗೆ ಒಟ್ಟು ಎಷ್ಟು ತಟ್ಟೆಗಳು, ಬಟ್ಟಲುಗಳು ಮತ್ತು ಚಮಚಗಳು ಬೇಕಾಗುತ್ತವೆ?
9. ಒಂದು ಶಾಲೆಯಲ್ಲಿ 18 ಕೊಠಡಿಗಳಿವೆ. ಪ್ರತಿಯೊಂದು ಕೊಠಡಿಗೆ 3 ನೆಲಹಾಸುಗಳನ್ನು ಖರೀದಿಸಬೇಕಾಗಿದೆ. ಒಂದು ನೆಲಹಾಸಿನ ಬೆಲೆ ₹153. ಹಾಗಾದರೆ ಶಾಲೆಗೆ ಎಷ್ಟು ನೆಲಹಾಸುಗಳು ಬೇಕಾಗುತ್ತವೆ ಮತ್ತು ಅವುಗಳನ್ನು ಕೊಳ್ಳಲು ಎಷ್ಟು ಹಣ ಬೇಕಾಗುತ್ತದೆ?
10. ಒಬ್ಬ ಅಂಗಡಿಯವರು ಪ್ರತಿ ತಿಂಗಳು ತಮ್ಮ ಅಂಗಡಿಗೆ 132 ಬಿಸ್ಕತ್ತು ಪ್ಯಾಕೆಟ್‌ಗಳನ್ನು ತರಿಸುತ್ತಾರೆ. ಹಾಗಾದರೆ ಅವರು 1 ವರ್ಷದಲ್ಲಿ ಎಷ್ಟು ಬಿಸ್ಕತ್ತು ಪ್ಯಾಕೆಟ್‌ಗಳನ್ನು ತರಿಸುತ್ತಾರೆ?

*ಚಿತ್ರ 3: ಹೇಳಿಕೆ ಸಮಸ್ಯೆಗಳನ್ನು ಹೊಂದಿರುವ 4ನೇ ತರಗತಿಯ ಕಾರ್ಯಹಾಳೆ ಮತ್ತು ವಿದ್ಯಾರ್ಥಿಗಳ ಪ್ರಯತ್ನ.*

ತರಗತಿಯಲ್ಲಿ ಕೆಲಸ ಮಾಡುವಾಗ ಮಕ್ಕಳಿಂದ ತಪ್ಪುಗಳು ಆಗಿಯೇ ಆಗುತ್ತವೆ ಎಂಬುದು ಇದರಿಂದ ನನಗೆ ಅರ್ಥವಾಯಿತು. ಹಲವು ಬಾರಿ ಯಾವುದೇ ಕಾರಣವಿಲ್ಲದೆಯೂ ತಪ್ಪುಗಳಾಗುತ್ತವೆ ಮತ್ತು ಆ ಉತ್ತರ ಹೇಗೆ ಬಂತು ಎಂದು ಮಗುವಿಗೂ ಹೇಳಲು ಸಾಧ್ಯವಾಗುವುದಿಲ್ಲ. ಯಾವುದೇ ವಿಧಾನ ಎಷ್ಟೇ ಉತ್ತಮವಾಗಿದ್ದರೂ, ಮಗು ಅದನ್ನು ಬಳಸುವಾಗ ಅರ್ಥೈಸಿಕೊಳ್ಳದಿದ್ದರೆ ಅಥವಾ ದೃಶ್ಯೀಕರಿಸಿಕೊಳ್ಳಲು ಸಾಧ್ಯವಾಗದಿದ್ದರೆ ತಪ್ಪುಗಳು ಆಗಿಯೇ ಆಗುತ್ತವೆ. ಉದಾಹರಣೆಗೆ, ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯನ್ನು




*ಚಿತ್ರ 4: 8x5 ಅನ್ನು ಬಿಡಿಸಲು ಒಂದು ಮಗು ಬಳಸಿದ ವಿಧಾನ.*




*ಚಿತ್ರ 5: ಒಂದು ಪೂರ್ಣ ಪ್ರಶ್ನೆಯನ್ನು ಕೇಳಿದಾಗ ಮಗುವು ಸರಿಯಾದ ಉತ್ತರವನ್ನು ನೀಡಿದೆ.*

ಕಳೆಯುವುದು. ಮಗು ಆ ಕ್ರಮವಿಧಿಯನ್ನು (algorithm) ತರ್ಕಬದ್ಧವಾಗಿ ಬಿಡಿಸಿದಾಗ ಮಾತ್ರ ಅರ್ಥ ಮಾಡಿಕೊಳ್ಳಲು ಅಥವಾ ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕಾಗಿ ನಾವು ಪ್ರತಿ ಬಾರಿ ತರಗತಿಯಲ್ಲಿ ಪ್ರಶ್ನೆಗಳ ಬಗ್ಗೆ ಚರ್ಚಿಸಬೇಕಾಗಬಹುದು. ಒಂದು ಉತ್ತರ ಏಕೆ ಸರಿ ಅಥವಾ ತಪ್ಪು, ಅಥವಾ ಯಾವುದಾದರೊಂದು ಉತ್ತರವನ್ನು ಅವರು ಹೇಗೆ ಪಡೆದರು ಎಂಬುದರ ಬಗ್ಗೆ ಚರ್ಚೆ ನಡೆಯಬೇಕು. ಮಕ್ಕಳಿಗೆ ಪ್ರಶ್ನೆಯನ್ನು ಬೇರೆ ಬೇರೆ ರೀತಿಯಲ್ಲಿ ಬಿಡಿಸಲು ಸ್ವಾತಂತ್ರ್ಯ ನೀಡಬೇಕು ಮತ್ತು ಅಂತಹ ವಿಧಾನಗಳನ್ನು ತರಗತಿಯಲ್ಲಿ ಪ್ರೋತ್ಸಾಹಿಸಬೇಕು. ಮಕ್ಕಳು ತಮ್ಮ ಉತ್ತರದ ಪರವಾಗಿ ತಮ್ಮ ಆಲೋಚನೆಯನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು. ಉಳಿದ ಮಕ್ಕಳು ಆ ತರ್ಕವನ್ನು ಒಪ್ಪಲು ಅಥವಾ ಒಪ್ಪದೇ ಇರಲು ಅವಕಾಶ ನೀಡಬೇಕು. ನಾವು ಮಕ್ಕಳಿಗೆ ಯೋಚಿಸುವುದನ್ನು ಕಲಿಸಲು ಬಯಸಿದರೆ ಇಂತಹ ವಿಷಯಗಳಿಗೆ ತರಗತಿಯಲ್ಲಿ ಅವಕಾಶ ನೀಡಬೇಕಾಗುತ್ತದೆ.

(ಚಿತ್ರ 4ರಲ್ಲಿ ನೋಡಿ - ಮಗು 8 x 5ರ ಉತ್ತರವನ್ನು ಹೇಗೆ ಕಂಡುಕೊಂಡಿದೆ ಎಂದು.)

ಮಕ್ಕಳು ಕೇವಲ ಕ್ರಿಯೆಗಳನ್ನು ಕಲಿಯುವುದಷ್ಟೇ ಗಣಿತ ಕಲಿಯುವುದು ಎಂದಾಗಬಾರದು. ಗಣಿತವು ಪ್ರಶ್ನೆಗಳಿಗೆ ಉತ್ತರ ಪಡೆಯುವುದಕ್ಕಿಂತಲೂ ತುಂಬ ಮಿಗಿಲಾದದ್ದು. ಇದೊಂದು ಆಲೋಚನಾ ಕ್ರಮವಾಗಿದೆ. ತಮಗೆ ತಾವೇ ಪ್ರಶ್ನೆ ಕೇಳಿಕೊಳ್ಳುತ್ತಾ ಮಕ್ಕಳು ಯೋಚಿಸುವುದನ್ನು ಕಲಿಯುತ್ತಾರೆ. ಯಾವ ಕ್ರಮದಲ್ಲಿ ಮತ್ತು ಹೇಗೆ ಯೋಚಿಸುವುದು ಸಹಾಯವಾಗುತ್ತದೆ ಎಂಬುದನ್ನು ಕಲಿಯುತ್ತಾರೆ. ಇದನ್ನು ಕಲಿಯುವಾಗ ಮಕ್ಕಳು ತಪ್ಪುಗಳನ್ನು ಮಾಡಬಹುದು, ಆದರೆ ಇದು ಕೇವಲ ಉತ್ತರ ಪಡೆಯುವ ಕಸರತ್ತಿಗಿಂತ ಹೆಚ್ಚು ಅರ್ಥಪೂರ್ಣವಾಗಿರುತ್ತದೆ. ಮಕ್ಕಳು ಪಠ್ಯರೂಪದ ಪ್ರಶ್ನೆಗಳನ್ನು ಬಿಡಿಸಬೇಕು ಮತ್ತು ಅಲ್ಲದೆ ತಾವೇ ಹೊಸ ಪ್ರಶ್ನೆಗಳನ್ನು ರಚಿಸಬೇಕು. ಇಂತಹ ಪ್ರಶ್ನೆಗಳು ಅವರಿಗೆ ವ್ಯವಹಾರಿಕ ಗಣಿತದೊಂದಿಗೆ ಬೆರೆಯಲು ಅವಕಾಶ ನೀಡುತ್ತವೆ, ಇದರಿಂದ ಅವರಿಗೆ ಪಠ್ಯಪುಸ್ತಕದ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಕೂಡ ಸಹಾಯವಾಗುತ್ತದೆ.

## ಅಂತಿಮ ನುಡಿ

'ಕಲಿಸುವುದು' ಎಂಬುದು ಅತ್ಯಂತ ಸಂಕೀರ್ಣವಾದ ಕೆಲಸ. ನಾವು ಯಾರಿಗೂ ಏನನ್ನೂ ಕಲಿಸಲು ಸಾಧ್ಯವಿಲ್ಲ, ಕೇವಲ ಕಲಿಕೆಗೆ ಪೂರಕವಾದ ವಾತಾವರಣವನ್ನು ನೀಡಬಹುದು ಎಂದು ಕೆಲವು ಜನರು ಹೇಳುತ್ತಾರೆ. ಈ ಮಾತು ನನಗೆ ಬಹಳ ಮಟ್ಟಿಗೆ ಸರಿ ಎನಿಸುತ್ತದೆ, ಏಕೆಂದರೆ ಏನನ್ನಾದರೂ ಕಲಿಯಲು ಯೋಚನೆ/ಮಾನಸಿಕ ಪ್ರಕ್ರಿಯೆ ಬಹಳ ಮುಖ್ಯ, ಅದು ಒತ್ತಡದಿಂದ ಸಾಧ್ಯವಿಲ್ಲ. ಎಲ್ಲೋ ಒಂದು ಕಡೆ ಒಳಗಿನ ಇಚ್ಛೆಯಿಲ್ಲದೆ ಇದನ್ನು ಮಾಡಲು ಸಾಧ್ಯವಿಲ್ಲ. ಮಕ್ಕಳು ಪ್ರಶ್ನೆಗಳೊಂದಿಗೆ ಹೋರಾಡಲಿ ಎಂದು ನಾವು ಬಯಸುತ್ತೇವೆ. ಇದಕ್ಕೆ ಸಂದರ್ಭವು ಸಾಕಷ್ಟು ಸಹಾಯ ಮಾಡುತ್ತದೆ. ಆದರೆ ಕೇವಲ ಸಂದರ್ಭಗಳಿಂದಲೇ ಕೆಲಸವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಇದರಲ್ಲಿ ತರಗತಿ ಮತ್ತು ಮನೆಯ ವಾತಾವರಣ ಹೇಗಿದೆ, ಮಗು/ಶಿಕ್ಷಕರ ದೈಹಿಕ ಮತ್ತು ಮಾನಸಿಕ ಆರೋಗ್ಯ ಹೇಗಿದೆ, ಮಗುವಿಗೆ ಸ್ವತಃ ಅದರಲ್ಲಿ ಆಸಕ್ತಿ ಮತ್ತು ಅಭಿರುಚಿ ಇದೆಯೋ ಇಲ್ಲವೋ ಮುಂತಾದ ಹಲವು ಅಂಶಗಳು ಮುಖ್ಯವಾಗುತ್ತವೆ. ಎಲ್ಲಾ ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡು ನಾವು ಪಾಠ ಮಾಡಬೇಕಾಗುತ್ತದೆ.



**ಮೀನು ಪಾಲಿವಾಲ್** ಅವರು ವಿಕ್ರಮಶಿಲಾ ಎಜುಕೇಶನ್ ರಿಸೋರ್ಸ್ ಸೊಸೈಟಿಯಲ್ಲಿ ರಾಜ್ಯ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಯಾಗಿ (ಸಂಖ್ಯಾಜ್ಞಾನ) ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಮೊದಲು ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್ ಮತ್ತು ಮುಸ್ಕಾನ್ ಸಂಸ್ಥೆಯೊಂದಿಗೆ ಸುಮಾರು ಏಳು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಆರು ವರ್ಷಗಳ ಕಾಲ ಐಸಿಐಸಿಐ ಬ್ಯಾಂಕಿನಲ್ಲಿ ಕೆಲಸ ಮಾಡುವಾಗ ತಮ್ಮ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಅವರು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡರು. ಅವರಿಗೆ ಪ್ರಾಥಮಿಕ ಶಾಲಾ ಮಟ್ಟದ ಕಲಿಸುವ-ಕಲಿಯುವ ಪ್ರಕ್ರಿಯೆಗಳಲ್ಲಿ ಆಸಕ್ತಿ.

**ಸಂಪರ್ಕ:** paliwal.meenu@gmail.com

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಕೇಶ್ ಪೂಂಜಾ

# ಪಾಠದ ಯೋಜನೆ ಮತ್ತು ಬೋಧನಾ ಅನುಭವಗಳು

ಆರತಿ ಪಾಂಡೆ

**ಈ ಲೇಖನವು ಪಠ್ಯಪುಸ್ತಕದ ಕಥೆಯೊಂದನ್ನು ವ್ಯವಸ್ಥಿತವಾದ ಯೋಜನೆಯ ಮೂಲಕ ತರಗತಿಯಲ್ಲಿ ಕಲಿಸಲು ಒಂದು ಪ್ರಾಯೋಗಿಕ ಚೌಕಟ್ಟನ್ನು ಒದಗಿಸುತ್ತದೆ. ಶಿಕ್ಷಕಿಯೊಬ್ಬರು ಕಲಿಕಾ ಫಲಗಳ ಆಧಾರದ ಮೇಲೆ ಕಥೆ ಹೇಳುವ ಉದ್ದೇಶಗಳನ್ನು ಹೇಗೆ ನಿರ್ಧರಿಸುತ್ತಾರೆ ಮತ್ತು ಅಪೇಕ್ಷಿತ ಗುರಿಗಳನ್ನು ತಲುಪಲು ಬಳಸುವ ಪರಿಣಾಮಕಾರಿ ವಿಧಾನಗಳನ್ನು ಇಲ್ಲಿ ವಿವರಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಅವರು ಕಂಡ ಯಶಸ್ಸು, ಎದುರಿಸಿದ ಸವಾಲುಗಳು ಮತ್ತು ಅವುಗಳನ್ನು ಪರಿಹರಿಸಿಕೊಂಡ ರೀತಿ ಈ ಲೇಖನದ ಪ್ರಮುಖ ಭಾಗವಾಗಿದೆ.**



*ಚಿತ್ರ 1: ಒಂದು ಉತ್ತಮ ಬೋಧನಾ ಯೋಜನೆಯು ಮಕ್ಕಳಿಗೆ ಚೆನ್ನಾಗಿ ಅರ್ಥಮಾಡಿಕೊಳ್ಳಲು, ಕಲ್ಪಿಸಿಕೊಳ್ಳಲು ಮತ್ತು ತಮ್ಮ ದೃಷ್ಟಿಕೋನಗಳನ್ನು ಹಂಚಿಕೊಳ್ಳಲು ನೆರವಾಗುತ್ತದೆ.*

## ಕಥೆಯ ಕುರಿತು

ಮುನ್ಷಿ ಪ್ರೇಮ್‌ಚಂದ್ ಅವರ "ನಾದಾನ್ ದೋಸ್ತ್" (ಮುಗ್ಧ ಸ್ನೇಹಿತ) ಕಥೆಯು ಮಕ್ಕಳ ಸಹಜ ಸರಳತೆ ಮತ್ತು ಕುತೂಹಲದ ಸ್ವಭಾವವನ್ನು ಚಿತ್ರಿಸುತ್ತದೆ. ಕಥೆಯಲ್ಲಿ ಕೇಶವ್ ಮತ್ತು ಶ್ಯಾಮಾ ಎಂಬ ಅಣ್ಣ-ತಂಗಿಯರಿದ್ದಾರೆ. ಅವರ ಮನೆಯ ಸಜ್ಜದ ಮೇಲೆ ಗುಬ್ಬಚ್ಚಿಯೊಂದು ಮೊಟ್ಟೆಗಳನ್ನು ಇಟ್ಟಿರುತ್ತದೆ. ಹಕ್ಕಿಯ ಮೊಟ್ಟೆಗಳು ಹೇಗಿರುತ್ತವೆ? ಅವುಗಳಿಂದ ಮರಿಗಳು ಹೊರಬರುವುದು ಹೇಗೆ? ಅವುಗಳ ಆಹಾರವೇನು? ಮತ್ತು ಅವು ಹೇಗೆ ಬದುಕುತ್ತವೆ? ಮುಂತಾದವುಗಳ ಕುರಿತು ಅಣ್ಣ-ತಂಗಿಯರಲ್ಲಿ ಅಪಾರ ಕುತೂಹಲವಿರುತ್ತದೆ. ಮಧ್ಯಾಹ್ನದ ಉರಿಬಿಸಿಲು ಮತ್ತು ಮಳೆಯಿಂದ ಮೊಟ್ಟೆಗಳನ್ನು ರಕ್ಷಿಸಲು ಮಕ್ಕಳು ಹಲವಾರು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಅವುಗಳಿಗಾಗಿ ಒಂದು ಬಟ್ಟಲಿನಲ್ಲಿ ನೀರು ಮತ್ತು ಅಕ್ಕಿ ಕಾಳುಗಳನ್ನು ತಂದಿಡುತ್ತಾರೆ. ಹೀಗೆ ಹಕ್ಕಿಮರಿಗಳ ಬಗ್ಗೆ ಕಾಳಜಿ ವಹಿಸುವ ಭರದಲ್ಲಿ ಅವರಿಂದ ಒಂದು ಅಚಾತುರ್ಯ ನಡೆದುಹೋಗುತ್ತದೆ, ಇದಕ್ಕಾಗಿ ಅವರು ನಂತರ ತೀವ್ರವಾಗಿ ವಿಷಾದಿಸುತ್ತಾರೆ. ಈ ಕಥೆಯು ಮಕ್ಕಳ ದೈನಂದಿನ ಪರಿಸರದೊಂದಿಗೆ ಸುಲಭವಾಗಿ ಬೆಸೆಯುತ್ತದೆ. ಪಕ್ಷಿಗಳು ಸಾಮಾನ್ಯವಾಗಿ ಮನೆಗಳ ಆಸುಪಾಸಿನಲ್ಲಿ ಗೂಡು ಕಟ್ಟುವುದರಿಂದ, ತರಗತಿಯ ಪ್ರತಿಯೊಂದು ಮಗುವೂ ಈ ಕಥೆಯೊಂದಿಗೆ ತನ್ನನ್ನು ತಾನು ಸುಲಭವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ.

## ಪಾಠವನ್ನು ಕಲಿಸುವ ಉದ್ದೇಶಗಳು


ಈ ಕಥೆಯು 6ನೇ ತರಗತಿಯ 'ವಸಂತ' ಎಂಬ ಪಠ್ಯಪುಸ್ತಕದಲ್ಲಿದೆ. ಪಾಠದ ಸಿದ್ಧತೆಯ ಹಂತದಲ್ಲಿ, ನಾನು ಈ ತರಗತಿಗೆ ನಿಗದಿಪಡಿಸಿದ ಭಾಷಾ ಬೋಧನೆಯ ಕಲಿಕಾ ಫಲಿತಗಳನ್ನು ಗಮನಿಸಿದೆ. ಇವುಗಳ ಆಧಾರದ ಮೇಲೆ, ಕಥೆ ಹೇಳುವುದರ ಕೆಲವು ಪ್ರಮುಖ ಉದ್ದೇಶಗಳನ್ನು ರೂಪಿಸಿಕೊಂಡೆ. ಸಂಭಾಷಣೆಯ ಮೂಲಕ ಮಕ್ಕಳು ಕಥೆಯೊಂದಿಗೆ ಭಾವನಾತ್ಮಕ ಸಂಪರ್ಕ ಬೆಳೆಸಿಕೊಳ್ಳಲು ಸಹಾಯ ಮಾಡುವುದು; ಪ್ರಾಣಿ-ಪಕ್ಷಿಗಳು ಹಾಗೂ ಪ್ರಕೃತಿಯ ಬಗ್ಗೆ ಸಂವೇದನಾಶೀಲವಾಗಿ ಯೋಚಿಸಲು ಅವರನ್ನು ಪ್ರೋತ್ಸಾಹಿಸುವುದು; ಮಕ್ಕಳು ಈ ಕಥೆಯನ್ನು ಆಳವಾಗಿ ಗ್ರಹಿಸುವಂತೆ ಮಾಡುವುದು ಮತ್ತು ಅವರಲ್ಲಿ ಇತರ ಸಾಹಿತ್ಯಿಕ ಕೃತಿಗಳನ್ನು ಓದುವ ಆಸಕ್ತಿ ಬೆಳೆಸುವುದು ಈ ಉದ್ದೇಶಗಳಲ್ಲಿ ಸೇರಿವೆ. ಜೊತೆಗೆ, ಮಕ್ಕಳಿಗೆ ಸ್ವತಂತ್ರವಾಗಿ ಆಲೋಚಿಸಲು ಪ್ರೇರೇಪಿಸುವುದು, ಅವರ ಭಾಷಾ ಜ್ಞಾನ ಮತ್ತು ಶಬ್ದಕೋಶವನ್ನು ವಿಸ್ತರಿಸುವುದು, ಕಲ್ಪನಾ ಶಕ್ತಿಯನ್ನು

ಅಭಿವೃದ್ಧಿಪಡಿಸುವುದು ಮತ್ತು ಅವರ ಸ್ವಂತ ಅನುಭವಗಳನ್ನು ಪಾಠದೊಂದಿಗೆ ಬೆಸೆಯಲು ಅವಕಾಶ ಕಲ್ಪಿಸುವುದು ನನ್ನ ಗುರಿಯಾಗಿತ್ತು. ಕಥೆಯ ಘಟನೆಗಳು ಮತ್ತು ಪಾತ್ರಗಳ ಬಗ್ಗೆ ಮಕ್ಕಳು ವಿಮರ್ಶಾತ್ಮಕವಾಗಿ ಯೋಚಿಸಲು ಪೂರಕವಾದ ವಾತಾವರಣ ನಿರ್ಮಿಸಲು ಕೂಡ ಬಯಸಿದ್ದೆ.

## ಮಕ್ಕಳ ಅನುಭವಗಳಿಗೆ ಸಂಪರ್ಕ ಕಲ್ಪಿಸುವ ಚಿತ್ರಗಳ ಕುರಿತು ಚರ್ಚೆ

ಮೊದಲ ದಿನ, ಪಾಠವನ್ನು ಪ್ರಾರಂಭಿಸುವ ಮುನ್ನ ಮಕ್ಕಳಿಗೆ ಕಥೆಯನ್ನು ಪರಿಚಯಿಸಲು ನಾನು ಅವರೊಂದಿಗೆ ಚಿತ್ರಗಳ ಕುರಿತು ಚರ್ಚಿಸಿದೆ. ಚಿತ್ರಗಳನ್ನು ತೋರಿಸುತ್ತಾ, "ಇದರಲ್ಲಿ ನಿಮಗೆ ಏನೇನು ಕಾಣಿಸುತ್ತಿದೆ?" ಎಂದು ಕೇಳಿದೆ. ಅದಕ್ಕೆ ಮಕ್ಕಳು, "ಒಂದು ಹಕ್ಕಿ ತನ್ನ ಮೊಟ್ಟೆಗಳ ಮೇಲೆ ಕುಳಿತಿದೆ, ಕೋಳಿ ಕುಳಿತುಕೊಳ್ಳುವಂತೆಯೇ ಇದು ಕೂಡ ಮೊಟ್ಟೆಯೊಡೆದು ಮರಿ ಹೊರಬರಲಿ ಎಂದು ಕಾವು ಕೊಡುತ್ತಿದೆ" ಎಂದರು. ಮುನ್ಮುನ್ ಎಂಬ ಹುಡುಗಿ, "ಹಕ್ಕಿ ಸುತ್ತಲೂ ನೋಡುತ್ತಿದೆ, ಯಾರೂ ತನ್ನ ಮೊಟ್ಟೆಗಳನ್ನು ತೆಗೆದುಕೊಳ್ಳದಂತೆ ಅದು ಜಾಗರೂಕತೆಯಿಂದ ನೋಡಿಕೊಳ್ಳುತ್ತಿದೆ" ಎಂದಳು. ಅದೇ ರೀತಿ, ಎರಡನೇ ಚಿತ್ರಕ್ಕೆ ಸಂಬಂಧಿಸಿದಂತೆ ಮೀನೂ ಪ್ರತಿಕ್ರಿಯಿಸುತ್ತಾ, "ಹಕ್ಕಿ ಏನನ್ನೋ ಹೇಳುತ್ತಿದೆ; ತನ್ನ ಮೊಟ್ಟೆಗಳು ಅಪಾಯದಲ್ಲಿವೆ ಎಂದು ಅದು ಎಚ್ಚರಿಸಲು ಪ್ರಯತ್ನಿಸುತ್ತಿದೆ ಎಂದು ನನಗನಿಸುತ್ತಿದೆ!" ಎಂದಳು. ಇನ್ನು ಮೂರನೇ ಚಿತ್ರದ ಬಗ್ಗೆ ಮಕ್ಕಳು, "ಕೇಶವ್ ಮತ್ತು ಶ್ಯಾಮಾ ಹಕ್ಕಿಯ ಮೊಟ್ಟೆಗಳನ್ನು ನೋಡಲು ಮೇಲೆ ಹತ್ತುತ್ತಿದ್ದಾರೆ, ಅವುಗಳನ್ನು ಮುಟ್ಟುತ್ತಿದ್ದಾರೆ ಮತ್ತು ಮೊಟ್ಟೆಗಳಿರುವ ಜಾಗವನ್ನು ಸ್ವಚ್ಛಗೊಳಿಸುತ್ತಿದ್ದಾರೆ" ಎಂದರು. ಆಗ ರೋಹಿತ್, "ಆದರೆ ಪಕ್ಷಿಗಳ ಮೊಟ್ಟೆಗಳನ್ನು ಮುಟ್ಟಬಾರದು ಎಂದು ನನ್ನ ಅಜ್ಜಿ ಹೇಳುತ್ತಾರೆ" ಎಂದು ತನ್ನ ಅನುಭವ ಹಂಚಿಕೊಂಡನು. ಬಹುತೇಕ ಮಕ್ಕಳು ಇದನ್ನು ಒಪ್ಪಿಕೊಂಡರು. ಅವರು, "ನಾವು ಹಕ್ಕಿಯ ಗೂಡು ಮತ್ತು ಮೊಟ್ಟೆಗಳನ್ನು ನೋಡಿದಾಗ, ಖಂಡಿತವಾಗಿಯೂ ಅವುಗಳನ್ನು ಹತ್ತಿರದಿಂದ ನೋಡಲು ನಮಗೂ ಆಸೆ ಆಗುತ್ತದೆ" ಎಂದರು. ಈ ಸಂಭಾಷಣೆಯ ಉದ್ದಕ್ಕೂ, ಮಕ್ಕಳು ಚಿತ್ರಗಳನ್ನು ತಮ್ಮ ಸುತ್ತಮುತ್ತಲಿನ ಪರಿಸರ ಮತ್ತು ಅನುಭವಗಳೊಂದಿಗೆ ಬೆಸೆದು ನೋಡಲು ಸಾಧ್ಯವಾಯಿತು.

ಇನ್ನೊಂದು ಚಿತ್ರದಲ್ಲಿ ಇಬ್ಬರು ಮಕ್ಕಳು ಮತ್ತು ಅವರ ತಾಯಿ ಇದ್ದಾರೆ. ಇದರ ಬಗ್ಗೆ ಕೇಳಿದಾಗ ಮಕ್ಕಳು, "ಅಣ್ಣ-ತಂಗಿ ಹಕ್ಕಿಯ ಮೊಟ್ಟೆಗಳೊಂದಿಗೆ ತುಂಟಾಟ ಮಾಡಿರಬೇಕು, ಅದಕ್ಕೇ ಅಮ್ಮ ಅವರನ್ನು ಹೊಡೆಯುತ್ತಿದ್ದಾರೆ" ಎಂದು ಪ್ರತಿಕ್ರಿಯಿಸಿದರು. ಆದರೆ ಕೆಲವು ಮಕ್ಕಳು ಇದನ್ನು ಒಪ್ಪಲಿಲ್ಲ. ಆಗ ರೂಪಾಲಿಯು, "ಖಂಡಿತ ಅವರಿಗೆ ಏಟು ಬೀಳುತ್ತಿದೆ; ಅಮ್ಮಂದಿರು ಇಂತಹ ವಿಷಯಗಳನ್ನು ಅಷ್ಟು ಸುಲಭವಾಗಿ ವಿವರಿಸಿ ಹೇಳುವುದಿಲ್ಲ (ಬದಲಿಗೆ ಹೊಡೆಯುತ್ತಾರೆ)" ಎಂದು ತನ್ನದೇ ಆದ ವಿಭಿನ್ನ ದೃಷ್ಟಿಕೋನವನ್ನು ಹಂಚಿಕೊಂಡಳು.



*ಚಿತ್ರ 2: ಪಕ್ಷಿಗಳ ಮರಿಗಳು ಮತ್ತು ಮೊಟ್ಟೆಗಳ ಆರೈಕೆ ಮಾಡಲು ಉತ್ಸುಕರಾಗಿರುವ ಮಕ್ಕಳು.*

*(ಚಿತ್ರಕೃಪೆ: ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕ 'ವಸಂತ್')*

## ಬನ್ನಿ ಈಗ ಕಥೆಯನ್ನು ಓದೋಣ

ಧನಿಯಾ, "ಕಥೆಯನ್ನು ಪೂರ್ತಿ ಓದಿದ ನಂತರವೇ ನಮಗೆ ಅಸಲಿ ವಿಷಯ ತಿಳಿಯುವುದು. ಹಾಗಾಗಿ ಮೊದಲು ಕಥೆಯನ್ನು ಓದೋಣ!" ಎಂದು ಉತ್ಸಾಹದಿಂದ ಹೇಳಿದಳು. ಮಕ್ಕಳು ಕುತೂಹಲದಿಂದ ಕಥೆಯಲ್ಲಿ ಮುಂದೆ ಏನಾಗಬಹುದು ಎಂದು ತಿಳಿಯಲು ಕಾತುರರಾಗಿದ್ದರು. ಪುಸ್ತಕವನ್ನು ಓದಿದ ಕೆಲವು ಮಕ್ಕಳು, "ನೋಡಿ! ನಾನು ಹೇಳಿದ್ದು ಸರಿ. ಮಕ್ಕಳು ಹಕ್ಕಿಯ ಮೊಟ್ಟೆಗಳನ್ನು ಮುಟ್ಟುತ್ತಿದ್ದಾರೆ, ಅಷ್ಟೇ ಅಲ್ಲ ಅವರು ಈ ವಿಷಯವನ್ನು ತಮ್ಮ ತಾಯಿಗೂ ಹೇಳಿಲ್ಲ" ಎಂದರು. ಓದುವ ಕೌಶಲದ ಆರಂಭಿಕ ಹಂತದಲ್ಲಿದ್ದ ಮಕ್ಕಳೊಂದಿಗೆ ನಾನು ಪ್ರತ್ಯೇಕವಾಗಿ ಕುಳಿತು, ಅಕ್ಷರ ಮತ್ತು ಸ್ವರಗಳ ಸಂಯೋಜನೆಯ ಮೂಲಕ ಓದಲು ಮಾರ್ಗದರ್ಶನ ನೀಡಿದೆ. ಈ ಮಕ್ಕಳು ಚಿತ್ರಗಳ ಸಹಾಯದಿಂದ ಕಥೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರಾದರೂ, ಅವರಿಗೆ ಪಠ್ಯವನ್ನು ಓದಲು ಕಷ್ಟವಾಗುತ್ತಿತ್ತು. ಅಂತಹ ಮಕ್ಕಳಿಗೆ ಒಂದು ಪ್ಯಾರಾಗ್ರಾಫ್ ಅನ್ನು ಮತ್ತೆ ಮತ್ತೆ ಓದಲು ಪ್ರೋತ್ಸಾಹಿಸಿದೆ. ಇದರ ಪರಿಣಾಮವಾಗಿ ಅವರು ಅಕ್ಷರಗಳು, ಪದಗಳು ಮತ್ತು ವಾಕ್ಯಗಳ ರಚನೆಯೊಂದಿಗೆ ಪರಿಚಿತರಾದರು ಹಾಗೂ ಚಿತ್ರಗಳ ಆಧಾರದ ಮೇಲೆ ಪದಗಳನ್ನು ಊಹಿಸಿ ಓದಲು ಪ್ರಯತ್ನಿಸಿದರು. ನಾನು ಓದುವಿಕೆಯಲ್ಲಿ ಹಿಂದುಳಿದವರು ಮತ್ತು ವೇಗವಾಗಿ ಓದುವವರನ್ನು ಒಳಗೊಂಡ ಮಿಶ್ರ ಗುಂಪುಗಳನ್ನು ರಚಿಸಿದೆ. ಇವರೆಲ್ಲರೂ ಒಟ್ಟಾಗಿ ಓದುವುದರಿಂದ ಮಕ್ಕಳಿಗೆ ಪದಗಳನ್ನು ಗುರುತಿಸಿ ಓದಲು ಸಹಾಯವಾಯಿತು. ಉತ್ತಮವಾಗಿ ಓದಲು ಮತ್ತು ಬರೆಯಲು ಸಾಧ್ಯವಿದ್ದ ಮಕ್ಕಳು ಕಥೆಯನ್ನು ಬಹಳ ಆಸಕ್ತಿಯಿಂದ ಓದಿದರು.

## ಹೊಸ ಪದಗಳು ಮತ್ತು ನುಡಿಗಟ್ಟುಗಳ ಅರ್ಥೈಸುವಿಕೆ

ಮರುದಿನ, ನಾನು ಕಥೆಯ ಕೆಲವು ಆಯ್ದ ಭಾಗಗಳನ್ನು ಮಕ್ಕಳಿಗೆ ಓದಿ ಹೇಳಿದೆ. ಕಥೆಯಲ್ಲಿನ ಹೊಸ, ಕಠಿಣ ಪದಗಳು ಮತ್ತು ನುಡಿಗಟ್ಟುಗಳ ಅರ್ಥಗಳನ್ನು ವಿವರಿಸುವುದಕ್ಕೆ ನಾನು ಹೆಚ್ಚಿನ ಒತ್ತು ನೀಡಿದೆ. ಉದಾಹರಣೆಗೆ, "ನೋವಿನ ದನಿ" ಎಂದರೆ ಏನು ಎಂದು ಕೇಳಿದಾಗ, ಮುನ್ಮುನ್ ಮಾತ್ರ "ಬೇಸರ ಅಥವಾ ದುಃಖದ ಧಾಟಿಯಲ್ಲಿ ಮಾತನಾಡುವುದು" ಎಂದು ಸರಿಯಾಗಿ ಉತ್ತರಿಸಿದಳು. "ಮುಖ ವಿವರ್ಣವಾಗುವುದು ಅಥವಾ ಮುಖ ಬಿಳಿಚಿಕೊಳ್ಳುವುದು" ಎಂಬ ಪದಬಂಧಕ್ಕೆ ಸುರೇಂದ್ರನು, "ಭಯಪಡುವುದು ಅಥವಾ ವಿಷಾದಿಸುವುದು" ಎಂದು ಪ್ರತಿಕ್ರಿಯಿಸಿದನು. ಹೆಚ್ಚಿನ ಮಕ್ಕಳು ಉತ್ತರ ನೀಡಲು ತಡಕಾಡಿದ್ದನ್ನು ಕಂಡು, ಆ ಪದಗಳು ಅವರಿಗೆ ಸ್ವಲ್ಪ ಸಂಕೀರ್ಣವಾಗಿರಬಹುದು ಎಂದು ನನಗೆ ಅರಿವಾಯಿತು. ನಂತರ ನಾನು "ಒದ್ದೆಯಾದ ಬೆಕ್ಕು" (ಭಯದಿಂದ ನಡುಗುವ ಅಥವಾ ಮುಗ್ಧವಾಗಿರುವ ಸ್ಥಿತಿ) ಎಂಬ ನುಡಿಗಟ್ಟನ್ನು ಪರಿಚಯಿಸಿದೆ. ತರಗತಿಯ ಅರ್ಧಕ್ಕಿಂತ ಹೆಚ್ಚು ಮಕ್ಕಳು ಇದಕ್ಕೆ "ಸರಳವಾಗಿರುವುದು ಅಥವಾ ಪೂರ್ತಿ ಮುಗ್ಧವಾಗಿರುವುದು" ಎಂದು ಪ್ರತಿಕ್ರಿಯಿಸಿದರು. ಇವರೊಂದಿಗಿನ ಸಂಭಾಷಣೆಯಿಂದ ಹೆಚ್ಚಿನ ಮಕ್ಕಳಿಗೆ ನುಡಿಗಟ್ಟುಗಳ ಬಳಕೆ ಇನ್ನೂ ಸರಿಯಾಗಿ ಪರಿಚಯವಿಲ್ಲ ಎಂಬುದು ನನಗೆ ತಿಳಿಯಿತು. ನಂತರ ನಾನು ಕಪ್ಪುಹಲಗೆಯ

ಮೇಲೆ "ನೋ ದೋ ಗ್ಯಾರ ಹೋ ಜಾನಾ", "ಈದ್ ಕಾ ಚಾಂದ್ ಹೋನಾ" (ಅಪರೂಪವಾಗುವುದು), "ಆಂಖೋ ಕಾ ತಾರಾ" (ಅಚ್ಚುಮೆಚ್ಚಿನವನು) ಮುಂತಾದ ಕೆಲವು ನುಡಿಗಟ್ಟುಗಳನ್ನು ಬರೆದೆ. ಒಂದು ಮಗು ತಕ್ಷಣವೇ ತನಗೆ ತಿಳಿದಿದ್ದ "ನಾಕ್ ಮೇ ದಮ್ ಕರ್ನಾ", "ಈಂಟ್ ಕಾ ಜವಾಬ್ ಪತ್ತರ್ ಸೇ ದೇನಾ" ಮುಂತಾದ ನುಡಿಗಟ್ಟುಗಳನ್ನು ಹೇಳಿತು. ಆ ಮಗುವಿನ ಪ್ರತಿಕ್ರಿಯೆಯು, ಈ ನುಡಿಗಟ್ಟುಗಳನ್ನು ಅವನು ತನ್ನ ದೈನಂದಿನ ಸಂಭಾಷಣೆಯಲ್ಲಿ ಅಥವಾ ಇತರರು ಮಾತನಾಡುವಾಗ ಕೇಳಿದ ವಿಷಯಗಳಿಗೆ ಜೋಡಿಸಿಕೊಳ್ಳುತ್ತಿದ್ದಾನೆ ಎಂಬುದನ್ನು ತೋರಿಸುತ್ತಿತ್ತು. ಅದರ ಬಗ್ಗೆ ಕೇಳಿದಾಗ, "ನಾನು ನನ್ನ ತಾಯಿಯನ್ನು ಕೀಟಲೆ ಮಾಡುವಾಗ ಅವರು 'ನಾಕ್ ಮೇ ದಮ್ ಕರ್ ರಖಾ ಹೈ' (ಪ್ರಾಣ ಹಿಂಡುತ್ತಿದ್ದೀಯಾ) ಎಂದು ಹೇಳುತ್ತಾರೆ" ಎಂದನು. ಅವನ ಈ ಮಾತುಗಳನ್ನು ಇಡೀ ತರಗತಿ ಆನಂದಿಸಿತು.

ಈ ರೀತಿಯ ವಿಶಿಷ್ಟ ಪದಪುಂಜಗಳನ್ನು 'ನುಡಿಗಟ್ಟುಗಳು' ಎಂದು ಕರೆಯಲಾಗುತ್ತದೆ ಎಂದು ನಾನು ಮಕ್ಕಳಿಗೆ ವಿವರಿಸಿದೆ. ಇವುಗಳು ಬಹಳ ಕಡಿಮೆ ಪದಗಳಲ್ಲಿ ನಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸಲು ಸಹಾಯ ಮಾಡುತ್ತವೆ. ಇದಾದ ನಂತರ, ಪ್ರತಿ ಮಗುವೂ ತನಗೆ ತಿಳಿದಿರುವ ನುಡಿಗಟ್ಟುಗಳನ್ನು ಬಳಸಿ ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸಲು ಉತ್ಸಾಹದಿಂದ ಪ್ರಯತ್ನಿಸಿತು.

## ಕಥೆ ಮತ್ತು ಅದರ ಘಟನೆಗಳ ಕಾಲಾನುಕ್ರಮ

ಮುಂದೆ ಕಥೆಯ ಘಟನೆಗಳ ಕುರಿತು ಚರ್ಚೆ ನಡೆಯಿತು. ಕೇಶವ ಮತ್ತು ಶ್ಯಾಮನ ಮನೆಯ ಸಜ್ಜದ ಮೇಲೆ ಹಕ್ಕಿಯೊಂದು ಮೊಟ್ಟೆಗಳನ್ನು ಇಟ್ಟಿದೆ ಎಂಬ ವಿಷಯವನ್ನು ಮಕ್ಕಳು ವಿವರಿಸಿದರು. ಮಕ್ಕಳಿಗೆ ಆ ಮೊಟ್ಟೆಗಳನ್ನು ಮುಟ್ಟುವ ಹಂಬಲವಿತ್ತು. ಅವರು ಹಕ್ಕಿಗಳಿಗೆ ಸಹಾಯ ಮಾಡುವ ನೆಪದಲ್ಲಿ ಮೊಟ್ಟೆಗಳ ಬಳಿ ವಸ್ತುಗಳನ್ನು ತಂದಿಡಲು ಪ್ರಾರಂಭಿಸಿದರು, ಆದರೆ ಕೊನೆಯಲ್ಲಿ ಮೊಟ್ಟೆಗಳು ಒಡೆದುಹೋದವು. ಶ್ಯಾಮ್ ಎಂಬ ವಿದ್ಯಾರ್ಥಿಯು ಘಟನೆಗಳನ್ನು ಕಾಲಾನುಕ್ರಮದಲ್ಲಿ ಹೀಗೆ ವಿವರಿಸಿದನು: "ಕೇಶವ ಮತ್ತು ಶ್ಯಾಮಾಳ ಮನೆಯಲ್ಲಿ ಒಂದು ಹಕ್ಕಿ ಮೊಟ್ಟೆಗಳನ್ನು ಇಟ್ಟಿತು. ಹಕ್ಕಿಯು ಆಹಾರಕ್ಕಾಗಿ ಹೊರಗೆ ಹೋಗಿ ಕಷ್ಟಪಡಬಾರದು ಎಂದು ಮಕ್ಕಳು ಮೊಟ್ಟೆಗಳ ಬಳಿಯೇ ಅಕ್ಕಿ ಮತ್ತು ನೀರನ್ನು ಇಟ್ಟರು. ಆದರೆ ಪಕ್ಷಿಗಳು ತಮ್ಮ ಸಹಜ ಪ್ರವೃತ್ತಿಯಂತೆಯೇ ಬದುಕುತ್ತವೆ. ಅತಿಯಾದ ಕುತೂಹಲದಿಂದ ಕೇಶವ ಮತ್ತು ಶ್ಯಾಮಾ ತಾಯಿಗೆ ತಿಳಿಸದೆಯೇ ರಹಸ್ಯವಾಗಿ ಮೊಟ್ಟೆಗಳನ್ನು ಮುಟ್ಟಿದರು. ಮನುಷ್ಯರ ಸ್ಪರ್ಶವಾದ ಕಾರಣ ಹಕ್ಕಿಗೆ ಅದು ಇಷ್ಟವಾಗಲಿಲ್ಲ. ಪರಿಣಾಮವಾಗಿ ಮೊಟ್ಟೆಗಳು ಒಡೆದುಹೋದವು. ಕೇಶವ ಮತ್ತು ಶ್ಯಾಮಾರಿಂದ ದೊಡ್ಡ ಅಚಾತುರ್ಯ ನಡೆದುಹೋಯಿತು. ಇದರಿಂದ ಅವರಿಗೆ ತೀವ್ರ ದುಃಖವಾಗಿ ಪಶ್ಚಾತ್ತಾಪಪಟ್ಟರು."

## ಕಥೆಯ ಹಿನ್ನೆಲೆ ಮತ್ತು ಕಾಲಮಾನ

ಈಗ ನಾನು ಮಕ್ಕಳಿಗೆ ಒಂದು ಪ್ರಶ್ನೆ ಕೇಳಿದೆ: "ಈ ಕಥೆಯನ್ನು ಯಾವ ಕಾಲಮಾನದಲ್ಲಿ ಬರೆಯಲಾಗಿದೆ? ಇದು ಯಾವ ರೀತಿಯ ಪರಿಸರದಲ್ಲಿ ನಡೆಯಿತು? ಮತ್ತು ಆಗಿನ ಜೀವನ ಹೇಗಿರುತ್ತಿತ್ತು?" ಆಗ ಒಬ್ಬ ವಿದ್ಯಾರ್ಥಿ, "ಇದು ನಮ್ಮ ಹಳ್ಳಿಯ ಹಳೆಯ ದಿನಗಳ ಕಥೆಯಂತಿದೆ" ಎಂದನು. ರಾಜು ಪ್ರತಿಕ್ರಿಯಿಸುತ್ತಾ, "ಇದು ಮನೆಗಳನ್ನು ಹೆಂಚು ಮತ್ತು ಇಟ್ಟಿಗೆಗಳಿಂದ ನಿರ್ಮಿಸುತ್ತಿದ್ದ ಕಾಲದ ಕಥೆ; ಏಕೆಂದರೆ ಪಕ್ಷಿಗಳು ಇಂತಹ ಹೆಂಚಿನ ಮನೆಗಳಲ್ಲಿ ಮತ್ತು ಗುಡಿಸಲುಗಳಲ್ಲಿ ಹೆಚ್ಚಾಗಿ ಗೂಡು ಕಟ್ಟುತ್ತವೆ" ಎಂದು ವಿಶ್ಲೇಷಿಸಿದನು. ಮೀನೂ ವಿಭಿನ್ನವಾಗಿ ಆಲೋಚಿಸಿ, "ಇದು ನಮ್ಮ ಅಜ್ಜ-ಅಜ್ಜಿಯರ ಕಾಲದ್ದಾಗಿರಬಹುದು, ಏಕೆಂದರೆ ಆಗ ಈಗಿಗಿಂತ ಹೆಚ್ಚು ಮರಗಳು ಮತ್ತು ಹೊಲಗದ್ದೆಗಳು ಇದ್ದವು" ಎಂದಳು. ಹೀಗೆ ಮಕ್ಕಳು ಈ ಪ್ರಶ್ನೆಯ ಬಗ್ಗೆ ಗಂಭೀರವಾಗಿ ಯೋಚಿಸಿ ಉತ್ತರಿಸಿದರು. ಧಾನಿಯಾ ಬೇಸರದಿಂದ, "ಈಗಿನ ದಿನಗಳಲ್ಲಿ ಪಕ್ಷಿಗಳು ಯಾವಾಗ ಅಥವಾ ಎಲ್ಲಿ ಗೂಡು ಕಟ್ಟುತ್ತವೆ ಎಂಬುದು ನಮಗೆ ತಿಳಿಯುವುದೇ ಇಲ್ಲ" ಎಂದು ಇಂದಿನ ಪರಿಸ್ಥಿತಿಯನ್ನು ವಿವರಿಸಿದಳು.

## ಹೊಸ ಕಥೆಯ ಸಾಧ್ಯತೆ

ಕೇಶವ ಮತ್ತು ಶ್ಯಾಮಾ ಒಡೆದ ಮೊಟ್ಟೆಗಳ ಬಗ್ಗೆ ಪರಸ್ಪರ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ತಮ್ಮನ್ನು ತಾವು ಹೇಗೆ ಸಮಾಧಾನ ಪಡಿಸಿಕೊಳ್ಳುತ್ತಿರಬಹುದು ಎಂದು ನಾನು ತರಗತಿಯಲ್ಲಿ ಕೇಳಿದಾಗ, ಮಕ್ಕಳು ಕೆಲವು ಆಸಕ್ತಿದಾಯಕ ಉತ್ತರಗಳನ್ನು ನೀಡಿದರು.

ಮುನ್ಮುನ್ ಹೇಳಿದಳು, "ಆ ಮಕ್ಕಳಿಗೆ ಬೇರೆ ಸ್ನೇಹಿತರೇ ಇರಲಿಲ್ಲ ಎಂದು ತೋರುತ್ತದೆ. ಒಂದು ವೇಳೆ ಇದ್ದಿದ್ದರೆ, ಅವರ ಹೆಸರುಗಳು ಖಂಡಿತವಾಗಿಯೂ ಕಥೆಯಲ್ಲಿ ಇರುತ್ತಿದ್ದವು. ಮೊಟ್ಟೆಗಳ ವಿಷಯವನ್ನು ಅವರು ತಮ್ಮ ಸ್ನೇಹಿತರೊಂದಿಗೆ ಚರ್ಚಿಸಿದ್ದರೆ, ಬಹುಶಃ ಮೊಟ್ಟೆಗಳನ್ನು ಉಳಿಸಬಹುದಿತ್ತೇನೋ! ಏಕೆಂದರೆ ಸಂಕಷ್ಟದ ಸಮಯದಲ್ಲಿ ಸ್ನೇಹಿತರು ಉತ್ತಮ ಸಲಹೆಗಳನ್ನು ನೀಡುತ್ತಾರೆ ಮತ್ತು ಅವರಿಂದ ತುಂಬಾ ಸಹಾಯವಾಗುತ್ತದೆ." ಮುನ್ಮುನ್ ನೀಡಿದ ಈ ಉತ್ತರವು ಕಥೆಗೆ ಒಂದು ಹೊಸ ತಿರುವು ನೀಡಿತು. ನಾನು ಅವಳಿಗೆ, "ಕೇಶವ ಮತ್ತು ಶ್ಯಾಮಾಗೆ ಒಬ್ಬ ಸ್ನೇಹಿತನಿದ್ದಿದ್ದರೆ ಈ ಕಥೆ ಹೇಗೆ ಬದಲಾಗುತ್ತಿತ್ತು ಎಂದು ನೀನೇ ಊಹಿಸು!" ಎಂದು ಹೇಳಿದೆ. ಅದಕ್ಕೆ ಅವಳು ಉತ್ಸಾಹದಿಂದ, "ಹೌದು ಮೇಡಂ, ನಾನು ಅದರ ಬಗ್ಗೆ ಯೋಚಿಸಿ ಒಂದು ಹೊಸ ಕಥೆಯನ್ನೇ ರಚಿಸುತ್ತೇನೆ!" ಎಂದಳು.

## ಕಥೆಯಲ್ಲಿನ ಪಾತ್ರಗಳು

"ಕಥೆಯನ್ನು ಓದಿದ ನಂತರ ನಿಮಗೆ ಕೇಶವ ಮತ್ತು ಶ್ಯಾಮಾ ಬಗ್ಗೆ ಏನೆನ್ನಿಸಿತು?" ಎಂದು ಕೇಳಿದಾಗ, ಅನೇಕ ಮಕ್ಕಳು "ಆ ಅಣ್ಣ-ತಂಗಿ ತಮ್ಮ ತಪ್ಪನ್ನು ಅರಿತುಕೊಂಡಿದ್ದಾರೆ" ಎಂದು ಉತ್ತರಿಸಿದರು. "ಅವರು ತುಂಬಾ ಒಳ್ಳೆಯ ಮಕ್ಕಳು, ಮೊಟ್ಟೆಗಳಿಂದ ಮರಿಗಳು ಹೊರಬರುವುದನ್ನು ನೋಡುವ ಆಸೆ ಅವರಿಗಿತ್ತು. ಅವರು ಹಕ್ಕಿಗೆ ಸಹಾಯ ಮಾಡಲು ಹೋದರಾದರೂ, ಅಚಾತುರ್ಯದಿಂದ ಮೊಟ್ಟೆಗಳು ಒಡೆದುಹೋದವು. ಇದರಿಂದ ಅವರಿಗೆ ತುಂಬಾ ದುಃಖವಾಯಿತು" ಎಂದು ಮಕ್ಕಳು ಪಾತ್ರಗಳ ಬಗ್ಗೆ ಮರುಗಿದರು.

## ನಿಮಗೆ ಏನು ಇಷ್ಟವಾಯಿತು ಮತ್ತು ಏನು ಇಷ್ಟವಾಗಲಿಲ್ಲ?

"ಕಥೆಯಲ್ಲಿ ನಿಮಗೆ ಯಾವ ಭಾಗ ಹೆಚ್ಚು ಇಷ್ಟವಾಯಿತು?" ಎಂಬ ಪ್ರಶ್ನೆಗೆ, "ನನಗೆ ಇಡೀ ಕಥೆ ನಿಜವಾಗಿಯೂ ಇಷ್ಟವಾಯಿತು" ಎಂಬ ಉತ್ತರ ಬಂತು. ಸುರೇಂದ್ರ ಉತ್ತರಿಸುತ್ತಾ, "ಮೊಟ್ಟೆ ಒಡೆದ ನಂತರ ಅಮ್ಮ ಇಬ್ಬರನ್ನೂ ಗದರಿಸಲು ಪ್ರಾರಂಭಿಸಿದರು. ಆ ಸಮಯದಲ್ಲಿ ಶ್ಯಾಮಾ ತಾಯಿಯ ಪರವಾಗಿ ಮಾತನಾಡಿದ್ದು ನನಗೆ ಇಷ್ಟವಾಯಿತು" ಎಂದನು. ಕಥೆಯನ್ನು ಓದುತ್ತಿರುವಾಗ, ಕೇಶವನು ಶ್ಯಾಮಾಳನ್ನು "ನಿನ್ನ ತಲೆಯ ಮೇಲೆ" (ತಮಾಷೆಯಾಗಿ ಅಥವಾ ಕೋಪದಿಂದ) ಎಂದು ಗದರಿಸುವ ಸಾಲನ್ನು ತರಗತಿಯ ಎಲ್ಲಾ ಮಕ್ಕಳು ಓದಿ ಆನಂದಿಸಿದರು.

ರೋಹಿತ್ ತನ್ನ ಅಭಿಪ್ರಾಯ ಹಂಚಿಕೊಳ್ಳುತ್ತಾ, "ಶ್ಯಾಮಾ ತಾನು ಮಾಡಿದ ತಪ್ಪನ್ನು ಮರೆತು ಕೇಶವನ ಮೇಲೆ ಎಲ್ಲಾ ಆರೋಪ ಹೊರಿಸಿದಾಗ, ಅವಳ ಮುಗ್ಧತೆ ನಮಗೆ ಅರ್ಥವಾಗುತ್ತದೆ," ಎಂದನು. ರಾಜು ಪ್ರತಿಕ್ರಿಯಿಸುತ್ತಾ, "ಮಕ್ಕಳಿಬ್ಬರೂ ಮರಿ ಹಕ್ಕಿಗಳನ್ನು ಕಲ್ಪಿಸಿಕೊಂಡು ಸಂತೋಷಪಟ್ಟ ಕ್ಷಣ ನನಗೆ ತುಂಬಾ ಇಷ್ಟವಾಯಿತು. ಶ್ಯಾಮಾ ಕುತೂಹಲದಿಂದ, 'ಅಣ್ಣ, ಮರಿಗಳು ಹೇಗಿವೆ? ಅವು ಏನು ತಿನ್ನುತ್ತವೆ? ಅವು ಹೇಗೆ ಕಾಣುತ್ತವೆ?' ಎಂದು ಕೇಶವನನ್ನು ಪದೇ ಪದೇ ಕೇಳುತ್ತಿದ್ದ ರೀತಿ ಚೆನ್ನಾಗಿತ್ತು," ಎಂದು ಹೇಳಿದನು.

ಮಕ್ಕಳಿಗೆ ಕಥೆಯಲ್ಲಿ ಹಲವು ವಿಷಯಗಳು ಇಷ್ಟವಾಗಿದ್ದವು. ಈ ಹಂತದಲ್ಲಿ, "ಕಥೆಯಲ್ಲಿ ನಿಮಗೆ ಇಷ್ಟವಾಗದ ಅಂಶ ಯಾವುದು?" ಎಂದು ಕೇಳುವುದು ಬಹಳ ಮುಖ್ಯವಾಗಿತ್ತು. ಇದು ಅವರು ಕಥೆಯನ್ನು ಮೀರಿದ ಸಾಧ್ಯತೆಗಳನ್ನು ಊಹಿಸಲು ಮತ್ತು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯ ಮಾಡಿತು. ಪ್ರತಿಮಾ ಉತ್ತರಿಸುತ್ತಾ, "ಮೊಟ್ಟೆಗಳು ಕೆಳಗೆ ಬಿದ್ದು ಒಡೆದುಹೋದದ್ದು ನನಗೆ ಸ್ವಲ್ಪವೂ ಇಷ್ಟವಾಗಲಿಲ್ಲ," ಎಂದಳು. ತರಗತಿಯ ಅನೇಕ ಮಕ್ಕಳು ಇದನ್ನು ಒಪ್ಪಿದರು.

## ಒಂದು ವಿಭಿನ್ನ ದೃಷ್ಟಿಕೋನ

ಕಿಶನ್‌ನ ಮಾತುಗಳು ಇಡೀ ಕಥೆಯನ್ನೇ ಒಂದು ಹೊಸ ದೃಷ್ಟಿಕೋನದಿಂದ ನೋಡುವಂತೆ ಮಾಡಿದವು. ಅವನು ಹೇಳಿದನು, "ಆ ಹಕ್ಕಿ ಮೊಟ್ಟೆಗಳನ್ನು ಕೆಳಗೆ ಬೀಳಿಸಬಾರದಿತ್ತು. ಹಕ್ಕಿಯ ಮರಿಗಳು ಅದಕ್ಕೆ ಮಕ್ಕಳೋ ಹಾಗೆಯೇ ಕೇಶವ ಮತ್ತು ಶ್ಯಾಮಾ ಕೂಡ ಯಾರೋ ಒಬ್ಬರ ಮಕ್ಕಳು ಎಂಬುವುದನ್ನು ಅದು ಅರ್ಥಮಾಡಿಕೊಳ್ಳಬೇಕಿತ್ತು. ಹಕ್ಕಿಯು ಮಕ್ಕಳ ಸ್ಪರ್ಶದಿಂದ ಕೋಪಗೊಂಡು ತನ್ನ ಮೊಟ್ಟೆಗಳನ್ನು ತಾನೇ ಬೀಳಿಸಿತು! ಇದರಿಂದಾಗಿ ಆ ಮಕ್ಕಳಿಬ್ಬರೂ ಅಮ್ಮನಿಂದ ಬೈಸಿಕೊಳ್ಳಬೇಕಾಯಿತು ಮತ್ತು ಕೇಶವನಿಗೆ ಆ ರಾತ್ರಿ ಪಶ್ಚಾತ್ತಾಪದಿಂದ ನಿದ್ರೆಯೇ ಬರಲಿಲ್ಲ." ಈ ವಿಭಿನ್ನವಾದ ಉತ್ತರವು ತರಗತಿಯಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತು. "ಇದು ಹೇಗೆ ಸಾಧ್ಯ? ಒಂದು ಹಕ್ಕಿ ಮನುಷ್ಯರಂತೆ ಯೋಚಿಸಲು ಸಾಧ್ಯವಿಲ್ಲ! ಅದು ಕೇವಲ ತನ್ನ ಗೂಡು ಮತ್ತು ಮರಿಗಳ ಬಗ್ಗೆ ಮಾತ್ರ ಯೋಚಿಸುತ್ತದೆ; ಅದಕ್ಕೆ ಮನುಷ್ಯರಷ್ಟು ಬುದ್ಧಿವಂತಿಕೆ ಇರುವುದಿಲ್ಲ" ಎಂದು ಕೆಲವರು ವಾದಿಸಿದರು. ಆಗ ಮುನ್ಮುನ್ ಮಧ್ಯಪ್ರವೇಶಿಸಿ, "ಮೂರ್ಖರೇ! ಅವುಗಳಿಗೆ ನಮಗಿಂತ ಹೆಚ್ಚಿನ ಬುದ್ಧಿವಂತಿಕೆ ಇರುತ್ತದೆ. ಒಂದು ವೇಳೆ ಹಕ್ಕಿ ಹಾಗೆ ಯೋಚಿಸಿದ್ದರೆ, ಅದು ನಮಗೆ ಹೇಗೆ ತಾನೇ ತಿಳಿಯಲು ಸಾಧ್ಯ?" ಎಂದು ಮರುಪ್ರಶ್ನಿಸಿದಳು.

## ಲೇಖಕರ ಪರಿಚಯ

ಚರ್ಚೆಯ ನಂತರ, ಮಕ್ಕಳಿಗೆ ಕಥೆಯ ಲೇಖಕರನ್ನು ಪರಿಚಯಿಸುವ ಸಮಯ ಬಂದಿತು. "ಇಷ್ಟು ಸುಂದರವಾದ ಕಥೆಯನ್ನು ಯಾರು ಬರೆದಿರಬಹುದು?" ಎಂದು ನಾನು ಕೇಳಿದೆ. ಮಕ್ಕಳಿಗೆ ಅದರ ಬಗ್ಗೆ ತಿಳಿದಿರಲಿಲ್ಲ. ನಾನು ನನ್ನ ಮೊಬೈಲ್‌ನಲ್ಲಿ ಮುನ್ಶಿ ಪ್ರೇಮ್‌ಚಂದ್ ಅವರ ಚಿತ್ರವನ್ನು ತೋರಿಸಿ, "ಇವರೇ ಈ ಕಥೆಯ ಲೇಖಕರು. ನೀವು ಪ್ರೇಮ್‌ಚಂದ್ ಅವರು ಬರೆದ ಬೇರೆ ಯಾವುದಾದರೂ ಕಥೆಗಳನ್ನು ಓದಿದ್ದೀರಾ?" ಎಂದು ವಿಚಾರಿಸಿದೆ. ಮಕ್ಕಳಿಗೆ ನೆನಪಾಗದಿದ್ದಾಗ, ನಾನು ಅವರಿಗೆ 5ನೇ ತರಗತಿಯಲ್ಲಿದ್ದ "ಈದ್ಗಾ" ಪಾಠವನ್ನು ನೆನಪಿಸಿದೆ. ಅದನ್ನು ಕೇಳಿ ಎಲ್ಲಾ ಮಕ್ಕಳು ಸಂತೋಷಪಟ್ಟರು. ಲೇಖಕರು ಬರೆದ ಇತರ ಪುಸ್ತಕಗಳನ್ನು ಓದಲು ಮಕ್ಕಳಿಗೆ ಪ್ರೇರಣೆ ಸಿಗುವಂತೆ ಅವರನ್ನು ಪರಿಚಯಿಸುವುದು ಬಹಳ ಮುಖ್ಯವಾಗಿತ್ತು. ಈ ನಿಟ್ಟಿನಲ್ಲಿ ನಮ್ಮ ಶಾಲಾ ಗ್ರಂಥಾಲಯದ ಮೂಲಕ ಮಕ್ಕಳಿಗೆ ಹೆಚ್ಚಿನ ಕಥೆಗಳನ್ನು ತಲುಪಿಸಲು ನಾನು ಖಂಡಿತವಾಗಿಯೂ ಪ್ರಯತ್ನಿಸುತ್ತೇನೆ.

## ಶಿಕ್ಷಕರು ಕಂಡುಕೊಂಡ ಅಂಶಗಳು

ಈ ಪಾಠದ ಬೋಧನೆಯು ನನ್ನನ್ನು ನಾನೇ ಮೌಲ್ಯಮಾಪನ ಮಾಡಿಕೊಳ್ಳಲು ಒಂದು ಉತ್ತಮ ಅವಕಾಶ ನೀಡಿತು. ನಾನು ನಿಗದಿಪಡಿಸಿದ್ದ ಗುರಿಗಳನ್ನು ಎಷ್ಟರ ಮಟ್ಟಿಗೆ ಸಾಧಿಸಿದ್ದೇನೆ, ಬೋಧನೆಯಲ್ಲಿ ನಾನು ಯಾವ ಅಂಶಗಳನ್ನು ತಪ್ಪಿಸಿದೆ ಹಾಗೂ ನಾನು ಎದುರಿಸಿದ ಸವಾಲುಗಳೇನು ಎಂಬುದನ್ನು ವಿಶ್ಲೇಷಿಸಲು ಇದು ಸಹಕಾರಿಯಾಯಿತು. ಮುಖ್ಯವಾಗಿ, ಓದುವ ಕೌಶಲದ ಆರಂಭಿಕ ಹಂತದಲ್ಲಿರುವ ಹೆಚ್ಚಿನ ಮಕ್ಕಳು ತರಗತಿಯ ಸಂಭಾಷಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಿಂಜರಿಯುತ್ತಿರುವುದನ್ನು ನಾನು ಗಮನಿಸಿದೆ. ಒಬ್ಬ ಹುಡುಗಿ, "ಈ ಕಥೆ ತುಂಬಾ ದೊಡ್ಡದಿದೆ, ನನಗೆ



*ಚಿತ್ರ 3: ಘಟನೆಯ ಬಗ್ಗೆ ತಮ್ಮ ತಾಯಿಗೆ ಹೇಳುತ್ತಿರುವ ಮಕ್ಕಳು.*
*(ಚಿತ್ರಕೃಪೆ: ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕ 'ವಸಂತ್')*

ಇದು ಅರ್ಥವಾಗುತ್ತಿಲ್ಲ" ಎಂದು ತನ್ನ ಅಳಲನ್ನು ತೋಡಿಕೊಂಡಳು. ಇವಳಂತೆ ಕಥೆಯನ್ನು ಗ್ರಹಿಸಲು ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕಷ್ಟಪಡುವ ಇತರ ಮಕ್ಕಳೂ ತರಗತಿಯಲ್ಲಿದ್ದಾರೆ ಎಂಬುದು ನನಗೆ ಅರಿವಾಯಿತು. ಈ ಸಮಸ್ಯೆಯನ್ನು ಪರಿಹರಿಸಲು, ನಾನು ಅಂತಹ ಮಕ್ಕಳೊಂದಿಗೆ 'ಬರ್ಖಾ' ಸಾಹಿತ್ಯ ಸರಣಿ ಮತ್ತು ಇತರ ಸರಳ ಮಕ್ಕಳ ಸಾಹಿತ್ಯವನ್ನು ಬಳಸಿಕೊಂಡು ಕೆಲಸ ಮಾಡಬೇಕಾದ ಅಗತ್ಯವಿದೆ ಎಂದು ನಿರ್ಧರಿಸಿದೆ.

ಬೋಧನಾ ಯೋಜನೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವುದರಿಂದ, ಮಕ್ಕಳು ಕಥೆಯ ಘಟನೆಗಳು ಮತ್ತು ಪಾತ್ರಗಳೊಂದಿಗೆ ಭಾವನಾತ್ಮಕವಾಗಿ ಬೆಸೆಯಲು ಸಾಧ್ಯವಾಯಿತು ಎಂಬುದು ನನ್ನ ಗಮನಕ್ಕೆ ಬಂದಿತು. ಅವರ ಪ್ರತಿಕ್ರಿಯೆಗಳಲ್ಲಿ ಈ ಬಾಂಧವ್ಯವು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಪ್ರತಿಯೊಂದು ಸನ್ನಿವೇಶ ಮತ್ತು ಪಾತ್ರದ ಕುರಿತು ಅವರಲ್ಲಿ ಸ್ವತಂತ್ರ ಆಲೋಚನೆಗಳು ರೂಪುಗೊಂಡವು. ಪ್ರತಿ ಮಗುವೂ ತನ್ನದೇ ಆದ ತರ್ಕವನ್ನು ಮಂಡಿಸಿ, ವಿಷಯಗಳ ಬಗ್ಗೆ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯ ಎರಡನ್ನೂ ಮುಕ್ತವಾಗಿ ವ್ಯಕ್ತಪಡಿಸಿತು. ಇದು ಅವರ ಕಲ್ಪನಾ ಶಕ್ತಿಯನ್ನು ಹೆಚ್ಚಿಸಲು ಮತ್ತು ತಮ್ಮ ಅನಿಸಿಕೆಗಳನ್ನು ವಿಶ್ವಾಸದಿಂದ ಹಂಚಿಕೊಳ್ಳಲು ಉತ್ತಮ ಅವಕಾಶ ನೀಡಿತು. ಕೆಲವೊಮ್ಮೆ ಮಕ್ಕಳ ಪ್ರತಿಕ್ರಿಯೆಗಳು ನನಗೆ ಆಶ್ಚರ್ಯವನ್ನು ಉಂಟುಮಾಡಿದವು; ಅವರು ಇತರ ಸಾಹಿತ್ಯಿಕ ಕೃತಿಗಳ ಬಗ್ಗೆಯೂ ಕುತೂಹಲ ತೋರಿದರು. ಈ ರೀತಿಯ ಬೋಧನಾ ಕ್ರಮವು ಮಕ್ಕಳೊಂದಿಗೆ ಒಂದು ವಿಶಿಷ್ಟ ಮತ್ತು ಆಪ್ತವಾದ ಬಾಂಧವ್ಯವನ್ನು ಬೆಸೆಯುವ ಅನುಭವ ನೀಡಿತು.




**ಆರತಿ ಪಾಂಡೆ** ಅವರು ಉತ್ತರಾಖಂಡದ ಉಧಮ್ ಸಿಂಗ್ ನಗರ ಜಿಲ್ಲೆಯ ರುದ್ರಪುರದ ರಾಮನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಾಯಕ ಶಿಕ್ಷಕಿಯಾಗಿದ್ದಾರೆ. ಚಿತ್ರಕಲೆ ಮತ್ತು ಕವನ ರಚನೆ ಇವರ ನೆಚ್ಚಿನ ಹವ್ಯಾಸಗಳು. ಪುಸ್ತಕಗಳನ್ನು ಓದುವುದು ಮತ್ತು ಮಕ್ಕಳೊಂದಿಗೆ ಬೆರೆಯುವ ಮೂಲಕ ನವೀನ ಮಾದರಿಯ ಕಲಿಕಾ ಪ್ರಯೋಗಗಳನ್ನು ಮಾಡುವುದರಲ್ಲಿ ಇವರು ವಿಶೇಷ ಆಸಕ್ತಿ ಹೊಂದಿದ್ದಾರೆ.

**ಸಂಪರ್ಕ:** articsc83@gmail.com


ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆಶಾ ಮಹೇಶ್ವರ ಸಿಂಗ್

# ಕಥೆಗಳು ಸಾಮಾಜಿಕ ವಾಸ್ತವಗಳನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಕರಿಸುತ್ತವೆ

ಮಂಜು ರೇವರಿಯಾ

**ಕಥೆಗಳು ಬಾಲ್ಯದ ಒಂದು ಪ್ರಮುಖ ಭಾಗವಾಗಿವೆ. ನಾವೆಲ್ಲರೂ ನಮ್ಮ ಹಿರಿಯರಿಂದ ಕಥೆಗಳನ್ನು ಕೇಳಿದ್ದೇವೆ. ಕಥೆಗಳನ್ನು ಹೆಚ್ಚಾಗಿ ಮನರಂಜನೆಗಾಗಿ ಹೇಳಲಾಗುತ್ತದೆ. ನಾವು ಶಾಲೆಯಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳುತ್ತೇವೆ. ಮಕ್ಕಳ ಕಲ್ಪನಾಶಕ್ತಿಯನ್ನು ಬೆಳೆಸುವುದರ ಜೊತೆಗೆ ಮನರಂಜನೆ ನೀಡುವುದು, ಪ್ರಪಂಚದ ಬಗ್ಗೆ ಕಲಿಯುವುದು, ಸಂಸ್ಕೃತಿಗಳ ಸಾಮ್ಯತೆಗಳನ್ನು ಗುರುತಿಸುವುದು, ಭಾವನೆಗಳ ಕುರಿತು ಚರ್ಚಿಸುವುದು ಮತ್ತು ಭಾಷೆಯನ್ನು ಗ್ರಹಿಸುವುದು ಇದರ ಉದ್ದೇಶವಾಗಿದೆ. ಈ ಲೇಖನವು ಕಥೆ ಹೇಳುವಿಕೆಯಿಂದ ಉಂಟಾಗುವ ಸಾಧ್ಯತೆಗಳನ್ನು ಚರ್ಚಿಸುತ್ತದೆ.**



*ಚಿತ್ರ 1: ಒಂದು ಕಥೆಯು ಹಲವಾರು ಕಲ್ಪನೆಗಳನ್ನು ಹುಟ್ಟಿಸಬಲ್ಲದು.*

## ಕಥೆ ಹೇಳುವಿಕೆ

ಕಥೆ ಹೇಳುವ ಮೂಲಕ ನಾವು ಮಕ್ಕಳಿಗೆ ಏನೇನು ಕಲಿಸಬಹುದು ಎಂಬುದು ಕಥೆಯ ಆಯ್ಕೆ ಮತ್ತು ಅದನ್ನು ಹೇಳುವವರ ಮೇಲೆ ಅವಲಂಬಿತವಾಗಿರುತ್ತದೆ. ನಾನು ಮಕ್ಕಳೊಂದಿಗೆ "*ಜಲ್ದ್ ಬಹುತ್ ಜಲ್ದ್*" (ಇನ್ನೇನು) ಎಂಬ ಕಥೆಯನ್ನು ಚರ್ಚಿಸಿದೆ. ಈ ಕಥೆಯನ್ನು ಫರೀದೇಹ್ ಖಲತ್ಬರಿ ಬರೆದಿದ್ದಾರೆ ಮತ್ತು ಇದಕ್ಕೆ ಅಲಿ ನಾಮ್‌ವರ್ ಚಿತ್ರಗಳನ್ನು ಬಿಡಿಸಿದ್ದಾರೆ. ನಾನು ಈ ಕಥೆಯ ಕುರಿತಾಗಿ ನಾಲ್ಕು ವಿಭಿನ್ನ ಸ್ಥಳಗಳ ಮಕ್ಕಳೊಂದಿಗೆ ಕೆಲಸ ಮಾಡಿದ್ದೇನೆ. ಈ ಲೇಖನವು, ಮಕ್ಕಳೊಂದಿಗೆ ನಡೆಸಿದ ಈ ಕಥಾಕಾರ್ಯಗಳ ಅನುಭವಗಳನ್ನು ಪ್ರಸ್ತುತಪಡಿಸುತ್ತದೆ.

> **ಕಥೆಗಳು ಸುತ್ತಮುತ್ತ ಹೊಂದಿರುವ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶಗಳನ್ನು ಒದಗಿಸುವುದಲ್ಲದೆ, ಸಾಮಾನ್ಯ ತಿಳುವಳಿಕೆಯನ್ನು ಬೆಳೆಸಲು ಸಹಾಯ ಮಾಡುತ್ತವೆ.**

## ಕಥೆಯ ಸಾರಾಂಶ

*ಕಥೆಯು ಒಂದು ಚಿಕ್ಕ ಹುಡುಗಿಯ ಪ್ರಶ್ನೆಯೊಂದಿಗೆ ಪ್ರಾರಂಭವಾಗುತ್ತದೆ, ಆಕೆ ತನ್ನ ತಾಯಿಯನ್ನು "ನಾವು ಅಜ್ಜಿಯ ಮನೆಯಲ್ಲಿ ಎಷ್ಟು ದಿನ ಇರುತ್ತೇವೆ?" ಎಂದು ಕೇಳುತ್ತಾಳೆ. "ನಿನ್ನ ತಂದೆ ಬರುವವರೆಗೆ" ಎಂದು ತಾಯಿ ಉತ್ತರಿಸುತ್ತಾಳೆ. ಹುಡುಗಿಯ ಮುಂದಿನ ಪ್ರಶ್ನೆ, "ಅವರು ಯಾವಾಗ ಬರುತ್ತಾರೆ?". ಅವಳ ಪ್ರಶ್ನೆಗೆ ಉತ್ತರ ನೀಡದೆ, ತಾಯಿ ಕೆಲವು ವರ್ಷಗಳ ಹಿಂದಿನದನ್ನು ಯೋಚಿಸಿ ನಡುಗುತ್ತಾಳೆ. ಅವಳು, ತನ್ನ ಮಗಳ ತಂದೆ, ಅಂದರೆ ತನ್ನ ಗಂಡನಿಂದ ಬೇರ್ಪಟ್ಟ ಸಂದರ್ಭಗಳು ಮತ್ತು ಸಮಯದಲ್ಲಿ ಕಳೆದುಹೋಗುತ್ತಾಳೆ. ತಂದೆ ಯಾವಾಗ ಬರುತ್ತಾರೆ ಎಂದು ಆ ಪುಟ್ಟ ಹುಡುಗಿ ಪದೇ ಪದೇ ಕೇಳುತ್ತಾಳೆ. ಗೊಂಬೆಯನ್ನು ಖರೀದಿಸುವುದರಿಂದ ಹಿಡಿದು ಕಾರ್ಪೆಟ್ ತಯಾರಿಸುವವರೆಗೆ, ಪ್ರತಿ ಬಾರಿಯೂ ತಾಯಿಯ ಉತ್ತರ "ಇನ್ನೇನು" ಎಂಬುದಾಗಿರುತ್ತದೆ. ಹುಡುಗಿ ಶಾಲೆಯಿಂದ ಹಿಂತಿರುಗಿದಾಗ, ಓದುವ ಬದಲು, ಅವಳು ತನ್ನೊಳಗೆ ಪಿಸುಗುಟ್ಟಿಕೊಳ್ಳುತ್ತಾಳೆ, "ನಿನಗೆ ಉತ್ತರ ತಿಳಿದಿದೆ, ಆದರೂ ನೀನು ಅಮ್ಮನನ್ನು ಪದೇ ಪದೇ ಏಕೆ ಕೇಳುತ್ತಿದ್ದೀಯ?" ಎಂದು.*

## ಮಕ್ಕಳೊಂದಿಗೆ ಮಾತುಕತೆ

ಈ ಕಥೆಯ ಬಗ್ಗೆ ಹಳ್ಳಿ ಮತ್ತು ನಗರದ ಶಾಲೆಗಳ ಮಕ್ಕಳೊಂದಿಗೆ ನಡೆದ ಚರ್ಚೆಗಳಲ್ಲಿ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಈ ಕಥೆಯು ಗಂಡ ಮತ್ತು ಹೆಂಡತಿಯರ ಬೇರ್ಪಡುವಿಕೆಯ ಬಗ್ಗೆ ಎಂದು ಈಗಾಗಲೇ ನೀವು ತಿಳಿದಿರಬಹುದು. ಆದರೆ ಇದು ಏಕೆ ಸಂಭವಿಸಿತು ಎಂಬುದು ಕಥೆಯನ್ನು ಓದಿ ಗೊತ್ತಾಗುವುದಿಲ್ಲ. ಕಥೆಯನ್ನು ಓದಿದ ನಂತರ, ಹುಡುಗಿಯ ತಂದೆ ಎಲ್ಲಿಗೆ ಹೋಗಿರಬಹುದು ಎಂದು ಮಕ್ಕಳನ್ನು ಕೇಳಿದಾಗ, ಅವರ ಉತ್ತರಗಳು ಹೀಗಿದ್ದವು:

- ಆಕೆಯ ತಂದೆ ಹೊರಗೆ ಎಲ್ಲೋ ಉದ್ಯೋಗ ಮಾಡುತ್ತಿರಬಹುದು.
- ಅವರು ಸೈನ್ಯದಲ್ಲಿದ್ದಿರಬಹುದು.
- ಅವರು ಮನೆಯಿಂದ ದೂರ ವಾಸಿಸುತ್ತಿರಬಹುದು.
- ಬಹುಶಃ ಅವರು ದೇವರ ಬಳಿಗೆ ಹೋಗಿದ್ದಾರೆ.
- ಅವರು ಹುತಾತ್ಮರಾಗಿರಬಹುದು.

ಹಳ್ಳಿಯ ಅಥವಾ ನಗರ ಪ್ರದೇಶದ ಯಾವುದೇ ಶಾಲೆಯ ಮಕ್ಕಳು ಕೂಡ ಅವರು ಬೇರ್ಪಟ್ಟಿರಬಹುದು ಅಥವಾ ವಿಚ್ಛೇದನ ಪಡೆದಿರಬಹುದು ಎಂದು ಹೇಳಲಿಲ್ಲ. ಕೇವಲ ಒಬ್ಬನೇ ಒಬ್ಬ ಹಳ್ಳಿ ಶಾಲೆಯ ಹುಡುಗ, "ಅಯ್ಯೋ ದೀದಿ! ಅವರು ವಿಚ್ಛೇದನ ಪಡೆದಿರಬಹುದು" ಎಂದು ಹೇಳಿದನು.

ನಾನು ಕೇಳಿದೆ, "ಅವರು ಏಕೆ ವಿಚ್ಛೇದನ ಪಡೆದಿರಬಹುದು ಎಂದು ನೀನು ಭಾವಿಸಿದ್ದೀಯ?"

ಅವನು ಹೇಳಿದ, "ದೀದಿ! ನನ್ನ ಚಿಕ್ಕಪ್ಪ ಪ್ರೇಮ ವಿವಾಹವಾಗಿದ್ದರು. ನನ್ನ ಚಿಕ್ಕಮ್ಮನಿಗೆ ಇಲ್ಲಿ ಹಳ್ಳಿಯಲ್ಲಿ ವಾಸಿಸುವುದು ಇಷ್ಟವಿರಲಿಲ್ಲ, ಆದ್ದರಿಂದ ಅವರು ಜಗಳವಾಡಲು ಪ್ರಾರಂಭಿಸಿದರು. ಈಗ ಅವರು ವಿಚ್ಛೇದನ ಪಡೆದಿದ್ದಾರೆ. ಚಿಕ್ಕಮ್ಮ ತನ್ನ ಮನೆಗೆ ಹೋಗಿದ್ದಾರೆ."

ನಾನು ಮಕ್ಕಳಿಗೆ ಮಾತನಾಡಲು ಮುಕ್ತ ಅವಕಾಶ ನೀಡಿದ್ದೆ. ಅವರು ಯಾವಾಗ ಬೇಕಾದರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಿತ್ತು. ಕಥೆಯೂ ಕೂಡ ಹೇಗಿತ್ತೆಂದರೆ ಮಕ್ಕಳು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಸಮಯ ತೆಗೆದುಕೊಳ್ಳುತ್ತಿದ್ದರು. ನಾನು ಕೇಳದೆಯೇ ಇದ್ದ ಕೆಲವು ವಿಷಯಗಳನ್ನೂ ಹೇಳಿದರು. ಉದಾಹರಣೆಗೆ, ಅವಳು ತನ್ನ ತಂದೆಯನ್ನು ನೆನಪಿಸಿಕೊಳ್ಳುತ್ತಿರಬಹುದು. ಅವಳ ತಂದೆ ಬದುಕಿದ್ದರೆ, ನಮ್ಮ ತಂದೆಯಂತೆಯೇ ಅವಳಿಗೆ ಗೊಂಬೆಗಳನ್ನು ಖರೀದಿಸುತ್ತಿದ್ದರು, ಅವಳನ್ನು ಸುತ್ತಾಡಲು ಕರೆದೊಯ್ಯುತ್ತಿದ್ದರು, ಅವಳ ಆಟದ ಸಾಮಾನುಗಳನ್ನು ಖರೀದಿಸುತ್ತಿದ್ದರು. ಅವಳ ತಾಯಿಗೂ ತುಂಬಾ ಅಳು ಬರುತ್ತಿರಬಹುದು, ಏಕೆಂದರೆ ಅವರೀಗ ಒಂಟಿಯಾಗಿಬಿಟ್ಟಿದ್ದಾರೆ... ಇತ್ಯಾದಿ. ಮಕ್ಕಳು ತಂದೆ ಇಲ್ಲದ ತಮ್ಮ ಕೆಲವು ಸ್ನೇಹಿತರನ್ನು ಸಹ ಉಲ್ಲೇಖಿಸಿದರು. ತಾಯಿ-ತಂದೆ ಇಲ್ಲದ ಮಕ್ಕಳು ಯಾವಾಗಲೂ ದುಃಖಿತರಾಗಿರುತ್ತಾರೆ ಎಂದು ಹೇಳಿದರು. ಅವರು ತಮ್ಮ ಚಿಕ್ಕಪ್ಪ ಅಥವಾ ಸೋದರಮಾವನ ಮನೆಯಲ್ಲಿ ವಾಸಿಸಬೇಕು ಮತ್ತು ಅವರ ಸ್ವಂತ ಅಮ್ಮಅಪ್ಪ ನೋಡುವ ರೀತಿಯಲ್ಲಿ ಯಾರೂ ಅವರನ್ನು ನೋಡಿಕೊಳ್ಳುವುದಿಲ್ಲ.

"ತಾಯಿ ಮಾತ್ರ ಇರುವ ಮಕ್ಕಳು ಹೇಗೆ ಇರುತ್ತಾರೆ?" ಎಂದು ನಾನು ಅವರನ್ನು ಕೇಳಿದೆ.

ಮಕ್ಕಳು, "ದೀದಿ! ತಾಯಿ ಇದ್ದರೆ ಸಾಕು, ಎಲ್ಲ ಸರಿಯಿರುತ್ತದೆ" ಎಂದರು.

ನಾನು ಮತ್ತೆ ಕೇಳಿದೆ, "ಆಯ್ತು ಹಾಗಾದರೆ ಹೇಳು! ತಂದೆಗಿಂತ ತಾಯಿ ಇರುವುದು ಮುಖ್ಯವೇ?"

ಉತ್ತರ ಬಂದಿತು, "ಹೌದು, ಏಕೆಂದರೆ ತಾಯಿ ಎಲ್ಲವನ್ನೂ ಚೆನ್ನಾಗಿ ಸಂಭಾಳಿಸುತ್ತಾಳೆ."

ನಾನು ಕೇಳಿದೆ, "ಅಮ್ಮ ಎಲ್ಲವನ್ನು ನಿಭಾಯಿಸಬಲ್ಲರು ಆದರೆ ಅಪ್ಪನಿಗೆ ಸಾಧ್ಯವಿಲ್ಲ ಎಂದು ನೀವು ಏಕೆ ಭಾವಿಸುತ್ತೀರಿ?"




*ಚಿತ್ರ 2: ಕಥೆ ಕೇಳುವುದರಲ್ಲಿ ಸಂಪೂರ್ಣವಾಗಿ ಮಗ್ನರಾಗಿರುವ ವಿದ್ಯಾರ್ಥಿಗಳು.*

ಮಕ್ಕಳು, "ಅಮ್ಮ ಮನೆಕೆಲಸ ಮತ್ತು ಹೊರಗಿನ ಕೆಲಸ ಎರಡನ್ನೂ ನಿಭಾಯಿಸಬಲ್ಲರು, ಆದರೆ ಅಪ್ಪ ಹೊರಗಿನ ಕೆಲಸ ಮಾತ್ರ ಮಾಡಬಲ್ಲರು" ಎಂದರು.

ಈ ಕಥೆಯಲ್ಲಿ, ಹುಡುಗಿಯ ತಾಯಿ ಕಾರ್ಪೆಟ್ ನೇಯುವ ಕೆಲಸವನ್ನು ಮಾಡುತ್ತಾರೆ. ನಾನು ಪ್ರತಿ ಗುಂಪಿನ ಮಕ್ಕಳಿಗೂ "ಆಕೆಯ ತಾಯಿ ಕಾರ್ಪೆಟ್ ಏಕೆ ತಯಾರಿಸುತ್ತಾರೆ?" ಎಂಬ ಈ ಪ್ರಶ್ನೆಯನ್ನು ಕೇಳಿದೆ. ಈ ಪ್ರಶ್ನೆಯನ್ನು ಕೇಳುವ ಉದ್ದೇಶವು ಮಕ್ಕಳು ಉದ್ಯೋಗದ ಬಗ್ಗೆ ಎಷ್ಟು ಜಾಗೃತರಾಗಿದ್ದಾರೆ ಎಂಬುದನ್ನು ತಿಳಿಯುವುದಾಗಿತ್ತು. ನಗರ ಪ್ರದೇಶದ ಮಕ್ಕಳು ಮಾತ್ರ ಅವುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ ಎಂದು ಉತ್ತರಿಸಿದರು. ಗ್ರಾಮೀಣ ಶಾಲೆಗಳ ಮಕ್ಕಳಿಗೆ ಮಹಿಳೆಯರು ಜೀವನೋಪಾಯಕ್ಕಾಗಿ ಕಾರ್ಪೆಟ್ ತಯಾರಿಸುತ್ತಿರಬಹುದು ಎಂದು ಅನಿಸಲೇ ಇಲ್ಲ. ಏಕೆಂದರೆ ಅವರು ತಮ್ಮ ಸುತ್ತಮುತ್ತಲಿನ ಮಹಿಳೆಯರು ಅಂತಹ ಕೆಲಸ ಮಾಡುವುದನ್ನು ನೋಡಿರಲಿಲ್ಲ.

ನಾನು ಮುಂದಿನ ಪ್ರಶ್ನೆಯನ್ನು ಕೇಳಿದೆ, "ಹೇಳಿ! ನಿಮ್ಮ ತಾಯಿ ಯಾವ-ಯಾವ ಕೆಲಸಗಳನ್ನು ಮಾಡುತ್ತಾರೆ?"

ಉತ್ತರಗಳು ಸುರಿಮಳೆಯಾದವು. ಮಕ್ಕಳು ಮನೆ ಕೆಲಸ ಮತ್ತು ಕೃಷಿ ಕೆಲಸಗಳನ್ನು ಒಳಗೊಂಡಂತೆ ತಮ್ಮ ಪಟ್ಟಿ ಮಾಡಲು ಪ್ರಾರಂಭಿಸಿದರು. ಕೆಲವರು ತಮ್ಮ ತಾಯಂದಿರು ಹೊಲಿಗೆ ಕೆಲಸವನ್ನೂ ಮಾಡುತ್ತಾರೆ ಎಂದು ಹೇಳಿದರು. ನಾನು ಕಾಯುತ್ತಿದ್ದ ಉತ್ತರ ಇದೇ ಆಗಿತ್ತು.

ನಾನು ಕೇಳಿದೆ, "ಸ್ವಂತ ಬಟ್ಟೆಗಳನ್ನು ಹೊಲಿಯುತ್ತಾರಾ ಅಥವಾ ಹಣಕ್ಕಾಗಿ ಹೊಲಿಯುತ್ತಾರಾ ?"

ಮಕ್ಕಳು, "ಹಣ ತೆಗೆದುಕೊಳ್ಳುತ್ತಾರೆ ಕೂಡ" ಎಂದು ಉತ್ತರಿಸಿದರು.

ನಾನು ಅವರನ್ನು ಕೇಳಿದೆ, "ನಾವು ಹಣ ಸಂಪಾದಿಸಲು ಮಾಡುವ ಕೆಲಸವನ್ನು ನೀವು ಹೇಗೆ ನೋಡುತ್ತೀರಿ?"

ಅವರು ಅರ್ಥವಾಗದವರಂತೆ ಒಬ್ಬರನ್ನೊಬ್ಬರು ನೋಡಿಕೊಂಡರು. ನಂತರ ನಾನು ಪ್ರಶ್ನೆಯನ್ನು ಬದಲಾಯಿಸಿ, "ಹಣ ಗಳಿಸುವ ಹೊಲಿಗೆ ಕೆಲಸವು ಅಪ್ಪ ಹೊರಗೆ ಮಾಡುವ ಮತ್ತು ಹಣ ಗಳಿಸುವ ಕೆಲಸಕ್ಕೆ ಸಮಾನವೇ?" ಎಂದೆ.

ಮಕ್ಕಳು, "ಹೌದು, ದೀದಿ! ಅಮ್ಮ ಮನೆಯಲ್ಲಿಯೇ ಇದ್ದು ಕೆಲಸ ಮಾಡುತ್ತಾರೆ, ಮತ್ತು ಅಪ್ಪ ಕೆಲಸಕ್ಕೆ ಹೊರಗೆ ಹೋಗುತ್ತಾರೆ" ಎಂದರು.

ಆಗ ನಾನು ಮಕ್ಕಳಿಗೆ ಹೇಳಿದೆ, ಹಣ ಸಂಪಾದಿಸಲು ನಾವು ಮಾಡುವ ಯಾವುದೇ ಕೆಲಸವನ್ನು ಉದ್ಯೋಗವೆಂದು ಕರೆಯಲಾಗುತ್ತದೆ. ಉದ್ಯೋಗ ಎಂದರೆ ಯಾರಾದರೂ ಕಚೇರಿಯಲ್ಲಿ ಕುಳಿತು ಮಾಡುವ ಕೆಲಸ ಒಂದೇ ಅಲ್ಲ. ಹಣ ಗಳಿಸುವ ಯಾವುದೇ ಕೆಲಸವು ಒಂದು ಉದ್ಯೋಗವೇ ಆಗಿರುತ್ತದೆ; ಅದು ಎಲ್ಲಿದ್ದರೂ ಪರವಾಗಿಲ್ಲ.

ಈಗ ನಿಮ್ಮ ತಾಯಿ ಅಥವಾ ಇತರ ಮಹಿಳೆಯರು ಮಾಡಬಹುದಾದ ಮತ್ತು ಹಣ ಗಳಿಸಬಹುದಾದ ಇನ್ನಷ್ಟು ಕೆಲಸಗಳನ್ನು ನನಗೆ ಹೇಳಿ. ಮತ್ತೆ, ಉತ್ತರಗಳ ಪ್ರವಾಹವೇ ಬಂತು. ಮಕ್ಕಳು ಉಪ್ಪಿನಕಾಯಿ, ಹಪ್ಪಳ, ಕರಿದ ತಿಂಡಿಗಳು, ಹೊಲಿಗೆ, ಪಾರ್ಲರ್‌ಗಳು ಮತ್ತು ಇನ್ನೂ ಹೆಚ್ಚಿನ ಕೆಲಸಗಳನ್ನು ಹೇಳಿದರು.

"ಪ್ಯಾಕೆಟ್‌ಗಳಿಗೆ ಬಿಂದಿಗಳನ್ನು ಅಂಟಿಸುವುದು, ಅವುಗಳ ಬಂಡಲ್‌ಗಳನ್ನು ತಯಾರಿಸುವುದು, ಮೇಣದಬತ್ತಿ ಪ್ಯಾಕೆಟ್‌ಗಳು, ಬಳೆಗಳನ್ನು ಬ್ರೇಸ್‌ಲೆಟ್‌ಗಳನ್ನು ತಯಾರಿಸುವುದು, ಶೂಗಳು ಮತ್ತು ಚಪ್ಪಲಿಗಳನ್ನು ಅಲಂಕರಿಸುವುದು ಮುಂತಾದ ಕೆಲಸಗಳು ಸಹ ಇವೆ. ನೀವು ಎಂದಾದರೂ ಈ ಕೆಲಸಗಳ ಬಗ್ಗೆ ಕೇಳಿದ್ದೀರಾ ಅಥವಾ ನೋಡಿದ್ದೀರಾ?" ಎಂದು ನಾನು ಮತ್ತೆ ಕೇಳಿದೆ.

"ಈ ಕೆಲಸಗಳನ್ನು ಯಂತ್ರಗಳು ಮಾಡುತ್ತಿರಬೇಕು, ಅಲ್ಲವಾ ಅಕ್ಕ?" ಒಂದು ಮಗು ಕೇಳಿತು. ಇಂದಿಗೂ ಯಂತ್ರಗಳಿಂದ ಮಾಡಲಾಗದ ಅನೇಕ



*ಚಿತ್ರ 3: ಚರ್ಚೆಗಳ ಮೂಲಕ ಕಥೆಯೊಂದಿಗೆ ತೊಡಗಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು.*

ಕೆಲಸಗಳಿವೆ ಎಂದು ಚರ್ಚಿಸಲಾಯಿತು. ನೀವೆಲ್ಲರೂ ನಿಮ್ಮ ಕುಟುಂಬ ಸದಸ್ಯರೊಂದಿಗೆ ಮಾತನಾಡಿ ಇಂತಹ ಕೆಲಸಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳಿದೆ.

## ಒಡಹುಟ್ಟಿದವರು ಮತ್ತು ಸ್ನೇಹಿತರು

ನಾನು ಈಗ ಕಥೆಯ ಮುಂದಿನ ಭಾಗಕ್ಕೆ ಮುಂದುವರೆದೆ. ಈ ಕಥೆಯ ಒಂದು ಹಂತದಲ್ಲಿ, ಹುಡುಗಿ ತನ್ನ ಗೊಂಬೆಗೆ ಪಿಸುಗುಟ್ಟುತ್ತಾಳೆ, "ನಾನು ಅಮ್ಮನೊಂದಿಗೆ ತಮಾಷೆ ಮಾಡುತ್ತಿದ್ದೆ. ನನಗೆ ಒಡಹುಟ್ಟಿದವರು ಇಲ್ಲವಲ್ಲಾ, ಹಾಗೆಯೆ ನಿನಗೂ ಅವರ ಅಗತ್ಯವಿಲ್ಲವೇ?"

ನಾನು ಮಕ್ಕಳನ್ನು ಕೇಳಿದೆ, "ಅವಳು ಗೊಂಬೆಯೊಂದಿಗೆ ಏಕೆ ಹಾಗೆ ಮಾತನಾಡುತ್ತಿದ್ದಾಳೆ?" ಮಕ್ಕಳು ಉತ್ತರಿಸಿದರು, "ಅವಳಿಗೆ ಒಡಹುಟ್ಟಿದವರು ಇಲ್ಲ, ಅದಕ್ಕಾಗಿಯೇ ಅವಳು ಗೊಂಬೆಯೊಂದಿಗೆ ಮಾತನಾಡುತ್ತಿದ್ದಾಳೆ. ಬಹುಶಃ ಅವಳಿಗೆ ಬೇಸರವಾಗುತ್ತಿರಬಹುದು. ತನ್ನ ಗೊಂಬೆಗೆ ಬೇಜಾರಾಗದಿರಲಿ ಎಂದು ಇನ್ನೊಂದು ಗೊಂಬೆಯನ್ನು ತರಬೇಕೆಂದು ಬಯಸುತ್ತಿದ್ದಾಳೆ."

ನಾನು ಕೇಳಿದೆ, "ಒಡಹುಟ್ಟಿದವರು ಅಷ್ಟು ಮುಖ್ಯವೇ?"

ಮಕ್ಕಳು ಹೇಳಿದರು, "ರಾಖಿ ಕಟ್ಟಲು ಅವರು ಬೇಕು, ದೀದಿ!"

ನಾನು ಕೇಳಿದೆ, "ಸ್ನೇಹಿತರ ಬಗ್ಗೆ ನೀವು ಏನು ಹೇಳುತ್ತೀರಿ?"

"ಸ್ನೇಹಿತರು ತುಂಬಾ ಮುಖ್ಯ. ಸಹೋದರ ಸಹೋದರಿಯರಿಗಿಂತ ಹೆಚ್ಚು. ಸಹೋದರ ಸಹೋದರಿಯರು ಅಪ್ಪ ಅಮ್ಮನಿಗೆ ಚಾಡಿ ಹೇಳುವ ಮೂಲಕ ಸಿಕ್ಕಿಸುತ್ತಾರೆ, ಆದರೆ ಸ್ನೇಹಿತರು ಯಾವಾಗಲೂ ನಿಮ್ಮನ್ನು ಬೆಂಬಲಿಸುತ್ತಾರೆ ಮತ್ತು ಕಾಪಾಡುತ್ತಾರೆ. ಸ್ನೇಹಿತರು ಸಹೋದರ ಸಹೋದರಿಯರಂತೆಯೇ ಇರುತ್ತಾರೆ" ಎಂದು ಉತ್ತರ ಬಂದಿತು.

ನಾನು ಕೇಳಿದೆ, "'ಅಂತೆಯೇ' ಎಂದರೆ ಏನು? ಸಹೋದರಿಯರು ಅಥವಾ ಸಹೋದರರು ಸ್ನೇಹಿತರಂತಲ್ಲ ಏಕೆ?"

ಎಲ್ಲಾ ಮಕ್ಕಳು ನಕ್ಕರು ಮತ್ತು ಹೇಳಿದರು, "ಏಕೆಂದರೆ ಸ್ನೇಹಿತರು ನಮ್ಮ ಸ್ವಂತ ಸಹೋದರ ಸಹೋದರಿಯರಲ್ಲವಲ್ಲ! ಹೌದು, ಆದರೆ ಸ್ನೇಹಿತರು ಉತ್ತಮ, ದೀದಿ!"

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಹೆಚ್ಚಿನ ಮಕ್ಕಳು ಸ್ನೇಹಿತರಿಗೆ ಆದ್ಯತೆ ನೀಡಿದರು. ನಾನು ಈ ಪ್ರಶ್ನೆಯನ್ನು ಏಕೆ ಕೇಳಿದೆ ಅಂದರೆ, ಎಲ್ಲಾ ಮಕ್ಕಳು ಕಥೆಯಲ್ಲಿನ ಹುಡುಗಿಯ ಸ್ಥಾನದಲ್ಲಿ ತಮ್ಮನ್ನು ತಾವು ಇರಿಸಿಕೊಳ್ಳುವ ಮೂಲಕ ಉತ್ತರಿಸುತ್ತಿದ್ದರು.

ವಿಚ್ಛೇದನವು ಒಳ್ಳೆಯದೇ ಅಥವಾ ಕೆಟ್ಟದೇ, ಮತ್ತು ಏಕೆ ಎಂಬುದರ ಬಗ್ಗೆ ನಾನು ಎಲ್ಲಾ ಶಾಲೆಗಳ ಮಕ್ಕಳೊಂದಿಗೆ ಚರ್ಚಿಸಿದೆ. ಎಲ್ಲಾ ಮಕ್ಕಳು ಒಂದೇ ಉತ್ತರವನ್ನು ಹೊಂದಿದ್ದರು: "ಇದು ಕೆಟ್ಟದು". ವಿಚ್ಛೇದನದಿಂದ ಮಕ್ಕಳು ತೊಂದರೆ ಅನುಭವಿಸುತ್ತಾರೆ ಮತ್ತು ಬಳಲುತ್ತಾರೆ. ಜನರು ವಿಚ್ಛೇದನವನ್ನು ಒಳ್ಳೆಯದಾಗಿ ಪರಿಗಣಿಸುವುದಿಲ್ಲ. ಅವರು ಬೇರೆಯಾಗಬಾರದು ಅಷ್ಟೇ.

ನಂತರ ನಾನು ಅವರಿಗೆ ಎರಡು ಸನ್ನಿವೇಶಗಳನ್ನು ಪ್ರಸ್ತುತಪಡಿಸಿದೆ.

ಗಂಡ ಹೆಂಡತಿ ಸ್ವಲ್ಪ ಸಮಯದವರೆಗೆ ಸಂತೋಷದಿಂದ ಬದುಕುತ್ತಾರೆ, ನಂತರ ಅವರ ನಡುವೆ ಜಗಳ ಪ್ರಾರಂಭವಾಗುತ್ತದೆ. ಜಗಳಕ್ಕೆ ಹಲವು ಕಾರಣಗಳಿರಬಹುದು. ಆ ಕಾರಣಗಳು ಏನಾಗಿರಬಹುದು ಎಂದು ನೀವು ನನಗೆ ಹೇಳಬಲ್ಲಿರಾ?

ಮಕ್ಕಳು, "ಅಕ್ಕ! ಅವನು ಸಾರಾಯಿ ಕುಡಿಯುತ್ತಿರಬೇಕು, ಅವಳನ್ನು ಹೊಡೆಯುತ್ತಿರಬೇಕು, ಅವನು ಸಂಪಾದನೆ ಮಾಡುತ್ತಿಲ್ಲದಿರಬಹುದು, ಅವನು ತನ್ನ ಹೆಂಡತಿಯ ಮಾತನ್ನು ಕೇಳುವುದಿಲ್ಲ, ಅವನು ನಿಂದಿಸುತ್ತಿರಬೇಕು" ಎಂದು ಹೇಳಿದರು.

ನಾನು ಕೇಳಿದೆ, "ಇದು ಯಾವಾಗಲೂ ಪುರುಷನ ತಪ್ಪೇ ಆಗಿರುತ್ತದೆಯಾ?"

ಮಕ್ಕಳು ಉತ್ತರಿಸಲಿಲ್ಲ.

ನಾನು ಕೇಳಿದೆ, "ಅವನು ಹೀಗೆ ಮಾಡುತ್ತಾನೆ ಎಂದು ಹೇಳೋಣ. ಅವನ ಹೆಂಡತಿ ವಿಚ್ಛೇದನ ಪಡೆಯಬೇಕೇ ಅಥವಾ ಹೊಡೆತಗಳನ್ನು ಸಹಿಸಿಕೊಳ್ಳುವುದನ್ನು ಮುಂದುವರಿಸಬೇಕೇ?"

ಹುಡುಗಿಯರ ಉತ್ತರ ಬೇಗನೆ ಬಂತು, "ವಿಚ್ಛೇದನ ತೆಗೆದುಕೊಳ್ಳಬೇಕು."

ಎರಡನೇ ಸನ್ನಿವೇಶದಲ್ಲಿ, ಹೆಂಡತಿ ಕುಡಿಯುತ್ತಾಳೆ, ಜಗಳವಾಡುತ್ತಾಳೆ ಮತ್ತು ಅವನನ್ನು ಹೊಡೆಯುತ್ತಾಳೆ. ಮಕ್ಕಳು ಇದನ್ನು ಕೇಳಿ ನಕ್ಕರು. ಆತ ಈಗ ತನ್ನ ಹೆಂಡತಿಯೊಂದಿಗೆ ಇರಬೇಕೇ?

"ಇಲ್ಲ, ಆತ ವಿಚ್ಛೇದನ ಪಡೆಯಬೇಕು, ಅಕ್ಕ!" ಎಂಬ ಉತ್ತರ ಬಂತು.

ಒಬ್ಬರನ್ನೊಬ್ಬರು ನೋಡುತ್ತಾ ಆತ್ಮವಿಶ್ವಾಸದಿಂದ ಹೇಳಿದರು, "ಅವರು ವಿಚ್ಛೇದನ ಪಡೆಯಬೇಕು. ಜನರಿಗೆ ಏನು? ಅವರು ಹೇಗಾದರೂ ಮಾತನಾಡುತ್ತಾರೆ."

ನಾನು ಕೇಳಿದೆ, "ಈಗ ಹೇಳಿ, ವಿಚ್ಛೇದನ ಒಳ್ಳೆಯದೋ ಕೆಟ್ಟದ್ದೋ?"

ಮಕ್ಕಳು ವಿಚ್ಛೇದನ ಒಳ್ಳೆಯದ್ದು ಅಲ್ಲ ಅಥವಾ ಕೆಟ್ಟದ್ದು ಅಲ್ಲ, ಅದು ಪರಿಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ ಎಂದರು.

## ಕಥೆಗಳು ಏನು ಮಾಡುತ್ತವೆ?

ಕಥೆಗಳು ಸುತ್ತಮುತ್ತ ಹೊಂದಿರುವ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶಗಳನ್ನು ಒದಗಿಸುವುದಲ್ಲದೆ, ಸಾಮಾನ್ಯ ತಿಳುವಳಿಕೆಯನ್ನು ಬೆಳೆಸಲು ಸಹಾಯ ಮಾಡುತ್ತವೆ. ಅವು ಮಕ್ಕಳಿಗೆ ಕಥೆಯಲ್ಲಿನ ಪಾತ್ರಗಳೊಂದಿಗೆ ಬೆಸೆದುಕೊಳ್ಳಲೂ ಸಹ ಅವಕಾಶ ನೀಡುತ್ತವೆ. ಉದಾಹರಣೆಗೆ, ಈ ಕಥೆಯಲ್ಲಿ, ಹುಡುಗಿ ತನ್ನ ಗೊಂಬೆಯೊಂದಿಗೆ ಮಾತನಾಡುವ ಮೂಲಕ ಮತ್ತು ಅದರಿಂದ ಹೊರಹೊಮ್ಮಿದ ಒಂಟಿತನದ ಮೂಲಕ ಮಕ್ಕಳು ತಮ್ಮದೇ ಆದ ಒಂಟಿತನವನ್ನು ಅನುಭವಿಸುತ್ತಿದ್ದರು. ಕಥೆಯನ್ನು ಕೇಳುವುದು ಭಾವನಾತ್ಮಕ ಬೆಸೆಯುವಿಕೆಗೆ ಮತ್ತು ಸಹಾನುಭೂತಿಗೆ ಕಾರಣವಾಗುತ್ತದೆ. ಆದರೆ ಪಾತ್ರದ ಪರಿಸ್ಥಿತಿಯಲ್ಲಿ ತಮ್ಮನ್ನು ತಾವು ಇರಿಸಿಕೊಂಡಾಗ, ಅವರು ಪಾತ್ರದೊಂದಿಗೆ ತಮ್ಮನ್ನು ಮತ್ತೂ ಆಳವಾಗಿ ಗುರುತಿಸಿಕೊಳ್ಳುತ್ತಾರೆ. ಇದು ಸಾಮಾಜಿಕ ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

**ಪಾತ್ರದ ಪರಿಸ್ಥಿತಿಯಲ್ಲಿ ತಮ್ಮನ್ನು ತಾವು ಇರಿಸಿಕೊಂಡಾಗ, ಅವರು ಪಾತ್ರದೊಂದಿಗೆ ತಮ್ಮನ್ನು ಮತ್ತೂ ಆಳವಾಗಿ ಗುರುತಿಸಿಕೊಳ್ಳುತ್ತಾರೆ. ಇದು ಸಾಮಾಜಿಕ ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.**

ಈ ಕಥೆಯು ಉದ್ಯೋಗ ಮತ್ತು ಕೆಲಸದ ವೈವಿಧ್ಯತೆಯ ಬಗ್ಗೆ ಚರ್ಚೆಯನ್ನು ಹುಟ್ಟುಹಾಕಿತು. ಕೈಯಿಂದ ಮಾಡುವ ಕೆಲಸ ಮತ್ತು ಮನೆಯಲ್ಲಿ ಕುಳಿತು ಮಾಡುವ ಕೆಲಸ ಎರಡೂ ಉದ್ಯೋಗಗಳೇ. ನಮ್ಮ ತಲೆಯಲ್ಲಿರುವ ಉದ್ಯೋಗದ ವ್ಯಾಖ್ಯಾನಗಳೇನು ಮತ್ತು ನಮ್ಮ ಸುತ್ತಮುತ್ತ ನಾವು ಯಾವ ಯಾವ ಉದ್ಯೋಗಗಳನ್ನು ನೋಡುತ್ತೇವೆ ಎಂಬುದನ್ನೂ ಸಹ ಚರ್ಚಿಸಲಾಯಿತು. ಇದಲ್ಲದೆ, ಅದೇ ಸಮಯದಲ್ಲಿ, ನಮ್ಮ ಪರಿಸರದಲ್ಲಿ ನಾವು ನೋಡಿರದ ಉದ್ಯೋಗಗಳೂ ಇವೆ. ಕೆಲವು ಕೆಲಸಗಳನ್ನು 'ಗಂಡಸರದು' ಮತ್ತು 'ಹೆಂಗಸರದು' ಎಂದು ಭಾವಿಸುತ್ತೇವೋ, ಇದೂ ಹಾಗೆಯೇ. ಕಥೆಯ ಬಗ್ಗೆ ಚರ್ಚೆ ಮಾಡುತ್ತಲೇ, ನಾವು ಇಂತಹ ಧೋರಣೆಗಳನ್ನು ಮುರಿಯಲು ಸಾಧ್ಯವಾಗುತ್ತದೆ.

ವಿಚ್ಛೇದನವು ಒಂದು ಸಾಮಾಜಿಕ ಸಮಸ್ಯೆಯಾಗಿದ್ದರೂ, ಅದರ ಬಗ್ಗೆ ಹೆಚ್ಚು ಚರ್ಚೆಯಾಗುವುದಿಲ್ಲ. ಅಂತಹ ಚರ್ಚೆಗಳು ಆದರೂ, ಅದು ಹೆಚ್ಚಾಗಿ ನಕಾರಾತ್ಮಕವಾಗಿರುತ್ತದೆ. ಸಕಾರಾತ್ಮಕ ಚಿಂತನೆಯ ಆಚೆಗಿರುವ ಅನೇಕ ಸಾಮಾಜಿಕ ಸಮಸ್ಯೆಗಳಿವೆ. ಸಾಮಾನ್ಯವಾಗಿ ನಾವು ಇಂತಹ ವಿಚಾರಗಳನ್ನು ಚರ್ಚಿಸಲು ಹಿಂಜರಿಯುತ್ತೇವೆ. ಆದರೆ ಯಾರ ಭಾವನೆಗಳಿಗೂ ನೋವುಂಟು ಮಾಡದೆ, ಚೆನ್ನಾಗಿ ಕಥೆ ಹೇಳುವ ಮೂಲಕ ನಾವು ಅಂತಹ ಸಮಸ್ಯೆಗಳ ಬಗ್ಗೆ ಆಳವಾದ ತಿಳಿವಳಿಕೆಯನ್ನು ಮೂಡಿಸಬಹುದು.



**ಮಂಜು ರೇವರಿಯಾ** ಕಳೆದ ಮೂರು ವರ್ಷಗಳಿಂದ ಏಕಲವ್ಯ ಸಂಸ್ಥೆಯಲ್ಲಿ ನರ್ಮದಾಪುರಂನಲ್ಲಿನ ಹೋಲಿಸ್ಟಿಕ್ ಇನಿಶಿಯೇಟಿವ್ ಟುವರ್ಡ್ಸ್ ಎಜುಕೇಶನಲ್ ಚೇಂಜ್ (HITEC) ಯೋಜನೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ. ಅವರು ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ, ಮಕ್ಕಳ ಸಾಹಿತ್ಯ ಮತ್ತು ಪ್ರಾಥಮಿಕ ಭಾಷೆಯಂತಹ ವಿವಿಧ ವಿಷಯಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಮಕ್ಕಳೊಂದಿಗೆ ಕೆಲಸ ಮಾಡುವ ಅನುಭವಗಳ ಬಗ್ಗೆ ಬರೆಯುವುದು ಮತ್ತು ಅವುಗಳನ್ನು ತಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳುವುದು ಅವರ ಹವ್ಯಾಸಗಳು.

**ಸಂಪರ್ಕ:** manju.rewaria@eklavya.in

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆಶಾ ಮಹೇಶ್ವರ ಸಿಂಗ್

# ಸಹವರ್ತಿ ಕಲಿಕೆ: ಒಂದು ಪರಿಣಾಮಕಾರಿ ಕಲಿಕಾ ವಿಧಾನ

ಶಮೀಮ್ ಭಾಟಿ

**ಕಲಿಕೆಯ ಪ್ರಕ್ರಿಯೆಯು ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿಲ್ಲ; ಇದರಲ್ಲಿ ವಿದ್ಯಾರ್ಥಿಗಳು ಪರಸ್ಪರ ಸಂಭಾಷಣೆ ಮತ್ತು ಒಬ್ಬರು ಮಾಡುವುದನ್ನು ನೋಡುವ ಮೂಲಕ ಕಲಿಯುವ ಒಂದು ಸಾಮಾಜಿಕ ಅನುಭವವಾಗಿದೆ. ವಿದ್ಯಾರ್ಥಿಗಳು ಒಂದು ವಿಷಯದ ಬಗ್ಗೆ ಒಟ್ಟಾಗಿ ಕೆಲಸ ಮಾಡಿದಾಗ, ಚರ್ಚಿಸಿದಾಗ, ಪ್ರಶ್ನೆಗಳನ್ನು ಕೇಳಿದಾಗ ಮತ್ತು ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದಾಗ, ಅವರ ತಿಳುವಳಿಕೆಯು ಆಳವಾಗುತ್ತದೆ. ಅವರು ಹೊಸ ಪರಿಕಲ್ಪನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಗ್ರಹಿಸಲು ಸಮರ್ಥರಾಗುತ್ತಾರೆ.**

*ರಾಷ್ಟ್ರೀಯ ಶಿಕ್ಷಣ ನೀತಿ 2020 ಸಹವರ್ತಿ ಕಲಿಕೆಯನ್ನು ಆಧುನಿಕ ಶಿಕ್ಷಣ ವ್ಯವಸ್ಥೆಯ ಒಂದು ಭಾಗವೆಂದು* ಪರಿಗಣಿಸುತ್ತದೆ. ಮುಂದುವರೆದು, ವಿದ್ಯಾರ್ಥಿಗಳು ಪಠ್ಯಪುಸ್ತಕಗಳಿಗೆ ಮಾತ್ರ ಸೀಮಿತವಾಗಿರದೆ, ವಾಸ್ತವ ಜಗತ್ತಿನೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಪ್ರಾಯೋಗಿಕ ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಹೇಳುತ್ತದೆ. ಇದನ್ನು ಸಾಧಿಸಲು, ಕಲಿಕಾ ಪ್ರಕ್ರಿಯೆಯನ್ನು ಸಂಶೋಧನಾ-ಆಧಾರಿತ, ಗುಂಪು-ಆಧಾರಿತ ಮಾಡುವುದಲ್ಲದೆ ಪ್ರಾಯೋಗಿಕವಾಗಿಸಬೇಕು ಎಂದು ಶಿಫಾರಸು ಮಾಡುತ್ತದೆ.

ಕೆಲವು ಶಿಕ್ಷಕರು ಶಾಂತವಾದ ತರಗತಿಯನ್ನು ಆದರ್ಶ ಮತ್ತು ಶಿಸ್ತಿನ ತರಗತಿಯ ಸಮಾನಾರ್ಥಕವೆಂದು ಪರಿಗಣಿಸುತ್ತಾರೆ, ಅಲ್ಲಿ ವಿದ್ಯಾರ್ಥಿಗಳು ಪರಸ್ಪರ ಮಾತನಾಡುವುದಿಲ್ಲ, ಬದಲಿಗೆ ಸದ್ದಿಲ್ಲದೆ ತಮ್ಮ ಕೆಲಸವನ್ನು ಮಾಡುತ್ತಾರೆ. ಆದರೆ, ಲೆವ್ ವೈಗೋಟ್ಸ್ಕಿ ಅವರ ಸಾಮಾಜಿಕ ಕಲಿಕೆಯ ಸಿದ್ಧಾಂತವು ಕಲಿಕೆಯು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಪರಸ್ಪರ ಮಾತುಕತೆ, ಸಹಯೋಗ ಮತ್ತು ಮಾರ್ಗದರ್ಶನವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳುತ್ತದೆ. ಸಹವರ್ತಿ ಕಲಿಕಯ ಸಂವಹನ ಮತ್ತು ಸಹಕಾರಕ್ಕೆ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ.

ಈ ಲೇಖನದಲ್ಲಿ, ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಸಹಪಾಠಿಗಳೊಂದಿಗೆ ಸಹವರ್ತಿ ಕಲಿಕೆ ಎಂಬುದು ಹೇಗೆ ಸಹಾಯ ಮಾಡುತ್ತದೆ ಮತ್ತು ಅವರ ಕಲಿಕೆಯ ಪ್ರಕ್ರಿಯೆಯಲ್ಲಿ ಯಾವ ಸಕಾರಾತ್ಮಕ ಸನ್ನಿವೇಶಗಳು ಸೃಷ್ಟಿಯಾಗುತ್ತವೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

## ಮಣಿಗಳನ್ನು ಎಣಿಸುವುದು

ನಾನು 1ರಿಂದ 3ನೇ ತರಗತಿಯ ವಿದ್ಯಾರ್ಥಿಗಳಿಗೆ ಸ್ವಲ್ಪ ಮಣಿಗಳನ್ನು ನೀಡಿ ಅವುಗಳನ್ನು ಒಬ್ಬರಾದ ನಂತರ ಒಬ್ಬರಂತೆ ಸರದಿಯಲ್ಲಿ ಎಣಿಸಲು ಹೇಳಿದೆ. ಶುಭಮ್ ಮೊದಲು ಎಣಿಸಿ 8 ಎಂದು ಹೇಳಿದನು (ಅವನು ಒಂದು ಮಣಿಯನ್ನು ಎರಡು ಬಾರಿ ಎಣಿಸಿದ್ದನು). ಸ್ನೇಹಾ ತುಂಬಾ ಚಿಕ್ಕವಳು, ಆದರೆ ಅವಳು ಕೂಡ ಮಣಿಗಳನ್ನು ಎಣಿಸಲು ಬಯಸಿದ್ದಳು, ಆದ್ದರಿಂದ ಅವಳಿಗೆ ಅವಕಾಶ ನೀಡಲಾಯಿತು. ಅವಳು ಎಲ್ಲಾ ಮಣಿಗಳನ್ನು ತನ್ನ ಬೆರಳಿನಿಂದ ಪದೇ ಪದೇ ಮುಟ್ಟಿ 3 ಎಂದು ಹೇಳಿದಳು. ಗೌರವ್ ಎಣಿಸಿ ಒಟ್ಟು 9 ಮಣಿಗಳಿವೆ ಎಂದು ಹೇಳಿದನು. ಆಮೇಲೆ, ಅಂಜನಾ ಎಣಿಸಿ



*ಚಿತ್ರ 1: ಸಹವರ್ತಿ ಕಲಿಕೆಯು ವಿದ್ಯಾರ್ಥಿಗಳ ವಿಮರ್ಶಾತ್ಮಕ ಚಿಂತನೆ, ವಿಶ್ಲೇಷಣಾತ್ಮಕ ಸಾಮರ್ಥ್ಯ ಹಾಗೂ ಸ್ವಯಂ ಕಲಿಕೆಯನ್ನು ಹೆಚ್ಚಿಸುತ್ತದೆ.*

6 ಮಣಿಗಳಿವೆ ಎಂದು ಹೇಳಿದಳು. ಅವಳು ಮಣಿಗಳನ್ನು ಯಾದೃಚ್ಛಿಕ ಕ್ರಮದಲ್ಲಿ ಇರಿಸಿದ್ದಳು. ನಂತರ, ಜೀವಿಕಾ ಪ್ರತಿ ಮಣಿಯನ್ನು ಒಂದೊಂದಾಗಿ ತೆಗೆದುಕೊಂಡು ಅವುಗಳನ್ನು ಎಣಿಸಿ 7 ಮಣಿಗಳಿವೆ ಎಂದು ಹೇಳಿದಳು. ಜೀವಿಕಾ ಪ್ರತಿ ಮಣಿಯನ್ನು ಎಣಿಸಿ ಸರಿಯಾದ ಸಂಖ್ಯೆಯನ್ನು ಹೇಳಿದ್ದಳು.

> **ವಿದ್ಯಾರ್ಥಿಗಳು ತಮ್ಮ ಸ್ನೇಹಿತರ ಎಣಿಕೆಗಳನ್ನು ನೋಡುತ್ತಿರುವಾಗ, ಅವರು ತಮ್ಮ ವಿಧಾನವನ್ನು ಪರಿಷ್ಕರಿಸಿಕೊಳ್ಳುತ್ತಿದ್ದರು. ಯಾವುದೇ ಶಿಕ್ಷಕರ ಮಧ್ಯಪ್ರವೇಶವಿಲ್ಲದೆ, ಅವರು ತಮ್ಮ ತಪ್ಪುಗಳನ್ನು ಗುರುತಿಸಿದರು ಮತ್ತು ಸರಿಯಾದ ವಿಧಾನವನ್ನು ಅಳವಡಿಸಿಕೊಂಡರು.**

ನಂತರ ನಾನು ಎಲ್ಲಾ ವಿದ್ಯಾರ್ಥಿಗಳು ಏಕೆ ಬೇರೆ ಬೇರೆ ಎಣಿಸುತ್ತಿದ್ದಾರೆ ಎಂದು ಕೇಳಿದೆ. ವಿದ್ಯಾರ್ಥಿಗಳು ಮುಗುಳ್ನಗಲಾರಂಭಿಸಿದರು. ನಾನು, "ಇನ್ನೊಂದು ಬಾರಿ ಎಣಿಸಲು ಪ್ರಯತ್ನಿಸೋಣ" ಎಂದು ಹೇಳಿದೆ. ಈ ಬಾರಿ, ಎಣಿಕೆಯನ್ನು ಅದೇ ಕ್ರಮದಲ್ಲಿ ಮಾಡಲಾಯಿತು. ಆದರೆ ವಿದ್ಯಾರ್ಥಿಗಳು ತಮ್ಮ ಎಣಿಕೆಯ ವಿಧಾನದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದರು. ಶುಭಂ ಮಣಿಗಳನ್ನು ಒಂದೊಂದಾಗಿ ಎತ್ತಿಕೊಳ್ಳುವ ಮೂಲಕ ಎಣಿಸಲು ಪ್ರಾರಂಭಿಸಿದನು. ಅವನ ಬಳಿ 5 ಮಣಿಗಳಾದಾಗ ಅವುಗಳನ್ನು ಕೈಯಲ್ಲಿ ಹಿಡಿಯುವುದು ಅವನಿಗೆ ಕಷ್ಟವಾದಾಗ, ಅವನು ಆ ಮಣಿಗಳನ್ನು ಪಕ್ಕಕ್ಕೆ ಇರಿಸಿ ಉಳಿದ ಮಣಿಗಳನ್ನು ಎಣಿಸಿದನು. ಈ ಬಾರಿ, ಅವನು 7 ಮಣಿಗಳಿವೆ ಎಂದು ಹೇಳಿದನು. ಸ್ನೇಹ ಕೂಡ ಮಣಿಗಳನ್ನು ಎತ್ತಿಕೊಂಡು ತನ್ನ ಕೈಯಲ್ಲಿ ಇಟ್ಟುಕೊಂಡು ಎಣಿಸಲು ಪ್ರಾರಂಭಿಸಿದಳು ಮತ್ತು ಅವಳು 7 ಮಣಿಗಳಿವೆ ಎಂದು ಹೇಳಿದಳು. ಅಂಜನಾ ತನ್ನ ಹಳೆಯ ವಿಧಾನವನ್ನು ಬಳಸಿದಳು ಮತ್ತು 12 ಮಣಿಗಳಿವೆ ಎಂದು ಹೇಳಿದಳು.

ಆದರೆ, ಎರಡನೇ ಬಾರಿ ಎಣಿಸಿದ ನಂತರವೂ, ಜೀವಿಕಾಳನ್ನು ಹೊರತುಪಡಿಸಿ ಇಬ್ಬರು ವಿದ್ಯಾರ್ಥಿಗಳು ಮಾತ್ರ ಸರಿಯಾದ ಉತ್ತರವನ್ನು ನೀಡಿದರು. ಅದರಲ್ಲೂ, ಸ್ನೇಹಾ ಕೇವಲ ಕೇಳಿಸಿಕೊಂಡು 7 ಎಂದು ಹೇಳಿದ್ದಳು. ಆದರೆ ಅವಳು ತನ್ನ ಎಣಿಕೆಯ ವಿಧಾನವನ್ನು ಮಾರ್ಪಡಿಸಿದಳು ಮತ್ತು ಈಗಾಗಲೇ ಎಣಿಸಲಾದ ಮಣಿಗಳನ್ನು ಬೇರ್ಪಡಿಸಲು ಪ್ರಯತ್ನಿಸಿದಳು. ಅದೇ ರೀತಿ, ಜೀವಿಕಾ ಎಣಿಸುವುದನ್ನು ನೋಡಿದ ನಂತರ, ಶುಭಂ, ಈಗಾಗಲೇ ಎಣಿಸಲಾದ ಮಣಿಗಳನ್ನು ಪ್ರತ್ಯೇಕವಾಗಿ ಇಡುವ ಕೆಲಸ ಮಾಡಿ ಸರಿಯಾದ ಉತ್ತರವನ್ನು ತಲುಪಿದನು.

ವಿದ್ಯಾರ್ಥಿಗಳು ತಮ್ಮ ಸ್ನೇಹಿತರ ಎಣಿಕೆಗಳನ್ನು ನೋಡುತ್ತಿರುವಾಗ, ಅವರು ತಮ್ಮ ವಿಧಾನವನ್ನು ಪರಿಷ್ಕರಿಸಿಕೊಳ್ಳುತ್ತಿದರು. ಯಾವುದೇ ಶಿಕ್ಷಕರ ಮಧ್ಯಪ್ರವೇಶವಿಲ್ಲದೆ, ಅವರು ತಮ್ಮ ತಪ್ಪುಗಳನ್ನು ಗುರುತಿಸಿದರು ಮತ್ತು ಸರಿಯಾದ ವಿಧಾನವನ್ನು ಅಳವಡಿಸಿಕೊಂಡರು. ಈ ಕಲಿಕಾ ವಿಧಾನದಲ್ಲಿ ವಿದ್ಯಾರ್ಥಿಗಳು ಕುರುಡಾಗಿ ನಕಲು ಮಾಡುವ ಬದಲು, ಯೋಚಿಸುವ, ವಿಶ್ಲೇಷಿಸುವ ಮತ್ತು ಸುಧಾರಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾರೆ ಎಂದು ಈ ಉದಾಹರಣೆಯಿಂದ ತಿಳಿಯುತ್ತದೆ. ಮಕ್ಕಳ ಮನಃಶಾಸ್ತ್ರಜ್ಞ ಜೀನ್ ಪಿಯಾಗೆಟ್ ತಮ್ಮ "ಥಿಯರಿ ಆಫ್ ಕಾಗ್ನಿಟಿವ್ ಡೆವಲಪ್ಮೆಂಟ್"ನಲ್ಲಿ, ವಿದ್ಯಾರ್ಥಿಗಳು ಪರಸ್ಪರ ಸಂವಹನ ನಡೆಸುವುದರಿಂದ ಮತ್ತು ತಮ್ಮ ತಪ್ಪುಗಳನ್ನು ಸರಿಪಡಿಸುವುದರಿಂದ ಗುಂಪುಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಲಿಯುತ್ತಾರೆ ಎಂದು ಹೇಳಿದ್ದಾರೆ. ಈ ತಿಳುವಳಿಕೆಯು ಸಹವರ್ತಿ ಕಲಿಕೆಯ ಮಹತ್ವವನ್ನು ವೈಜ್ಞಾನಿಕವಾಗಿ ಸಾಬೀತುಪಡಿಸುತ್ತದೆ.

## ಉರುಳುವ ಮತ್ತು ಜಾರುವ ವಸ್ತುಗಳನ್ನು ಅರ್ಥಮಾಡಿಕೊಳ್ಳುವುದು

ಮತ್ತೊಂದು ಅವಲೋಕನದಲ್ಲಿ, 2ನೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ತಮ್ಮ ಕಾರ್ಯ ಪುಸ್ತಕದಲ್ಲಿರುವ ಕೋಷ್ಟಕವೊಂದರ ಮೇಲೆ ಕೆಲಸ ಮಾಡುತ್ತಿದ್ದರು. ಈ ಕೋಷ್ಟಕದಲ್ಲಿ ವಸ್ತುಗಳ ಒಂದು ಪಟ್ಟಿ ಇದ್ದು, ಅವುಗಳಲ್ಲಿ ಯಾವ ವಸ್ತುಗಳು ಉರುಳುತ್ತವೆ, ಯಾವುವು ಜಾರುತ್ತವೆ ಮತ್ತು ಯಾವುವು ಎರಡನ್ನೂ ಮಾಡಬಹುದು ಎಂದು ಮಕ್ಕಳು ಊಹಿಸಬೇಕಾಗಿತ್ತು. ಅವರ ನಡುವಿನ ಸಂಭಾಷಣೆ ಹೀಗಿತ್ತು:

*ಜೋಯಾ: ಲೋಟವು ಜಾರುತ್ತದೆ.*

*ಸುರ್ಜಾ: ಇಲ್ಲ, ನನ್ನ ಪ್ರಕಾರ ನಾವು ಎರಡಕ್ಕೂ ಟಿಕ್ ಹಾಕಬೇಕು*

*ಜೋಯಾ: ಅದೇಕೆ ಎರಡಕ್ಕೂ ಟಿಕ್ ಹಾಕಬೇಕು ?*

*ಸುರ್ಜಾ: (ಪಕ್ಕದಲ್ಲಿಟ್ಟಿದ್ದ ನೀರಿನ ಬಾಟಲಿಯನ್ನು ಎತ್ತಿಕೊಳ್ಳುತ್ತಾ) ನೋಡು, ಇದು ನೇರವಾಗಿ ಇಟ್ಟಾಗ ಜಾರುತ್ತದೆ, ಆದರೆ ಅದು ಬಿದ್ದಾಗ ಉರುಳಲು ಪ್ರಾರಂಭಿಸುತ್ತದೆ. (ಇಲ್ಲಿ, ಸುರ್ಜಾ ತನ್ನ ಮಾತನ್ನು ಹೇಳಲು ಲೋಟದ ಬದಲಿಗೆ ಬಾಟಲಿಯನ್ನು ಬಳಸಿದನು, ಮತ್ತು ಜೋಯಾ ಆಕ್ಷೇಪಿಸಲಿಲ್ಲ.)*

*ಜೋಯಾ: (ಸಂತೋಷದಿಂದ) ಹೌದು, ಅದು ಸರಿ!*

ಈ ಸಂಭಾಷಣೆಯು ವಿದ್ಯಾರ್ಥಿಗಳು ತಮ್ಮ ಅನುಮಾನಗಳನ್ನು ಸಹಪಾಠಿಗಳೊಂದಿಗೆ ಪರಸ್ಪರ ಸಂಭಾಷಣೆಯ ಮೂಲಕ ನಿವಾರಿಸಿ ಕೊಳ್ಳುವುದಲ್ಲದೆ, ತಮ್ಮ ಚಿಂತನೆಯನ್ನೂ ವಿಸ್ತರಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಇಲ್ಲಿ ಶಿಕ್ಷಕರು ಕೇವಲ ವೀಕ್ಷಕರಾಗಿದ್ದರು; ನಿಜವಾದ ಕಲಿಕೆಯು ವಿದ್ಯಾರ್ಥಿಗಳ ನಡುವೆಯೇ ನಡೆಯಿತು.

## ಒಟ್ಟಿಗೆ ಕಲಿಯುವುದು

4ನೇ ತರಗತಿಯ ವಿದ್ಯಾರ್ಥಿನಿ ಜಯಶ್ರೀಗೆ ಹಿಂದಿ ಓದಲು ಕಷ್ಟವಾಗುತ್ತಿತ್ತು. ಅವಳು ಶಾಂತವಾದ, ಹೆಚ್ಚು ಮಾತನಾಡದ ಹುಡುಗಿಯಾಗಿದ್ದಳು. ತರಗತಿಯ ಶಿಕ್ಷಕಿಯರು ವಿದ್ಯಾರ್ಥಿಗಳನ್ನು ಜೋಡಿಯಾಗಿ ಕೂರಿಸಿ ಪುಸ್ತಕಗಳನ್ನು ಓದಲು ಕೊಡಲಾರಂಭಿಸಿದಾಗ, ಕೆಲವೇ ದಿನಗಳಲ್ಲಿ ಜಯಶ್ರೀಯ ಓದುವ ಸಾಮರ್ಥ್ಯವು ಸುಧಾರಿಸಿತು. ಅವಳು ತರಗತಿಯ ಚರ್ಚೆಗಳಲ್ಲಿ ಮುಕ್ತವಾಗಿ ಭಾಗವಹಿಸಲು ಪ್ರಾರಂಭಿಸಿದಳು. "ನೀನು ರೌನಕ್ ಜೊತೆ ಇಷ್ಟು ಬೇಗ ಓದಲು ಕಲಿತಿದ್ದೀಯ" ಎಂದು ಜಯಶ್ರೀಯನ್ನು ಕೇಳಿದಾಗ, "ರೌನಕ್ ಮುಂದೆ ತಪ್ಪು ಓದಿದಾಗ ನನಗೆ ಹೆದರಿಕೆಯಾಗುವುದಿಲ್ಲ. ನನ್ನ ಮನಸ್ಸಿಗೆ ಬಂದದ್ದನ್ನು ನಾನು ರೌನಕ್‌ಗೆ ಕೇಳುತ್ತೇನೆ" ಎಂದು ಆಕೆ ಹೇಳಿದಳು. ವಿದ್ಯಾರ್ಥಿಗಳು ದೊಡ್ಡವರೊಂದಿಗೆ ಮಾತನಾಡಲು ಹಿಂಜರಿಯುವುದನ್ನು ಸಾಮಾನ್ಯವಾಗಿ ಕಾಣಬಹುದು. ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಂದ ಕಲಿತಾಗ, ಅವರು ಹೆಚ್ಚು ಸ್ವಾವಲಂಬಿಗಳಾಗುತ್ತಾರೆ. ಅವರು ತಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಮತ್ತು ಇತರರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳಲು ಕಲಿಯುತ್ತಾರೆ. ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

## ಶಾಲಾ ಪ್ರವಾಸ

5ನೇ ತರಗತಿಯ ವಿದ್ಯಾರ್ಥಿಗಳಿಗೆ ಶಾಲಾ ಪ್ರವಾಸವನ್ನು ಯೋಜಿಸುವ ಕೆಲಸ ನೀಡಲಾಯಿತು. ವಿದ್ಯಾರ್ಥಿಗಳು ತಮ್ಮ ಸಂಭಾಷಣೆಯನ್ನು ಪ್ರಾರಂಭಿಸಿದಾಗ, ಚರ್ಚೆಯ ಮೊದಲ ವಿಷಯವೆಂದರೆ ಪ್ರಯಾಣದ ವಿಧಾನವನ್ನು ನಿರ್ಧರಿಸುವುದು. ಅಯಾನ್ ಹೇಳಿದ, "ಒಂದು ಆಟೋರಿಕ್ಷಾ 5 ಜನರನ್ನು ಕೂರಿಸಲು ಸಾಧ್ಯವಾದರೆ, ಇಡೀ ತರಗತಿಗೆ 6 ಆಟೋರಿಕ್ಷಾಗಳು ಬೇಕಾಗುತ್ತವೆ."

ರಶ್ಮಿ (ಕೂಡಲೇ) ಹೇಳಿದಳು, "ನಮ್ಮ ತರಗತಿ ಮಾತ್ರ ಹೋಗುತ್ತಿಲ್ಲ! 8ನೇ ತರಗತಿಯವರೆಗಿನ ಎಲ್ಲಾ 120 ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗುತ್ತಿದ್ದಾರೆ. ಇಷ್ಟೊಂದು ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸಲು ಆಟೋಗಳ ರೈಲು ಬೇಕಾಗುತ್ತದೆ."

ವಿಕ್ರಮ್ (ನಗುತ್ತಾ) ಹೇಳಿದ, "ಹಾಗಾದರೆ ರೈಲನ್ನೇ ಕರೆಯುವ."



ಚಿತ್ರ 2: ಕಲಾಕೃತಿಯೊಂದನ್ನು ರಚಿಸುವಲ್ಲಿ ಮಗ್ನವಾಗಿರುವ ವಿದ್ಯಾರ್ಥಿಗಳು.

ಆಯಾನ್ ಮಧ್ಯಪ್ರವೇಶಿಸಿದನು, "ರೈಲು ಶಾಲೆಗೆ ಬರುವುದಿಲ್ಲ."

ವಿಶಾಲ್, "ಹಾಗಾದರೆ ಬಸ್ ಅನ್ನು ಕರೆಸಿ" ಎಂದನು.

ಎಲ್ಲರಿಗೂ ಬಸ್ಸಿನ ಕಲ್ಪನೆ ಇಷ್ಟವಾಯಿತು. ಒಂದು ಬಸ್ಸಿನಲ್ಲಿ 45-50 ವಿದ್ಯಾರ್ಥಿಗಳು ಕುಳಿತುಕೊಳ್ಳಲು ಸಾಧ್ಯವಾದರೆ, ಅವರು ಮೂರು ಬಸ್ಸುಗಳನ್ನು ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ಅವರು ಲೆಕ್ಕ ಹಾಕಿದರು.

ಈ ಚಟುವಟಿಕೆಯ ಉದ್ದಕ್ಕೂ, ವಿದ್ಯಾರ್ಥಿಗಳು ತಮ್ಮ ಅನುಭವ ಮತ್ತು ತಿಳುವಳಿಕೆಯ ಆಧಾರದ ಮೇಲೆ ತಾರ್ಕಿಕವಾಗಿ ಯೋಚಿಸಿದರು ಮತ್ತು ಸಮಸ್ಯೆ ಪರಿಹಾರಕ್ಕೆ ತಮ್ಮದೇ ಆದ ವಿಧಾನಗಳನ್ನು ವಿವರಿಸಿದರು. ಪ್ರತಿ ವಿದ್ಯಾರ್ಥಿಯು ವಿಭಿನ್ನವಾಗಿ ಯೋಚಿಸುತ್ತಾನೆ/ಳೆ ಮತ್ತು ಸಮಸ್ಯೆಗಳನ್ನು ವಿಭಿನ್ನ ರೀತಿಯಲ್ಲಿ ಪರಿಹರಿಸುತ್ತಾನೆ/ಳೆ. ವಿದ್ಯಾರ್ಥಿಗಳು ಸಹವರ್ತಿಗಳಿಂದ ಕಲಿಯುವಾಗ, ಅವರು ವಿಭಿನ್ನ ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ತಮ್ಮ ಜ್ಞಾನವನ್ನು ಸಮೃದ್ಧಗೊಳಿಸಿಕೊಳ್ಳುತ್ತಾರೆ.

## ಎಣಿಸುತ್ತಾ ಸೇರಿಸುವುದು

2ನೇ ತರಗತಿಯ ವಿದ್ಯಾರ್ಥಿಗಳು ಕೂಡುವ ಲೆಕ್ಕಗಳನ್ನು ಮಾಡುತ್ತಿದ್ದರು. ವಿನಯ್ ಎಲ್ಲಾ ಲೆಕ್ಕಗಳನ್ನೂ ಮಾಡಿದ್ದನು. ದಿಲೀಪ್ ಇನ್ನೂ ಕೆಲಸ ಮಾಡುತ್ತಿರುವುದನ್ನು ಅವನು ಗಮನಿಸಿದನು. ದಿಲೀಪ್ ಮೊದಲು ಸೇರಿಸಬೇಕಿರುವ ಎರಡು ಸಂಖ್ಯೆಗಳು ಎಷ್ಟಿವೆಯೋ ಅಷ್ಟು ಗೆರೆಯನ್ನು ಎಳೆಯುತ್ತಿದ್ದನು. ನಂತರ ಆ ಗೆರೆಗಳನ್ನು ಒಟ್ಟಾಗಿ ಎಣಿಸುತ್ತಿದ್ದನು. ಇದನ್ನು ನೋಡಿದ ವಿನಯ್ ವಿವರಿಸಿದನು, "ನೀನು ಮತ್ತೆ ಮತ್ತೆ ಎಣಿಸುವ ಅಗತ್ಯವೇನಿದೆ? ಇದನ್ನು ನೋಡು (ದಿಲೀಪ್ ಚಿತ್ರಿಸಿದ ಒಂದು ಸಂಖ್ಯೆಯ ರೇಖೆಗಳನ್ನು ತೋರಿಸುತ್ತಾ), ನಿನಗೆ ಈಗಾಗಲೇ ಮೊದಲ ಸಂಖ್ಯೆಯಲ್ಲಿ ಎಷ್ಟು ಗೆರೆಗಳಿವೆ ಎಂದು ತಿಳಿದಿದೆಯಲ್ವಾ, ಆದ್ದರಿಂದ ನೀನು ಅಲ್ಲಿಂದ ಮುಂದಕ್ಕೆ ಎಣಿಸು." ಎಂದಾಗ ದಿಲೀಪ್ ಆಶ್ಚರ್ಯಚಕಿತನಾಗಿ, "ಓಹ್ ಹೌದು, ನಾನು ಅದರ ಬಗ್ಗೆ ಯೋಚಿಸಿರಲಿಲ್ಲ!" ಎಂದನು.

ಒಬ್ಬ ವಿದ್ಯಾರ್ಥಿಯು ಇನ್ನೊಬ್ಬರ ತಪ್ಪನ್ನು ಗುರುತಿಸಿದಾಗ ಅಥವಾ ಹೊಸ ಮಾಹಿತಿಯನ್ನು ಒದಗಿಸಿದಾಗ, ಅವರು ತಮ್ಮದೇ ಆದ ತಾರ್ಕಿಕ ಮತ್ತು ಆಲೋಚನಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾನೆ. ಇತರ ವಿದ್ಯಾರ್ಥಿಗಳು ಸಹ ಗೆಳೆಯರ ವಿಧಾನದ ಬಗ್ಗೆ ಕಲಿಯುತ್ತಾರೆ, ಅದನ್ನು ತಮ್ಮದೇ ಆದ ವಿಧಾನದೊಂದಿಗೆ ಹೋಲಿಸುತ್ತಾರೆ ಮತ್ತು ಬದಲಾವಣೆಗಳನ್ನು ಮಾಡಿಕೊಳ್ಳುತ್ತಾರೆ. ಈ ಕಲಿಕೆಯ ಪ್ರಕ್ರಿಯೆಯು ಅವರಿಗೆ ವಿಮರ್ಶಾತ್ಮಕ ಮತ್ತು ವಿಶ್ಲೇಷಣಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ.

## ಕಥೆ ಬರೆಯುವುದು

3ನೇ ತರಗತಿಯ ವಿದ್ಯಾರ್ಥಿಗಳಿಗೆ ಕೆಲವು ಚಿತ್ರಗಳನ್ನು ನೀಡಿ ಅವುಗಳ ಕುರಿತು ಕಥೆ ಬರೆಯುವ ಕೆಲಸವನ್ನು ನೀಡಲಾಯಿತು.

ನವ್ಯಾ "ನನಗೆ ಬರೆಯಲು ಬರುವುದಿಲ್ಲ " ಎಂದು ಹೇಳಿದಳು.

ಸಾಕ್ಷಿ "ನಾನು ಬರೆಯಬಲ್ಲೆ, ಆದರೆ ಬರೆಯುವುದೇನನ್ನು?" ಎಂದು ಕೇಳಿದಳು.

ನವ್ಯಾ "ಚಿತ್ರದಲ್ಲಿ ಒಬ್ಬ ಮನುಷ್ಯನಿದ್ದಾನೆ ಮತ್ತು ಕೆಲವು ಮಂಗಗಳಿವೆ. ಅವುಗಳ ಬಗ್ಗೆ ಒಂದು ಕಥೆಯನ್ನು ರಚಿಸು" ಎಂದು ಸೂಚಿಸಿದಳು.

ಗೌರವ್, "ಹೌದು, ಬಹುಶಃ ಈ ಮನುಷ್ಯ ಮಂಗಗಳನ್ನು ಗದರಿಸುತ್ತಿದ್ದಾನೆಯೇ?"

ನವ್ಯಾ, "ಈ ಮನುಷ್ಯನೇ ಈ ತೋಟದ ಮಾಲೀಕನಾಗಿರಬೇಕು. ಹೀಗೆ ಪ್ರಾರಂಭಿಸೋಣ - ಒಬ್ಬ ಮನುಷ್ಯನಿಗೆ ಒಂದು ದೊಡ್ಡ ತೋಟವಿತ್ತು..."

ಗೌರವ್ ಹೇಳಿದನು, "ಒಂದು ದಿನ ಮಂಗವೊಂದು ಬಂದು ಮಾಲೀಕರನ್ನು 'ನಾನು ಇಲ್ಲಿ ವಾಸಿಸಬಹುದೇ?' ಎಂದು ಕೇಳಿತು."

ಒದಗಿಸಿದ ಚಿತ್ರಗಳ ಆಧಾರದ ಮೇಲೆ ಮೂವರು ವಿದ್ಯಾರ್ಥಿಗಳು ತಮ್ಮದೇ ಆದ ಊಹೆಗಳು ಮತ್ತು ಆಲೋಚನೆಗಳನ್ನು ಮಾಡುವ ಮೂಲಕ

ಕಥೆಯನ್ನು ಮುಂದುವರಿಸಿದರು. ಪ್ರತಿಯೊಬ್ಬರೂ ತಮ್ಮದೇ ಆದ ಪ್ರತಿಭೆಯನ್ನು ಹೊಂದಿದ್ದರು. ಇದು ಆ ತಂಡವು ಉತ್ತಮ ಕಥೆಯನ್ನು ಬರೆಯಲು ಸಹಾಯ ಮಾಡಿತು. ವಿದ್ಯಾರ್ಥಿಗಳು ಪರಸ್ಪರ ಸಂವಹನ ನಡೆಸಿದರು, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಮತ್ತು ಇತರರ ಅಭಿಪ್ರಾಯವನ್ನು ಅರ್ಥಮಾಡಿಕೊಂಡರು. ಪರಸ್ಪರರ ಸಹಾಯದಿಂದ ಕಷ್ಟಕರವಾದ ಕೆಲಸಗಳು ಸಹ ಸುಲಭವಾಗಬಹುದು ಎಂದು ಅವರು ಅರ್ಥಮಾಡಿಕೊಂಡರು. ಈ ಕೌಶಲ್ಯವು ಅವರ ಜೀವನದುದ್ದಕ್ಕೂ ಅವರಿಗೆ ಉಪಯುಕ್ತವಾಗಿರುತ್ತದೆ.

ಸಹವರ್ತಿ ಕಲಿಕೆಯನ್ನು ಕೇವಲ "ಬುದ್ಧಿವಂತ ಮತ್ತು ದುರ್ಬಲ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸುವುದು, ಬುದ್ಧಿವಂತರು ಕಲಿಸುವುದು ಮತ್ತು ದುರ್ಬಲರು ಕಲಿಯುವುದು" ಎಂದು ಸರಳವಾಗಿ ವ್ಯಾಖ್ಯಾನಿಸುವುದು ಅದರ ಸಂಕುಚಿತ ತಿಳುವಳಿಕೆಯಾಗುತ್ತದೆ. ಇದರ ಬದಲಾಗಿ, ಶಿಕ್ಷಕರು ಸಹವರ್ತಿ ಕಲಿಕೆಯನ್ನು ಒಂದು ಅಗತ್ಯ ಮತ್ತು ಸ್ವಾಭಾವಿಕ ಶಿಕ್ಷಣ ವಿಧಾನವಾಗಿ ಸ್ವೀಕರಿಸಿದಾಗ, ವಿದ್ಯಾರ್ಥಿಗಳ ಕಲಿಕೆ ಸಮೃದ್ಧವಾಗುವುದಷ್ಟೇ ಅಲ್ಲದೆ, ಶಿಕ್ಷಕರ ಕೆಲಸವೂ ಹೆಚ್ಚು ಸರಳವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಶಿಕ್ಷಕರು ಹೆಚ್ಚಿನ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಗಮನ ಕೊಡಲು ಸಾಧ್ಯವಾಗುತ್ತದೆ.

## ಸಹವರ್ತಿ ಕಲಿಕಾ ವಿಧಾನದ ಉತ್ತಮ ಬಳಕೆಗೆ ಕೆಲವು ಸಲಹೆಗಳು:

- ಗುಂಪುಗಳನ್ನು ರಚಿಸುವಾಗ, ಗುಂಪು ಕೆಲಸದಲ್ಲಿ ಪ್ರತಿಯೊಬ್ಬರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ವಿದ್ಯಾರ್ಥಿಗಳ ವಯಸ್ಸು, ಆಸಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಪರಿಗಣಿಸುವುದು ಮುಖ್ಯ.
- ಶಿಕ್ಷಕರು ಗುಂಪಿಗೆ ನಿಯೋಜಿಸಲಾದ ಕಾರ್ಯ ಮತ್ತು ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಪಾತ್ರವನ್ನು ಸರಳ ಮತ್ತು ಸ್ಪಷ್ಟ ಪದಗಳಲ್ಲಿ ವಿವರಿಸಬೇಕು. ಇದು ಕೆಲಸದಲ್ಲಿ ಸ್ಪಷ್ಟತೆಯನ್ನು ತರುತ್ತದೆ ಮತ್ತು ಎಲ್ಲಾ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸುತ್ತದೆ.
- ಗುಂಪು ಕೆಲಸದಲ್ಲಿ ವಿದ್ಯಾರ್ಥಿಗಳು ಭಾಗವಹಿಸದಿರುವ ಕಾರಣಗಳನ್ನು ಗುರುತಿಸಿ ಮತ್ತು ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ ಅವರನ್ನು ಸೇರಿಸಲು ಪ್ರಯತ್ನಿಸಬೇಕು.
- ವಿದ್ಯಾರ್ಥಿಗಳು ಮಾಡುತ್ತಿರುವ ಸಾಮೂಹಿಕ ಕೆಲಸ ಅಥವಾ ಚರ್ಚೆಯಲ್ಲಿ ಶಿಕ್ಷಕರು ಅಗತ್ಯವಿದ್ದಾಗ ಸೂಕ್ತ ಮಾರ್ಗದರ್ಶನ ನೀಡಬೇಕು.
- ಸಹವರ್ತಿ ಕಲಿಕೆಯಲ್ಲಿ ಒಂದೇ ತಂತ್ರವನ್ನು ಬಳಸುವ ಬದಲು, ಅಗತ್ಯವಿದ್ದಾಗ ಬದಲಾವಣೆಗಳನ್ನು ಮಾಡಿ.
- ವಿದ್ಯಾರ್ಥಿಗಳ ವಯಸ್ಸು ಮತ್ತು ತಿಳುವಳಿಕೆಯ ಮಟ್ಟಕ್ಕೆ ಅನುಗುಣವಾಗಿ ಚಟುವಟಿಕೆಗಳನ್ನು ಸರಳೀಕರಿಸಬಹುದು ಅಥವಾ ಸಂಕೀರ್ಣಗೊಳಿಸಬಹುದು.
- ವಿದ್ಯಾರ್ಥಿಗಳ ಟೀಂ ವರ್ಕ್, ಸಹಯೋಗದ ಮನೋಭಾವ ಮತ್ತು ಪ್ರಯತ್ನಗಳನ್ನು ಪ್ರಶಂಸೆ ಮಾಡಿ. ಇದು ಸಕಾರಾತ್ಮಕ ಕಲಿಕಾ ವಾತಾವರಣವನ್ನು ಸೃಷ್ಟಿಸುತ್ತದೆ.
- ಕಾಲಕಾಲಕ್ಕೆ ವಿದ್ಯಾರ್ಥಿ ಪಾತ್ರಗಳನ್ನು ಬದಲಾಯಿಸಿ. ಇದರಿಂದ ಪ್ರತಿಯೊಬ್ಬರೂ ನಾಯಕತ್ವ ವಹಿಸಲು ಮತ್ತು ಕಲಿಯಲು ಅವಕಾಶವಿರುತ್ತದೆ.

## ಅಂತಿಮ ನುಡಿ

ಸಹವರ್ತಿ ಕಲಿಕೆ ಎಂಬುದು ಕೇವಲ ಬೋಧನೆಯ ವಿಧಾನವಲ್ಲ, ಬದಲಾಗಿ ವಿದ್ಯಾರ್ಥಿಗಳ ಸ್ವಾಭಾವಿಕ ಕಲಿಕಾ ಪ್ರಕ್ರಿಯೆಯ ವಿಸ್ತರಣೆಯಾಗಿದೆ. ವಿದ್ಯಾರ್ಥಿಗಳು ತಮ್ಮಲ್ಲೇ ವಿಚಾರ-ವಿಮರ್ಶೆ ಮಾಡಿದಾಗ, ಅವರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಲ್ಲದೆ, ಸಹಕಾರ, ತಾಳ್ಮೆ ಮತ್ತು ಸಹಿಷ್ಣುತೆಯಂತಹ ಸಾಮಾಜಿಕ ಗುಣಗಳನ್ನು ಸಹ ಬೆಳೆಸಿಕೊಳ್ಳುತ್ತಿರುತ್ತಾರೆ. ರಾಷ್ಟ್ರೀಯ ಶಿಕ್ಷಣ ನೀತಿ-2020 ಸಹ ಕಲಿಕೆಯ ಪ್ರಕ್ರಿಯೆಯನ್ನು ಹೆಚ್ಚು ಸಂವಾದಾತ್ಮಕ ಮತ್ತು ಪ್ರಾಯೋಗಿಕವಾಗಿಸಬೇಕು ಎಂದು ಒತ್ತಿಹೇಳುತ್ತದೆ. ವಿಶೇಷವಾಗಿ ಶಿಕ್ಷಕರು ಮತ್ತು ಪೋಷಕರು ಒಟ್ಟಾಗಿ, ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಂದ ಕಲಿಯಲು ಪ್ರೋತ್ಸಾಹಿಸಬೇಕು. ಇದರಿಂದ, ಕಲಿಕೆ ಆಸಕ್ತಿದಾಯಕವಾಗುವುದಲ್ಲದೆ ಹೆಚ್ಚು ಪರಿಣಾಮಕಾರಿ ಹಾಗೂ ಸ್ಮರಣೀಯವೂ ಆಗಬಹುದು.



**ಶಮೀಮ್ ಭಾಟಿ** 2013ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಗಣಿತ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ವಿದ್ಯಾರ್ಥಿಗಳೊಂದಿಗೆ ಸಮಯ ಕಳೆಯುವುದನ್ನು ಮತ್ತು ಅವರೊಂದಿಗೆ ಮಾತುಕತೆ ನಡೆಸುವುದನ್ನು ಆನಂದಿಸುತ್ತಾರೆ. ಪ್ರಸ್ತುತ, ಅವರು ರಾಜಸ್ಥಾನದಲ್ಲಿ ಗಣಿತ ಬೋಧನೆ ಕುರಿತು ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** shamim.bhati@azimpremjifoundation.org

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆಶಾ ಮಹೇಶ್ವರ ಸಿಂಗ್

# ಭಾಷಾ ಬೋಧನೆಗೆ ಸಂದರ್ಭೋಚಿತ ಸಾಮಗ್ರಿಗಳ ಬಳಕೆ

**ಪೊಂಪಾ ಘೋಷಾಲ್**

**ತರಗತಿ ಕೋಣೆಗಳು ಮತ್ತು ಪಠ್ಯಪುಸ್ತಕಗಳ ಗಡಿಗಳನ್ನು ಮೀರಿ, ಮಕ್ಕಳ ಸುತ್ತಮುತ್ತಲಿನ ಅಸಂಖ್ಯಾತ ವಸ್ತುಗಳು ಮತ್ತು ಅವಕಾಶಗಳು ಅವರ ಭಾಷಾ ಕಲಿಕೆಯ ಹಾದಿಯನ್ನು ಸುಲಭಗೊಳಿಸುತ್ತವೆ. ಶಿಕ್ಷಕರು ಈ ವಸ್ತುಗಳನ್ನು ಮತ್ತು ಮಕ್ಕಳ ನೈಜ ಜೀವನದ ಅನುಭವಗಳನ್ನು ತರಗತಿಯ ಪ್ರಕ್ರಿಯೆಯೊಂದಿಗೆ ಜೋಡಿಸಿದಾಗ, ಕಲಿಕೆಯು ಕೇವಲ ಉತ್ತಮಗೊಳ್ಳುವುದಷ್ಟೇ ಅಲ್ಲದೆ ಆನಂದದಾಯಕವೂ ಆಗುತ್ತದೆ. ಇದು ಅಂತಹ ಅನುಭವಗಳ ಕುರಿತಾದ ಲೇಖನ.**

ನಾನು ಚಿಕ್ಕವಳಿದ್ದಾಗ ಅಪ್ಪ ನನ್ನನ್ನು ಸೈಕಲ್ ಮೇಲೆ ಕೂರಿಸಿಕೊಂಡು ಬಹಳ ದೂರದವರೆಗೆ ಸುತ್ತಾಡಿಸಲು ಕರೆದುಕೊಂಡು ಹೋಗುತ್ತಿದ್ದರು. ಹಾಗೆ ಹೋಗುವಾಗಲೆಲ್ಲಾ ರಸ್ತೆಯ ಪಕ್ಕದ ನಾಮಫಲಕಗಳನ್ನು ಗಮನವಿಟ್ಟು ಓದಲು ಹೇಳುತ್ತಿದ್ದರು; "ಆ ಬೋರ್ಡ್ ಓದು" ಅಥವಾ "ಈ ಜಾಗದ ಹೆಸರೇನು ಅಂತ ನೋಡಿ ಹೇಳು" ಎನ್ನುತ್ತಿದ್ದರು. ದಿನಕಳೆದಂತೆ ಇದು ನನಗೆ ಅಭ್ಯಾಸವೇ ಆಗಿಹೋಯಿತು. ದಾರಿಯುದ್ದಕ್ಕೂ ಕಾಣಸಿಗುವ ಪ್ರತಿಯೊಂದು ನಾಮಫಲಕಗಳು, ಪೋಸ್ಟರುಗಳು, ಜಾಹೀರಾತುಗಳನ್ನು ನಾನು ಓದತೊಡಗಿದ್ದೆ. ಇದರಿಂದ ನನ್ನ ಓದುವ ಸಾಮರ್ಥ್ಯವೂ ಸುಧಾರಿಸಿತು ಹಾಗೂ ಓದುವ ವಿಚಾರದಲ್ಲಿ ಆತ್ಮವಿಶ್ವಾಸವೂ ಹೆಚ್ಚಾಯಿತು.

ಒಬ್ಬ ಶಿಕ್ಷಕಿಯಾಗಿ ನಾನೀಗ, ವಿದ್ಯಾರ್ಥಿಗಳ ಕಲಿಕೆಯು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗಿರುವುದಿಲ್ಲ ಹಾಗೂ ಕಲಿಯಲು ಅದನ್ನೂ ಮೀರಿದ ಒಂದು ದೊಡ್ಡ ಜಗತ್ತು ಆಚೆಗಿದೆ ಎಂದು ನಂಬುತ್ತೇನೆ. ನನ್ನ ಬಾಲ್ಯದ ದಿನಗಳನ್ನು ನನ್ನ ತರಗತಿಯಲ್ಲೂ ಮರಳಿ ತರಲು ನಾನು ಯೋಚಿಸಿದೆ. ನಿಜ ಹೇಳಬೇಕೆಂದರೆ, ಮಕ್ಕಳ ಸಾಹಿತ್ಯ, ಪತ್ರಿಕೆಗಳ ಮುಖ್ಯಾಂಶಗಳು, ದಿನ ಪತ್ರಿಕೆಗಳ ಮುಖ್ಯ ಶೀರ್ಷಿಕೆಗಳು, ಮಕ್ಕಳ ಪತ್ರಿಕೆಗಳು ಮತ್ತು ಹೋರ್ಡಿಂಗ್‌ಗಳನ್ನು ಅರ್ಥಮಾಡಿಕೊಳ್ಳುವುದು 4ನೇ ತರಗತಿಯ ಕಲಿಕಾ ಫಲಿತಗಳಲ್ಲಿ ಸೇರಿದ್ದು, ಇದನ್ನು ಗಮನಿಸಿದಾಗಲೇ ನನಗೆ ಈ ಆಲೋಚನೆ ಬಂದಿತ್ತು. 'ಪಠ್ಯಕ್ರಮದ ನಿರೀಕ್ಷೆಗಳ' ವಿಭಾಗದಲ್ಲಿ ಗ್ರಂಥಾಲಯ, ಓದುವ ಮೂಲೆ ಮತ್ತು ವಿವಿಧ ವಸ್ತುಗಳ ರ್‍ಯಾಪರ್‌ಗಳನ್ನು ಹುಡುಕಿ ಓದುವ ತಂತ್ರವನ್ನು ತಿಳಿದುಕೊಂಡೆ. ಓದಲು ಕಷ್ಟಪಡುವ ವಿದ್ಯಾರ್ಥಿಗಳು ಸಹ ದಿನನಿತ್ಯದ ಬದುಕಿನಲ್ಲಿ ಕಾಣಸಿಗುವ ಹೋರ್ಡಿಂಗ್‌ಗಳು, ಗೃಹೋಪಯೋಗಿ ವಸ್ತುಗಳ ರ್‍ಯಾಪರ್‌ಗಳು ಮತ್ತು ಪತ್ರಿಕೆಗಳಲ್ಲಿನ ಜಾಹೀರಾತುಗಳ ಮೂಲಕ ಓದಿನ ಕಡೆಗೆ ಸಾಗಬಲ್ಲರು ಎಂದು ನನಗೆ ತಿಳಿದಿತ್ತು. ಏಕೆಂದರೆ, ಈ ಪೂರಕ ಸಾಮಗ್ರಿಗಳಲ್ಲಿರುವ ಚಿತ್ರಗಳು ಅವರಿಗೆ ಊಹಿಸಿ ಓದುವುದಕ್ಕೆ ಪ್ರೋತ್ಸಾಹಿಸುತ್ತವೆ.

## ಸಂಭಾಷಣೆಗಳ ಮೂಲಕ ಕಲಿಕಾ ವಾತಾವರಣದ ಸೃಷ್ಟಿ

ಯೋಜನೆಯಂತೂ ಮನಸ್ಸಿನಲ್ಲೇ ರೂಪಿತವಾಗಿತ್ತು. ಮುಗುಳ್ನಗುತ್ತಾ ತರಗತಿಯೊಳಗೆ ಕಾಲಿಟ್ಟೆ. ಕೈಯಲ್ಲೊಂದು ಬಿಸ್ಕತ್ ಪ್ಯಾಕೆಟ್, ಬ್ಯಾಗಿನೊಳಗೆ ವಾರ್ತಾಪತ್ರಿಕೆ, ನಿಯತಕಾಲಿಕೆಗಳು ಹಾಗೂ ಕಾಗದದ ಚೀಟಿಗಳ ರಾಶಿಯೇ ಇತ್ತು. ನಾನು ತರಗತಿ ಪ್ರವೇಶಿಸುತ್ತಿದ್ದಂತೆಯೇ ಒಂದು ಜನಪ್ರಿಯ ಬಿಸ್ಕತ್ ಜಾಹೀರಾತಿನ ನಾಟಕೀಯ ಶೈಲಿಯಲ್ಲಿ (ಒಂದು ಪ್ರಸಿದ್ಧ ಬಿಸ್ಕತ್ ಜಾಹೀರಾತಿನಲ್ಲಿ ಹೇಳುವಂತೆ), "ಎಲ್ಲಕ್ಕಿಂತ ಮೊದಲು ಇದನ್ನು ತಿರುಗಿಸಿ, ಆಮೇಲೆ ಇದನ್ನು ನೆಕ್ಕಿ, ಆಮೇಲೆ ಹಾಲಿನಲ್ಲಿ ಅದ್ದಿ ತಿನ್ನಿ. ತುಂಬಾ ಸ್ವಾದಿಷ್ಟವಾಗಿದೆ ಅಲ್ವಾ! ಹೇಳಿ ನೋಡೋಣ, ಇದೇನು?" ಎಂದು ಕೇಳಿದೆ.

ನವ್ಯಾ ತಕ್ಷಣವೇ ಉತ್ತರಿಸಲು ತುದಿಗಾಲಲ್ಲಿ ನಿಂತಿದ್ದಳು. ಅವಳು ಪಟ್ಟನೆ, "ಮೇಡಂ, ಇದು ಒಂದು ಜಾಹೀರಾತಲ್ಲವೇ!" ಎಂದಳು.

ನಾನು ಬಿಸ್ಕತ್ ಪ್ಯಾಕೆಟ್ ಎತ್ತಿ ಎಲ್ಲರಿಗೂ ತೋರಿಸುತ್ತಾ, "ಹೌದು! ಸರಿಯಾಗಿ ಹೇಳಿದೆ. ಇದೊಂದು ಜಾಹೀರಾತು. ಹಾಗಾದರೆ, ಇವತ್ತು ನಾವು ತರಗತಿಯಲ್ಲಿ ಏನು ಮಾಡಲಿದ್ದೇವೆ ಎಂದು ಯಾರಾದರೂ ಊಹಿಸಬಲ್ಲಿರಾ?" ಎಂದು ಕೇಳಿದೆ.

ಇದನ್ನು ಕೇಳುತ್ತಿದ್ದಂತೆ ಇಡೀ ತರಗತಿ ಉತ್ಸಾಹದಿಂದ ತುಂಬಿತು. ನವ್ಯಾ ತಕ್ಷಣವೇ "ಜಾಹೀರಾತು ಚಟುವಟಿಕೆ!" ಎಂದು ಕಣ್ಣರಳಿಸುತ್ತಾ ಊಹಿಸಿದಳು.

ಚಾರು, "ಮೇಡಂ, ನಾವು ಮೂರನೇ ತರಗತಿಯಲ್ಲೂ ಇಂತಹುದೇ ಚಟುವಟಿಕೆ ಮಾಡಿದ್ದೆವಲ್ಲವೇ?" ಎಂದಳು.

ನಾನು ಮುಗುಳ್ನಗುತ್ತಾ, "ಖಂಡಿತ ಮಾಡಿದ್ದೆವು. ಆ ಚಟುವಟಿಕೆಯಲ್ಲಿ ನಾವು ಏನು ಮಾಡಿದ್ದೆವು ಎಂಬುದು ನಿನಗೆ ನೆನಪಿದೆಯೇ?" ಎಂದು ಕೇಳಿದೆ.



*ಚಿತ್ರ 1: 'ಜಾಹೀರಾತು ಚಟುವಟಿಕೆ'ಯು ವಿದ್ಯಾರ್ಥಿಗಳ ಆಸಕ್ತಿಯನ್ನು ಸೆಳೆಯುತ್ತದೆ.*

ಚಾರು ಉತ್ಸಾಹದಿಂದ ತಲೆಯಾಡಿಸುತ್ತಾ, “ಖಂಡಿತ ನನಗೆ ನೆನಪಿದೆ ಮೇಡಂ! ನಾವೆಲ್ಲರೂ ನಮ್ಮ ನಮ್ಮ ಮನೆಯಿಂದ ಬೇರೆ ಬೇರೆ ವಸ್ತುಗಳನ್ನು ತಂದಿದ್ದೆವು. ಆಮೇಲೆ ಅವುಗಳನ್ನು ಎಲ್ಲರಿಗೂ ತೋರಿಸಿ, ಅವುಗಳ ಬಗ್ಗೆ ಓದಿದ್ದೆವು” ಎಂದಳು.

ನಾನು ಏನನ್ನೋ ನೆನಪು ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ನಟಿಸುತ್ತಾ, “ಅದೇನಪ್ಪಾ? ನನಗೆ ಸರಿಯಾಗಿ ನೆನಪಿಗೆ ಬರುತ್ತಿಲ್ಲವಲ್ಲ” ಎಂದು ಹೇಳಿದೆ.

> **ಓದಲು ಕಷ್ಟಪಡುವ ವಿದ್ಯಾರ್ಥಿಗಳು ಸಹ ದಿನನಿತ್ಯದ ಬದುಕಿನಲ್ಲಿ ಕಾಣಸಿಗುವ ಹೋರ್ಡಿಂಗ್‌ಗಳು, ಗೃಹೋಪಯೋಗಿ ವಸ್ತುಗಳ ರ್‍ಯಾಪರ್‌ಗಳು ಮತ್ತು ಪತ್ರಿಕೆಗಳಲ್ಲಿನ ಜಾಹೀರಾತುಗಳ ಮೂಲಕ ಓದಿನ ಕಡೆಗೆ ಸಾಗಬಲ್ಲರು ಎಂದು ನನಗೆ ತಿಳಿದಿತ್ತು.**

ಆಗ ಚಾರು ನನಗೆ ನೆನಪಿಸುತ್ತಾ ವಿವರವಾಗಿ ಹೇಳಲಾರಂಭಿಸಿದಳು. “ಮೇಡಂ, ನಿಮಗೆ ನೆನಪಿರಬಹುದು, ಆವತ್ತು ನಾವೆಲ್ಲರೂ ಉಪ್ಪು, ಅಕ್ಕಿ, ಚಾಕೊಲೇಟ್, ನಮ್ಕೀನ್ ಥರದ ಬೇರೆ ಬೇರೆ ವಸ್ತುಗಳ ರ್‍ಯಾಪರ್‌ಗಳು ಹಾಗೂ ಚಹಾ ಪುಡಿ, ಬೆಂಕಿಕಡ್ಡಿಯ ಪೆಟ್ಟಿಗೆ, ಖಾಲಿ ಬಾಟಲಿಗಳಂತಹ ವಸ್ತುಗಳನ್ನು ಮನೆಯಿಂದ ತರಗತಿಗೆ ತಂದಿದ್ದೆವು. ಆಮೇಲೆ ಆ ವಸ್ತುಗಳ ಮೇಲೆ ಬರೆದಿದ್ದ ಮಾಹಿತಿಯನ್ನು ಗಮನವಿಟ್ಟು ಓದಿದ್ದೆವು ಹಾಗೂ ಅದನ್ನು ಪರಸ್ಪರ ಹಂಚಿಕೊಂಡಿದ್ದೆವು. ನನಗಿನ್ನೂ ನೆನಪಿದೆ, ಅಂಟಿನ ಚೌಕಾಕಾರದ ಬಾಟಲಿಯನ್ನು ತಂದಿದ್ದೆ. ಅದರ ಮೇಲೆ ಅದರ ತೂಕ, ಮಾರಾಟ ಬೆಲೆ, ಕಂಪನಿಯ ಹೆಸರು ಮತ್ತು ಅದನ್ನು ಬಳಸುವ ವಿಧಾನದ ಬಗ್ಗೆ ನಾನು ಓದಿದ್ದೆ. ಆಗ ನೀವು ನನಗೆ ‘ಇದು ಅಂಟಿನ ಬಾಟಲಿ, ಇದರ ತೂಕ 25 ಗ್ರಾಂ’ ಎಂದು ಅದನ್ನು ಓದಬೇಕೆಂದು ಹೇಳಿಕೊಟ್ಟಿದ್ದಿರಿ. ಆಮೇಲೆ ನಾನು ಆ ಅಂಟನ್ನು ಬಳಸುವ ಕ್ರಮದ ಬಗ್ಗೆಯೂ ವಿವರಿಸಿದ್ದೆ. ಹೌದು, ನಾನು ಆ ಮಾಹಿತಿಯನ್ನು ಬರೆಯಲು ಕೂಡ ಪ್ರಯತ್ನಿಸಿದ್ದೆ.”

ನಾನು ಉತ್ಸಾಹದಿಂದ, “ಶಹಬ್ಬಾಶ್ ಚಾರು! ನಿನ್ನ ಸ್ಮರಣಶಕ್ತಿ ಅದ್ಭುತವಾಗಿದೆ.” ಎಂದೆ.

ರಾಜೀವ್ ಕೈ ಎತ್ತಿ, “ಮೇಡಂ, ನಾವು ಒಂದನೇ ತರಗತಿಯಲ್ಲೂ ಕೂಡ ಇದೇ ರೀತಿಯ ಚಟುವಟಿಕೆ ಮಾಡಿದ್ದೆವು!” ಅಂದನು.

“ಓಹೋ, ಹೌದಾ! ಏನು ಮಾಡಿದ್ದೆವು?” ಎಂದು ನಾನು ಒಂದನೇ ತರಗತಿಯ ಚಟುವಟಿಕೆಯ ಬಗ್ಗೆ ವಿವರಿಸಲು ಕೇಳಿದೆ.

ಆಗ ಮೀರಾ ಕೂಡ ಧ್ವನಿಗೂಡಿಸಿ, “ಮೇಡಂ, ನಾವೆಲ್ಲರೂ ನಮ್ಮ ನಮ್ಮ ಮನೆಯಿಂದ ರ್‍ಯಾಪರ್‌ಗಳನ್ನು ತಂದಿದ್ದೆವು ಮತ್ತು ಅವುಗಳನ್ನು ಓದಿದ್ದೆವು. ನೀವು ಆ ಎಲ್ಲಾ ರ್‍ಯಾಪರ್‌ಗಳನ್ನು ಸಂಗ್ರಹಿಸಿ ಒಂದು ಕಡತವನ್ನೇ ಮಾಡಿದ್ದಿರಿ” ಎಂದಳು.

ನಾನು ನಗುತ್ತಾ, “ಆಮೇಲೆ ಏನಾಯಿತು?” ಎಂದು ಕೇಳಿದೆ.

ಆಗ ಮೀರಾ, “ನನಗೆ ನೆನಪಿದೆ, ಆಮೇಲೆ ನೀವು ರ್‍ಯಾಪರ್‌ಗಳಲ್ಲಿದ್ದ ಡಿಟರ್ಜೆಂಟ್, ಉಪ್ಪು, ತೆಂಗಿನ ಎಣ್ಣೆ, ಅಕ್ಕಿ, ಅರಿಶಿನ ಮುಂತಾದ ವಸ್ತುಗಳ ಹೆಸರನ್ನು ನಮಗೆ ಕೇಳಿದ್ದಿರಿ ಮತ್ತು ಅವುಗಳನ್ನು ಹೇಳುತ್ತಿದ್ದಂತೆಯೇ ಬೋರ್ಡ್ ಮೇಲೆ ಬರೆದಿದ್ದಿರಿ. ನಂತರ ನಾವೆಲ್ಲರೂ ಆ ವಸ್ತುಗಳ ಉಪಯೋಗದ ಕುರಿತಾಗಿ ಸಾಕಷ್ಟು ವಿಷಯಗಳನ್ನು ಚರ್ಚಿಸಿದ್ದೆವು. ಕೆಲವು ವಿಷಯಗಳಂತೂ ತುಂಬಾ ಕುತೂಹಲಕಾರಿಯಾಗಿದ್ದವು. ಶೀತ ಮತ್ತು ಕೆಮ್ಮು ಬಂದಾಗ ನನ್ನ ತಂದೆಯವರು ಉಪ್ಪಿನ ನೀರಿನಿಂದ ಗಾರ್ಗಲ್ ಮಾಡಲು ಹೇಳುತ್ತಾರೆ ಎಂದು ಆಗ ಸರೋಜ ಹೇಳಿದ್ದಳು” ಎಂದಳು.

ಮೀರಾ ಇನ್ನೂ ಉತ್ಸಾಹದಿಂದ ಮಾತು ಮುಂದುವರಿಸುತ್ತಾ, “ನಾವು ಆ ಕಡತವನ್ನು ಪ್ರತಿದಿನವೂ ಓದುತ್ತಿದ್ದೆವು. ಅದು ತುಂಬಾ ಸುಂದರವಾಗಿತ್ತು ಮತ್ತು ವರ್ಣರಂಜಿತವಾಗಿತ್ತು. ನಾವು ಅದನ್ನು ಮತ್ತೆ ತಯಾರಿಸಬಹುದೇ?” ಎಂದು ಪ್ರಶ್ನಿಸಿದಳು.

ನಾನು ಅದಕ್ಕೆ ಸಮ್ಮತಿಸುತ್ತಾ, “ಖಂಡಿತವಾಗಿಯೂ! ನಾವು ಅದನ್ನು ಈಗ ಒಂದು ಪ್ರಾಜೆಕ್ಟ್ ರೀತಿ ಮಾಡಬಹುದು,” ಎಂದು ಹೇಳಿದೆ.


ಅದಕ್ಕೆ ಭೀಮ ಒಂದು ಸಲಹೆ ನೀಡುತ್ತಾ, “ಈ ಸಲ ನಾವೆಲ್ಲರೂ ನಮ್ಮ ನಮ್ಮ ಕಡತಗಳನ್ನು ನಾವೇ ತಯಾರಿಸುತ್ತೇವೆ.” ಎಂದನು.

ನಾನು ಮುಗುಳ್ನಗುತ್ತಾ, “ಹೌದು, ಯಾಕಾಗಲ್ಲ! ಖಂಡಿತವಾಗಿ ಹಾಗೇ ಮಾಡೋಣ” ಎಂದು ಪ್ರೋತ್ಸಾಹಿಸಿದೆ.

## ಪ್ರಾಜೆಕ್ಟ್ ಕೆಲಸದ ಪ್ರಾರಂಭ

ನಾನು ವಿದ್ಯಾರ್ಥಿಗಳಿಗೆ ಹೇಳಿದೆ, “ಇವತ್ತು ನಾನು ನಿಮಗಾಗಿ ಕೆಲವು ದಿನಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಕರಪತ್ರಗಳನ್ನು ತಂದಿದ್ದೇನೆ. ನೀವೆಲ್ಲರೂ ಇವುಗಳನ್ನು ಹಂಚಿಕೊಳ್ಳಿ. ನಂತರ ನಿಮಗೆ ಇಷ್ಟವಾಗುವ ಮತ್ತು ಸುಲಭವಾಗಿ ಅರ್ಥವಾಗುವ ಯಾವುದಾದರೂ ಒಂದು ಜಾಹೀರಾತನ್ನು ಆರಿಸಿಕೊಳ್ಳಿ ಹಾಗೂ ಅದನ್ನು ಕತ್ತರಿಸಿ ಪ್ರತ್ಯೇಕವಾಗಿ ಇಟ್ಟುಕೊಳ್ಳಿ.”

ಇದನ್ನು ಕೇಳುತ್ತಿದ್ದಂತೆಯೇ ವಿದ್ಯಾರ್ಥಿಗಳು ಕಾರ್ಯತತ್ಪರರಾದರು ಮತ್ತು ಕುತೂಹಲದಿಂದ ಪುಟಗಳನ್ನು ತಿರುವಿ ಹಾಕತೊಡಗಿದರು. ನವ್ಯಾ ತನಗೆ ಸಿಕ್ಕ ವರ್ಣರಂಜಿತ ಚಾಕೊಲೇಟ್ ಜಾಹೀರಾತನ್ನು ಎತ್ತಿ ತೋರಿಸುತ್ತಾ “ಮೇಡಂ, ನನಗೆ ಒಂದು ಜಾಹೀರಾತು ಸಿಕ್ಕಿತು!” ಎಂದು ಸಂಭ್ರಮದಿಂದ ಕೂಗಿದಳು.




*ಚಿತ್ರ 2: ವಿದ್ಯಾರ್ಥಿಗಳು ತಯಾರಿಸಿದ ಒಂದು ಜಾಹೀರಾತು.*

ಆಗ ನಾನು, "ಶಹಬ್ಬಾಶ್! ಈಗ ಆ ಜಾಹೀರಾತಿನಲ್ಲಿ ಬರೆಯಲಾಗಿರುವ ಪ್ರತಿಯೊಂದು ವಿಷಯವನ್ನು ಗಮನವಿಟ್ಟು ಓದು. ಅದರಲ್ಲಿ ಬಳಸಿರುವ ಪದಗಳು, ಚಿತ್ರಗಳು ಮತ್ತು ಘೋಷವಾಕ್ಯಗಳನ್ನು (ಜಾಹೀರಾತಿನ ಪ್ರಚಾರದಲ್ಲಿ ಬಳಸುವ ಸಾಲುಗಳು) ಸರಿಯಾಗಿ ಗಮನಿಸಿ ಅರ್ಥಮಾಡಿಕೊ." ಎಂದು ಹೇಳಿದೆ.

ತರಗತಿ ಮುಗಿಯುವ ಹೊತ್ತಿಗೆ, ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲೂ ಅವರವರು ಆರಿಸಿಕೊಂಡ ಒಂದು ಜಾಹೀರಾತು ಇತ್ತು. "ಈಗ ನೀವೆಲ್ಲರೂ ಮನೆಗೆ ಹೋಗಿ, ಟಿವಿಯಲ್ಲಿ ಇನ್ನೂ ಕೆಲವು ಜಾಹೀರಾತುಗಳನ್ನು ನೋಡಿ. ದಾರಿಯಲ್ಲಿ ಯಾವುದೇ ಹೋರ್ಡಿಂಗ್ ಕಂಡರೂ ಅದನ್ನು ಓದಿ. ಒಂದು ವೇಳೆ ಪ್ಯಾಕೆಟ್ ಇರುವ ಯಾವುದೇ ವಸ್ತುವನ್ನು ಬಳಸಿದರೂ ಅದರ ರ‍್ಯಾಪರ್‌ಗಳನ್ನು ಎತ್ತಿಟ್ಟುಕೊಳ್ಳಿ. ನಾಳೆ ನಾವೆಲ್ಲರೂ ಈ ಕುರಿತು ಮಾತಾಡೋಣ ಮತ್ತು ತರಗತಿಯಲ್ಲಿ ನಾವೇ ಹೊಸ ಜಾಹೀರಾತುಗಳನ್ನು ತಯಾರಿಸೋಣ."

ಮರುದಿನ ತರಗತಿಯು ಪ್ರಾರಂಭವಾದಾಗ ವಿದ್ಯಾರ್ಥಿಗಳಲ್ಲಿ ಅಪಾರ ಚೈತನ್ಯ ಕಂಡುಬಂದಿತು. ಅಲ್ಲಿನ ಸನ್ನಿವೇಶವು ಅತ್ಯಂತ ಉತ್ಸಾಹಪೂರ್ಣವಾಗಿತ್ತು. ಸ್ವರ್ಣಿಕಾ, ತಾನು ಹಿಂದಿನ ದಿನ ಶಾಂಪೂ, ಸೋಪು, ಟೂತ್‌ಪೇಸ್ಟ್ ಮುಂತಾದ ಉತ್ಪನ್ನಗಳ ಹಲವಾರು ಜಾಹೀರಾತುಗಳನ್ನು ವೀಕ್ಷಿಸಿರುವುದಾಗಿ ತಿಳಿಸಿದಳು.

'ತುಂಬಾ ಒಳ್ಳೆಯದು!' ಎಂದ ನಾನು, ಅವರ ಮುಂದೆ ಒಂದು ಪ್ರಶ್ನೆಯನ್ನಿಟ್ಟೆ, 'ಕೆಲವು ಕಂಪನಿಗಳು ಮೂಲ ಉತ್ಪನ್ನಗಳ ಹೆಸರನ್ನು ಸ್ವಲ್ಪ ಮಾರ್ಪಡಿಸಿ, ನಕಲಿ ಸರಕುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ವಿಷಯ ನಿಮಗೆ ತಿಳಿದಿದೆಯೇ?'

ಈ ವಿಷಯವನ್ನು ಕೇಳಿದ ವಿದ್ಯಾರ್ಥಿಗಳು ಆಶ್ಚರ್ಯಚಕಿತರಾದರು. ಚಾರುಳ ಕಣ್ಣುಗಳು ಅಚ್ಚರಿಯಿಂದ ಅರಳಿದವು ಹಾಗೂ ಅವಳು, 'ಇದು ನಿಜವೇ ಮೇಡಂ?' ಎಂದು ಕೇಳಿದಳು.

ನಾನು ಉತ್ತರಿಸುತ್ತಾ 'ಖಂಡಿತ ನಿಜ' ಎಂದೆ. 'ಯಾರಿಗೆ ಓದಲು ಸರಿಯಾಗಿ ಬರುವುದಿಲ್ಲವೋ ಅಂಥವರು ಇಂತಹ ನಕಲಿ ವಸ್ತುಗಳನ್ನೇ ಅಸಲಿ ಎಂದು ಭಾವಿಸಿ ಖರೀದಿಸುತ್ತಾರೆ.'

ಆಗ ರಾಜೀವ ಕುತೂಹಲದಿಂದ, 'ಅವರು ಅದನ್ನು ಹೇಗೆ ಮಾಡುತ್ತಾರೆ?' ಎಂದು ಪ್ರಶ್ನಿಸಿದನು.

ನಾನು ವಿವರಿಸುತ್ತಾ, 'ಅವರು ನಕಲಿ ಉತ್ಪನ್ನಗಳನ್ನು ಅಸಲಿ ಉತ್ಪನ್ನಗಳಂತೆಯೇ ವಿನ್ಯಾಸಗೊಳಿಸುತ್ತಾರೆ. ಕೇವಲ ಹೆಸರಿನ ಅಕ್ಷರಗಳಲ್ಲಿ ಸಣ್ಣ ಬದಲಾವಣೆಗಳನ್ನು ಮಾಡುತ್ತಾರೆ. ಈ ಕಾರಣದಿಂದ ಜನರು ಅದನ್ನು ಅಸಲಿ ಉತ್ಪನ್ನವೆಂದೇ ತಪ್ಪಾಗಿ ಭಾವಿಸುತ್ತಾರೆ. ಅದಕ್ಕಾಗಿಯೇ ನಾವು ಏನನ್ನೇ ಓದಿದರೂ ಬಹಳ ಗಮನವಿಟ್ಟು ಓದಬೇಕು.' ಎಂದು ಹೇಳಿದೆ.

ಮೀರಾ ಹೇಳಿದಳು, "ಇದು ಒಂದು ರೀತಿಯ ಮೋಸವೇ ಅಲ್ಲವೇ!"

"ಹೌದು, ಖಂಡಿತ. ಇದು ಮೋಸವೇ" ಎಂದು ನಾನು ಅವಳ ಮಾತಿಗೆ ತಲೆದೂಗುತ್ತಾ, "ಅದಕ್ಕಾಗಿಯೇ ಸರಿಯಾಗಿ ಓದಲು ಕಲಿಯುವುದು ತುಂಬಾ ಅವಶ್ಯಕ." ಎಂದು ಹೇಳಿದೆ.

## ಜಾಹೀರಾತಿನ ಮಾಂತ್ರಿಕತೆ

ಆಗ ನಾನು, 'ಈಗ ಜಾಹೀರಾತುದಾರರಾಗುವ ಸರದಿ ನಿಮ್ಮದು. ನಿನ್ನೆ ನೀವು ಕತ್ತರಿಸಿಟ್ಟಿರುವ ಜಾಹೀರಾತನ್ನು ತೆಗೆದುಕೊಳ್ಳಿ ಮತ್ತು ಅದರಲ್ಲಿರುವ ಕೆಲವು ಪದಗಳನ್ನು ಬದಲಾಯಿಸಿ, ಅದಕ್ಕೆ ಹೊಸ ರೂಪ ನೀಡಲು 'ಒಂದಿಷ್ಟು ಸೃಜನಾತ್ಮಕ ರೂಪವನ್ನು ನೀಡಿ. ಈ ಮೂಲಕ ನಿಮ್ಮದೇ ಆದ ಸ್ವಂತ ಜಾಹೀರಾತನ್ನು ಸಿದ್ಧಪಡಿಸಿ.' ಎಂದು ಹೇಳಿದೆ. ಅದರಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆಗೆ ಅವಕಾಶ ನೀಡುವುದು, ಹೊಸ ಚಿಂತನೆ ಮಾಡುವುದು ಮತ್ತು ಅದನ್ನು ಬರೆಯುವುದು ಸೇರಿತ್ತು.

ಜಾಹೀರಾತು ಬರೆಯಲು ನಾನು ಅವರಿಗೆ ಹಳೆಯ ಕ್ಯಾಲೆಂಡರ್‌ಗಳ ಖಾಲಿ ಪುಟಗಳನ್ನು ನೀಡಿದೆ. ಅವರು ಬಣ್ಣದ ಪೆನ್ಸಿಲ್‌ಗಳು, ಕ್ರೇಯಾನ್‌ಗಳು, ಅಂಟು ಮತ್ತು ಕತ್ತರಿಗಳನ್ನು ಪರಸ್ಪರ ಹಂಚಿಕೊಂಡು ಕೆಲಸ ಮಾಡಿದರು.

'ಮೇಡಂ, ನಾನು ಒಂದು ಮ್ಯಾಜಿಕ್ ಶಾಂಪೂವಿನ ಜಾಹೀರಾತು ತಯಾರಿಸಬಹುದೇ?' ಎಂದು ನವ್ಯಾ ಕೇಳಿದಳು.

ಅದಕ್ಕೆ ನಾನು 'ಖಂಡಿತವಾಗಿ ಮಾಡು!' ಎಂದು ಹೇಳಿದೆ.

ಶೀಘ್ರದಲ್ಲೇ ಇಡೀ ತರಗತಿಯಲ್ಲಿರುವ ಎಲ್ಲರೂ ಏಕಕಾಲಕ್ಕೆ ತಮ್ಮ ತಮ್ಮ ಮಾತುಗಳನ್ನು ಮುಂದಿಡಲಾರಂಭಿಸಿದರು. ತರಗತಿ ಸಂಭಾಷಣೆಗಳಿಂದ ತುಂಬಿಹೋಯಿತು. ರಾಜೀವನು ತನ್ನ ಪೋಸ್ಟರ್ ಅನ್ನು ಎತ್ತಿ ತೋರಿಸುತ್ತಾ, 'ಮೇಡಂ, ಇದನ್ನು ನೋಡಿ!' ಎಂದು ಹೇಳತೊಡಗಿದನು. ಅವನ ಪೋಸ್ಟರ್‌ನಲ್ಲಿ ದೊಡ್ಡ ಅಕ್ಷರಗಳಲ್ಲಿ ಹೀಗೆ ಬರೆಯಲಾಗಿತ್ತು, 'ದುಬರಾಜ್ ಅಕ್ಕಿ, ಇದರ ಸ್ವಾದ ಮತ್ತು ಸುಗಂಧಕ್ಕೆ ಸಾಟಿಯೇ ಇಲ್ಲ!'

'ಅದ್ಭುತ! ಇದು ಬಹಳ ಸೊಗಸಾಗಿದೆ,' ಎಂದು ನಾನು ಶ್ಲಾಘಿಸಿದೆ.

ಸುನೀತಾ ಕೇಳಿದಳು, 'ಮೇಡಂ, ನಾನು ಛತ್ತೀಸ್‌ಗಢಿ ಭಾಷೆಯಲ್ಲಿ ಜಾಹೀರಾತು ಮಾಡಬಹುದೇ?'.

'ಖಂಡಿತ ಮಾಡು! ಇದು ಒಳ್ಳೆಯ ವಿಷಯ' ಎಂದು ನಾನು ಪ್ರೋತ್ಸಾಹಿಸಿದೆ.

ಅವಳು ಛತ್ತೀಸ್‌ಗಢಿ ಭಾಷೆಯಲ್ಲಿ ಇದನ್ನು ಬರೆದಿದ್ದಳು, 'ಆಹಾ! ಎಂಥ ಸುವಾಸನೆ, ಇಂದು ಮನೆಯಲ್ಲಿ ದುಬರಾಜ್ ಅಕ್ಕಿ ಅನ್ನ ಮಾಡಿದ್ದೀರಾ?'

ಇದನ್ನು ನೋಡಿ ಎಲ್ಲಾ ವಿದ್ಯಾರ್ಥಿಗಳು ತುಂಬಾ ಖುಷಿಪಟ್ಟರು.

ಒಂದು ಗಂಟೆಯ ಈ ಸೃಜನಾತ್ಮಕ ಕೆಲಸದ ನಂತರ ಪ್ರಸ್ತುತಿಯ ಸಮಯ ಬಂತು. ಪ್ರತಿಯೊಬ್ಬ ವಿದ್ಯಾರ್ಥಿಯು ಒಬ್ಬೊಬ್ಬರಾಗಿ ಮುಂದೆ ಬಂದರು. ಅವರ ಕೈಗಳಲ್ಲಿ ತಾವು ಸಿದ್ಧಪಡಿಸಿದ ಚಾರ್ಟ್ ಗಳು ಇದ್ದವು. ಮೀರಾ ತುಂಬಾ ನಾಟಕೀಯ ಶೈಲಿಯಲ್ಲಿ, 'ಮೇಡಂ, ನನ್ನ ಈ ಜಾಹೀರಾತಲ್ಲಿರುವ ಟೂತ್‌ಪೇಸ್ಟ್, ನಿಮ್ಮ ಹಲ್ಲುಗಳನ್ನು ಮುತ್ತಿನಂತೆ ಹೊಳೆಯುವಂತೆ ಮಾಡುತ್ತದೆ' ಎಂದು ಹೇಳಿದಳು.

ತರಗತಿಯು ಚಪ್ಪಾಳೆಯೊಂದಿಗೆ ಮೀರಾ, ರಾಜೀವ್ ಮತ್ತು ಸುನೀತಾರನ್ನು ಪ್ರೋತ್ಸಾಹಿಸಿತು. ಅವರ ಈ ಆತ್ಮವಿಶ್ವಾಸ ಮತ್ತು ಆನಂದವನ್ನು ಕಂಡು ನನಗೆ ಬಹಳ ಸಂತೋಷವಾಯಿತು.

### ಕಲ್ಪನೆ ಮತ್ತು ವಾಸ್ತವ

ಜಾಹೀರಾತುಗಳ ಕುರಿತಾದ ಸಂವಾದದ ನಡುವೆಯೇ ಒಂದು ಪ್ರಶ್ನೆ ಉದ್ಭವಿಸಿತು: "ಮೇಡಂ, ಎಲ್ಲಾ ಜಾಹೀರಾತುಗಳು ನಿಜವಾಗಿರುತ್ತವೆಯೇ?".

ನಾನು ನಗುತ್ತಾ, "ಇದು ತುಂಬಾ ಒಳ್ಳೆಯ ಪ್ರಶ್ನೆ. ನಿನಗೇನು ಅನ್ನಿಸುತ್ತದೆ?" ಎಂದು ಕೇಳಿದೆ.

ಅದಕ್ಕೆ ನವ್ಯಾ ಯೋಚಿಸಿ, 'ಶಾಂಪೂ ಜಾಹೀರಾತುಗಳು ಕೂದಲು ಉದ್ದವಾಗುತ್ತವೆ ಎಂದು ಹೇಳುತ್ತವೆ, ಆದರೆ ಅದು ನಿಜವಲ್ಲ," ಅಂದಳು.

"ಖಂಡಿತ," ನಾನು ಹೇಳಿದೆ. "ಜಾಹೀರಾತುಗಳು ಸಾಮಾನ್ಯವಾಗಿ ಕಥೆಯ ಒಂದು ಬದಿಯನ್ನು ಮಾತ್ರ ತೋರಿಸುತ್ತವೆ. ಫೇರ್ನೆಸ್ ಕ್ರೀಮ್‌ಗಳು ಒಂದು ವಾರದಲ್ಲಿ ಬಿಳಿ ಚರ್ಮದ ಭರವಸೆ ನೀಡುತ್ತವೆ, ಆದರೆ ಅದು ಸತ್ಯವೇ?"

ಆಗ ಇಡೀ ತರಗತಿ ಒಕ್ಕೊರಲಿನಿಂದ "ಇಲ್ಲ!" ಎಂದು ಕೂಗಿತು.

ಚಾರು ಪ್ರತಿಕ್ರಿಯಿಸುತ್ತಾ, "ಮೇಡಂ, ಫೇರ್‌ನೆಸ್ ಕ್ರೀಮ್ ಹಚ್ಚುವುದರಿಂದ ಯಾರೂ ಬೆಳ್ಳಗಾಗುವುದಿಲ್ಲ. ಇದೆಲ್ಲಾ ಬರೀ ಮಾರ್ಕೆಟಿಂಗ್ ಆಟವಷ್ಟೆ ಎಂದು ನನ್ನ ಅಮ್ಮ ಹೇಳುತ್ತಾರೆ''

ನಾನು ಸಹಮತ ವ್ಯಕ್ತಪಡಿಸುತ್ತಾ, "ಖಂಡಿತವಾಗಿಯೂ ಸತ್ಯ. ಅಸಲಿಗೆ ಈ 'ಬೆಳ್ಳಗಾಗುವ' ಪರಿಕಲ್ಪನೆಯೇ ತಪ್ಪು. ಸೌಂದರ್ಯವನ್ನು ಕೇವಲ ಚರ್ಮದ ಬಣ್ಣದ ಆಧಾರದ ಮೇಲೆ ಅಳೆಯುವುದು ಸರಿಯಲ್ಲ. ಬಿಳಿ ಬಣ್ಣ ಶ್ರೇಷ್ಠ ಮತ್ತು ಕಪ್ಪು ಬಣ್ಣ ಕನಿಷ್ಠ ಎಂಬ ವಿಚಾರವೇ ದೋಷಪೂರಿತವಾಗಿದೆ. ಕಪ್ಪು ಬಣ್ಣವು ಎಷ್ಟು ಆಕರ್ಷಕವಾಗಿರುತ್ತದೆ! ಯಾರಾದರೂ ಏಕೆ ಬೆಳ್ಳಗಾಗಬೇಕು? ಈ ವಿಷಯ ಅರ್ಥಮಾಡಿಕೊಂಡರೆ ಇಂತಹ ಕ್ರೀಮ್‌ಗಳ ಅಗತ್ಯವೇ ಇರುವುದಿಲ್ಲ" ಎಂದು ವಿವರಿಸಿದೆ.

ವಿದ್ಯಾರ್ಥಿಗಳ ಮನಸ್ಸಿನಲ್ಲಿರುವ ಬಣ್ಣಗಳ ಕುರಿತಾದ ತಪ್ಪು ಕಲ್ಪನೆಗಳ ಗೋಡೆಯನ್ನು ಮುರಿದು ಹಾಕಲು ಇದು ಸರಿಯಾದ ಸಮಯ ಎಂದು ನನಗೆ ಅನ್ನಿಸಿತ್ತು.

## ಪಾತ್ರ ನಿರ್ವಹಣೆ

ಪಠ್ಯಪುಸ್ತಕದ ಪಾಠಗಳು ಹಾಗೂ ಅವುಗಳ ಅಭ್ಯಾಸ ಪ್ರಶ್ನೆಗಳಿಗೂ ಈ ಚಟುವಟಿಕೆಗೂ ಇರುವ ಕೊಂಡಿಯನ್ನು ನಾನು ಗುರುತಿಸಿದೆ. ನಾವು 'ಆಹಾರ' ಎಂಬ ಪಾಠವನ್ನು ಚರ್ಚಿಸಬೇಕಿತ್ತು. 'ಇಂದು ನಾವು ಪಾಠ ಓದುವ ಮೊದಲು ಒಂದು ಚಟುವಟಿಕೆ ಮಾಡೋಣ. ಪಾಠದಲ್ಲಿರುವ ಕೆಲವು ವಸ್ತುಗಳನ್ನು ಆರಿಸಿ ಅವುಗಳ ಬಗ್ಗೆ ಜಾಹೀರಾತು ಮಾಡೋಣ. ಒಂದು ಗುಂಪು ಜಾಹೀರಾತು ಮಾಡಲಿ, ಇನ್ನೊಂದು ಗುಂಪು ಗ್ರಾಹಕರಾಗಿ ಆ ಜಾಹೀರಾತಿನ ಬಗ್ಗೆ ಪ್ರಶ್ನೆ ಕೇಳಲಿ.' ಎಂದು ನಾನು ಸೂಚಿಸಿದೆ.

ಇಡೀ ತರಗತಿ ಒಂದು ಪುಟ್ಟ ಮಾರುಕಟ್ಟೆಯಾಗಿ ಬದಲಾಯಿತು.

ಪಾಠದಿಂದ ಆರಿಸಿದ ವಸ್ತುಗಳ ಪಟ್ಟಿಯಲ್ಲಿ ಅಕ್ಕಿ, ಬೇಳೆ, ಆಲೂಗಡ್ಡೆ, ಬೆಂಡೆಕಾಯಿ, ಪಡವಲಕಾಯಿ, ಹಾಲು, ಮೊಸರು, ಬಾಳೆಹಣ್ಣು, ಮಾವು ಮತ್ತು ಪೇರಲದಂತಹ ಆಹಾರ ಪದಾರ್ಥಗಳು ಸೇರಿದ್ದವು.

ನವ್ಯಾ ಅತ್ಯಂತ ಆತ್ಮವಿಶ್ವಾಸದಿಂದ ಎದ್ದು ನಿಂತಳು. ಅವಳು ಸಿದ್ಧಪಡಿಸಿದ ಚಾರ್ಟ್ ಮೇಲೆ ದೊಡ್ಡ ಕ್ಯಾರೆಟ್ ಚಿತ್ರವಿತ್ತು. ಅವಳು ಉತ್ಸಾಹದಿಂದ, ಈ ಕ್ಯಾರೆಟ್ ತುಂಬಾ ಅದ್ಭುತವಾಗಿದೆ, ಇದನ್ನು ತಿಂದರೆ ನೀವು ಒಂದೇ ದಿನದಲ್ಲಿ ಪೈಲ್ವಾನರಾಗುತ್ತೀರಿ!" ಎಂದು ಘೋಷಿಸಿದಳು. ಆಗ ಗ್ರಾಹಕನ ಪಾತ್ರ ವಹಿಸಿದ್ದ ರಾಜೀವನು ತನ್ನ ಹುಬ್ಬು ಏರಿಸುತ್ತಾ, "ಹೌದಾ? ಒಂದೇ ರಾತ್ರಿಯಲ್ಲೇನಾ? ಇದನ್ನು ನೀವು ಸಾಬೀತು ಮಾಡಬಲ್ಲಿರಾ?" ಎಂದು ಪ್ರಶ್ನಿಸಿದನು.

ನವ್ಯಾ ಮುಗುಳ್ನಗುತ್ತಾ, "ಖಂಡಿತ, ಇದು ಮ್ಯಾಜಿಕ್ ಕ್ಯಾರೆಟ್! ನೀವು ತಿಂದು ನೋಡಿ, ಆಮೇಲೆ ಗೊತ್ತಾಗುತ್ತೆ" ಎಂದಳು.

ತರಗತಿಯಲ್ಲಿ ನಗು ತುಂಬಿಹೋದರೂ, ಜಾಹೀರಾತಿನ ಭರವಸೆಗಳನ್ನು ಪ್ರಶ್ನಿಸುವುದು ಅದೆಷ್ಟು ಮುಖ್ಯ ಎಂಬ ವಿಷಯ ಎಲ್ಲರಿಗೂ ಅರ್ಥವಾಯಿತು. ಈ ಚಟುವಟಿಕೆಯಿಂದ ವಿದ್ಯಾರ್ಥಿಗಳಿಗೆ ಮೋಜಿನ ಜೊತೆಜೊತೆಗೆ ಓದುವುದು, ಪ್ರಶ್ನಿಸುವುದು ಮತ್ತು ಹೊಸ ರೀತಿಯಲ್ಲಿ ವಿಷಯ ಮಂಡಿಸುವುದು ಮುಂತಾದ ಕೌಶಲಗಳು ವೃದ್ಧಿಸುತ್ತಿರುವುದನ್ನು ನಾನು ಗಮನಿಸಿದೆ. ಈಗ ವಿದ್ಯಾರ್ಥಿಗಳು ಶಾಲೆಯಿಂದ ಮನೆಗೆ ಹೋಗುವಾಗ ದಾರಿಯಲ್ಲಿರುವ ಹೋರ್ಡಿಂಗ್‌ಗಳು ಮತ್ತು ಸೈನ್ ಬೋರ್ಡ್‌ಗಳನ್ನು ಓದುತ್ತಾ ಹೋಗುತ್ತಿದ್ದರು ಮತ್ತು ಮರುದಿನ ತರಗತಿಯಲ್ಲಿ ಅದರ ಬಗ್ಗೆ ಮಾತನಾಡುತ್ತಿದ್ದರು. ಕೆಲವು ವಿದ್ಯಾರ್ಥಿಗಳು ತಾವು ತಿಂದು ಕುಡಿದ ತಿಂಡಿಗಳು, ಪಾನೀಯಗಳ ರ್‍ಯಾಪರ್‌ಗಳನ್ನು ಸಂಗ್ರಹಿಸಿ ತಮ್ಮ ತಮ್ಮ ಕಡತಗಳಲ್ಲಿ ಅಂಟಿಸಿ ಅವುಗಳ ಬಗ್ಗೆ ಬರೆಯಲಾರಂಭಿಸಿದ್ದರು. ಮುಂದಿನ ಯಾವ ಪಾಠಕ್ಕೆ ಈ ಚಟುವಟಿಕೆಯನ್ನು ಹೊಸ ರೀತಿಯಲ್ಲಿ ಬಳಸಿಕೊಳ್ಳಬಹುದು ಎಂದು ನಾನು ಯೋಚಿಸತೊಡಗಿದ್ದೆ.



**ಪೊಂಪಾ ಘೋಷಾಲ್** ಅವರು ಶಿಕ್ಷಣ ಕ್ಷೇತ್ರದಲ್ಲಿ 28 ವರ್ಷಗಳ ಸುದೀರ್ಘ ಅನುಭವವನ್ನು ಹೊಂದಿದ್ದಾರೆ. ಕಳೆದ 10 ವರ್ಷಗಳಿಂದ ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ತೊಡಗಿರುವ ಇವರು, ವಿದ್ಯಾರ್ಥಿಗಳ ಸೃಜನಾತ್ಮಕ ಬೆಳವಣಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಪ್ರಸ್ತುತ ಛತ್ತೀಸ್‌ಗಢದ ಧಮ್ತರಿಯ ಅಜೀಂ ಪ್ರೇಮ್‌ಜೀ ಶಾಲೆಯಲ್ಲಿ ಇವರು ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಸಂಪರ್ಕ**: pompa.ghoshal@azimpremjifoundation.org

ಅನುವಾದ: ರಾಕೇಶ್ ಪೂಂಜಾ | ಪರಿಶೀಲನೆ: ಕಿರಣ್ ಮಂಜುನಾಥ್

# ಶಾಲಾ ಗ್ರಂಥಾಲಯ ಅಭಿವೃದ್ಧಿಗೆ ಒಂದಿಷ್ಟು ಪರಿಣಾಮಕಾರಿ ಕ್ರಮಗಳು

**ಕಮಲೇಶ್ ಚಂದ್ರ ಜೋಷಿ**

**ತಮ್ಮ ಶಾಲಾ ಗ್ರಂಥಾಲಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನೇಕ ಶಿಕ್ಷಕರು ವಿವಿಧ ಪ್ರಯತ್ನಗಳನ್ನು ಮಾಡಿದ್ದಾರೆ. ಈ ಲೇಖನವು ಅಂತಹ ಕೆಲವು ಪ್ರಯತ್ನಗಳ ಸಂಕ್ಷಿಪ್ತ ವಿವರಣೆಯನ್ನು ನೀಡುತ್ತದೆ. ಜೊತೆಗೆ, ಈ ಉಪಕ್ರಮಗಳ ಪರಿಣಾಮವಾಗಿ ವಿದ್ಯಾರ್ಥಿಗಳ ಓದುವ ಮತ್ತು ಬರೆಯುವ ಅಭ್ಯಾಸಗಳಲ್ಲಿ ಕಂಡುಬಂದ ಕೆಲವು ಬದಲಾವಣೆಗಳನ್ನು ಇದು ವಿವರಿಸುತ್ತದೆ.**

ಯಾವುದೇ ಶಾಲಾ ಗ್ರಂಥಾಲಯವನ್ನು ಗಮನಿಸುವಾಗ, ಅದು ಎಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಅದನ್ನು ಹೇಗೆ ಸುಧಾರಿಸಬಹುದು ಎಂಬ ಜಿಜ್ಞಾಸೆ ಮೂಡುವುದು ಸಹಜ. ಇದನ್ನು ಅರ್ಥಮಾಡಿಕೊಳ್ಳಲು ಹಲವು ವ್ಯವಸ್ಥಿತ ಹಾಗೂ ಶೈಕ್ಷಣಿಕ ಅಂಶಗಳಿವೆ. ಉದಾಹರಣೆಗೆ: ಗ್ರಂಥಾಲಯದಲ್ಲಿ ಎಷ್ಟು ಮತ್ತು ಯಾವ ವಿಧದ ಪುಸ್ತಕಗಳಿವೆ? ಎಷ್ಟು ವಿದ್ಯಾರ್ಥಿಗಳು ನಿಯಮಿತವಾಗಿ ಗ್ರಂಥಾಲಯಕ್ಕೆ ಬರುತ್ತಾರೆ? ಅವರು ಪುಸ್ತಕಗಳನ್ನು ಎಷ್ಟು ಚೆನ್ನಾಗಿ ಬಳಸುತ್ತಿದ್ದಾರೆ? ಬಾಲ ಸಾಹಿತ್ಯ ಮತ್ತು ಅದರ ಬಳಕೆಯ ಬಗ್ಗೆ ಗ್ರಂಥಾಲಯ ನಿರ್ವಹಿಸುವ ಶಿಕ್ಷಕರಿಗಿರುವ ದೃಷ್ಟಿಕೋನವೇನು? ಇತ್ಯಾದಿ. ಇದರೊಂದಿಗೆ, ವಿದ್ಯಾರ್ಥಿಗಳ ನಡುವೆ ನಡೆಯುವ ಚಟುವಟಿಕೆಗಳು, ಪುಸ್ತಕಗಳ ಪ್ರದರ್ಶನ, ನಿರ್ವಹಣೆ ಮತ್ತು ಸ್ಥಳದ ಲಭ್ಯತೆಯ ಆಧಾರದ ಮೇಲೆ ಪರಿಣಾಮಕಾರಿ ಗ್ರಂಥಾಲಯವನ್ನು ಗುರುತಿಸಬಹುದು. ಅಷ್ಟೇ ಅಲ್ಲದೆ, ಶಿಕ್ಷಕರು ಗ್ರಂಥಾಲಯಕ್ಕಾಗಿ ಎಷ್ಟು ಸಮಯವನ್ನು ಮೀಸಲಿಡುತ್ತಾರೆ ಎಂಬುದು ಕೂಡ ಮುಖ್ಯವಾಗುತ್ತದೆ. ಈ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸುವುದು ಅತ್ಯಗತ್ಯ.

ಕೆಲವು ಸರ್ಕಾರಿ ಶಾಲೆಗಳ ಉತ್ಸಾಹಿ ಶಿಕ್ಷಕರು ತಮ್ಮ ಶಾಲಾ ಗ್ರಂಥಾಲಯಕ್ಕೆ ಹೊಸ ರೂಪ ನೀಡಿ, ಅದನ್ನು ಇನ್ನಷ್ಟು ಪರಿಣಾಮಕಾರಿಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರೊಂದಿಗೆ ನಡೆಸಿದ ಸಂವಾದದ ಸಂದರ್ಭದಲ್ಲಿ, ಗ್ರಂಥಾಲಯದ ಕಾರ್ಯವೈಖರಿಯನ್ನು ಉತ್ತಮಗೊಳಿಸುವ ಹಾಗೂ ಅದರ ಪ್ರಭಾವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವರು ತಮ್ಮ ಅನುಭವ ಮತ್ತು ಅಮೂಲ್ಯವಾದ ಸಲಹೆಗಳನ್ನು ಹಂಚಿಕೊಂಡಿದ್ದಾರೆ. ಈ ಲೇಖನದಲ್ಲಿ ಆ ಮಹತ್ವದ ವಿಚಾರಗಳನ್ನು ಹಂತ ಹಂತವಾಗಿ ವಿವರಿಸಲಾಗಿದೆ.

## ಶಿಕ್ಷಕರ ಸಿದ್ಧತೆ

ಗ್ರಂಥಾಲಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಕಾರ್ಯದಲ್ಲಿ ತೊಡಗಿರುವ ಶಿಕ್ಷಕರು, ತಮ್ಮ ಸಿದ್ಧತೆಗಾಗಿ ಗ್ರಂಥಾಲಯ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಾಗಾರಗಳಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದರು. ಇದಕ್ಕೆ ಸಂಬಂಧಿಸಿದ ವಿಷಯಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಪರಸ್ಪರ ಚರ್ಚಿಸುತ್ತಾರೆ ಹಾಗೂ ಬಾಲ ಸಾಹಿತ್ಯ ಮತ್ತು ಗ್ರಂಥಾಲಯ ತಜ್ಞರೊಂದಿಗೆ ಸಂವಾದ ನಡೆಸುತ್ತಾರೆ. ಇದಲ್ಲದೆ, ಅವರು ಸ್ವತಃ ಉತ್ತಮ ಬಾಲ ಸಾಹಿತ್ಯ ಮತ್ತು ಮಕ್ಕಳ ಗುಣಮಟ್ಟದ ನಿಯತಕಾಲಿಕೆಗಳನ್ನು ನಿರಂತರವಾಗಿ ಓದುತ್ತಿರುತ್ತಾರೆ. ಇವುಗಳಲ್ಲಿ *ಬಸ್ ಕಿ ಸೈರ್, ನನ್ಹಾ ಕರಮಕಲ್ಲಾ, ನನ್ಹೆ ಮುನ್ನೆ ಗೀತ್, ಬರಸ್ತಾ ತರ್ಬೂಜ್* ಮತ್ತು *ನನಿಹಾಲ್ ಮೇ ಗುಜ್ರೆ ದಿನ್* ನಂತಹ ಪುಸ್ತಕಗಳು ಹಾಗೂ *ಚಕಮಕ್, ಪ್ಲೂಟೋ* ಮತ್ತು *ಸೈಕಲ್* ನಂತಹ ಮಕ್ಕಳ ಪತ್ರಿಕೆಗಳು ಸೇರಿವೆ. ತಾವು ಓದಿದ ಈ ಪುಸ್ತಕಗಳ ವಿಷಯವಸ್ತು, ಘಟನೆಗಳು, ಪಾತ್ರಗಳು, ಚಿತ್ರಣಗಳು ಮತ್ತು ಇವುಗಳಿಂದ ರೂಪುಗೊಂಡ ದೃಷ್ಟಿಕೋನಗಳ ಬಗ್ಗೆ ಶಿಕ್ಷಕರ ನಡುವೆ ಆಳವಾದ ಚರ್ಚೆ ನಡೆಯುತ್ತದೆ. ಯಾವ ತರಗತಿಯ ವಿದ್ಯಾರ್ಥಿಗಳಿಗೆ ಎಂತಹ ಪುಸ್ತಕಗಳು ಸೂಕ್ತವಾಗುತ್ತವೆ ಎಂಬುದರ ಕುರಿತು ಸಹ ಅವರು ಪರಸ್ಪರ ಸಮಾಲೋಚಿಸುತ್ತಾರೆ.

ವಿದ್ಯಾರ್ಥಿಗಳು ಓದುವುದನ್ನು ಹೇಗೆ ಕಲಿಯುತ್ತಾರೆ ಎಂಬ ಪ್ರಶ್ನೆ ಇಂದಿಗೂ ಅನೇಕ ಶಿಕ್ಷಕರ ಮನಸ್ಸಿನಲ್ಲಿ ಮೂಡುತ್ತಿರುತ್ತದೆ. ಅವರಲ್ಲಿ ಓದಿನ ಆಸಕ್ತಿ



*ಚಿತ್ರ 1: ಒಟ್ಟಿಗೆ ಕುಳಿತು ಖುಷಿಯಿಂದ ಕಥೆಪುಸ್ತಕಗಳನ್ನು ಓದುತ್ತಿರುವ ಮಕ್ಕಳು.*

ಮತ್ತು ಸ್ವಯಂ ಅಧ್ಯಯನದ ಹವ್ಯಾಸಗಳನ್ನು ಬೆಳೆಸುವುದು ಹೇಗೆ? ವಿದ್ಯಾರ್ಥಿಗಳನ್ನು ಉತ್ತಮ ಓದುಗರನ್ನಾಗಿ ಮಾಡುವುದು ಹೇಗೆ? ಎಂಬ ಜಿಜ್ಞಾಸೆಗಳು ಕೂಡ ಕಾಡುತ್ತವೆ. ಇದಕ್ಕಾಗಿ ಅವರು *ಪಢನೇ ಕೀ ಸಮಜ್, ಪಢನೇ ಕೀ ದಹಲೀಜ್ ಪರ್, ಬಚ್ಚೇ ಕೀ ಭಾಷಾ ಔರ್ ಅಧ್ಯಾಪಕ್* ಮತ್ತು *ಪಢನಾ-ಲಿಖನಾ ಸೀಖನೇ ಮೇ ಕಿತಾಬೋಂ ಕಾ ಮಹತ್ತ್ವ* ಮುಂತಾದ ಶಿಕ್ಷಕರಿಗೆ ಉಪಯುಕ್ತವಾದ ಪುಸ್ತಕಗಳನ್ನು ಓದಿ ಸಾಮೂಹಿಕವಾಗಿ ಚರ್ಚಿಸಿದ್ದಾರೆ. ಅವರು *ಕ್ಯಾ ಕ್ಯಾ ಹೋ ಏಕ್ ಅಚ್ಛಿ ಕಿತಾಬ್ ಮೇಂ, ಕಹಾನಿ ಕಹಾಂ ಖೋಗಯಿ* ಮತ್ತು *ಪಢ್ನೇ ಕೀ ಆದತ್* ನಂತಹ ಹಲವು ಲೇಖನಗಳನ್ನು ಓದಿ ಈ ನಿಟ್ಟಿನಲ್ಲಿ ಆಳವಾದ ಜ್ಞಾನವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಎಲ್ಲಾ ಸಿದ್ಧತೆಗಳು ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ನಡೆಸಲು ಸಹಾಯ ಮಾಡಿದ್ದಲ್ಲದೆ, ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡುವಾಗ ಗ್ರಂಥಾಲಯ ನಿರ್ವಹಣೆಯ ಬಗ್ಗೆ ಒಂದು ಹೊಸ ದೃಷ್ಟಿಕೋನವನ್ನೂ ಕೂಡ ಒದಗಿಸಿಕೊಟ್ಟಿದೆ.

ಈ ರೀತಿಯಾಗಿ ಶಿಕ್ಷಕರ ನಡುವೆ ಮಕ್ಕಳ ಸಾಹಿತ್ಯವನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವ ಪೂರಕ ವಾತಾವರಣ ನಿರ್ಮಾಣವಾಗಿದೆ ಎಂದು ಶಿಕ್ಷಕರು ತಿಳಿಸಿದ್ದಾರೆ. ಒಬ್ಬ ಶಿಕ್ಷಕರು ತಾವು ಏಕಲವ್ಯ ಸಂಸ್ಥೆಯ *ಕಿತಾಬೋಂ ಸೇ ದೋಸ್ತಿ* ಕೋರ್ಸ್‌ನಲ್ಲಿ ಪಾಲ್ಗೊಂಡಿದ್ದಾಗಿ ತಿಳಿಸಿದರು. ಇದರ ಪರಿಣಾಮವಾಗಿ ತಮ್ಮ ಶಾಲೆಯಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಹಾಗೂ ತಮ್ಮ ಸಹೋದ್ಯೋಗಿ ಶಿಕ್ಷಕರಿಗೂ ಬಾಲ ಸಾಹಿತ್ಯದ ಬಳಕೆಯಲ್ಲಿ ನೆರವಾಗಲು ಸಾಧ್ಯವಾಗುತ್ತಿದೆ ಎಂದರು. ಶಾಲಾ ವ್ಯವಸ್ಥೆಯ ಇತರೆ ಕೆಲಸಗಳ ಜೊತೆಜೊತೆಗೇ ಗ್ರಂಥಾಲಯ ನಿರ್ವಹಣೆಯ ಜವಾಬ್ದಾರಿಯನ್ನೂ ಸಹ ನಿಭಾಯಿಸುತ್ತಿರುವುದಾಗಿ ಶಿಕ್ಷಕರು ತಿಳಿಸಿದರು.



*ಚಿತ್ರ 2: ತಮ್ಮ ಪಠ್ಯಪುಸ್ತಕಗಳಿಂದ ಗಟ್ಟಿಯಾಗಿ ಓದುತ್ತಿರುವ ವಿದ್ಯಾರ್ಥಿಗಳು.*

## ಓದುವ ಅವಧಿ

ತಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಬಂದು ಓದಲೆಂದೇ ಒಂದು ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿರುವುದಾಗಿ ಹಲವು ಶಿಕ್ಷಕರು ತಿಳಿಸಿದರು. ವಿದ್ಯಾರ್ಥಿಗಳು ಅಲ್ಲಿಗೆ ಬಂದು ತಮಗೆ ಇಷ್ಟವಾದ ಪುಸ್ತಕವನ್ನು ಆಯ್ಕೆ ಮಾಡಿಕೊಂಡು ಕುಳಿತು ಓದಬಹುದು. ಓದುವ ಅವಧಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಓದನ್ನು ಗಮನಿಸುತ್ತಿರುತ್ತಾರೆ ಹಾಗೂ ಆಗಾಗ ಅವರೊಂದಿಗೆ ಸಂವಾದ ನಡೆಸುತ್ತಾರೆ. ಕೆಲವು ಶಿಕ್ಷಕರು ವಿದ್ಯಾರ್ಥಿಗಳ ಜೊತೆಯಲ್ಲೇ ಕುಳಿತು ಪುಸ್ತಕಗಳನ್ನು ಓದುತ್ತಾರೆ. (ಇದರ ಕುರಿತ ವಿವರವಾದ ಲೇಖನವು ಜೂನ್ 2023ರ 'ಪಾಠಶಾಲಾ' ಸಂಚಿಕೆ 16ರಲ್ಲಿ ಪ್ರಕಟವಾಗಿದೆ.)

## ಗ್ರಂಥಾಲಯಕ್ಕಾಗಿ ಪುಸ್ತಕಗಳ ಆಯ್ಕೆ

ಗ್ರಂಥಾಲಯವನ್ನು ಆಕರ್ಷಕವಾಗಿಸಲು ಹೊಸ ಪುಸ್ತಕಗಳ ಅಗತ್ಯವಿರುತ್ತದೆ ಎಂದು ಶಿಕ್ಷಕರು ತಿಳಿಸಿದರು. ಒಂದೇ ಪುಸ್ತಕವನ್ನು ಹಲವು ಬಾರಿ ಓದಿದಾಗ ವಿದ್ಯಾರ್ಥಿಗಳಿಗೆ ಅದರ ಮೇಲಿನ ಆಸಕ್ತಿ ಕಡಿಮೆಯಾಗುತ್ತದೆ; ಹಾಗಾಗಿ ಅವರಿಗೆ ಹೊಸ ಪುಸ್ತಕಗಳು ಬೇಕೇ ಬೇಕು. ಆದರೆ ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಲು ಸೀಮಿತ ಬಜೆಟ್ ಇರುತ್ತದೆ. ಹಲವು ಬಾರಿ ಇಲಾಖೆಯಿಂದ ಒದಗಿಸಲಾದ ಪುಸ್ತಕಗಳು ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಗೆ ಪೂರಕವಾಗಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರು ತಮ್ಮ ಸ್ವಂತ ಪ್ರಯತ್ನ ಹಾಗೂ ಸಂಪನ್ಮೂಲಗಳಿಂದ ಪುಸ್ತಕಗಳನ್ನು ತರಿಸಿಕೊಳ್ಳುತ್ತಾರೆ. ಈ ಪುಸ್ತಕಗಳಲ್ಲಿ ಕಥೆ ಮತ್ತು ಕವಿತೆಗಳಲ್ಲದೆ ಮಾಹಿತಿಯುಕ್ತ ಪುಸ್ತಕಗಳು, ಪರಿಸರವನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಪುಸ್ತಕಗಳು, ಪ್ರವಾಸ ಕಥನಗಳು, ಡೈರಿ, ಸೃಜನಾತ್ಮಕ ಗದ್ಯ, ನೋಡಿ-ಮಾಡಿ ಕಲಿಯುವ ಪುಸ್ತಕಗಳು, ಮೆದುಳಿಗೆ ಕೆಲಸ ಕೊಡುವ ಪುಸ್ತಕಗಳು, ಒಗಟುಗಳು ಮತ್ತು ಶಬ್ದಕೋಶ ಮುಂತಾದ ಕೃತಿಗಳನ್ನು ಶಿಕ್ಷಕರು ಸೇರಿಸಿದ್ದಾರೆ. ಇದರೊಂದಿಗೆ ಪುಟ್ಟ ವಿದ್ಯಾರ್ಥಿಗಳಿಗಾಗಿ *ಬಿಗ್ ಬುಕ್*, ಚಿತ್ರಾತ್ಮಕ ಪುಸ್ತಕಗಳು, ಕವಿತೆಯ ಪೋಸ್ಟರ್‌ಗಳು ಇತ್ಯಾದಿಗಳ ಕಡೆಗೂ ಗಮನಹರಿಸಲಾಗಿದೆ. ಕೆಲವು ಶಿಕ್ಷಕರು ಹಿಂದಿಯ ಜೊತೆಗೆ ಇಂಗ್ಲಿಷ್ ಪುಸ್ತಕಗಳನ್ನೂ ತರಿಸಿಕೊಂಡಿದ್ದಾರೆ.

ಶಿಕ್ಷಕರು ತಮ್ಮ ನಡುವಿನ ಸಂವಾದದ ಸಂದರ್ಭದಲ್ಲಿ ಬಾಲ ಸಾಹಿತ್ಯದ 'ಪರಾಗ್ ಆನರ್ ಲಿಸ್ಟ್' ಬಗ್ಗೆ ತಿಳಿದುಕೊಂಡಿದ್ದಾರೆ. ಅವರು ಆ ಪಟ್ಟಿಯಲ್ಲಿರುವ ಪುಸ್ತಕಗಳನ್ನೂ ಸಹ ತರಿಸಿಕೊಳ್ಳುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಯಾವ ಶಿಕ್ಷಕರಿಗೆ ಗ್ರಂಥಾಲಯದ ಶಕ್ತಿಯ ಅರಿವಾಗುತ್ತದೆಯೋ, ಅವರು ಅವಕಾಶ ಸಿಕ್ಕಾಗಲೆಲ್ಲಾ ವಿದ್ಯಾರ್ಥಿಗಳಿಗಾಗಿ ಕಾಲಕಾಲಕ್ಕೆ ಹೊಸ ಪುಸ್ತಕಗಳನ್ನು ತರಿಸುತ್ತಾ ತಮ್ಮ ಗ್ರಂಥಾಲಯವನ್ನು ಸಮೃದ್ಧಗೊಳಿಸುತ್ತಲೇ ಇರುತ್ತಾರೆ. ಕೆಲವು ಶಿಕ್ಷಕರು ಪುಸ್ತಕಗಳನ್ನು ಖರೀದಿಸಲು 'ವಿಶ್ವ ಪುಸ್ತಕ ಮೇಳ'ಕ್ಕೂ ಭೇಟಿ ನೀಡುತ್ತಾರೆ; ಅಲ್ಲಿ ತಮ್ಮ ಶಾಲೆಗೆ ಪುಸ್ತಕಗಳನ್ನು ಕೊಳ್ಳುವುದಷ್ಟೇ ಅಲ್ಲದೆ, ತಮ್ಮ ಸಹೋದ್ಯೋಗಿಗಳಿಗಾಗಿಯೂ ಪುಸ್ತಕಗಳನ್ನು ಖರೀದಿಸಿ ತರುತ್ತಾರೆ.

## ಗ್ರಂಥಾಲಯದಲ್ಲಿ ಪುಸ್ತಕಗಳ ವ್ಯವಸ್ಥಿತ ಜೋಡಣೆ

ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಹೇಗೆ ಜೋಡಿಸಲಾಗಿದೆ ಮತ್ತು ಪ್ರದರ್ಶಿಸಲಾಗಿದೆ ಎಂಬುದು ವಿದ್ಯಾರ್ಥಿಗಳು ಅವುಗಳನ್ನು ಬಳಸುವ ರೀತಿಯ ಮೇಲೆ ನೇರ ಪ್ರಭಾವ ಬೀರುತ್ತದೆ ಎಂದು ಶಿಕ್ಷಕರು ಹೇಳುತ್ತಾರೆ. ಪುಸ್ತಕಗಳು ವಿದ್ಯಾರ್ಥಿಗಳ ಕಣ್ಣಿಗೆ ಕಾಣುವಂತೆ ಹಾಗೂ ಕೈಗೆ ಎಟುಕುವಂತೆ ಇದ್ದಾಗ, ಅವರು ತಮಗೆ ಬೇಕಾದ ಪುಸ್ತಕವನ್ನು ಸುಲಭವಾಗಿ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕಾಗಿ ಶಿಕ್ಷಕರು ಸಂದರ್ಭಕ್ಕೆ ಅನುಗುಣವಾಗಿ ವಿವಿಧ ವಿಧಾನಗಳನ್ನು ಬಳಸುತ್ತಾರೆ. ಓದಿದ ನಂತರ ಪುಸ್ತಕಗಳನ್ನು ಮರಳಿಸುವುದು, ಅದರಲ್ಲೂ ಸೂಕ್ತ ಸ್ಥಾನದಲ್ಲೇ ತಂದಿಡುವುದು ಮುಖ್ಯ ಎಂಬುದನ್ನು ಮಕ್ಕಳಿಗೆ ತಿಳಿಸಿಕೊಡಲಾಗಿದ್ದು, ವಿದ್ಯಾರ್ಥಿಗಳು ಈಗ ಅದನ್ನು ಚಾಚೂತಪ್ಪದೆ ಪಾಲಿಸುತ್ತಿರುವುದಾಗಿ ಹಲವು ಶಿಕ್ಷಕರು ಹಂಚಿಕೊಂಡಿದ್ದಾರೆ. ಕೆಲವು ಕಡೆಗಳಲ್ಲಂತೂ ವಿದ್ಯಾರ್ಥಿಗಳೇ ಗ್ರಂಥಾಲಯದ ವ್ಯವಸ್ಥೆ ಮತ್ತು ಸಂಪೂರ್ಣ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ.

## ವಿದ್ಯಾರ್ಥಿಗಳಿಗೆ ಪುಸ್ತಕಗಳ ಮೇಲೆ ಆಸಕ್ತಿ ಮೂಡಿದ್ದು ಹೇಗೆ?

ವಿದ್ಯಾರ್ಥಿಗಳಿಗೆ ಪುಸ್ತಕಗಳೊಂದಿಗೆ ನಂಟು ಬೆಳೆಯಬೇಕಾದರೆ, ಪುಸ್ತಕಗಳು ಕೇವಲ ಗ್ರಂಥಾಲಯಕ್ಕೆ ಮಾತ್ರ ಸೀಮಿತವಾಗಿರಬಾರದು ಎಂಬುದು ಶಿಕ್ಷಕರ ಅಭಿಪ್ರಾಯ. ಹೀಗಾಗಿ ಗ್ರಂಥಾಲಯದ ಜೊತೆಗೆ ತರಗತಿಗಳಲ್ಲಿಯೂ ಪುಸ್ತಕಗಳ ಬಳಕೆಯನ್ನು ಅವರು ಉತ್ತೇಜಿಸುತ್ತಾರೆ. ಶಿಕ್ಷಕರೊಂದಿಗಿನ ಮಾತುಕತೆ ಮತ್ತು ಶಾಲಾ ಭೇಟಿಯ ಸಮಯದಲ್ಲಿ ಗಮನಿಸಿದ ಅಂಶಗಳ ಆಧಾರದ ಮೇಲೆ, ವಿದ್ಯಾರ್ಥಿಗಳು ಪುಸ್ತಕಗಳೊಂದಿಗೆ ಹೇಗೆ ಬೆರೆಯುತ್ತಾರೆ ಎಂಬುದಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ನೀಡಲಾಗಿದೆ:

## ತರಗತಿಯಲ್ಲಿ ಪುಸ್ತಕಗಳ ಬಳಕೆ:

ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿ ಗ್ರಂಥಾಲಯದ ಪುಸ್ತಕಗಳನ್ನು ಹೇಗೆ ಬಳಸಬಹುದು ಎಂಬುದನ್ನು ಶಿಕ್ಷಕರು ಹಂಚಿಕೊಂಡಿದ್ದಾರೆ. ಉದಾಹರಣೆಗೆ: 5ನೇ ತರಗತಿಯ ಪಠ್ಯಪುಸ್ತಕ 'ರಿಮ್‌ಝಿಮ್'ನ 'ನನ್ಹಾ ಫನ್ಕಾರ್' ಪಾಠದಲ್ಲಿ ಅಕ್ಬರ್ ಚಕ್ರವರ್ತಿಯ ವಿನಯ ಮತ್ತು ಸಾಮಾನ್ಯ ಜನರಿಂದ ಕಲಿಯುವ ಆತನ ಗುಣದ ವಿಷಯವಿದ್ದಾಗ, ಆ ಪಾಠದ ಜೊತೆಗೆ 'ಶೆಹನ್‌ಶಾ ಅಕ್ಬರ್ ಕೋ ಕೌನ್ ಸಿಖಾಯೇಗಾ' ಪುಸ್ತಕವನ್ನೂ ಬಳಸಲಾಯಿತು. ಹಾಗೆಯೇ, 2ನೇ ತರಗತಿಯ ಪಠ್ಯದಲ್ಲಿರುವ 'ಚೀಂಟೀ' (ಇರುವೆ) ಕವಿತೆಯ ಜೊತೆಗೆ ಏಕಲವ್ಯ ಪ್ರಕಟಿಸಿರುವ 'ಚೀಂಟಾ' ಪುಸ್ತಕವನ್ನು ಸೇರಿಸಿ ಚರ್ಚಿಸಲಾಯಿತು. ಶಿಕ್ಷಕರ ಮಾತುಗಳಲ್ಲಿ ಪಠ್ಯಪುಸ್ತಕದ ಪಾಠಗಳ ಚರ್ಚೆಯ ಜೊತೆಗೆ ಮಕ್ಕಳ ಸಾಹಿತ್ಯದ ಉಲ್ಲೇಖವೂ ಸಹಜವಾಗಿಯೇ ಮೂಡಿಬರುತ್ತಿತ್ತು. ವಿದ್ಯಾರ್ಥಿಗಳು ಬಾಲ ಸಾಹಿತ್ಯದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಳ್ಳಬೇಕು ಹಾಗೂ ವಿಷಯಗಳನ್ನು ವಿಶಾಲ ದೃಷ್ಟಿಕೋನದಿಂದ ನೋಡುವುದನ್ನು ಕಲಿಯಬೇಕು ಎಂಬುದು ಶಿಕ್ಷಕರ ಯೋಜಿತ ಪ್ರಯತ್ನವಾಗಿತ್ತು. ಇದರಿಂದಾಗಿ, ಮೊದಲು ಕೇವಲ ಪುಸ್ತಕಗಳನ್ನು ನೀಡುವುದು-ಪಡೆಯುವುದಕ್ಕಷ್ಟೇ ಸೀಮಿತವಾಗಿದ್ದ ಗ್ರಂಥಾಲಯವು, ಈಗ ಓದಿನ ಆನಂದ ನೀಡುವ ಜೊತೆಗೆ ಬೋಧನಾ ಯೋಜನೆಯ ಪ್ರಮುಖ ಭಾಗವಾಗಿಯೂ ರೂಪುಗೊಂಡಿದೆ.

## ವಿದ್ಯಾರ್ಥಿಗಳನ್ನು ನಿಯತವಾಗಿ ಗಮನಿಸುವುದು ಮತ್ತು ಅವರೊಂದಿಗೆ ಚರ್ಚಿಸುವುದು

ಶಿಕ್ಷಕರು ಯಾವ ವಿದ್ಯಾರ್ಥಿಗಳು ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಅಥವಾ ಹೋಗುತ್ತಿಲ್ಲ ಎಂಬುದರ ಮೇಲೆ ನಿಗಾ ಇರಿಸಿದ್ದಲ್ಲದೆ, ಮಕ್ಕಳ ಪುಸ್ತಕ ಓದುವ ಹವ್ಯಾಸವನ್ನೂ ಸೂಕ್ಷ್ಮವಾಗಿ ಗಮನಿಸಲಾರಂಭಿಸಿದರು. ಪುಸ್ತಕ ಕೊಂಡೊಯ್ದ ವಿದ್ಯಾರ್ಥಿಗಳು ಅದನ್ನು ನಿಜವಾಗಿಯೂ ಓದುತ್ತಿದ್ದಾರೆಯೇ ಎಂದು ತಿಳಿಯಲು, ಶಿಕ್ಷಕರು ಆಗಾಗ ಆ ಪುಸ್ತಕದ ಕುರಿತು ಅವರೊಂದಿಗೆ ಚರ್ಚಿಸುತ್ತಿದ್ದರು. ಈ ಪ್ರಕ್ರಿಯೆಯು ಪ್ರತಿಯೊಬ್ಬ ವಿದ್ಯಾರ್ಥಿಯ ಆಸಕ್ತಿ ಮತ್ತು ಅಭಿರುಚಿಯನ್ನು ಗುರುತಿಸಲು ಶಿಕ್ಷಕರಿಗೆ ಸಹಕಾರಿಯಾಯಿತು. ಪರಿಣಾಮವಾಗಿ, ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಅವರಿಗೆ ಸೂಕ್ತವಾದ ಪೂರಕ ಪುಸ್ತಕಗಳನ್ನು ಶಿಫಾರಸು ಮಾಡಲು ಶಿಕ್ಷಕರಿಗೆ ಸಾಧ್ಯವಾಯಿತು.

## ಪುಸ್ತಕ ಆಧಾರಿತ ಚಟುವಟಿಕೆಗಳು

ವಿದ್ಯಾರ್ಥಿಗಳಲ್ಲಿ ಓದಿನ ಅಭಿರುಚಿಯನ್ನು ಮೂಡಿಸಲು ಶಿಕ್ಷಕರು ಗ್ರಂಥಾಲಯದ ಪುಸ್ತಕಗಳಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾರಂಭಿಸಿದರು. ಇದರಲ್ಲಿ ಶಿಕ್ಷಕರಿಂದ ಕಥಾವಾಚನ, ಆಯ್ದ ಕಥೆಗಳ ಆಧಾರದ ಮೇಲೆ ಪಾತ್ರಾಭಿನಯ (ರೋಲ್ ಪ್ಲೇ), ಕಥೆಗಳನ್ನು ಬೊಂಬೆಯಾಟದ (ಕಠ್ಪುತಲಿ) ಮೂಲಕ ಪ್ರದರ್ಶಿಸುವುದು ಹಾಗೂ ಉತ್ತಮವಾಗಿ ಓದಬಲ್ಲ ವಿದ್ಯಾರ್ಥಿಗಳಿಂದ ತಮಗೆ ಇಷ್ಟವಾದ ಕಥೆಗಳನ್ನು ಓದಿಸುವುದು ಮುಂತಾದ ವಿಧಾನಗಳು ಸೇರಿದ್ದವು.

ಅತ್ಯಂತ ಮುಖ್ಯವಾದ ವಿಷಯವೆಂದರೆ, ಶಿಕ್ಷಕರು ಪುಸ್ತಕಗಳ ಕುರಿತು ಚರ್ಚಿಸಲು ಯೋಜನೆಗಳನ್ನು ರೂಪಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲು ಶುರುಮಾಡಿದರು. ಇದರಲ್ಲಿ *ಚುಟ್ಕಿ ಉಲ್ಲಿ*, *ಮಿತ್ವಾ*, *ಖುಷ್-ಖುಷ್ ಕಛುವಾ*, *ನೀಲೋಫರ್ ಕೀ ಮುಸ್ಕಾನ್*, *ಪಂಛಿ ಪ್ಯಾರಾ*, *ಬುಢಿಯಾ ಕೀ ರೋಟಿ*, *ಮಹಾಗಿರಿ*, *ಖ್ಯೂ-ಖ್ಯೂ ಛೋರಿ* ಮುಂತಾದ ಪುಸ್ತಕಗಳನ್ನು ಆಧರಿಸಿದ ಯೋಜನೆಗಳು ಕಂಡುಬಂದವು. ವಿದ್ಯಾರ್ಥಿಗಳಿಗೆ ಕೇವಲ ಕಥೆ-ಕವಿತೆಗಳಷ್ಟೇ ಅಲ್ಲದೆ, ಮೆದುಳಿಗೆ ಕೆಲಸ ಕೊಡುವ ಒಗಟುಗಳ (ಪಜಲ್ಸ್) ಮತ್ತು ಸೃಜನಾತ್ಮಕ ಚಟುವಟಿಕೆಗಳ ಪುಸ್ತಕಗಳನ್ನು ಓದಲು ಸಹ ಶಿಕ್ಷಕರು ಪ್ರೋತ್ಸಾಹಿಸಿದರು.

## ವಿದ್ಯಾರ್ಥಿಗಳ ಓದು ಮತ್ತು ಬರಹಕ್ಕೆ ವೇದಿಕೆ ಕಲ್ಪಿಸುವುದು

ಮೇಲೆ ಹೇಳಿರುವಂತೆಯೇ, ವಿದ್ಯಾರ್ಥಿಗಳು ತಾವು ಓದಿದ ವಿಷಯಗಳನ್ನು ವ್ಯಕ್ತಪಡಿಸಲು ಶಿಕ್ಷಕರು ಮೌಖಿಕ ವೇದಿಕೆಗಳನ್ನು ಕಲ್ಪಿಸಿಕೊಟ್ಟರು. ಇದರೊಂದಿಗೆ ಹೊಸ ಸೃಜನಶೀಲ ಕಥೆ ಹಾಗೂ ಕವನಗಳನ್ನು ರಚಿಸಲು ಅವಕಾಶ ಮಾಡಿಕೊಟ್ಟರು ಮತ್ತು ತಮ್ಮ ಜೀವನದ ಅನುಭವಗಳನ್ನು ಬರೆಯಲು ಪ್ರೇರೇಪಿಸಿದರು. ಶಿಕ್ಷಕರು ವಿದ್ಯಾರ್ಥಿಗಳ ಈ ಬರಹಗಳನ್ನು ಕೆಲವು ಮಕ್ಕಳ ಪತ್ರಿಕೆಗಳಿಗೆ ಕಳುಹಿಸಿಕೊಟ್ಟರು; ಅವುಗಳಲ್ಲಿ ಕೆಲವು ಪ್ರಕಟವೂ ಆದವು! ಈ ಸಾಫಲ್ಯವು ಅವರಿಗೆ ಮುಂದಿನ ಓದು ಮತ್ತು ಬರಹಕ್ಕೆ ದೊಡ್ಡ ಪ್ರೇರಣೆಯಾಯಿತು. ಕೆಲವು ಹಿರಿಯ ವಿದ್ಯಾರ್ಥಿಗಳಂತೂ ಪುಸ್ತಕಗಳ ಬಗ್ಗೆ ವಿಮರ್ಶೆ ಬರೆಯುವುದನ್ನೂ ಸಹ ಪ್ರಾರಂಭಿಸಿದರು.

## ಅಂತಿಮ ನುಡಿ

ಗ್ರಂಥಾಲಯಗಳ ಪರಿಣಾಮಕಾರಿ ನಿರ್ವಹಣೆಯ ಸಂದರ್ಭದಲ್ಲಿ, ಪುಸ್ತಕಗಳ ಓದುವಿಕೆಯು ವಿದ್ಯಾರ್ಥಿಗಳ ಭಾಷಾ ಕೌಶಲಗಳ ಜೊತೆಗೆ ಅವರ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೂ ಸಹಕಾರಿ ಎಂಬುದು ಶಿಕ್ಷಕರಿಗೆ ಅರಿವಾಗಿರುವುದು ಶಿಕ್ಷಕರೊಂದಿಗಿನ ಸಂಭಾಷಣೆ ಮತ್ತು ಶಾಲಾ ಗ್ರಂಥಾಲಯದ ಪರಿಶೀಲನೆಯಿಂದ ನನಗೆ ಸ್ಪಷ್ಟವಾಯಿತು. ಓದುವ ಹವ್ಯಾಸದಿಂದಾಗಿ ವಿದ್ಯಾರ್ಥಿಗಳಲ್ಲಿ ಅಭಿವ್ಯಕ್ತಿ ಸಾಮರ್ಥ್ಯ ವಿಕಸನಗೊಳ್ಳುತ್ತದೆ, ಅವರಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ ಹಾಗೂ ವಿವಿಧ ವಿಷಯಗಳನ್ನು ಗ್ರಹಿಸುವ ಶಕ್ತಿಯೂ ಬೆಳೆಯುತ್ತದೆ. ನಿಯತವಾಗಿ ಓದುವ ವಿದ್ಯಾರ್ಥಿಗಳು ಇತರ ಶೈಕ್ಷಣಿಕ ವಿಷಯಗಳಲ್ಲೂ ಉತ್ತಮ ಸಾಧನೆ ಮಾಡುತ್ತಾರೆ ಎಂಬುದನ್ನು ಶಿಕ್ಷಕರು ಗಮನಿಸಿದ್ದಾರೆ. ಇದಲ್ಲದೆ, ಪುಸ್ತಕಗಳ ಮೂಲಕ ಅನೇಕ ವಿಷಯಗಳ ಬಗ್ಗೆ ಮುಕ್ತವಾಗಿ ಮಾತನಾಡುವುದು ಸುಲಭವಾಗುತ್ತದೆ ಎಂಬುದು ಕೂಡ ಶಿಕ್ಷಕರಿಗೆ ಮನವರಿಕೆಯಾಗಿದೆ. ಇವುಗಳಲ್ಲಿ ಜಾತಿ, ಲಿಂಗ, ಭಾಷೆ ಮತ್ತು ಪ್ರಾದೇಶಿಕ ತಾರತಮ್ಯಕ್ಕೆ ಸಂಬಂಧಿಸಿದ ಸೂಕ್ಷ್ಮ ವಿಷಯಗಳೂ ಸೇರಿವೆ. ನೇರವಾಗಿ ಮಾತನಾಡಲು ಕಷ್ಟವೆನಿಸುವ ಇಂತಹ ವಿಷಯಗಳ ಕುರಿತು ಅರ್ಥಪೂರ್ಣ ಸಂವಾದ ನಡೆಸಲು ಪುಸ್ತಕಗಳು ಪ್ರಬಲ ಮಾಧ್ಯಮವಾಗಿ ನೆರವಾಗುತ್ತವೆ.

ಪುಸ್ತಕಗಳ ಬಗ್ಗೆ ಆಳವಾದ ತಿಳುವಳಿಕೆ ಮೂಡಿಸಲು ಸೂಕ್ತ ಯೋಜನೆಯ ಅಗತ್ಯವಿದ್ದು, ಅದು ಸಾಧ್ಯವಾದಾಗ ಮಾತ್ರ ವಿದ್ಯಾರ್ಥಿಗಳ ನಡುವೆ ಅರ್ಥಪೂರ್ಣ ಸಂವಾದ ನಡೆಸಲು ಸಾಧ್ಯ ಎಂಬುದು ಅವರಿಗೆ ಅರಿವಾಗಿದೆ. ಇದಲ್ಲದೆ, ಇವೆಲ್ಲವನ್ನೂ ಸರಿಯಾಗಿ ಅನುಷ್ಠಾನಗೊಳಿಸಲು ಅವರು ಸ್ವತಃ ಮಕ್ಕಳ ಸಾಹಿತ್ಯದ ಉತ್ತಮ ಓದುಗರಾಗುವ ಹಾಗೂ ಅದರ ಕುರಿತು ನಿಯತವಾಗಿ ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳುವ ಅಗತ್ಯವನ್ನು ಶಿಕ್ಷಕರು ಮನಗಂಡಿದ್ದಾರೆ.




**ಕಮಲೇಶ್ ಚಂದ್ರ ಜೋಶಿ** ಅವರು ಕಳೆದ 30 ವರ್ಷಗಳಿಂದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಕರೊಂದಿಗೆ ಭಾಷಾ ಬೋಧನೆ, ಶಾಲಾ ಗ್ರಂಥಾಲಯ ಹಾಗೂ ಶಿಕ್ಷಕರ ತರಬೇತಿ ಮುಂತಾದ ವಿಷಯಗಳ ಕುರಿತು ಅವರು ಸುದೀರ್ಘವಾಗಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಉತ್ತರಾಖಂಡದ ಉಧಮ್ ಸಿಂಗ್ ನಗರದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಸಂಪರ್ಕ:** kamlesh@azimpremjifoundation.org


ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಕೇಶ್ ಪೂಂಜಾ

# ಅಂಗನವಾಡಿಯನ್ನು ಕಲಿಕೆಯ ಕೇಂದ್ರವನ್ನಾಗಿ ಪರಿವರ್ತಿಸಿದ ಶಿಕ್ಷಕಿ

**ಅನನ್ಯ. ಡಿ**

**ಶಿಕ್ಷಕಿಯೊಬ್ಬರ ನಿರಂತರ ಪ್ರಯತ್ನಗಳಿಂದಾಗಿ ಮಕ್ಕಳ ದಾಖಲಾತಿ ಸಂಖ್ಯೆ 10ರಿಂದ 45ಕ್ಕೆ ಹೆಚ್ಚಿದ್ದಲ್ಲದೆ, ಅವರ ಕಲಿಕಾ ಮಟ್ಟವೂ ಸುಧಾರಿಸಿದ ಅಂಗನವಾಡಿಯೊಂದರ ಯಶೋಗಾಥೆ ಇದಾಗಿದೆ. ಶಿಕ್ಷಕಿ ಇದನ್ನು ಹೇಗೆ ಸಾಧಿಸಿದರು? ಈ ಪ್ರಕ್ರಿಯೆಯಲ್ಲಿ ಸಮುದಾಯದವರನ್ನು ಹೇಗೆ ಭಾಗಿದಾರರನ್ನಾಗಿ ಮಾಡಿಕೊಂಡರು? ಮಕ್ಕಳ ಸಂಖ್ಯೆ ಹೇಗೆ ಹೆಚ್ಚಾಯಿತು ಮತ್ತು ಅವರಲ್ಲಿ ಕಲಿಕಾಸಕ್ತಿ ಹೇಗೆ ಮೂಡಿತು? ಇಂತಹ ಹಲವು ಪ್ರಶ್ನೆಗಳಿಗೆ ಈ ಲೇಖನವು ಉತ್ತರಗಳನ್ನು ಒದಗಿಸುತ್ತದೆ.**

ಶಂಕರಮ್ಮ ಅವರು 2010ರಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ICDS) ವಿಭಾಗಕ್ಕೆ ಸೇರಿದಾಗ, ಅವರ ಕೇಂದ್ರಕ್ಕೆ ಬರುವ ಮಕ್ಕಳ ಸಂಖ್ಯೆ ಹೆಚ್ಚೆಂದರೆ 10ರಿಂದ 15 ಮಾತ್ರ ಇರುತ್ತಿತ್ತು. ಅವರಲ್ಲಿಯೂ ಹೆಚ್ಚಿನವರು ಮಧ್ಯಾಹ್ನದ ಊಟಕ್ಕಾಗಿ ಮಾತ್ರ ಬರುತ್ತಿದ್ದವರಾಗಿದ್ದರು. ಪೋಷಕರಿಗೆ ಶಾಲಾಪೂರ್ವ ಶಿಕ್ಷಣದ ಬಗ್ಗೆ ಕನಿಷ್ಠ ಮಾಹಿತಿಯೂ ಇರಲಿಲ್ಲ. ಕೇಂದ್ರದಲ್ಲೂ ಸಹ ಪೂರ್ವಯೋಜಿತ ಕಲಿಕಾ ಚಟುವಟಿಕೆಗಳ ಕುರಿತು ಯಾರೂ ಕೇಳಿರಲಿಲ್ಲ ಮತ್ತು ಆ ಬಗ್ಗೆ ಯಾರಿಗೂ ಕಲ್ಪನೆಯೂ ಇರಲಿಲ್ಲ.

ಅಂಗನವಾಡಿಗೆ ಶಂಕರಮ್ಮನವರು ನಿರಂತರವಾಗಿ ಹಾಜರಾಗುವುದು ಮತ್ತು ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದ್ದರು. ಮಕ್ಕಳಿಗೆ ಮಧ್ಯಾಹ್ನದ ಊಟದ ಹೊರತಾಗಿಯೂ ಬೇರೆ ಏನಾದರೂ ಉಪಯುಕ್ತ ಕಲಿಕೆ ಸಿಗಬೇಕು ಎಂಬುದು ಅವರ ತೀವ್ರ ಬಯಕೆಯಾಗಿತ್ತು. 2019-20ರಲ್ಲಿ ಕಲಬುರಗಿ ಗ್ರಾಮೀಣ ಬ್ಲಾಕ್‌ನಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ತನ್ನ ಇಸಿಇ (ECE) ಕಾರ್ಯಕ್ರಮವನ್ನು ಪ್ರಾರಂಭಿಸಿದಾಗ, ಅವರಿಗೆ ಈ ದಿಕ್ಕಿನಲ್ಲಿ ಪ್ರಯತ್ನಿಸುವ ಅವಕಾಶ ಲಭಿಸಿತು. ಮಕ್ಕಳ ಬಾಲ್ಯದ ಆರಂಭಿಕ ವರ್ಷಗಳಲ್ಲಿ ವಿಷಯಾಧಾರಿತ (Theme-based) ಕಲಿಕೆಯು ಎಷ್ಟು ಮಹತ್ವದ್ದೆಂಬುದನ್ನು ತಿಂಗಳಿಗೊಮ್ಮೆ ನಡೆಯುವ ಕಾರ್ಯಾಗಾರಗಳು, ಬ್ಲಾಕ್ ಮಟ್ಟದ ಸಭೆಗಳು, ಇಸಿಸಿಇ (ECCE) ದಿನಗಳು, ಮಕ್ಕಳ ಮೇಳಗಳು ಹಾಗೂ ಶಿಕ್ಷಕರ ಮೇಳಗಳ ಮೂಲಕ ಶಂಕರಮ್ಮನವರು ತಿಳಿದುಕೊಂಡರು. ಅಲ್ಲದೆ, ತಮ್ಮ ಅಂಗನವಾಡಿಯಲ್ಲಿ *ಚಿಲಿಪಿಲಿ* ಪಠ್ಯಕ್ರಮದ ಪ್ರಕಾರ ಕಲಿಕಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಧನಾತ್ಮಕ ಬದಲಾವಣೆ ತರಲು ಅವರು ದೃಢನಿರ್ಧಾರ ಮಾಡಿದರು.

## ಸಕ್ರಿಯಗೊಂಡ ಅಂಗನವಾಡಿ ಕೇಂದ್ರ

ಸಣ್ಣ ಸಣ್ಣ ಪ್ರಯತ್ನಗಳಿಂದಲೇ ಬದಲಾವಣೆಯು ಆರಂಭವಾಯಿತು. ಶಂಕರಮ್ಮನವರು ಬೆಳಿಗ್ಗೆ 9:30ಕ್ಕೇ ಅಂಗನವಾಡಿಯನ್ನು ತೆರೆಯಲು ಶುರುಮಾಡಿದರು. ಮಧ್ಯಾಹ್ನ 1:30ರವರೆಗೆ ಮಕ್ಕಳನ್ನು — ಮುಕ್ತ ಆಟ, ಹಾಡು, ಕಥೆ ಹೇಳುವುದು, ಜಾಗೃತಿ ಮೂಡಿಸುವಂತಹ ಹಾಗೂ ವಿಷಯಾಧಾರಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು; ಜೊತೆಗೆ 'ಕಲಿಕಾ ಮೂಲೆ'ಯ ಸಾಮಗ್ರಿಗಳ ಮೂಲಕವೂ ಮಕ್ಕಳನ್ನು ಸಕ್ರಿಯವಾಗಿ ಕಾರ್ಯನಿರತರನ್ನಾಗಿಸಿದರು.

> **"ಅಂಗನವಾಡಿ ಕೇಂದ್ರದ ಕಲಿಕಾ ಮೂಲೆಗಳನ್ನು ಸಮೃದ್ಧ ಹಾಗೂ ಆಕರ್ಷಕವಾಗಿಸಲು ಶಂಕರಮ್ಮನವರು ಸ್ಥಳೀಯ ಜನರಿಂದ ಮತ್ತು ಅಂಗಡಿಗಳಿಂದ ವಿವಿಧ ವಸ್ತುಗಳನ್ನು ಸಂಗ್ರಹಿಸಿದರು. ಇದರಿಂದಾಗಿ, ಮನೆಯಲ್ಲಿ ಸಿಗುವ ಸರಳ ವಸ್ತುಗಳೂ ಸಹ ಮಕ್ಕಳ ಕಲಿಕೆಗೆ ಪ್ರಬಲ ಸಾಧನಗಳಾಗಬಲ್ಲವು ಎಂಬುದನ್ನು ಪೋಷಕರು ಅರ್ಥಮಾಡಿಕೊಂಡರು."**



*ಚಿತ್ರ 1: ಬ್ಲಾಕ್‌ಗಳನ್ನು ಬಣ್ಣದಲ್ಲಿ ಮುಳುಗಿಸಿ ತಮಗೆ ಇಷ್ಟ ಬಂದ ವಿನ್ಯಾಸಗಳನ್ನು ಮಾಡುತ್ತಿರುವ ಮಕ್ಕಳು.*

ಅಂಗನವಾಡಿ ಕೇಂದ್ರದಲ್ಲಿ ಸಂಪನ್ಮೂಲಗಳ ಕೊರತೆ ಇರುವುದು ದೊಡ್ಡ ಸವಾಲಾಗಿತ್ತು. ಆದರೆ ಕಾರ್ಯಾಗಾರವೊಂದರಲ್ಲಿ ಶಂಕರಮ್ಮನವರು ವಿವಿಧ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ (TLM) ತಯಾರಿಕೆ ಹಾಗೂ ಬಳಕೆಯ ಬಗ್ಗೆ ತಿಳಿದುಕೊಂಡಿದ್ದರು. ಅದರಿಂದ ಪ್ರೇರಿತರಾಗಿ, ಅವರು ತಾವೇ ಸ್ವತಃ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಲು ಪ್ರಾರಂಭಿಸಿದರು. ತಮ್ಮ ಕುಟುಂಬದವರ ಸಹಾಯ ಪಡೆದು, ಪ್ರತಿಯೊಂದು ಮಗುವಿಗೂ ತಲುಪುವಂತೆ TLM ತಯಾರಿಸಿದರು. ಇದರಿಂದ ತರಗತಿಯ ಪ್ರತಿ ಮಗುವಿಗೂ ಸಕ್ರಿಯವಾಗಿ ಕಲಿಯಲು ಏನಾದರೊಂದು ವಸ್ತು ಲಭ್ಯವಾಗುವಂತಾಯಿತು. ಈ ಬದಲಾವಣೆಯು ತರಗತಿಯ ವಾತಾವರಣವನ್ನೇ ಬದಲಾಯಿಸಿತು; ಈ ಹಿಂದೆ ಉದಾಸೀನವಾಗಿ ಕೂರುತ್ತಿದ್ದ ಮಕ್ಕಳು ಈಗ ಪ್ರತಿಯೊಂದು ಚಟುವಟಿಕೆಯಲ್ಲೂ ಅತ್ಯಂತ ಉತ್ಸಾಹದಿಂದ ಭಾಗವಹಿಸತೊಡಗಿದರು.

ಈ ಹಿಂದೆ ಶಂಕರಮ್ಮನವರು ಗಟ್ಟಿಯಾಗಿ ಓದಿ ಕಥೆ ಹೇಳುತ್ತಿದ್ದರು. ಆದರೆ ಮಕ್ಕಳು ಇದನ್ನು ಗಮನವಿಟ್ಟು ಕೇಳುತ್ತಿರಲಿಲ್ಲ; ಪರಿಣಾಮವಾಗಿ ಅವರಿಗೆ ಕಥೆ ಹೆಚ್ಚು ನೆನಪಿನಲ್ಲಿಯೂ ಉಳಿಯುತ್ತಿರಲಿಲ್ಲ. ಹೀಗಾಗಿ ಶಂಕರಮ್ಮನವರು ತಮ್ಮ ಶೈಲಿಯನ್ನು ಬದಲಾಯಿಸಿಕೊಂಡರು. ತಮ್ಮದೇ ಆದ ಕಥಾ ಕಾರ್ಡ್‌ಗಳು ಮತ್ತು ಬೊಂಬೆಗಳನ್ನು ಬಳಸಿಕೊಂಡು, ಕಥೆ ಹೇಳಲು ನಾಲ್ಕೈದು ವಿಭಿನ್ನ ವಿಧಾನಗಳನ್ನು ಕಂಡುಕೊಂಡರು. ಉದಾಹರಣೆಗೆ: ವಿವರಣಾತ್ಮಕವಾಗಿ ಮಾತನಾಡುವುದು, ಗಟ್ಟಿಯಾಗಿ ಓದುವುದು, ಕ್ರಮಬದ್ಧ ಚಿತ್ರಗಳಿರುವ ಕಥಾಪುಸ್ತಕಗಳನ್ನು ಬಳಸುವುದು, ಏಕವ್ಯಕ್ತಿ ಅಭಿನಯ ಹಾಗೂ ಪಾತ್ರಾಭಿನಯ ಇತ್ಯಾದಿ. ಇದರ ಫಲಿತಾಂಶ ಅತ್ಯಂತ ಪರಿಣಾಮಕಾರಿಯಾಗಿತ್ತು. ಈ ಹಿಂದೆ ಮೌನವಾಗಿ ಕುಳಿತಿರುತ್ತಿದ್ದ ಮಕ್ಕಳು ಈಗ ಉತ್ಸಾಹದಿಂದ ಪಾತ್ರಗಳನ್ನು ಅಭಿನಯಿಸಲು ಹಾಗೂ ಕಥೆಗಳನ್ನು ತಮ್ಮದೇ ಮಾತುಗಳಲ್ಲಿ ಜೋಡಿಸಿ ಹೇಳಲು ಪ್ರಾರಂಭಿಸಿದರು.

ಶಂಕರಮ್ಮನವರು ಸೃಜನಶೀಲ ಚಟುವಟಿಕೆಗಳನ್ನೂ ಸಹ ವೈವಿಧ್ಯಮಯಗೊಳಿಸಿದರು. ಉದಾಹರಣೆಗೆ: ಬಣ್ಣ ಹಚ್ಚುವುದು, ಚಿತ್ರಗಳ ಮೇಲೆ ಮುತ್ತುಗಳನ್ನು ಅಂಟಿಸುವುದು, ಕಾಗದದ ಸಣ್ಣ ಉಂಡೆಗಳನ್ನು ಮಾಡಿ ಅಂಟಿಸುವುದು ಇತ್ಯಾದಿ. ಮಕ್ಕಳಲ್ಲಿ ಗ್ರಹಣ ಶಕ್ತಿಯ ವಿಕಸನಕ್ಕಾಗಿ, ಚಿತ್ರಗಳನ್ನು ಜೋಡಿಸುವುದು, ಒಗಟುಗಳು/ಪಜ್ಲ್‌ಗಳು, ಕಾಣೆಯಾದ ಭಾಗಗಳನ್ನು ಗುರುತಿಸುವುದು ಹಾಗೂ ವಿಂಗಡಿಸುವಂತಹ ವಿಷಯಾಧಾರಿತ ಚಟುವಟಿಕೆಗಳನ್ನು ವಾರಕ್ಕೊಮ್ಮೆ ಮಾಡಿಸಲು ಪ್ರಾರಂಭಿಸಿದರು. ಈ ಅಭ್ಯಾಸಗಳು ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಹಾಗೂ ಸಮಸ್ಯೆ ಪರಿಹರಿಸುವ ಕೌಶಲಗಳ ಬೆಳವಣಿಗೆಗೆ ಬಲವಾದ ಬುನಾದಿ ಹಾಕಿಕೊಟ್ಟವು.

ಈಗ ಆಟದ ಸಮಯವೂ ಹೊಸ ರೂಪವನ್ನು ಪಡೆದುಕೊಂಡಿತು. ಶಂಕರಮ್ಮನವರು ಸರ್ಕಾರದ ಚಿಲಿಪಿಲಿ ಪಠ್ಯಕ್ರಮದ ವಿಷಯಾಧಾರಿತ ನಾಟಕಗಳು, ಸಾಂಪ್ರದಾಯಿಕ ಆಟಗಳು ಹಾಗೂ 'ಕಲಿಕಾ ಮೂಲೆ'ಯ ಮೂಲಕ ಮುಕ್ತ ಆಟದ ವಾತಾವರಣವನ್ನು ಸೃಷ್ಟಿಸಿದರು. 'ರೋಲ್ ಪ್ಲೇ' ಮೂಲೆ ಅಂತೂ ಎಲ್ಲರಿಗೂ ತುಂಬಾ ಇಷ್ಟವಾಯಿತು! ಅಲ್ಲಿ ಮಕ್ಕಳು ತಂದೆ-ತಾಯಿ, ವೈದ್ಯರು ಅಥವಾ ಬಾಣಸಿಗರ ಪಾತ್ರಗಳನ್ನು ಅಭಿನಯಿಸುತ್ತಾ, ತಾಯಿ ಚಪಾತಿ ಮಾಡುವಂತೆ ಅನುಕರಿಸುತ್ತಾ ತಮ್ಮ ದೈನಂದಿನ ಜೀವನದ ಸನ್ನಿವೇಶಗಳನ್ನು ಜೀವಂತಗೊಳಿಸುತ್ತಿದ್ದರು. ಇದರಿಂದಾಗಿ ಇಡೀ ಅಂಗನವಾಡಿ ಕೇಂದ್ರವು ಮಕ್ಕಳ ಕಲ್ಪನಾ ಶಕ್ತಿ ಮತ್ತು ನಗುವಿನ ಪ್ರತಿಧ್ವನಿಯಿಂದ ಕಂಗೊಳಿಸತೊಡಗಿತು.

ಅಂಗನವಾಡಿ ಕೇಂದ್ರದ ಕಲಿಕಾ ಮೂಲೆಗಳನ್ನು ಸಮೃದ್ಧ ಹಾಗೂ ಆಕರ್ಷಕವಾಗಿಸಲು ಶಂಕರಮ್ಮನವರು ಸ್ಥಳೀಯ ಜನರಿಂದ ಮತ್ತು ಅಂಗಡಿಗಳಿಂದ ವಿವಿಧ ವಸ್ತುಗಳನ್ನು ಸಂಗ್ರಹಿಸಿದರು. ಇದರಿಂದಾಗಿ, ಮನೆಯಲ್ಲಿ ಸಿಗುವ ಸರಳ ವಸ್ತುಗಳೂ ಸಹ ಮಕ್ಕಳ ಕಲಿಕೆಗೆ ಪ್ರಬಲ ಸಾಧನಗಳಾಗಬಲ್ಲವು ಎಂಬುದನ್ನು ಪೋಷಕರು ಅರ್ಥಮಾಡಿಕೊಂಡರು.

ಅಂಗನವಾಡಿಯಲ್ಲಿ 'ರನ್ನಿಂಗ್ ಬ್ಲಾಕ್ ಬೋರ್ಡ್' ಇಲ್ಲದಿರುವುದನ್ನು ಗಮನಿಸಿದ ಶಂಕರಮ್ಮನವರು, ಯಾವುದೇ ಹೊರಗಿನ ಸಹಾಯಕ್ಕಾಗಿ ಕಾಯದೇ ಸ್ವತಃ ತರಗತಿಯ ಗೋಡೆಯ ಕೆಳಭಾಗಕ್ಕೆ ಕಪ್ಪು ಬಣ್ಣ ಬಳಿದು



*ಚಿತ್ರ 2: ಮುಖವಾಡ ಧರಿಸುತ್ತಿರುವ ಶಿಕ್ಷಕರನ್ನು ಕುತೂಹಲದಿಂದ ಸುತ್ತುವರಿದಿರುವ ಮಕ್ಕಳು.*

ಬರೆಯುವ ಸ್ಥಳವನ್ನಾಗಿ ಮಾಡಿದರು. ಮಕ್ಕಳು ಅದರ ಮೇಲೆ ಮುಕ್ತವಾಗಿ ಗೀಚುತ್ತಾ, ಚಿತ್ರ ಬಿಡಿಸುತ್ತಾ ಕಲಿಯತೊಡಗಿದರು. ಈ ಸೃಜನಶೀಲ ಉಪಾಯವು ಮಕ್ಕಳ ಕಣ್ಣು-ಕೈಗಳ ಸಮನ್ವಯತೆಯನ್ನು (Eye-Hand Coordination) ಹೆಚ್ಚಿಸಲು ಹಾಗೂ ಅವರ ಬರವಣಿಗೆ ಮತ್ತು ಚಿತ್ರಕಲೆಯ ಕೌಶಲಗಳನ್ನು ಬೆಳೆಸಲು ಒಂದು ಉತ್ತಮ ಸಾಧನವಾಯಿತು.

ಐಸಿಡಿಎಸ್ (ICDS) ಯೋಜನೆಯ ಇತರ ಫಲಾನುಭವಿಗಳೊಂದಿಗೂ (ಅಂದರೆ ಗರ್ಭಿಣಿಯರು, ಹಾಲುಣಿಸುವ ತಾಯಂದಿರು, 0-3 ವರ್ಷದ ಮಕ್ಕಳು, ಹದಿಹರೆಯದ ಹೆಣ್ಣುಮಕ್ಕಳು ಹಾಗೂ ಪೋಷಕರು) ಶಂಕರಮ್ಮನವರು ಮಾತನಾಡಿದರು. ಅವರೆಲ್ಲರಿಗೂ ಮಧ್ಯಾಹ್ನ 2 ಗಂಟೆಯ ನಂತರವೇ ಕೇಂದ್ರಕ್ಕೆ ಬರುವಂತೆ ವಿನಂತಿಸಿಕೊಂಡರು. ಇದರಿಂದ ಬೆಳಗಿನ ಸಂಪೂರ್ಣ ಸಮಯವು ಶಾಲಾಪೂರ್ವ ಕಲಿಕಾ ಚಟುವಟಿಕೆಗಳಿಗೆ ಯಾವುದೇ ಅಡಚಣೆಯಿಲ್ಲದೆ ಲಭಿಸುವಂತಾಯಿತು.

ಈ ಬದಲಾವಣೆಯನ್ನು ಕಂಡು ಪೋಷಕರು ಆಶ್ಚರ್ಯಚಕಿತರಾದರು. ಒಂದು ಕಾಲದಲ್ಲಿ ಬೀದಿಗಳಲ್ಲಿ ಸುಮ್ಮನೆ ಅಲೆಯುತ್ತಿದ್ದ ಮಕ್ಕಳು, ಈಗ ಸತತವಾಗಿ ನಾಲ್ಕು ಗಂಟೆಗಳ ಕಾಲ ಅಂಗನವಾಡಿಯಲ್ಲಿಯೇ ಸಂತಸದಿಂದ ಕಾಲ ಕಳೆಯುತ್ತಿದ್ದರು. ಅವರು ಹಾಡುತ್ತಿದ್ದರು, ಕುಣಿಯುತ್ತಿದ್ದರು, ಶಿಕ್ಷಕರನ್ನು ಪ್ರಶ್ನೆಗಳನ್ನು ಕೇಳುತ್ತಿದ್ದರು ಹಾಗೂ ತಾವೇ ಸ್ವತಃ ಕಥೆಗಳನ್ನು ಹೇಳಲು ತೊಡಗಿದ್ದರು!

ಶಂಕರಮ್ಮನವರು ಮತ್ತೊಂದು ಪ್ರಮುಖ ನ್ಯೂನತೆಯನ್ನು ಗಮನಿಸಿದರು — ಅದೇನೆಂದರೆ ಅಂಗನವಾಡಿಯಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ತೀರಾ ಕಡಿಮೆಯಿರುವುದು. ತಮ್ಮ ಹಲವು ಪ್ರಯತ್ನಗಳ ಹೊರತಾಗಿಯೂ, ಗ್ರಾಮದ ಅನೇಕ ಮಕ್ಕಳು ಇನ್ನೂ ಅಂಗನವಾಡಿಗೆ ಸೇರದೆ ಉಳಿದಿದ್ದರು. ಆದ್ದರಿಂದ ಅವರು ಮತ್ತೊಂದು ಸಾಹಸದ ದಿಟ್ಟ ಹೆಜ್ಜೆಯನ್ನಿಟ್ಟರು; ಅದೆಂದರೆ ಮಾಸಿಕ 'ಇಸಿಸಿಇ ದಿನ'ವನ್ನು (ECCE Day) ಆಯೋಜಿಸುವುದು[2]. ಆ ದಿನ ಮಕ್ಕಳು — ತಾವು ಕಲಿತ ಶಿಶುಗೀತೆಗಳು, ಕಥೆಗಳು, ಕ್ರಿಯಾಶೀಲ ಚಟುವಟಿಕೆಗಳು ಮುಂತಾದವುಗಳನ್ನು ಪೋಷಕರು ಮತ್ತು ಗ್ರಾಮಸ್ಥರ ಎದುರು ಅತ್ಯಂತ ಉತ್ಸಾಹದಿಂದ ಪ್ರದರ್ಶಿಸುತ್ತಿದ್ದರು.

> **ಒಂದು ಕಾಲದಲ್ಲಿ ಬೀದಿಗಳಲ್ಲಿ ಸುಮ್ಮನೆ ಅಲೆಯುತ್ತಿದ್ದ ಮಕ್ಕಳು, ಈಗ ಸತತವಾಗಿ ನಾಲ್ಕು ಗಂಟೆಗಳ ಕಾಲ ಅಂಗನವಾಡಿಯಲ್ಲಿಯೇ ಸಂತಸದಿಂದ ಕಾಲ ಕಳೆಯುತ್ತಿದ್ದರು. ಅವರು ಹಾಡುತ್ತಿದ್ದರು, ಕುಣಿಯುತ್ತಿದ್ದರು, ಶಿಕ್ಷಕರನ್ನು ಪ್ರಶ್ನೆಗಳನ್ನು ಕೇಳುತ್ತಿದ್ದರು ಹಾಗೂ ತಾವೇ ಸ್ವತಃ ಕಥೆಗಳನ್ನು ಹೇಳಲು ತೊಡಗಿದ್ದರು!**

ಇದರೊಂದಿಗೆ ಶಂಕರಮ್ಮನವರು ಮಕ್ಕಳ ಪ್ರಗತಿ ಹಾಗೂ ಬೆಳವಣಿಗೆಯ ವರದಿಯನ್ನೂ ಪೋಷಕರೊಂದಿಗೆ ಹಂಚಿಕೊಳ್ಳತೊಡಗಿದರು. ಇದರಿಂದ ಸಮುದಾಯದಲ್ಲಿ ಕ್ರಮೇಣ ಜಾಗೃತಿ ಮೂಡಲಾರಂಭಿಸಿತು.

ಕೇವಲ ಒಂದೇ ವರ್ಷದಲ್ಲಿ, ಮಕ್ಕಳ ದಾಖಲಾತಿಯು 10ರಿಂದ 45ಕ್ಕೇರಿತು! ಮುಂದಿನ 2-3 ವರ್ಷಗಳಲ್ಲಿ ಶಂಕರಮ್ಮನವರು 20ಕ್ಕೂ ಹೆಚ್ಚು 'ಇಸಿಸಿಇ ದಿನ'ಗಳನ್ನು ಯಶಸ್ವಿಯಾಗಿ ಆಯೋಜಿಸಿದರು. ಅಷ್ಟೇ ಅಲ್ಲದೆ, ತಮ್ಮ ಗ್ರಾಮದಲ್ಲಿ ಬೃಹತ್ 'ಮಕ್ಕಳ ಮೇಳ'ವನ್ನು[3] ಸಹ ಹಮ್ಮಿಕೊಂಡರು; ಇದರಲ್ಲಿ ಸುಮಾರು 200ಕ್ಕೂ ಹೆಚ್ಚು ಗ್ರಾಮಸ್ಥರು ಭಾಗವಹಿಸಿದ್ದರು. ಈ ಮಕ್ಕಳ ಮೇಳವು ಅಂಗನವಾಡಿ ಕೇಂದ್ರದ ಈ ಹೊಸ ಹಾಗೂ ಸೃಜನಶೀಲ ಪ್ರಯತ್ನಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಶ್ರೇಷ್ಠ ವೇದಿಕೆಯಾಗಿ ಮಾರ್ಪಟ್ಟಿತು. ಮಕ್ಕಳು ಅತ್ಯಂತ ಆತ್ಮವಿಶ್ವಾಸದಿಂದ ಹಾಡುಗಳನ್ನು ಹಾಡಿದರು, ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ನಡೆಸಿಕೊಟ್ಟರು ಮತ್ತು ತಮ್ಮ ವೈವಿಧ್ಯಮಯ ಕಲಾಕೃತಿಗಳನ್ನು ಪ್ರದರ್ಶಿಸಿದರು. ಈ ಅಭೂತಪೂರ್ವ ಯಶಸ್ಸು ಸುತ್ತಮುತ್ತಲಿನ ಇತರ ಅಂಗನವಾಡಿ ಕಾರ್ಯಕರ್ತೆಯರಿಗೂ ಸ್ಫೂರ್ತಿ ನೀಡಿತು ಹಾಗೂ ಪೋಷಕರಿಂದಲೂ ವ್ಯಾಪಕ ಮೆಚ್ಚುಗೆಗೆ ಪಾತ್ರವಾಯಿತು.

ಇದೆಲ್ಲವನ್ನೂ ಕಣ್ಣಾರೆ ಕಂಡ ಅಲ್ಲಿನ ಪಂಚಾಯತಿ ಸದಸ್ಯರು ಹಾಗೂ ಗ್ರಾಮಸ್ಥರು ಅಂಗನವಾಡಿಗೆ ಬಣ್ಣಗಳು, ಕ್ರೀಡಾ ಸಾಮಗ್ರಿಗಳು ಮತ್ತು ಧನಸಹಾಯವನ್ನು ನೀಡಲು ಮುಂದೆ ಬಂದರು. ಪೋಷಕರೆಲ್ಲರೂ ವಾಟ್ಸಾಪ್ ಬಳಗಕ್ಕೆ ಸೇರ್ಪಡೆಯಾದರು; ಇದರಲ್ಲಿ ಶಂಕರಮ್ಮನವರು ಪ್ರತಿದಿನವೂ ಮಕ್ಕಳ ಕಲಿಕಾ ಪ್ರಗತಿಯ ವರದಿ ಮತ್ತು ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದರು.

ಶಂಕರಮ್ಮನವರ ಈ ಕೇಂದ್ರವು ಈಗ ಕೇವಲ ಸಾಮಾನ್ಯ ಅಂಗನವಾಡಿಯಾಗಿ ಉಳಿಯಲಿಲ್ಲ; ಬದಲಿಗೆ, ಅದು ಆಕರ್ಷಕ ಹಾಗೂ ಕ್ರಿಯಾಶೀಲ ಕಲಿಕಾ ಕೇಂದ್ರವಾಗಿ ರೂಪಾಂತರಗೊಂಡಿತ್ತು!

## ಮಕ್ಕಳಿಗೆ ತಮ್ಮ ಧ್ವನಿ ದಕ್ಕಿತು

ಹೆಚ್ಚಿನ ಮಕ್ಕಳು ಭಾವಾಭಿನಯದೊಂದಿಗೆ ಹಾಡುಗಳನ್ನು ಹಾಡುವುದು, ಕಥೆಗಳನ್ನು ಹೇಳುವುದು ಹಾಗೂ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದರಲ್ಲಿ ನೈಪುಣ್ಯತೆ ಸಾಧಿಸಿದರು. ಈಗ ಅವರಿಗೆ ಯಾವುದೇ ಪ್ರಚೋದನೆ ಅಥವಾ ಸಹಾಯಕರ ಅಗತ್ಯವಿರಲಿಲ್ಲ. ಪ್ರತಿದಿನ ಬೆಳಿಗ್ಗೆ 9 ಗಂಟೆಯಾಗುತ್ತಿದ್ದಂತೆ ತಾವಾಗಿಯೇ ಉತ್ಸಾಹದಿಂದ ಅಂಗನವಾಡಿಯತ್ತ ಹೆಜ್ಜೆ ಹಾಕುತ್ತಿದ್ದರು.

ಈ ಎಲ್ಲ ಸೃಜನಶೀಲ ಬದಲಾವಣೆಗಳ ನೈಜ ಫಲಿತಾಂಶವು ಈ ಮಕ್ಕಳು ಪ್ರಾಥಮಿಕ ಶಾಲೆಗೆ ಹೋದಾಗ ಸ್ಪಷ್ಟವಾಗಿ ಗೋಚರಿಸಿತು. ಶಂಕರಮ್ಮನವರ ಅಂಗನವಾಡಿಯಿಂದ ಬಂದ ಮಕ್ಕಳು ತರಗತಿಯಲ್ಲಿ ಅತ್ಯಂತ ಸಕ್ರಿಯರಾಗಿದ್ದಾರೆ ಎಂದು ಪ್ರಾಥಮಿಕ ಶಾಲೆಯ ಶಿಕ್ಷಕರು ಹೆಮ್ಮೆಯಿಂದ ಹೇಳಿದರು. ಆ ಮಕ್ಕಳು ಮುಕ್ತವಾಗಿ ಪ್ರಶ್ನೆಗಳನ್ನು ಕೇಳುತ್ತಿದ್ದರು ಮತ್ತು ಕಲಿಕಾ ವಿಷಯಗಳನ್ನು ಬೇಗ ಅರ್ಥಮಾಡಿಕೊಳ್ಳುತ್ತಿದ್ದರು.

ಒಂದು ಘಟನೆ ಶಂಕರಮ್ಮನವರ ಹೃದಯಕ್ಕೆ ಇಂದಿಗೂ ಅತ್ಯಂತ ಹತ್ತಿರವಾಗಿದೆ. ಮಾತನಾಡಲು ಸಾಧ್ಯವಿಲ್ಲ ಎಂದು ಕುಟುಂಬಸ್ಥರು

> **ಶಂಕರಮ್ಮನವರ ಅಂಗನವಾಡಿಯಿಂದ ಬಂದ ಮಕ್ಕಳು ತರಗತಿಯಲ್ಲಿ ಅತ್ಯಂತ ಸಕ್ರಿಯರಾಗಿದ್ದಾರೆ ಎಂದು ಪ್ರಾಥಮಿಕ ಶಾಲೆಯ ಶಿಕ್ಷಕರು ಹೆಮ್ಮೆಯಿಂದ ಹೇಳಿದರು. ಆ ಮಕ್ಕಳು ಮುಕ್ತವಾಗಿ ಪ್ರಶ್ನೆಗಳನ್ನು ಕೇಳುತ್ತಿದ್ದರು ಮತ್ತು ಕಲಿಕಾ ವಿಷಯಗಳನ್ನು ಬೇಗ ಅರ್ಥಮಾಡಿಕೊಳ್ಳುತ್ತಿದ್ದರು.**



*ಚಿತ್ರ 3: ಮಕ್ಕಳು ಆಟವಾಡುತ್ತಲೇ ಕಲಿಯುತ್ತಾರೆ.*

ಭಾವಿಸಿದ್ದ ಗ್ರಾಮದ ಮಗುವೊಂದು ಅಂಗನವಾಡಿ ಕೇಂದ್ರಕ್ಕೆ ಬರಲು ಪ್ರಾರಂಭಿಸಿದ ನಂತರ ಮಾತನಾಡಲು ಶುರುಮಾಡಿತು. ಆ ಮಗುವಿನ ಪೋಷಕರ ಸಂತೋಷಕ್ಕೆ ಮಿತಿಯೇ ಇರಲಿಲ್ಲ; ಏಕೆಂದರೆ ಆರಂಭದಲ್ಲಿ ತಮ್ಮ ಮಗು ಮೂಗಿರಬಹುದು ಎಂದೇ ಅವರು ಭಾವಿಸಿದ್ದರು.

ಮತ್ತೊಬ್ಬ ಪೋಷಕರು ತಮ್ಮ ಮಗುವನ್ನು ಖಾಸಗಿ ಶಾಲೆಗೆ ಸೇರಿಸಿದ್ದರು. ಆದರೆ ಅಂಗನವಾಡಿಯಲ್ಲಿ ಶಂಕರಮ್ಮನವರ ಬೋಧನಾ ವಿಧಾನಗಳು ತಂದ ಸಕಾರಾತ್ಮಕ ಬದಲಾವಣೆಗಳನ್ನು ಕಂಡಾಗ, "ನಮ್ಮ ಮಗು ಇಲ್ಲೇ ಉತ್ತಮವಾಗಿ ಕಲಿಯಬಲ್ಲದು" ಎಂದು ಮನಗಂಡು, ತಮ್ಮ ಮಗುವನ್ನು ಹೆಮ್ಮೆಯಿಂದ ಮತ್ತೆ ಅಂಗನವಾಡಿ ಕೇಂದ್ರಕ್ಕೇ ಕರೆತಂದು ಸೇರಿಸಿದರು!

## ಕೆಲವು ಸವಾಲುಗಳು ಮತ್ತು ಪರಿಹಾರಗಳು

ಶಂಕರಮ್ಮನವರು ಹೊಸ ಮಕ್ಕಳೊಂದಿಗೆ ಕೆಲಸ ಮಾಡುವಾಗ ಹಲವು ಸವಾಲುಗಳನ್ನು ಎದುರಿಸಬೇಕಾಯಿತು. ಆರಂಭದಲ್ಲಿ, ಕಥೆಗಳನ್ನು ಹೇಳುವಾಗ ಮಕ್ಕಳಿಗೆ ಏಕಾಗ್ರತೆ ಇರುತ್ತಿರಲಿಲ್ಲ. ಅದೂ ಅಲ್ಲದೆ, ಕನ್ನಡ ಬಿಟ್ಟು ಬೇರೆ ಭಾಷೆ ಮಾತನಾಡುತ್ತಿದ್ದ ಕನ್ನಡೇತರ ಸಮುದಾಯದ ಕೆಲವು ಮಕ್ಕಳಿಗೆ ಕನ್ನಡ ಭಾಷೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಅವರು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದರು; ಅವರನ್ನು ವೃತ್ತಾಕಾರದಲ್ಲಿ ಒಟ್ಟಿಗೆ ಕೂಡಿಸುವುದೂ ಸಹ ಕಷ್ಟದ ಕೆಲಸವಾಗಿತ್ತು. ಆದರೆ ಈ ಯಾವುದೇ ಸವಾಲುಗಳು ಅವರ ಉತ್ಸಾಹವನ್ನು ಕುಗ್ಗಿಸಲಿಲ್ಲ. ಇಂತಹ ಸಣ್ಣಪುಟ್ಟ ಸಮಸ್ಯೆಗಳಿಗೆ ಅವರು ಜಾಣತನದಿಂದ ಪರಿಹಾರಗಳನ್ನು ಕಂಡುಕೊಂಡರು. ಕಥೆ ಹೇಳುವಾಗ ಅವರು ಈ ಕೆಳಗಿನ ಉಪಯುಕ್ತ ತಂತ್ರಗಳನ್ನು ಅಳವಡಿಸಿಕೊಂಡರು:

- ಮಕ್ಕಳ ಏಕಾಗ್ರತೆ ಹಾಗೂ ಗಮನ ಸೆಳೆಯಲು 'ಖಂಜರಿ'ಯಂತಹ ವಾದ್ಯವನ್ನು ಬಳಸುವುದು.
- ಕನ್ನಡೇತರ ಭಾಷಿಕ ಸಮುದಾಯದ ಮಕ್ಕಳು ಕನ್ನಡ ಮಾತನಾಡುವ ಮಕ್ಕಳೊಂದಿಗೆ ಬೆರೆತು ಆಟವಾಡಲು ಪ್ರೋತ್ಸಾಹಿಸುವುದು.
- ಕಥೆ ಹೇಳುವಾಗ ಮಕ್ಕಳ ಗಮನವನ್ನು ಸೆಳೆಯಲು ಪ್ರಶ್ನೆಗಳನ್ನು ಕೇಳುವುದು. ಉದಾಹರಣೆಗೆ "ಯಾರು ಮಾತನಾಡುತ್ತಿದ್ದಾರೆ?" "ಮುಂದೇನು?", ಇತ್ಯಾದಿ.
- ಮತ್ತೆ ಗಮನ ಸೆಳೆಯಲು ಚಪ್ಪಾಳೆ ತಟ್ಟುವುದು (ಉದಾಹರಣೆಗೆ, ಬಾಳೆಹಣ್ಣಿನ ಚಪ್ಪಾಳೆ - ಒಂದು ಮತ್ತು ಎರಡನ್ನು ಎಣಿಸಿದಾಗ ಮಕ್ಕಳು ಚಪ್ಪಾಳೆ ತಟ್ಟುತ್ತಾರೆ, ನಂತರ ಅವರು ಬಾಳೆಹಣ್ಣುಗಳನ್ನು ಸಿಪ್ಪೆ ಸುಲಿದು ತಿನ್ನುತ್ತಿರುವಂತೆ ನಟಿಸುತ್ತಾರೆ).

- ಮಕ್ಕಳ ಗಮನವನ್ನು ಕೇಂದ್ರೀಕರಿಸಲು ಸಹಾಯ ಮಾಡಲು ಕಥೆಗೆ ಸಂಬಂಧಿಸಿದ ಚಿತ್ರಗಳಿರುವ ಕಾರ್ಡ್‌ಗಳನ್ನು ಬಳಸುವುದು.
- ಮಕ್ಕಳು ಪರಸ್ಪರ ಮಾತನಾಡುವ ಅಭ್ಯಾಸವನ್ನು ಕಡಿಮೆ ಮಾಡಲು ಕಥೆಗಳನ್ನು ಹೇಳುವಾಗ ಬೊಂಬೆಗಳನ್ನು ಬಳಸುವುದು.

ಹಾಡು ಹೇಳಿಕೊಡುವಾಗಲೂ, ಮಕ್ಕಳಿಗೆ ಅದನ್ನು ಅನುಕರಿಸಲು ಅಥವಾ ತಮ್ಮೊಂದಿಗೆ ಸೇರಿ ಹಾಡಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಶಂಕರಮ್ಮನವರು ಅರಿತುಕೊಂಡರು. ಹಾಡುವಾಗ ವಾಕ್ಯಗಳನ್ನು ರಚಿಸಲು ಹಾಗೂ ಪದಗಳನ್ನು ಬೆಸೆಯಲು ಮಕ್ಕಳು ಕಷ್ಟಪಡುತ್ತಿದ್ದರು. ಅಲ್ಲದೆ, ಹಾಡುವಾಗ ಅವರು ಸರಿಯಾಗಿ ವೃತ್ತಾಕಾರದಲ್ಲಿ ನಿಲ್ಲುತ್ತಿರಲಿಲ್ಲ. ಎಷ್ಟರಮಟ್ಟಿಗೆ ಎಂದರೆ — ಶಿಕ್ಷಕಿ ಸ್ವತಃ ಹಾಡಿ ತೋರಿಸಿದ ನಂತರ ಅದನ್ನು ಪುನರಾವರ್ತಿಸಲು ಕೇಳಿಕೊಂಡಾಗಲೂ, ಕೆಲವು ಮಕ್ಕಳು ಒಟ್ಟಾಗಿ ಹಾಡದೆ ಪ್ರತ್ಯೇಕವಾಗಿ ಅಥವಾ ಒಬ್ಬೊಬ್ಬರಾಗಿ ಹಾಡುತ್ತಿದ್ದರು; ಇನ್ನು ಕೆಲವರು ಸಂಪೂರ್ಣವಾಗಿ ಮೌನವಾಗಿದ್ದು, ಹಾಡನ್ನೇ ಹಾಡುತ್ತಿರಲಿಲ್ಲ. ಆದರೆ ಶಂಕರಮ್ಮನವರ ಬಳಿ ಈ ಸವಾಲುಗಳನ್ನು ಮೆಟ್ಟಿ ನಿಲ್ಲಲು ತಮ್ಮದೇ ಆದ ಪರಿಣಾಮಕಾರಿ ಮಾರ್ಗಗಳಿದ್ದವು.

- ಅವರು ಮೊದಲು ತಾವೇ ಹಾಡನ್ನು ಹಾಡಿ, ನಂತರ ಅದನ್ನು ಪುನರಾವರ್ತಿಸಲು ಮಕ್ಕಳಿಗೆ ಹೇಳಿದರು.
- ಹಾಡಿನಲ್ಲಿರುವ ಪ್ರಾಸಬದ್ಧ ಪದಗಳು, ಪದಸಂಯೋಜನೆ ಹಾಗೂ ವಾಕ್ಯರಚನೆಯ ಮೇಲೆ ಹೆಚ್ಚಿನ ಗಮನಹರಿಸಿದರು.
- ಹಾಡುವಾಗ ಕ್ರಿಯಾಪದಗಳು, ಭಾವನೆಗಳು ಮತ್ತು ಹಾವಭಾವಗಳನ್ನು (ಅಂಗಚಲನೆಗಳನ್ನು) ಬಳಸುವ ಮೂಲಕ ಚಟುವಟಿಕೆಯನ್ನು ಹೆಚ್ಚು ಆಕರ್ಷಕವಾಗಿಸಿದರು; ಇದು ಮಕ್ಕಳ ಭಾಷಾ ಬೆಳವಣಿಗೆಗೆ ಬಹಳ ನೆರವಾಯಿತು.

ಶಂಕರಮ್ಮನವರ ಈ ಒಳನೋಟಗಳು ಅವರ ಶೈಕ್ಷಣಿಕ ಜ್ಞಾನವನ್ನು ಮಾತ್ರವಲ್ಲದೆ, ಅಂಗನವಾಡಿ ತರಗತಿಗಳಲ್ಲಿ ಅವರಿಗಿರುವ ಸುದೀರ್ಘ ಅನುಭವವನ್ನೂ ಪ್ರತಿಬಿಂಬಿಸುತ್ತವೆ.

ಜೋಗುರ್-2ರಿಂದ ಕೊತ್ತನೂರು-ಡಿ ವರೆಗಿನ ಶಂಕರಮ್ಮನವರ ಪ್ರಯಾಣವು — ಒಬ್ಬ ಶಿಕ್ಷಕಿಯ ಸಮರ್ಪಣಾಭಾವವು ಆರಂಭಿಕ ಬಾಲ್ಯದ ಶಿಕ್ಷಣದ ಚಿತ್ರಣವನ್ನೇ ಹೇಗೆ ಹೊಸದಾಗಿ ರೂಪಿಸಬಲ್ಲದು ಎಂಬುದಕ್ಕೆ ನಿದರ್ಶನವಾಗಿದೆ. ಅವರು ಅಪನಂಬಿಕೆಯನ್ನು ನಂಬಿಕೆಯನ್ನಾಗಿ, ಮೌನವನ್ನು ಮಾತನ್ನಾಗಿ ಮತ್ತು ಶೂನ್ಯತೆಯನ್ನು ಸಂತೋಷದ ಕೇಂದ್ರವನ್ನಾಗಿ ಮಾರ್ಪಡಿಸಿದರು. ಇಂದು ಅವರ ಅಂಗನವಾಡಿಯ ಮಕ್ಕಳು ಆತ್ಮವಿಶ್ವಾಸ, ಕುತೂಹಲ ಹಾಗೂ ಕಲಿಯುವ ತೀವ್ರ ಆಸಕ್ತಿಯೊಂದಿಗೆ ಪ್ರಾಥಮಿಕ ಶಾಲೆಗಳಿಗೆ ಹೆಜ್ಜೆ ಇಡುತ್ತಿದ್ದಾರೆ. ಶಂಕರಮ್ಮನವರ ಈ ಕಥೆಯು ಕೇವಲ ಒಂದು ಅಂಗನವಾಡಿಯ ರೂಪಾಂತರದ ಕಥೆಯಷ್ಟೇ ಅಲ್ಲ, ಮಕ್ಕಳ ಭವಿಷ್ಯವನ್ನೇ ಬದಲಾಯಿಸಿದ ಒಂದು ಅದ್ಭುತ ಪಯಣ.

**ಟಿಪ್ಪಣಿಗಳು:**

1. 'ಚಿಲಿಪಿಲಿ' ಎಂಬುದು ಕರ್ನಾಟಕದಲ್ಲಿ 3ರಿಂದ 8 ವರ್ಷ ವಯಸ್ಸಿನ ಮಕ್ಕಳಿಗಾಗಿ ರೂಪಿಸಲಾದ ಆರಂಭಿಕ ಬಾಲ್ಯದ ಶಿಕ್ಷಣ (ECE) ಪಠ್ಯಕ್ರಮವಾಗಿದೆ.
2. ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿ ತಿಂಗಳು 'ಇಸಿಸಿಇ ದಿನ'ವನ್ನು (ECCE Day) ಆಚರಿಸಲಾಗುತ್ತದೆ. ಈ ದಿನದಂದು ಮಕ್ಕಳ ಕಲಿಕಾ ಪ್ರಗತಿಯನ್ನು ಪ್ರದರ್ಶಿಸುವುದರ ಜೊತೆಗೆ ಪೋಷಕರು ಹಾಗೂ ಸಮುದಾಯದಲ್ಲಿ ಶಾಲಾ-ಪೂರ್ವ ಶಿಕ್ಷಣ, ಆರೋಗ್ಯಕರ ದಿನಚರಿ ಮತ್ತು ಆಟ-ಆಧಾರಿತ ಕಲಿಕೆಯ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.
3. 'ಮಕ್ಕಳ ಮೇಳ'ವು ವರ್ಷಕ್ಕೊಮ್ಮೆ ಅಥವಾ ಅರ್ಧ ವರ್ಷಕ್ಕೊಮ್ಮೆ ಆಯೋಜಿಸಲಾಗುವ ವಿಶೇಷ ಕಾರ್ಯಕ್ರಮವಾಗಿದೆ. ಇದರಲ್ಲಿ ವಿವಿಧ ಅಂಗನವಾಡಿ ಕೇಂದ್ರಗಳ ಮಕ್ಕಳು ಒಟ್ಟಾಗಿ ಸೇರಿ ಆಟವಾಡಲು, ಕಲಿಯಲು ಹಾಗೂ ತಮ್ಮ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಸಿಗುತ್ತದೆ. ಪೋಷಕರು ಮತ್ತು ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರಿಂದ, ಈ ಮೇಳವು ಆರಂಭಿಕ ಬಾಲ್ಯ ಶಿಕ್ಷಣದ ಸಂಭ್ರಮದ ಉತ್ಸವವಾಗಿ ಮಾರ್ಪಡುತ್ತದೆ.



**ಅನನ್ಯ ಡಿ.** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಅಸೋಸಿಯೇಟ್ ಆಗಿ ಸೇರ್ಪಡೆಗೊಂಡಿದ್ದು, ಪ್ರಸ್ತುತ ಕರ್ನಾಟಕದ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಬ್ಲಾಕ್ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಇಸಿಸಿಇ, ಪ್ರಾಥಮಿಕ ಭಾಷೆ, ಪ್ರಾಥಮಿಕ ಗಣಿತ ಹಾಗೂ ಹಿರಿಯ ಪ್ರಾಥಮಿಕ ಗಣಿತ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಜೊತೆಗೆ, ಯುವಜನರನ್ನು ಫೌಂಡೇಷನ್‌ನ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯಗೊಳಿಸುವ ಕಾರ್ಯದಲ್ಲೂ ತಮ್ಮ ಕೊಡುಗೆ ನೀಡುತ್ತಿದ್ದಾರೆ.

**ಸಂಪರ್ಕ:** ananya.d@azimpremjifoundation.org

ಅನುವಾದ: ಆಶಾ ಮಹೇಶ್ವರ ಸಿಂಗ್ | ಪರಿಶೀಲನೆ: ಅನುರೂಪ ರವೀಂದ್ರ

# ಮಕ್ಕಳ ಕುತೂಹಲ ಕೆರಳಿಸುವ ಒಗಟುಗಳು



ಮೊಖ್ತರ್ ಜಮಾನ್

ನಮ್ಮ ಶಾಲೆಯ ಪ್ರವೇಶದ್ವಾರದ ಹತ್ತಿರವೇ ಒಂದು ಬಿಳಿಬಣ್ಣದ ಬೋರ್ಡ್ ಇದೆ. ಪ್ರತಿ ಸೋಮವಾರ, ನಾನು ಈ ಬೋರ್ಡಿನಲ್ಲಿ ಗಣಿತದ ಒಗಟೊಂದನ್ನು ಬರೆಯುತ್ತೇನೆ. ಅದು ಮೇಲ್ನೋಟಕ್ಕೆ ಸುಲಭವೆಂದು ಅನಿಸಿದರೂ ನಿಮ್ಮನ್ನು ಸ್ವಲ್ಪ ಯೋಚಿಸುವಂತೆ ಮಾಡುತ್ತದೆ. ಈ ಒಗಟುಗಳನ್ನು ನಾನು ಪಠ್ಯಪುಸ್ತಕಗಳಿಂದ ಆಯ್ಕೆ ಮಾಡುವುದಿಲ್ಲ. ಉದಾಹರಣೆಗೆ: ಒಂದು ಬಸವನ ಹುಳು ಪ್ರತಿದಿನ ಗೋಡೆಯ ಮೇಲೆ 3 ಮೆಟ್ಟಿಲುಗಳನ್ನು ಹತ್ತುತ್ತದೆ, ಆದರೆ ಪ್ರತಿ ರಾತ್ರಿ 2 ಮೆಟ್ಟಿಲುಗಳಷ್ಟು ಕೆಳಗೆ ಜಾರಿಬೀಳುತ್ತದೆ. ಆ ಗೋಡೆಯು ಒಟ್ಟು 5 ಮೆಟ್ಟಿಲುಗಳಷ್ಟು ಎತ್ತರವಿದ್ದರೆ, ಬಸವನ ಹುಳು ಗೋಡೆಯ ಮೇಲ್ಭಾಗವನ್ನು ತಲುಪಲು ಎಷ್ಟು ದಿನಗಳನ್ನು ತೆಗೆದುಕೊಳ್ಳುತ್ತದೆ?

ಇದೊಂದು ತರ್ಕವನ್ನು ಆಧರಿಸಿದ ಪ್ರಶ್ನೆ. ಇದನ್ನು 1, 2 ಮತ್ತು 3ನೇ ತರಗತಿಗಳ ವಿದ್ಯಾರ್ಥಿಗಳು ಸಹ ಪ್ರಯತ್ನಿಸಬಹುದು. ನಾನು ಹೆಚ್ಚಾಗಿ ತರ್ಕ ಆಧಾರಿತ ಒಗಟುಗಳನ್ನೇ ಆರಿಸಿಕೊಳ್ಳುತ್ತೇನೆ. ಆದರೆ ಕೆಲವೊಮ್ಮೆ ವಿದ್ಯಾರ್ಥಿಗಳು ವಿನ್ಯಾಸಗಳು (ಪ್ಯಾಟರ್ನ್‌ಗಳು), ಆಕಾರಗಳು ಅಥವಾ ಸರಳ ಸಂಖ್ಯೆಗಳ ಬಗ್ಗೆ ಮೋಜಿನ ಹಾಗೂ ಸುಲಭವಾದ ರೀತಿಯಲ್ಲಿ ಕಲಿಯಬಹುದಾದ ಒಗಟುಗಳನ್ನೂ ಆಯ್ದುಕೊಳ್ಳುತ್ತೇನೆ.

ಈ ಒಗಟುಗಳ ಬಗ್ಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತೇನೆ. ಮೊದಲು, ಪ್ರಶ್ನೆಯಲ್ಲಿ ಅವರಿಗೆ ಕುತೂಹಲ ಹುಟ್ಟುತ್ತದೆ. ಕೆಲವು ವಿದ್ಯಾರ್ಥಿಗಳು ಬೋರ್ಡ್ ಮುಂದೆ ನಿಂತು ಪ್ರಶ್ನೆಯನ್ನು ಎಚ್ಚರಿಕೆಯಿಂದ ಓದುತ್ತಾರೆ. ಕೆಲವರು ಉತ್ತರವನ್ನು ಊಹಿಸಿ ತಮ್ಮ ಸ್ನೇಹಿತರಿಗೆ ಪಿಸುಮಾತಿನಲ್ಲಿ ಹೇಳುತ್ತಾರೆ. ಇನ್ನು ಕೆಲವರು "ಆಮೇಲೆ ಬಗೆಹರಿಸುತ್ತೇನೆ" ಎಂದು ತಮ್ಮ ನೋಟ್‌ಬುಕ್ ಹೊರತೆಗೆದು ಅದರಲ್ಲಿ ಪ್ರಶ್ನೆಯನ್ನು ಬರೆದುಕೊಳ್ಳುತ್ತಾರೆ. 2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳೂ ಸಹ ಈ ಒಗಟುಗಳನ್ನು ಓದಲು ಪ್ರಯತ್ನಿಸುವುದನ್ನು ನಾನು ಗಮನಿಸಿದ್ದೇನೆ. ಕೆಲವೊಮ್ಮೆ ಅವರಿಗೆ ಒಗಟು ಅರ್ಥವಾಗದಿದ್ದಾಗ, ಹಿರಿಯ ತರಗತಿಯ ವಿದ್ಯಾರ್ಥಿಗಳ ಬಳಿ ಹೋಗಿ ಆ ಬಗ್ಗೆ ಚರ್ಚಿಸುತ್ತಾರೆ. ಇದರಲ್ಲಿನ ಅತ್ಯಂತ ಶ್ಲಾಘನೀಯ ವಿಷಯವೆಂದರೆ, ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ಕೇವಲ ನೇರ ಉತ್ತರ ನೀಡುವುದಿಲ್ಲ; ಬದಲಿಗೆ ಅವರಿಗೆ ಮಾರ್ಗದರ್ಶನ ನೀಡುತ್ತಾ, ಆ ಒಗಟಿನ ಬಗ್ಗೆ ಹಂತ ಹಂತವಾಗಿ ಹೇಗೆ ಯೋಚಿಸಬೇಕು ಎಂಬುದನ್ನು ತರ್ಕಬದ್ಧವಾಗಿ ತಿಳಿಸಿಕೊಡುತ್ತಾರೆ.

ಮಧ್ಯಾಹ್ನದ ಊಟದ ಸಮಯದ ವೇಳೆಗೆ, ಈ ಒಗಟು ಇಡೀ ಶಾಲೆಯಲ್ಲಿ ಚರ್ಚೆಯ ವಿಷಯವಾಗಿಬಿಡುತ್ತದೆ. ಕೆಲವು ವಿದ್ಯಾರ್ಥಿಗಳು ತಾವು ಒಗಟನ್ನು ಬಿಡಿಸಿ ಉತ್ತರ ಕಂಡುಕೊಂಡಿದ್ದೇವೆ ಎಂದು ಬಹಳ ಆತ್ಮವಿಶ್ವಾಸದಿಂದ ಹೇಳಿಕೊಂಡರೆ, ಇನ್ನು ಕೆಲವರು ತಮ್ಮ ಉತ್ತರವನ್ನು ನೀಡುವ ಮುನ್ನ ಮತ್ತೊಮ್ಮೆ ಪರಿಶೀಲಿಸಲು ತೊಡಗುತ್ತಾರೆ. ನಾವು ಶಾಲೆಯ ಸ್ಟಾಫ್ ರೂಂ ಎದುರು ಒಂದು ಪೆಟ್ಟಿಗೆಯನ್ನು ಇಟ್ಟಿದ್ದೇವೆ. ವಿದ್ಯಾರ್ಥಿಗಳು ತಮ್ಮ ಉತ್ತರ ಬರೆದ ಚೀಟಿಗಳನ್ನು ಅದರಲ್ಲಿ ಹಾಕುತ್ತಾರೆ. ಅವರು ಈ ಮೋಜಿನ ಚಟುವಟಿಕೆಯನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಾರೆ; ಪ್ರತಿಯೊಬ್ಬರೂ ತಮ್ಮ ಹೆಸರು ಬರೆದ ಕಾಗದದ ತುಂಡಿನಲ್ಲಿ ಉತ್ತರವನ್ನು ಮಡಚಿ ಆ ಪೆಟ್ಟಿಗೆಯೊಳಗೆ ಹಾಕುತ್ತಾರೆ.

ಒಂದು ವಾರದ ನಂತರ, ನಾನು ಆ ಪೆಟ್ಟಿಗೆಯನ್ನು ತೆರೆದು ವಿದ್ಯಾರ್ಥಿಗಳ ಉತ್ತರಗಳನ್ನು ಪರಿಶೀಲಿಸುತ್ತೇನೆ—ಅವುಗಳಲ್ಲಿ ಕೆಲವು ಸರಿಯಿದ್ದರೆ, ಇನ್ನು ಕೆಲವು ತಪ್ಪಿರುತ್ತವೆ. ಸರಿಯಾದ ಉತ್ತರಗಳನ್ನು ವಿಂಗಡಿಸುವಾಗ, ಬೋರ್ಡ್ ಮೇಲೆ ತಮ್ಮ ಹೆಸರುಗಳು ಮೂಡುತ್ತವೆಯೋ ಇಲ್ಲವೋ ಎಂದು ಕಾತರದಿಂದ ಕಾಯುವ ವಿದ್ಯಾರ್ಥಿಗಳ ಕುತೂಹಲಕಾರಿ ಮುಖಗಳು ನನ್ನ ಮನಸ್ಸಿನಲ್ಲಿ ಹಾದುಹೋಗುತ್ತವೆ. ಏಕೆಂದರೆ, ಸರಿಯಾದ ಉತ್ತರ ನೀಡಿದ ವಿದ್ಯಾರ್ಥಿಗಳ ಹೆಸರುಗಳನ್ನು ಬೋರ್ಡ್ ಮೇಲೆ ಪ್ರಕಟಿಸಲಾಗುತ್ತದೆ.

ಇಂತಹ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ತರಗತಿಯ ಗಡಿಯಿಂದ ಆಚೆಗೂ ಗಣಿತವನ್ನು ಕಲಿಯಲು ಅವಕಾಶ ಮಾಡಿಕೊಡುತ್ತವೆ. ಜೊತೆಗೆ, ಈ ಒಗಟುಗಳು ಶಾಲೆಯಲ್ಲಿ ಉತ್ಸಾಹ ಮತ್ತು ಕುತೂಹಲದ ವಾತಾವರಣವನ್ನು ಸೃಷ್ಟಿಸುತ್ತವೆ. ಇದರಿಂದಾಗುವ ಇನ್ನಿತರ ಪ್ರಮುಖ ಪ್ರಯೋಜನಗಳೆಂದರೆ:

- ವಿದ್ಯಾರ್ಥಿಗಳು ಆಳವಾಗಿ ಚಿಂತಿಸಲು ಪ್ರಾರಂಭಿಸುತ್ತಾರೆ. ಸೂತ್ರಗಳನ್ನು ನೆನಪಿಟ್ಟುಕೊಳ್ಳುವ ಬದಲು, ತಾರ್ಕಿಕ ವಿಧಾನದ ಮೂಲಕ ಪ್ರಶ್ನೆಗಳನ್ನು ಪರಿಹರಿಸಲು ಕಲಿಯುತ್ತಾರೆ. ದೊಡ್ಡ ಪ್ರಶ್ನೆಗಳನ್ನು ಸಣ್ಣ ಭಾಗಗಳಾಗಿ ವಿಂಗಡಿಸಿ, ಹಂತ ಹಂತವಾಗಿ ಯೋಚಿಸುವುದನ್ನು ಕರಗತ ಮಾಡಿಕೊಳ್ಳುತ್ತಾರೆ.
- ಈ ಒಗಟುಗಳು ನೈಜ ಕಲಿಕೆಯ ವಾತಾವರಣವನ್ನು ಸೃಷ್ಟಿಸುತ್ತವೆ. ಕಿರಿಯ ವಿದ್ಯಾರ್ಥಿಗಳಿಗೆ ಹಿರಿಯರಿಂದ ಸೂಕ್ತ ಮಾರ್ಗದರ್ಶನ ಸಿಗುತ್ತದೆ ಹಾಗೂ ತರಗತಿಯ ಹೊರಗೂ ಒಳ್ಳೆಯ ಚರ್ಚೆಗಳು ನಡೆಯುತ್ತವೆ. ಇದರಿಂದ ಕಲಿಕೆ ಸುಲಭವಾಗುತ್ತದೆ.
- ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಒಂದು ವಾರ ಕಾಯುವ ಅಭ್ಯಾಸ ಮಾಡಿಕೊಳ್ಳುವುದರಿಂದ ಅವರಲ್ಲಿ ತಾಳ್ಮೆ ಹೆಚ್ಚುತ್ತದೆ.

- ಒಗಟುಗಳನ್ನು ಬಿಡಿಸುವುದರಿಂದ ತಾವು ಏನನ್ನೋ ಸಾಧಿಸಿದೆವೆಂಬ ಭಾವನೆ ಅವರಲ್ಲಿ ಮೂಡುತ್ತದೆ. ಸರಿಯಾದ ಉತ್ತರ ನೀಡಿ ತಮ್ಮ ಹೆಸರುಗಳನ್ನು ಬೋರ್ಡ್ ಮೇಲೆ ಕಂಡಾಗ, ಅವರ ಆತ್ಮವಿಶ್ವಾಸ ಬೆಳೆಯುತ್ತದೆ. ಇದರಿಂದ ಸ್ಫೂರ್ತಿ ಪಡೆದು ಮುಂದಿನ ಸವಾಲಿಗೆ ಸಿದ್ಧರಾಗುತ್ತಾರೆ.
- ಹೀಗೆ, ಒಗಟುಗಳಿಂದ ಶಾಲೆಯ ವಾತಾವರಣವು ಸಂಪೂರ್ಣ ವಿನೋದಮಯವಾಗಿ ಪರಿಣಮಿಸುತ್ತದೆ. ಕೇವಲ ದೈನಂದಿನ ಪಾಠ-ಪ್ರವಚನಗಳಲ್ಲೇ ಮುಳುಗಿರುವ ಬದಲು, ವಿದ್ಯಾರ್ಥಿಗಳು ಒಂದು ಆಶ್ಚರ್ಯಕರ, ಕುತೂಹಲಕಾರಿ ಹಾಗೂ ಆಸಕ್ತಿದಾಯಕ ವಿಷಯಕ್ಕಾಗಿ ಕಾತರದಿಂದ ಕಾಯುವಂತಾಗುತ್ತದೆ.

ಪ್ರತಿ ವಾರವೂ ಒಂದು ಹೊಸ ಒಗಟನ್ನು ನೀಡಲಾಗುತ್ತದೆ ಹಾಗೂ ಈ ಇಡೀ ಚಕ್ರವು ಮತ್ತೆ ಮೊದಲಿನಿಂದ ಆರಂಭವಾಗುತ್ತದೆ. ಕ್ರಮೇಣ, ಈ ಚಟುವಟಿಕೆಯು ಅವರ ದೈನಂದಿನ ಶಾಲಾ ಜೀವನದ ಒಂದು ಭಾಗವೇ ಆಗಿಬಿಡುತ್ತದೆ. ವಿದ್ಯಾರ್ಥಿಗಳು ಪ್ರತೀ ಹೊಸ ಸವಾಲನ್ನೂ ಅತ್ಯಂತ ಉತ್ಸಾಹದಿಂದ ಎದುರಿಸುತ್ತಾರೆ; ಆ ಬಗ್ಗೆ ಸಹಪಾಠಿಗಳೊಂದಿಗೆ ಚರ್ಚಿಸುತ್ತಾ ಬಿಡಿಸಲು ಪ್ರಯತ್ನಿಸುತ್ತಾರೆ. ಇಂತಹ ಪ್ರಯೋಗಗಳು ಶಾಲಾ ಶಿಕ್ಷಣವನ್ನು ಮತ್ತಷ್ಟು ಸಕ್ರಿಯ ಹಾಗೂ ಆಸಕ್ತಿದಾಯಕವಾಗಿಸುತ್ತವೆ.

*ಮೊಖ್ತರ್ ಜಮಾನ್ ಇವರು ಛತ್ತೀಸ್‌ಗಢದ ಧಮ್‌ತರಿಯಲ್ಲಿರುವ ಅಜೀಮ್ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.*

ಅನುವಾದ: ಆಶಾ ಮಹೇಶ್ವರ ಸಿಂಗ್ | ಪರಿಶೀಲನೆ: ಅನುರೂಪ ರವೀಂದ್ರ



# ವಿಷಯ ಮತ್ತು ಭಾಷೆಗಳನ್ನು ಮೀರಿದ ಕಲಿಕೆ

**ದ್ರೋಣ್ ಸಾಹು**

ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗಿತ್ತು. ನನಗೆ 3ನೇ ತರಗತಿಗೆ ಹಿಂದಿ ಹೇಳಿಕೊಡುವ ಜವಾಬ್ದಾರಿ ಸಿಕ್ಕಿತ್ತು. ನಾನು ಪಠ್ಯಪುಸ್ತಕವನ್ನು ಓದಿದಾಗ, ಅದರಲ್ಲಿ ಹಲವು ಹೊಸ ಪಾಠಗಳು ಸೇರ್ಪಡೆಯಾಗಿರುವುದನ್ನು ಗಮನಿಸಿದೆ. ಮೇಲ್ನೋಟಕ್ಕೆ ಅವು ಭಾಷಾ ಪಾಠಗಳಿಗಿಂತ ಹೆಚ್ಚಾಗಿ ಪರಿಸರ ಅಧ್ಯಯನದ ಪಾಠಗಳಂತೆ ಕಾಣಿಸುತ್ತಿದ್ದವು.

ನಾನು ವಿದ್ಯಾರ್ಥಿಗಳಿಗೆ 3ನೇ ಪಾಠವನ್ನು ಹೇಳಿಕೊಡಬೇಕಾಗಿತ್ತು. ಆ ಪಾಠದ ಹೆಸರು 'ಎಷ್ಟು ಕಾಲುಗಳು?'. "ಈ ಪಾಠ ಪರಿಸರ ಅಧ್ಯಯನ ವಿಷಯದಲ್ಲಿ ಇರಬೇಕಿತ್ತಲ್ಲವೇ?" ಎಂಬ ಆಲೋಚನೆ ನನ್ನ ಮನಸ್ಸಿನಲ್ಲಿ ಮೂಡಿತು. ಏನೇ ಇರಲಿ, ನಾನು ವಿದ್ಯಾರ್ಥಿಗಳೊಂದಿಗೆ ಈ ಪಾಠದ ಕುರಿತು ಮೌಖಿಕವಾಗಿ ಚರ್ಚಿಸಲು ನಿರ್ಧರಿಸಿದೆ.

ನಾನು ಮನುಷ್ಯನ ಕಾಲುಗಳ ಬಗ್ಗೆ ಮಾತನಾಡುವ ಮೂಲಕ ಚರ್ಚೆಯನ್ನು ಪ್ರಾರಂಭಿಸಿದೆ. ನಂತರ, ಎರಡು ಕಾಲುಗಳಿರುವ ಜೀವಿಗಳ ಹೆಸರುಗಳನ್ನು ಹೇಳುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದೆ. ಅವರು ನವಿಲು, ಹದ್ದು, ಮನುಷ್ಯ ಮುಂತಾದ ಹಲವು ಜೀವಿಗಳ ಹೆಸರುಗಳನ್ನು ಹೇಳಿದರು. ಇದನ್ನು ಹೇಳುವಾಗಲೇ ಕೆಲವು ವಿದ್ಯಾರ್ಥಿಗಳು ನಾಲ್ಕು ಕಾಲುಗಳಿರುವ ಜೀವಿಗಳ ಹೆಸರುಗಳನ್ನು ಸಹ ಹೇಳಲು ಮುಗಿಬಿದ್ದರು. ಚರ್ಚೆಯಲ್ಲಿ ಅವರ ಆಸಕ್ತಿ ಹೆಚ್ಚುತ್ತಿರುವುದನ್ನು ಗಮನಿಸಿದಾಗ, ವಿದ್ಯಾರ್ಥಿಗಳು ಇನ್ನೂ ಯಾವೆಲ್ಲಾ ಜೀವಿಗಳ ಹೆಸರುಗಳನ್ನು ಹೇಳಬಲ್ಲರು ಹಾಗೂ ಒಟ್ಟು ಎಷ್ಟು ಹೆಸರುಗಳನ್ನು ಪಟ್ಟಿ ಮಾಡಬಲ್ಲರು ಎಂಬ ಕುತೂಹಲ ನನಗೂ ಉಂಟಾಯಿತು. ಆಗ ನಾನು ಜೀವಿಗಳನ್ನು ಅವುಗಳ ಕಾಲುಗಳ ಸಂಖ್ಯೆಯ ಆಧಾರದ ಮೇಲೆ ವರ್ಗೀಕರಿಸಿ, ಹೆಸರುಗಳನ್ನು ಹೇಳುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿದೆ. ಹೀಗೆ ಹೇಳುತ್ತಲೇ ನಾನು ಬೋರ್ಡ್ ಮೇಲೆ ಕೆಲವು ಕಾಲಂಗಳನ್ನು ರಚಿಸಿದೆ. "ಈ ವಿಭಾಗಗಳ ಆಧಾರದ ಮೇಲೆ ನಾವು ಜೀವಿಗಳ ಹೆಸರುಗಳನ್ನು ಬರೆಯುತ್ತಾ ಹೋಗೋಣ" ಎಂದು ವಿದ್ಯಾರ್ಥಿಗಳಿಗೆ ತಿಳಿಸಿದೆ. ಎಲ್ಲರೂ ಈ ಪ್ರಸ್ತಾವನೆಗೆ ಉತ್ಸಾಹದಿಂದ ಒಪ್ಪಿಗೆ ಸೂಚಿಸಿದರು.

ವಿದ್ಯಾರ್ಥಿಗಳು ಒಂದೊಂದಾಗಿ ಹೆಸರುಗಳನ್ನು ಹೇಳಲು ಪ್ರಾರಂಭಿಸಿದರು, ನಾನು ಅವುಗಳನ್ನು ಕಪ್ಪುಹಲಗೆಯ ಮೇಲಿದ್ದ ಸರಿಯಾದ ಕಾಲಂನಲ್ಲಿ ಬರೆಯುತ್ತಾ ಹೋದೆ. ಕೆಲವು ವಿದ್ಯಾರ್ಥಿಗಳಿಗೆ ಆ ಜೀವಿಗಳ ಹೆಸರು ತಮ್ಮ ಮಾತೃಭಾಷೆಯಲ್ಲಿ ತಿಳಿದಿತ್ತಾದರೂ, ಹಿಂದಿಯಲ್ಲಿ ಗೊತ್ತಿರದ ಕಾರಣ ಮಾತನಾಡಲು ಹಿಂಜರಿಯುತ್ತಿದ್ದರು. ಅವರ ಸಮಸ್ಯೆಯನ್ನು ಅರ್ಥಮಾಡಿಕೊಂಡ ನಾನು, "ನಿಮಗೆ ಯಾವ ಭಾಷೆಯಲ್ಲಿ ಹೆಸರು ತಿಳಿದಿದೆಯೋ ಅದೇ ಭಾಷೆಯಲ್ಲಿ ಹೇಳಬಹುದು" ಎಂದು ಅಭಯ ನೀಡಿದೆ.

ಅಷ್ಟೇ, ಅವರು ಉತ್ಸಾಹದಿಂದ ಹೊಸ ಹೊಸ ಜೀವಿಗಳ ಹೆಸರುಗಳನ್ನು ಹೇಳತೊಡಗಿದರು! ಅದರಲ್ಲಿ ಬಹಳಷ್ಟು ಜೀವಿಗಳ ಹೆಸರುಗಳು ನನಗೇ ತಿಳಿದಿರಲಿಲ್ಲ. ನಾನು ಅವುಗಳ ಆಕಾರ, ಬಣ್ಣ ಮತ್ತು ಆವಾಸಸ್ಥಾನದ ಬಗ್ಗೆ ವಿದ್ಯಾರ್ಥಿಗಳನ್ನು ಕೇಳಿದಾಗ, ಅವರು ಅತ್ಯಂತ ಕುತೂಹಲದಿಂದ ಆ ಜೀವಿಗಳ ಬಗ್ಗೆ ವಿವರಿಸುತ್ತಿದ್ದರು. ಉದಾಹರಣೆಗೆ, 'ಬಿತ್ತಾ-ನಪ್ಪಾ' ಎಂಬ ಕೀಟ ಹೇಗಿರುತ್ತದೆ ಎಂದು ಕೇಳಿದಾಗ, "ಅದು ಎಲೆಗಳು ಹಾಗೂ ನೆಲದ ಮೇಲೆ ನಡೆಯುತ್ತದೆ; ನಾವು ಗೇಣಿನಿಂದ (ಬಿತ್ತಾ) ಅಳೆಯುವಾಗ ಕೈಯನ್ನು ಹೇಗೆ ಚಲಿಸುತ್ತೇವೆಯೋ, ಅದೇ ರೀತಿಯಲ್ಲಿ ಈ ಹುಳು ಮುನ್ನಡೆಯುತ್ತದೆ" ಎಂದು ಸರಳವಾಗಿ ವಿವರಿಸಿದರು. ಅವರ ವಿವರಣೆಯಿಂದ, ವಿದ್ಯಾರ್ಥಿಗಳು 'ಲೂಪರ್' (ಕಂಬಳಿಹುಳು ಜಾತಿಯ ಒಂದು ಹುಳ) ಬಗ್ಗೆ ಮಾತನಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಯಿತು. ಅವರು ಇನ್ನೂ ಅನೇಕ ಕೀಟಗಳು ಮತ್ತು ಪ್ರಾಣಿಗಳ ಬಗ್ಗೆಯೂ ಇದೇ ರೀತಿ ವಿವರವಾದ ಮಾಹಿತಿ ನೀಡಿದರು. ಅವರ ಆ ವಿವರಣೆಗಳು ಅವರು ಯಾವ ಜೀವಿಯ ಬಗ್ಗೆ ಮಾತನಾಡುತ್ತಿದ್ದಾರೆಂಬುದನ್ನು ಸುಲಭವಾಗಿ ಗ್ರಹಿಸಲು ನನಗೆ ನೆರವಾದವು.

ಚರ್ಚೆಯು ಮುಂದೆ ಸಾಗಿದಂತೆ, ಜೀವಿಗಳ ಕಾಲುಗಳ ಸಂಖ್ಯೆಯ ಆಧಾರದ ಮೇಲೆ ನಮ್ಮ ಪಟ್ಟಿಯೂ ಬೆಳೆಯುತ್ತಾ ಹೋಯಿತು. ಅನೇಕ ವಿದ್ಯಾರ್ಥಿಗಳಿಗೆ ಕೆಲವು ಜೀವಿಗಳ ಹೆಸರು ಇಂಗ್ಲಿಷ್‌ನಲ್ಲೂ ತಿಳಿದಿತ್ತು. ಚರ್ಚೆಯ ಸಮಯದಲ್ಲಿ ಅವರು ಆ ಹೆಸರುಗಳನ್ನು ಇಂಗ್ಲಿಷ್‌ನಲ್ಲಿಯೂ ಹೇಳುತ್ತಿದ್ದರು, ಅದನ್ನು ನಾವು ನಮ್ಮ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತಿದ್ದೆವು. ವಿದ್ಯಾರ್ಥಿಗಳಿಗೆ ಸರಿಯಾಗಿ ತಲುಪಲಿ ಮತ್ತು ನೆನಪಿನಲ್ಲಿರಲಿ ಎಂಬ ಉದ್ದೇಶದಿಂದ ನಾನು ಆ ಜೀವಿಗಳ ಇಂಗ್ಲಿಷ್ ಹೆಸರುಗಳನ್ನು ಮತ್ತೊಮ್ಮೆ ಪುನರಾವರ್ತಿಸುತ್ತಿದ್ದೆ.

ನಾನು ಮೊದಲೇ ಹೇಳಿದಂತೆ, ಚರ್ಚೆಯು ಎರಡು ಕಾಲುಗಳ ಜೀವಿಗಳಿಂದ ಶುರುವಾಗಿ, ಆಮೇಲೆ ನಾಲ್ಕು, ಆರು, ಎಂಟು ಹಾಗೂ ಹತ್ತು ಕಾಲುಗಳಿರುವ ಪ್ರಾಣಿಗಳ ಬಗ್ಗೆಯೂ ಸಾಗಿತು. 'ಖಜೂರಕೀರಾ'ದಂತಹ (ಶತಪದಿ) ಕೆಲವು ಜೀವಿಗಳ ಕಾಲುಗಳ ಸಂಖ್ಯೆಯನ್ನು ನಮಗೆ ನಿಖರವಾಗಿ ನಿರ್ಧರಿಸಲು ಸಾಧ್ಯವಾಗದ ಪರಿಸ್ಥಿತಿಯೂ ಎದುರಾಯಿತು. ಹಾಗಾಗಿ ನಾವೆಲ್ಲರೂ ಸೇರಿ, 'ಅಸಂಖ್ಯಾತ ಕಾಲುಗಳಿರುವ ಜೀವಿಗಳ' ಹೆಸರನ್ನು ಬರೆಯಲು ಕಪ್ಪುಹಲಗೆಯ ಮೇಲೆ ಒಂದು ಪ್ರತ್ಯೇಕ ಕಾಲಂ ರಚಿಸಲು ನಿರ್ಧರಿಸಿದೆವು. ಈಗ ಪಟ್ಟಿಯಲ್ಲಿ ಇನ್ನೊಂದು ಹೊಸ ವಿಭಾಗ ಬಂತು. ಅದೇ ರೀತಿ 'ಕಾಲುಗಳೇ ಇಲ್ಲದ ಜೀವಿಗಳಿಗೂ' ಪ್ರತ್ಯೇಕವಾದ ಒಂದು ವಿಭಾಗವನ್ನು ಮಾಡಬೇಕಾಯಿತು.

ಚರ್ಚೆಯು ತುಂಬಾ ಉತ್ಸಾಹದಿಂದ ಸಾಗುತ್ತಿರುವಾಗಲೇ ಇದ್ದಕ್ಕಿದ್ದಂತೆ ಒಂದು ಗೊಂದಲ ಎದುರಾಯಿತು. ವಿದ್ಯಾರ್ಥಿಗಳ ಒಂದು ಗುಂಪು 'ಕೋತಿ ಎರಡು ಕಾಲುಗಳ ಪ್ರಾಣಿ' ಎನ್ನುತ್ತಿದ್ದರೆ, ಇನ್ನೊಂದು ಗುಂಪು 'ಅದು ನಾಲ್ಕು ಕಾಲುಗಳ ಪ್ರಾಣಿ' ಎಂದು ವಾದಿಸುತ್ತಿತ್ತು. ಇದಕ್ಕಾಗಿ ಎರಡೂ ಗುಂಪುಗಳು ತಮ್ಮದೇ ಆದ ತರ್ಕಗಳನ್ನು ಮುಂದಿಡುತ್ತಿದ್ದವು. ಒಂದು ಗುಂಪು "ಕೋತಿ ನಡೆಯುವಾಗ ನಾಲ್ಕೂ ಕಾಲುಗಳನ್ನು ಬಳಸುತ್ತದೆ" ಎಂದರೆ, ಇನ್ನೊಂದು ಗುಂಪು "ಅದು ಆಹಾರ ತಿನ್ನುವಾಗ ತನ್ನ ಕೈಗಳನ್ನೇ ಬಳಸುತ್ತದಲ್ಲವೇ?" ಎಂದು ಪ್ರತಿವಾದಿಸಿತು. ಈಗ ಯಾವ ಗುಂಪಿನ ಮಾತನ್ನು ಅಂಗೀಕರಿಸಿ ಕೋತಿಯನ್ನು ಯಾವ ವಿಭಾಗಕ್ಕೆ ಸೇರಿಸಬೇಕು ಎಂಬುದು ನನಗೂ ಸವಾಲಾಗಿ ಪರಿಣಮಿಸಿತು. ಏಕೆಂದರೆ ಎರಡೂ ಗುಂಪುಗಳ ವಾದಗಳೂ ಅವರವರ ದೃಷ್ಟಿಕೋನದಲ್ಲಿ ಸರಿಯಾಗಿಯೇ ಇದ್ದವು! ಈ ಚರ್ಚೆಯ ಅತ್ಯಂತ ಆಸಕ್ತಿದಾಯಕ ವಿಷಯವೆಂದರೆ, ತರಗತಿಯಲ್ಲಿ ಎಂದಿಗೂ ಮುಂದೆ ಬಾರದ ಮತ್ತು ಮಾತನಾಡಲು ಹಿಂಜರಿಯುತ್ತಿದ್ದ ವಿದ್ಯಾರ್ಥಿಗಳು ಸಹ ಉತ್ಸಾಹದಿಂದ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದರು. ಕೊನೆಗೆ, ಸಾಕಷ್ಟು ಚರ್ಚೆಯ ನಂತರ, "ಕೋತಿ ನೋಡಲು ಮನುಷ್ಯನಂತೆಯೇ ಕಾಣುತ್ತದೆ" ಎಂಬ ಕಾರಣ ನೀಡಿ, ಅದನ್ನು 'ಎರಡು ಕಾಲುಗಳಿರುವ ಪ್ರಾಣಿಗಳ' ಪಟ್ಟಿಗೆ ಸೇರಿಸಲು ಎಲ್ಲರೂ ಒಮ್ಮತದಿಂದ ಒಪ್ಪಿಕೊಂಡರು. ಕಾಂಗರೂ, ಕಪ್ಪೆ ಮತ್ತು ಮೊಸಳೆಯ ವಿಷಯದಲ್ಲೂ ಇಂತಹುದೇ ಕುತೂಹಲಕಾರಿ ಚರ್ಚೆಗಳು ನಡೆದವು. ಕಾಂಗರೂ ಚಲಿಸುವ ವಿಧಾನವನ್ನು ಸ್ಪಷ್ಟವಾಗಿ ವಿವರಿಸಲು ನಾನು ಮೊಬೈಲ್‌ನಲ್ಲಿ ಅದರ ವೀಡಿಯೊವನ್ನು ಸಹ ವಿದ್ಯಾರ್ಥಿಗಳಿಗೆ ತೋರಿಸಬೇಕಾಯಿತು.

ಚರ್ಚೆಯ ನಡುವೆ ಕೆಲವು ವಿದ್ಯಾರ್ಥಿಗಳು 'ಒಂದು ಕಾಲು' ಮತ್ತು 'ಮೂರು ಕಾಲು'ಗಳಿರುವ ಜೀವಿಗಳ ಬಗ್ಗೆಯೂ ತಿಳಿಯಲು ಬಯಸಿದರು. ಅಂತಹ ಜೀವಿಗಳಿವೆಯೇ ಎಂದು ಮನೆಯಲ್ಲಿ ಹಿರಿಯರನ್ನು ವಿಚಾರಿಸಿಕೊಂಡು ಬರುವಂತೆ ನಾನು ಅವರಿಗೆ ಸೂಚಿಸಿದೆ. ಇನ್ನು ಕೆಲವು ವಿದ್ಯಾರ್ಥಿಗಳು ಬೋರ್ಡ್ ಮೇಲಿದ್ದ ವಿಭಾಗಗಳನ್ನು ನೋಡುತ್ತಾ, 8, 10 ಅಥವಾ ಅದಕ್ಕಿಂತ ಹೆಚ್ಚು ಕಾಲುಗಳಿರುವ ಜೀವಿಗಳ ಬಗ್ಗೆ ಮನೆಯಲ್ಲಿ ವಿಚಾರಿಸಿ ಬರಲು ಉತ್ಸಾಹ ತೋರಿಸಿದರು. ಅವುಗಳ ಬಗ್ಗೆ ಮಾಹಿತಿ ಪಡೆಯಲು ತಂತ್ರಜ್ಞಾನದ (ಇಂಟರ್ನೆಟ್) ನೆರವು ಪಡೆಯಬಹುದು ಎಂಬ ಸುಳಿವನ್ನು ಸಹ ನಾನು ಅವರಿಗೆ ನೀಡಿದೆ.

ಹೀಗೆ ತೊಂಬತ್ತು ನಿಮಿಷಗಳ ತರಗತಿ ಅವರೊಂದಿಗೆ ಹೇಗೆ ಕಳೆಯಿತೆಂಬುದೇ ತಿಳಿಯಲಿಲ್ಲ! ಯಾವ ಪಾಠವನ್ನು ಬೋಧಿಸುವ ಮೊದಲು ನಾನು ಹಿಂಜರಿಕೆ ಮತ್ತು ಸಂಶಯದಲ್ಲಿದ್ದೆನೋ, ಅದೇ ಪಾಠವು ಇಂದು ಇಡೀ ತರಗತಿಯಲ್ಲಿ ಹೊಸ ಚೈತನ್ಯವನ್ನು ತುಂಬಿತ್ತು. ಈ ಪಾಠದಲ್ಲಿ ಕಲಿಕೆಗೆ ಅಪಾರ ಸಾಧ್ಯತೆಗಳು ಇರುವುದು ನನಗೆ ಕಂಡುಬಂತು. ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯನ್ನು ಮೌಖಿಕವಾಗಿ ಬಳಸುತ್ತಿದ್ದರು, ಹೊಸ ಪದಗಳನ್ನು ಕಲಿಯುತ್ತಿದ್ದರು ಹಾಗೂ ವಿಷಯವಸ್ತುವಿನ ಕುತೂಹಲದಿಂದಾಗಿ ಭಾಗವಹಿಸಲು ಮತ್ತು ತಮ್ಮ ಅನಿಸಿಕೆಗಳನ್ನು ಅಭಿವ್ಯಕ್ತಿಸಲು ಅವರಿಗೆ ಸಾಕಷ್ಟು ಅವಕಾಶಗಳು ಸಿಕ್ಕವು. ಇದರಿಂದ ನನ್ನ ಶಬ್ದಕೋಶವೂ ವೃದ್ಧಿಯಾಯಿತಲ್ಲದೆ, ನನಗೂ ಎಷ್ಟೋ ಹೊಸ ಸಂಗತಿಗಳು ತಿಳಿಯುವಂತಾಯಿತು. ಈ ಪಾಠವು ಅವರ ಸುತ್ತಮುತ್ತಲಿನ ಪರಿಸರಕ್ಕೆ ಹತ್ತಿರವಾಗಿದ್ದರಿಂದಲೇ ಇದೆಲ್ಲವೂ ಸಾಧ್ಯವಾಯಿತು.

*ದ್ರೋಣ್ ಸಾಹು, ಶಿಕ್ಷಕರು, ಪ್ರಾಥಮಿಕ ಶಾಲೆ ಬಿಜೆಮಾಲ್, ಮಹಾಸಮುಂದ್, ಛತ್ತೀಸ್‌ಗಢ.*
*ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನ: ರಾಕೇಶ್ ಪೂಂಜಾ*



# ತರಗತಿಯಲ್ಲಿ ಭಾವನಾತ್ಮಕ ಸುರಕ್ಷತೆ

## ಪೂನಂ

ನಾನು ಒಂದನೇ ತರಗತಿಗೆ ಪಾಠ ಮಾಡುತ್ತಿದ್ದೆ. ನಾವು 'ದಿ ಬೀ ಅಂಡ್ ದಿ ಎಲಿಫೆಂಟ್' (The Bee and The Elephant) ಕಥೆಯನ್ನು ಚರ್ಚಿಸುತ್ತಿದ್ದೆವು. ಕಥೆಯ ನಂತರ ವಿದ್ಯಾರ್ಥಿಗಳು ಕಥೆಯ ಶೀರ್ಷಿಕೆ, ಅದರ ಪಾತ್ರಗಳು ಮತ್ತು ಕಥಾವಸ್ತುವಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು. ಪಾಠ ಪ್ರಾರಂಭಿಸುವ ಮೊದಲು, ನಾನು ಅವರಿಗೆ ಕೆಲವು ಸೂಚನೆಗಳನ್ನು ನೀಡಿ, ಕಥೆಯ ಶೀರ್ಷಿಕೆ ಹಾಗೂ ಪಾತ್ರಗಳ ಹೆಸರುಗಳನ್ನು ಬೋರ್ಡ್ ಮೇಲೆ ಬರೆದಿದ್ದೆ.

ನಾನು ಕಥೆಯನ್ನು ಹೇಳುತ್ತಿದ್ದಂತೆ, ವಿದ್ಯಾರ್ಥಿಗಳು ತಮ್ಮ ಬಳಿಯಿದ್ದ ಮುದ್ರಿತ ಪ್ರತಿಗಳನ್ನು ನೋಡುತ್ತಾ ಗಮನವಿಟ್ಟು ಕೇಳಿದರು. ನಂತರ ಅವರು ಒಬ್ಬೊಬ್ಬರಾಗಿ ಮುಂದೆ ಬಂದು ಪ್ರಶ್ನೆಗಳಿಗೆ ಉತ್ತರಿಸಲು ಪ್ರಾರಂಭಿಸಿದರು. ಕೆಲವು ವಿದ್ಯಾರ್ಥಿಗಳಿಗೆ ಕಠಿಣ ಪದಗಳನ್ನು ಓದಲು ಮತ್ತು ಕಥೆಯನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತಿದ್ದುದರಿಂದ, ನಾನು ಅವರಿಗೆ ಮತ್ತೊಮ್ಮೆ ವಿವರಿಸಿ ಹೇಳಿದೆ.

ಅಷ್ಟರಲ್ಲಿ, ಯಾವುದೋ ತುರ್ತು ಕೆಲಸದ ನಿಮಿತ್ತ ನನ್ನನ್ನು ಕರೆದದ್ದರಿಂದ ನಾನು ತರಗತಿಯಿಂದ ಹೊರಹೋಗಬೇಕಾಯಿತು. ಸುಮಾರು 10 ನಿಮಿಷಗಳ ನಂತರ ನಾನು ಹಿಂತಿರುಗಿದಾಗ, ಸುನೀತಾಳ ಸುತ್ತಲೂ 10-15 ವಿದ್ಯಾರ್ಥಿಗಳು ವೃತ್ತಾಕಾರದಲ್ಲಿ ಕುಳಿತಿರುವುದನ್ನು ಕಂಡೆ. ಇಬ್ಬರು-ಮೂವರು ವಿದ್ಯಾರ್ಥಿಗಳು ತಕ್ಷಣ ನನ್ನ ಬಳಿಗೆ ಓಡಿ ಬಂದು, "ಮೇಡಂ, ಸುನೀತಾ ಅಳುತ್ತಿದ್ದಾಳೆ!" ಎಂದರು. ನಾನು ತಕ್ಷಣ, "ಏನಾಯಿತು? ಅವಳು ಏಕೆ ಅಳುತ್ತಿದ್ದಾಳೆ?" ಎಂದು ವಿಚಾರಿಸಿದೆ. ಆದರೆ ಯಾರ ಬಳಿಯೂ ಉತ್ತರವಿರಲಿಲ್ಲ.

ನಾನು ಸುನೀತಾಳ ಬಳಿ ತೆರಳಿ ಅಳಲು ಕಾರಣವೇನೆಂದು ಕೇಳಿದೆ. ಮೊದಲಿಗೆ ಅವಳು ಮೌನವಾಗಿದ್ದಳು. ಪುನಃ ಸಮಾಧಾನದಿಂದ ಕೇಳಿದಾಗ, ತನಗೆ ಯಾವುದೇ ಪೆಟ್ಟಾಗಿಲ್ಲ ಅಥವಾ ಯಾರೂ ಕೀಟಲೆ ಮಾಡಿಲ್ಲ ಎಂದು ತಿಳಿಸಿದಳು. ತರಗತಿಯಿಂದ ಹೊರಡುವಾಗ, ನಾನು ಬರುವವರೆಗೂ ಕಥೆಯ ಬಗ್ಗೆ ಚರ್ಚಿಸಬೇಡಿ ಎಂದು ಮಕ್ಕಳಿಗೆ ತಿಳಿಸಿ, ತರಗತಿಯಲ್ಲಿ ಶಿಸ್ತು ಕಾಪಾಡುವ ಜವಾಬ್ದಾರಿಯನ್ನು ಸುನೀತಾಗೆ ವಹಿಸಿದ್ದೆ. ಇನ್ನೊಬ್ಬ ವಿದ್ಯಾರ್ಥಿನಿ ಕೂಡ ಆಕೆಗೆ ನೆರವಾಗಬೇಕಿತ್ತು, ಆದರೆ ಅವಳು ಆಸಕ್ತಿ ತೋರಿಸದ ಕಾರಣ ಇಡೀ ಜವಾಬ್ದಾರಿ ಸುನೀತಾಳ ಮೇಲೆಯೇ ಬಿತ್ತು. ಇದರಿಂದ ಅವಳು ತೀವ್ರ ಒತ್ತಡಕ್ಕೊಳಗಾಗಿ ಅತ್ತಿದ್ದಳು. ಇದು ನಡೆದ ನಿಜವಾದ ಘಟನೆಯಾಗಿತ್ತು.

ಕೊನೆಗೆ, ಅವಳು ಹೀಗೆ ಹೇಳಿದಳು: "ನಾನು ವಿದ್ಯಾರ್ಥಿಗಳಿಗೆ ಸುಮ್ಮನಿರಲು ಹೇಳುತ್ತಲೇ ಇದ್ದೆ, ಆದರೆ ಯಾರೂ ಸುಮ್ಮನಾಗಲಿಲ್ಲ. ನಂತರ ನನಗೆ ಇದ್ದಕ್ಕಿದ್ದಂತೆ ಕೋಪ ಬಂದು, ನನ್ನ ಬಳಿಯಿದ್ದ ಸ್ಕೇಲ್‌ನಿಂದ ನನ್ನ ಕೈಗೆ ನಾನೇ ಹೊಡೆದುಕೊಂಡೆ."

ನಾನು: "ನೀನು ಯಾಕೆ ಹಾಗೆ ಮಾಡಿದೆ?" ಎಂದು ಕೇಳಿದೆ.

ಸುನೀತಾ: "ಯಾರೂ ನನ್ನ ಮಾತು ಕೇಳುತ್ತಿರಲಿಲ್ಲ, ಸುಮ್ಮನೆ ಕೂರುತ್ತಲೂ ಇರಲಿಲ್ಲ."

ನಾನು: "ಹಾಗಾದರೆ, ನೀನು ಹಾಗೆ ಹೊಡೆದುಕೊಂಡ ಮೇಲೆ ಅವರು ನಿನ್ನ ಮಾತು ಕೇಳಿದರೇ?"

ಸುನೀತಾ: (ತಲೆ ಅಲ್ಲಾಡಿಸುತ್ತಾ) "ಇಲ್ಲ."

ನಾನು: "ಸುನೀತಾ, ಈ ರೀತಿ ಮಾಡಿಕೊಂಡಿದ್ದರಿಂದ ನಿನ್ನ ಸಮಸ್ಯೆ ಬಗೆಹರಿಯಿತೇ?"

ಸುನೀತಾ: "ಇಲ್ಲ."

ನಾನು: "15 ನಿಮಿಷಗಳ ಹಿಂದೆ ನಾವು ಒಂದು ಕಥೆಯ ಬಗ್ಗೆ ಮಾತನಾಡುತ್ತಿದ್ದೆವಲ್ಲವೇ—ದಾರಿ ತಪ್ಪಿ ತೊಂದರೆಯಲ್ಲಿ ಸಿಲುಕಿದ ಜೇನುನೊಣದ ಬಗ್ಗೆ. ನಂತರ ಯಾರೋ ಅದಕ್ಕೆ ಮನೆಗೆ ಹೋಗುವ ದಾರಿಯನ್ನು ಕಂಡುಕೊಳ್ಳಲು ಸಹಾಯ ಮಾಡಿದರು. ಹಾಗಾದರೆ ಹೇಳು, ಆ ಜೇನುನೊಣ ಕೇವಲ ಅಳುತ್ತಾ ಕುಳಿತಿತೇ ಅಥವಾ ತನ್ನ ಮನೆಯನ್ನು ಹುಡುಕಲು ಪ್ರಯತ್ನಿಸಿತೇ?"

ಸುನೀತಾ: ಅದು ಮನೆಗೆ ಹೋಗುವ ದಾರಿಯನ್ನು ಹುಡುಕುತ್ತಿತ್ತು.

ನಾನು: ಜೇನುನೊಣ ತನ್ನನ್ನು ತಾನೇ ನೋಯಿಸಿಕೊಂಡಿದೆಯೇ?

ಸುನೀತಾ: ಇಲ್ಲ.

ನಾನು: ಕಥೆಯಲ್ಲಿ ನಿನಗೆ ಸರಿಯಾದ ಪರಿಹಾರ ಸಿಕ್ಕಿತಾ?

ಸುನೀತಾ: ಹೌದು, ಜೇನುನೊಣ ಸಹಾಯ ಕೇಳಿತು, ಮತ್ತು ಆನೆ ಅದಕ್ಕೆ ಸಹಾಯ ಮಾಡಿತು.

ನಾನು: ಹಾಗಾದರೆ ಹೇಳು, ಜೇನುನೊಣ ಒಂದೇ ಸ್ಥಳದಲ್ಲಿ ಕುಳಿತು ಅಳುತ್ತಿದ್ದರೆ ಮತ್ತು ಸಹಾಯ ಕೇಳದಿದ್ದರೆ, ಅದು ಮನೆಗೆ ಹೋಗುವ ದಾರಿಯನ್ನು ಕಂಡುಕೊಳ್ಳುತ್ತಿತ್ತೇ?

ಸುನೀತಾ: ಇಲ್ಲ.

ನಾನು: ನೀನು ಜೇನುನೊಣಕ್ಕಿಂತ ಬುದ್ಧಿವಂತಳು ಎಂದು ನಾನು ಭಾವಿಸುತ್ತೇನೆ. ಅಳುವುದು ಅಥವಾ ನಿನ್ನನ್ನು ನೋಯಿಸಿಕೊಳ್ಳುವ ಬದಲು ನೀನು ನಿನ್ನ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು.

ಸುನೀತಾ: (ತಲೆಯಾಡಿಸುತ್ತಾ) ಹೌದು.

ಈ ಸಂಭಾಷಣೆಯ ನಂತರ ಸುನೀತಾ ಸಮಾಧಾನಗೊಂಡು, ಉಳಿದ ತರಗತಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಳು. ಆದರೆ ಒಬ್ಬ ಶಿಕ್ಷಕಿಯಾಗಿ, ಈ ಘಟನೆಯ ಬಗ್ಗೆ ಆಕೆಯ ಪೋಷಕರಿಗೆ ತಿಳಿಸುವುದು ನನ್ನ ಕರ್ತವ್ಯವೆಂದು ಭಾವಿಸಿ, ಆಕೆಯ ತಂದೆಗೆ ಕರೆ ಮಾಡಿ ಪರಿಸ್ಥಿತಿಯನ್ನು ವಿವರಿಸಿದೆ. ಅವರು ತಮ್ಮ ಮಗಳ ಮನಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡವರಾಗಿದ್ದರು ಹಾಗೂ ಆಕೆಯೊಂದಿಗೆ ಆಳವಾದ ಭಾವನಾತ್ಮಕ ಬಾಂಧವ್ಯ ಹೊಂದಿದ್ದರು. ಈ ಹಿಂದೆಯೂ ಇಂತಹ ಘಟನೆಗಳು ನಡೆದಿವೆ ಎಂದು ಅವರು ತಿಳಿಸಿದರು. ಸುನೀತಾ ತೀವ್ರ ಅಸಮಾಧಾನಗೊಂಡಾಗ ಅಥವಾ ಒತ್ತಡಕ್ಕೆ ಒಳಗಾದಾಗ, ಕೆಲವೊಮ್ಮೆ ತನ್ನನ್ನು ತಾನೇ ದೂಷಿಸಿಕೊಳ್ಳುವುದು ಅಥವಾ ತನಗೆ ತಾನೇ ಹಾನಿ ಮಾಡಿಕೊಳ್ಳುವುದು ಮಾಡುತ್ತಿದ್ದಳು.

ಇದಾದ ನಂತರ ಸುನೀತಾಗೆ ನಿಯತವಾಗಿ ಮಾರ್ಗದರ್ಶನ ಹಾಗೂ ಆಪ್ತಸಲಹೆ ನೀಡಲಾಯಿತು. ನಿಧಾನವಾಗಿ ಆಕೆಯಲ್ಲಿ ಆತ್ಮವಿಶ್ವಾಸ ಬೆಳೆಯಲಾರಂಭಿಸಿತು. ಈ ಘಟನೆ ನಡೆದ ಏಳು ತಿಂಗಳ ನಂತರ, ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಈಗ ಮಕ್ಕಳು ಸಭೆ ಸೇರಿದಾಗ ಆಕೆ ಸಂತೋಷದಿಂದ ಜವಾಬ್ದಾರಿಗಳನ್ನು ನಿಭಾಯಿಸುತ್ತಾಳೆ. ಮನೆಗೆ ಹೋದ ಮೇಲೆಯೂ ಈ ಕೆಲಸಗಳನ್ನು ಮಾಡಲು ತನಗೆಷ್ಟು ಇಷ್ಟ ಎಂಬುದನ್ನು ಎಲ್ಲರ ಬಳಿ ಹೇಳಿಕೊಳ್ಳುತ್ತಾಳೆ ಎಂದು ಆಕೆಯ ತಂದೆ ತಿಳಿಸಿದರು. ಯಾವುದಾದರೂ ಕೆಲಸ ಸುಲಭ ಎನಿಸದಿದ್ದರೆ, "ನಾನು ಬೇರೆ ಜವಾಬ್ದಾರಿ ವಹಿಸಿಕೊಳ್ಳುತ್ತೇನೆ" ಎಂದು ಹೇಳುವುದನ್ನು ಆಕೆ ಕಲಿತಿದ್ದಾಳೆ. ಈ ಬದಲಾವಣೆಯಿಂದ ಆಕೆಯಲ್ಲಿ ಆತ್ಮವಿಶ್ವಾಸ ಮೂಡಿದ್ದು, "ನಾನೂ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೇನೆ" ಎಂಬ ಸಕಾರಾತ್ಮಕ ಭಾವನೆ ಬೆಳೆದಿದೆ.

ಸೂಕ್ಷ್ಮ ಮನಸ್ಸಿನ ವಿದ್ಯಾರ್ಥಿಗಳೊಂದಿಗೆ ವ್ಯವಹರಿಸುವಾಗ, ಎಚ್ಚರಿಕೆಯಿಂದ ಮಾತನಾಡುವುದು ಮತ್ತು ಅವರು ಸುಲಭವಾಗಿ ನಿರ್ವಹಿಸಬಹುದಾದ ಚಟುವಟಿಕೆಗಳನ್ನು ಯೋಜಿಸುವುದು ಅತ್ಯಗತ್ಯ. ಹೀಗೆ ಮಾಡುವುದರಿಂದ ಮಕ್ಕಳಿಗೆ ನಿಜ ಜೀವನದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಸಹಾಯವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ಯಾವುದಾದರೂ ಪರಿಸ್ಥಿತಿಯನ್ನು ಸ್ವತಃ ನಿಭಾಯಿಸಲು ಸಾಧ್ಯವಾಗದಿದ್ದಾಗ, ತಾವು ಭರವಸೆ ಇಡಬಹುದಾದ ವ್ಯಕ್ತಿಯ ಸಹಾಯ ಪಡೆಯಬೇಕು ಎಂಬುದನ್ನು ಮಕ್ಕಳು ಅರಿತುಕೊಳ್ಳಬೇಕು. ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗದಿದ್ದರೆ

ಅವರು ನಿರಾಶೆಗೊಳ್ಳಬಾರದು; ಆ ಕೆಲಸವನ್ನು ಅಲ್ಲಿಗೆ ಬಿಟ್ಟರೂ ಪರವಾಗಿಲ್ಲ, ಆದರೆ ಯಾವುದೇ ಕಾರಣಕ್ಕೂ ತಮಗೆ ತಾವೇ ಹಾನಿ ಮಾಡಿಕೊಳ್ಳುವುದು ಸರಿಯಲ್ಲ ಎಂಬ ಸ್ಪಷ್ಟತೆ ಅವರಿಗೆ ಮೂಡಬೇಕು.

ಈ ಅನುಭವವು, ತರಗತಿಯು ಕೇವಲ ಶೈಕ್ಷಣಿಕ ಕೌಶಲಗಳನ್ನು ಮಾತ್ರವಲ್ಲದೆ ಮಕ್ಕಳ ಭಾವನಾತ್ಮಕ ಬೆಳವಣಿಗೆಯನ್ನೂ ಪೋಷಿಸಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶಿಕ್ಷಕರು ಕಥೆಗಳನ್ನು ಹೇಳುವುದು, ಮುಕ್ತ ಸಂಭಾಷಣೆಗೆ ಪ್ರೋತ್ಸಾಹಿಸುವುದು ಮತ್ತು ಮಕ್ಕಳ ನಡುವೆ ಆರೋಗ್ಯಕರ ಮಾತುಕತೆಗೆ ಅವಕಾಶ ಕಲ್ಪಿಸಿಕೊಡುವುದರಿಂದ, ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ನಿರ್ವಹಿಸಲು, ಸಮಸ್ಯೆಗಳನ್ನು ಸರಿಯಾದ ರೀತಿಯಲ್ಲಿ ಪರಿಹರಿಸಲು ಹಾಗೂ ಅಗತ್ಯವಿದ್ದಾಗ ಸಹಾಯ ಕೇಳಲು ಕಲಿಯುತ್ತಾರೆ. ಈ ರೀತಿಯಲ್ಲಿ, ನಾವು ಅವರನ್ನು ಕೇವಲ ಪರೀಕ್ಷೆಗಳಿಗೆ ಮಾತ್ರವಲ್ಲದೆ ಜೀವನದ ಪಯಣಕ್ಕೂ ಸಿದ್ಧಗೊಳಿಸಬಹುದು. ವಿದ್ಯಾರ್ಥಿಗಳಿಗಾಗಿ ನಾವು ಮಾಡಬಹುದಾದ ಅತ್ಯಂತ ಪ್ರಮುಖ ಕೆಲಸವೆಂದರೆ—ಶಾಲೆಯಲ್ಲಿ ಮತ್ತು ಮನೆಯಲ್ಲಿ ಅವರು ಸುರಕ್ಷಿತರೆಂಬ ಭಾವನೆ ಮೂಡುವಂತೆ ಮಾಡುವುದು, ಮುಕ್ತವಾಗಿ ಮಾತನಾಡಲು, ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಚಿಂತೆ ಮತ್ತು ಕಳವಳಗಳನ್ನು ಯಾವುದೇ ಭಯವಿಲ್ಲದೆ ಹಂಚಿಕೊಳ್ಳಲು ಸಾಧ್ಯವಾಗುವಂತಹ ವಾತಾವರಣವನ್ನು ನಿರ್ಮಿಸುವುದಾಗಿದೆ.

**ಪೂನಂ**, ಶಿಕ್ಷಕರು, ಅಜೀಮ್ ಪ್ರೇಮ್‌ಜಿ ಶಾಲೆ, ದಿನೇಶಪುರ, ಉಧಮ್‌ಸಿಂಗ್ ನಗರ, ಉತ್ತರಾಖಂಡ್
ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆಶಾ ಮಹೇಶ್ವರ ಸಿಂಗ್



# ಶಿಕ್ಷಕರ ಸಾಮೂಹಿಕ ಪ್ರಯತ್ನಗಳು ಶಾಲೆಯನ್ನು ಉತ್ತಮಗೊಳಿಸುತ್ತವೆ : ಕವಿತಾ ಸಿಂಗ್

**ಮನೀಶ್ ಕಿಶೋರ್**



ಕವಿತಾ ಸಿಂಗ್

**ಜೈಪುರದ ಸಾಂಗಾನೇರ್ ಬ್ಲಾಕ್‌ನಲ್ಲಿರುವ ಮಹಾತ್ಮ ಗಾಂಧಿ ಸರ್ಕಾರಿ ಶಾಲೆ ಭಾಟ್‌ವಾಲಾದಲ್ಲಿ ಕೆಲಸ ಮಾಡುತ್ತಿರುವ ಕವಿತಾ ಸಿಂಗ್ ಅವರು ಶಿಕ್ಷಣ ಕ್ಷೇತ್ರಕ್ಕೆ ಬದ್ಧತೆಯನ್ನು ಹೊಂದಿರುವ ಮುಖ್ಯೋಪಾಧ್ಯಾಯಿನಿ. ಒಂದು ಕಾಲದಲ್ಲಿ ಅವರ ಶಾಲೆಯು ಭೌತಿಕ ಸೌಲಭ್ಯಗಳ ಕೊರತೆ, ಕಡಿಮೆ ದಾಖಲಾತಿ ಮತ್ತು ದುರ್ಬಲ ಶೈಕ್ಷಣಿಕ ವಾತಾವರಣದೊಂದಿಗೆ ಹೋರಾಡುತ್ತಿತ್ತು. ಈ ಸವಾಲುಗಳ ನಡುವೆಯೂ ಅವರು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಗಮನ ಕೇಂದ್ರೀಕರಿಸಿ, ಶಾಲೆಯಲ್ಲಿ 'ರೀಡಿಂಗ್ ಕಾರ್ನರ್' ಅನ್ನು ಆರಂಭಿಸಿ, ಸಮುದಾಯ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ನೆರವಿನಿಂದ ಉತ್ತಮ ಶೈಕ್ಷಣಿಕ ವಾತಾವರಣ ಮತ್ತು ಕಲಿಕೆಯ ಸಂಸ್ಕೃತಿಯನ್ನು ಸಕ್ರಿಯಗೊಳಿಸಿದರು. ಅಲ್ಲದೆ, ಅವರು ಸಮುದಾಯವನ್ನು ಶಾಲೆಯೊಂದಿಗೆ ಬೆಸೆದು, ಜೊತೆಯಲ್ಲಿ ಕೆಲಸ ಮಾಡುವ ಸಹ-ಶಿಕ್ಷಕರಿಗೆ ಜವಾಬ್ದಾರಿಯನ್ನು ಹಂಚಿಕೊಳ್ಳುವ ವಾತಾವರಣವನ್ನು ಸೃಷ್ಟಿ ಮಾಡಿದರು. ಅವರ ಈ ಪಯಣದ ಬಗ್ಗೆ ತಿಳಿಯಲು, ಮನೀಶ್ ಕಿಶೋರ್ ಅವರು ಕವಿತಾ ಅವರೊಂದಿಗೆ ಮಾತನಾಡಿದ್ದಾರೆ. ಈ ಮಾತುಕತೆಯ ಆಯ್ದ ಕೆಲವು ಭಾಗಗಳು ಇಲ್ಲಿವೆ:**

**ಮನೀಶ್: ನೀವು ಮುಖ್ಯೋಪಾಧ್ಯಾಯಿನಿಯಾಗಿ ಜವಾಬ್ದಾರಿಯನ್ನು ವಹಿಸಿಕೊಂಡಾಗ ನಿಮ್ಮ ಆದ್ಯತೆಗಳು ಯಾವುದಾಗಿದ್ದವು? ಅವುಗಳನ್ನು ಕುರಿತು ಮೇಲೆ ಹೇಗೆ ಕೆಲಸ ಮಾಡಿದಿರಿ?**

**ಕವಿತಾ:** ಆರಂಭದಲ್ಲಿ, ಶಾಲೆಯ ನೈಜ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಎರಡು ಪ್ರಮುಖ ಸವಾಲುಗಳು ಇದ್ದವು – ಮೊದಲನೆಯದಾಗಿ: ಶಾಲೆಯಲ್ಲಿ ಕುಡಿಯುವ ನೀರು ಮತ್ತು ವಿದ್ಯುತ್ ಪೂರೈಕೆಯ ಸಮಸ್ಯೆ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ಮುಂತಾದ ರೂಪಗಳಲ್ಲಿ ಕಾಣುತ್ತಿದ್ದ ಮೂಲಭೂತ ಸೌಕರ್ಯಗಳ ಕೊರತೆ; ಮತ್ತು ಎರಡನೆಯದಾಗಿ, ಕ್ರಮೇಣ ಕುಸಿಯುತ್ತಿದ್ದ ಶಾಲಾ ದಾಖಲಾತಿ. ಆ ಸಮಯದಲ್ಲಿ ದಾಖಲಾತಿ 105ರಿಂದ ಕೇವಲ 70ಕ್ಕೆ ಕುಸಿದಿತ್ತು. ಇದು ಒಂದು ಕಳವಳಕಾರಿ ವಿಷಯವಾಗಿತ್ತು.

ಸಮಸ್ಯೆಗಳನ್ನು ಬಗೆಹರಿಸಲು ಸಿಬ್ಬಂದಿಯೊಂದಿಗೆ ಸೇರಿ, ಜಂಟಿ ಯೋಜನೆಯನ್ನು ರೂಪಿಸಲಾಯಿತು. ದಾನಿಯೊಬ್ಬರ ನೆರವಿನಿಂದ ಶಾಲೆಯಲ್ಲಿ ನೀರಿಗಾಗಿ ಬೋರ್ ಕೊರೆಸಲಾಯಿತು. ನಿರಂತರ ವಿದ್ಯುತ್ ಸಂಪರ್ಕಕ್ಕಾಗಿ ಸ್ಥಳೀಯ ಲೈನ್‌ಮನ್ ಅವರೊಂದಿಗೆ ಸಂಪರ್ಕದಲ್ಲಿರುವಂತೆ ವ್ಯವಸ್ಥೆ ಮಾಡಿಕೊಳ್ಳಲಾಯಿತು. ಇದು ಶಾಲೆಯ ಭೌತಿಕ ವಾತಾವರಣವನ್ನು ಸುಧಾರಿಸಿತು.

ದಾಖಲಾತಿಯನ್ನು ಹೆಚ್ಚಿಸಲು, ಪೋಷಕರೊಂದಿಗೆ ಮಾತನಾಡಿ, ಅವರು ತಮ್ಮ ಮಕ್ಕಳನ್ನು ಶಾಲೆಗೆ ಏಕೆ ಕಳುಹಿಸುತ್ತಿಲ್ಲ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನ ನಡೆಯಿತು. ಶಾಲೆಯಲ್ಲಿ ವಿದ್ಯಾಭ್ಯಾಸ ಸರಿಯಾಗಿ ನಡೆಯುತ್ತಿಲ್ಲ ಎಂಬ ಆತಂಕದಿಂದ ಅವರು ಚಿಂತಿತರಾಗಿದ್ದರು. ಬೋಧನೆಯ ಗುಣಮಟ್ಟ ಖಂಡಿತವಾಗಿಯೂ ಸುಧಾರಿಸಲಾಗುವುದು ಎಂಬ ಭರವಸೆ ನೀಡಿದೆವು. ಈ ಸಲುವಾಗಿ ಅವರು ಶಾಲೆಗಾಗಿ ಸ್ವಲ್ಪ ಸಮಯವನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದೆವು.

ತರಗತಿಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರೀತಿಯಿಂದ ಸಂವಾದ, ಅವರ ನಿಯತ ಹಾಜರಾತಿ, ಉತ್ತಮ ಬೋಧನೆ ಮತ್ತು ಕಲಿಕೆಯ ವಾತಾವರಣವು ಸಕಾರಾತ್ಮಕವಾಗಿರುವಂತೆ ಮಾಡಲು ಶಿಕ್ಷಕರು ವಿಶೇಷ ಗಮನ ಹರಿಸಿದರು. ಈ ಪ್ರಯತ್ನಗಳಿಂದ ಪೋಷಕರ ವಿಶ್ವಾಸ ಕ್ರಮೇಣ ಮರಳಿತು. ಇಂದು, ವಿದ್ಯಾರ್ಥಿಗಳ ದಾಖಲಾತಿ 70ರಿಂದ 142ಕ್ಕೆ ಏರಿದೆ.

**ಮನೀಶ್: ಶಾಲೆಯಲ್ಲಿ ಕಲಿಯುವ-ಕಲಿಸುವ ವಾತಾವರಣವನ್ನು ಸೃಷ್ಟಿಸಲು ನೀವು ಯಾವ ಉಪಕ್ರಮವನ್ನು ಕೈಗೊಂಡಿರಿ?**

**ಕವಿತಾ:** ಇದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ತಾನು ಸುರಕ್ಷಿತವಾಗಿದ್ದೇನೆ, ಗೌರವಿಸಲ್ಪಡುತ್ತಿದ್ದೇನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ ಎಂಬ ಭಾವನೆಯನ್ನು ಮೂಡಿಸಲು ಪ್ರಯತ್ನಿಸಲಾಯಿತು. ನಾವು 'ಚಟುವಟಿಕೆ ಆಧಾರಿತ ಕಲಿಕೆ' (ABL) ಕಿಟ್‌ಗಳನ್ನು ಬಳಸಿದೆವು. ಇದರಿಂದ ವಿದ್ಯಾರ್ಥಿಗಳಿಗೆ, ತಮ್ಮದೇ ಆದ ವೇಗದಲ್ಲಿ ಕಲಿಯಲು ಅವಕಾಶ ದೊರೆಯಿತು. ಇದು ಮಕ್ಕಳು ಯಾವುದೇ ಒತ್ತಡವಿಲ್ಲದೆ ಕಲಿಯಲು ನೆರವಾಯಿತು. ಈಗ ಶಿಕ್ಷಕರು ವಿದ್ಯಾರ್ಥಿಗಳ ಸಾಧನೆಯನ್ನು ಪರಸ್ಪರ ಹೋಲಿಸುವ ಬದಲು, ಅವರ ಪ್ರಯತ್ನಗಳನ್ನು ಪ್ರಶಂಸಿಸುತ್ತಾರೆ ಹಾಗೂ ಯಾವುದೇ ತಾರತಮ್ಯವಿಲ್ಲದೆ ಚಟುವಟಿಕೆಗಳಲ್ಲಿ ಎಲ್ಲರನ್ನೂ ತೊಡಗಿಸಿಕೊಳ್ಳುತ್ತಾರೆ.

ಗ್ರಂಥಾಲಯ ಮತ್ತು 'ರೀಡಿಂಗ್ ಕಾರ್ನರ್'ಗಳನ್ನು ಮುಕ್ತ ಚರ್ಚೆ ಮತ್ತು ಸಂವಾದದ ವೇದಿಕೆಯಾಗಿ ಪರಿವರ್ತಿಸಲಾಯಿತು. ಇಲ್ಲಿ ವಿದ್ಯಾರ್ಥಿಗಳು ತಮ್ಮಿಷ್ಟದ ಪುಸ್ತಕಗಳನ್ನು ಓದುತ್ತಾರೆ, ಕಥೆಗಳನ್ನು ಹೇಳುತ್ತಾರೆ ಹಾಗೂ ಗುಂಪುಗಳಲ್ಲಿ ಸಕ್ರಿಯವಾಗಿ ಚರ್ಚಿಸುತ್ತಾರೆ. ಇದರಿಂದಾಗಿ, ಮಾತಾಡಲು ಹಿಂಜರಿಯುತ್ತಿದ್ದ ವಿದ್ಯಾರ್ಥಿಗಳು ಸಹ ನಿಧಾನವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದ್ದಾರೆ. ಬೆಳಗಿನ ಶಾಲಾ ಪ್ರಾರ್ಥನಾ ಸಭೆಯು ಮಕ್ಕಳ ಅಭಿವ್ಯಕ್ತಿಗೆ ಸೂಕ್ತ ವೇದಿಕೆಯಾಗಿದೆ. ಅಲ್ಲಿ ವಿದ್ಯಾರ್ಥಿಗಳು ತಮ್ಮದೇ ಮಾತುಗಳಲ್ಲಿ ಕವಿತೆಗಳು, ನಾಟಕಗಳು, ಹಾಡುಗಳು ಮತ್ತು ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಶಿಕ್ಷಕರು ಮತ್ತು ಸಹಪಾಠಿಗಳು ಪ್ರತಿಯೊಬ್ಬರ ಮಾತನ್ನು ಗಮನವಿಟ್ಟು ಆಲಿಸುತ್ತಾ, ಸಕಾರಾತ್ಮಕ ಬೆಂಬಲ ಮತ್ತು ಪ್ರೋತ್ಸಾಹ ನೀಡುತ್ತಾರೆ.

ವಿದ್ಯಾರ್ಥಿಗಳು ಶಾಲೆಯಲ್ಲಿ 'ಮಕ್ಕಳ ಮೇಳ'ವನ್ನು ಆಯೋಜಿಸಿದ್ದರು. ಅವರೆಲ್ಲರೂ ಒಟ್ಟಾಗಿ ಯೋಜನೆ ರೂಪಿಸಿ, ಗುಂಪುಗಳಲ್ಲಿ ಕೆಲಸಗಳನ್ನು ಹಂಚಿಕೊಂಡರು. ಊಟವನ್ನು ಸಿದ್ಧಪಡಿಸುವುದು, ಮಳಿಗೆಗಳನ್ನು ಹಾಕುವುದು ಹಾಗೂ ತಮ್ಮ ಪದಾರ್ಥಗಳನ್ನು ಪ್ರಚಾರ ಮಾಡಿ ಮಾರಾಟ

ಮಾಡುವಂತಹ ಕೆಲಸಗಳನ್ನು ನಿರ್ವಹಿಸಿದರು. ಇದು ವಿದ್ಯಾರ್ಥಿಗಳಲ್ಲಿ ಸಹಕಾರ ಮತ್ತು ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸಿತು. ಪ್ರಸ್ತುತ ಎಲ್ಲಾ ವಿದ್ಯಾರ್ಥಿಗಳು ಕಲಿಕೆಯಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ನನ್ನ ಪ್ರಕಾರ, ಇವೆಲ್ಲವೂ ಒಂದು ಉತ್ತಮ ಶೈಕ್ಷಣಿಕ ವಾತಾವರಣದ ಪ್ರಮುಖ ಲಕ್ಷಣಗಳಾಗಿವೆ.

**ಮನೀಶ್: ಕಲಿಕೆ-ಬೋಧನೆ ಪ್ರಕ್ರಿಯೆಯಲ್ಲಿ ಸಮುದಾಯದ ಒಳಗೊಳ್ಳುವಿಕೆಯನ್ನು ನೀವು ಹೇಗೆ ನೋಡುತ್ತೀರಿ? ಹಾಗೆಯೇ, ಈ ನಿಟ್ಟಿನಲ್ಲಿ ನೀವು ಮಾಡುತ್ತಿರುವ ಪ್ರಯತ್ನಗಳೇನು?**

**ಕವಿತಾ:** ಶಾಲೆಯ ಅಭಿವೃದ್ಧಿಯಲ್ಲಿ ಪೋಷಕರ ಭಾಗವಹಿಸುವಿಕೆಯನ್ನು ನಾನು ಅತ್ಯಂತ ಮುಖ್ಯವೆಂದು ಪರಿಗಣಿಸುತ್ತೇನೆ. ನಾನು ಅವರೊಂದಿಗೆ ಮಗುವಿನ ಶೈಕ್ಷಣಿಕ ಪ್ರಗತಿ, ನಡವಳಿಕೆ, ಆಸಕ್ತಿಗಳು ಮತ್ತು ಶಾಲೆಗೆ ಅವರ ನಿರಂತರತೆಯ ಬಗ್ಗೆ ಸಕ್ರಿಯವಾಗಿ ಮಾತನಾಡುತ್ತೇನೆ. ಯಾವುದೇ ಮಗು ಮಾತನಾಡಲು ಹಿಂಜರಿಯುತ್ತಿದ್ದರೆ ಅಥವಾ ಗುಂಪು ಚಟುವಟಿಕೆಗಳಲ್ಲಿ ಹಿಂದುಳಿದಿದ್ದರೆ, ಮನೆಯಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳಲು ಅಥವಾ ಪಾತ್ರಾಭಿನಯದಂತಹ ಸರಳ ಅಭ್ಯಾಸಗಳನ್ನು ಮಾಡಿಸಲು ನಾನು ಪೋಷಕರಿಗೆ ಸಲಹೆ ನೀಡುತ್ತೇನೆ. ಇದು ಮಕ್ಕಳು ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಹಕಾರಿಯಾಗುತ್ತದೆ.

ಅನೇಕ ಪೋಷಕರು ಶಾಲಾ ಕಟ್ಟಡದ ನಿರ್ವಹಣೆ ಮತ್ತು ಸ್ವಚ್ಛತೆಯ ಕೆಲಸಗಳಲ್ಲಿ ಶ್ರಮದಾನ ಮಾಡುತ್ತಾರೆ. ಅಷ್ಟೇ ಅಲ್ಲದೆ, ಶಾಲಾ ಸಭೆಗಳಲ್ಲಿ ಮಕ್ಕಳು ಹಂಚಿಕೊಳ್ಳುವ ವಿಚಾರಗಳನ್ನು ಆಲಿಸುತ್ತಾರೆ ಹಾಗೂ ವಿವಿಧ ಹಬ್ಬಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಈ ರೀತಿಯ ನಿರಂತರ ಸಂವಾದ ಮತ್ತು ಸಕ್ರಿಯ ತೊಡಗಿಸಿಕೊಳ್ಳುವಿಕೆಯು ಶಾಲೆ ಮತ್ತು ಸಮುದಾಯದ ನಡುವಿನ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ.

**ಮನೀಶ್: ಶಾಲೆಯಲ್ಲಿ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುವತ್ತ ನಿಮ್ಮ ಗಮನ ಹೇಗೆ ಹರಿಯಿತು? ಅದಕ್ಕಾಗಿ ನೀವು ಯಾವ ರೀತಿಯ ಪ್ರಯತ್ನಗಳನ್ನು ಮಾಡಿದ್ದೀರಿ?**

**ಕವಿತಾ:** ವಿದ್ಯಾರ್ಥಿಗಳ ಶೈಕ್ಷಣಿಕ ಹಿನ್ನಡೆಯನ್ನು ಗಮನಿಸಿದಾಗ, ಶಾಲೆಯಲ್ಲಿ ಸೂಕ್ತ ಶೈಕ್ಷಣಿಕ ವಾತಾವರಣವನ್ನು ರೂಪಿಸಲು 'ರೀಡಿಂಗ್ ಕಾರ್ನರ್'ನ



(ಓದುವ ಮೂಲೆ) ಅಗತ್ಯವಿದೆ ಎಂಬುದು ನನಗೆ ಮನವರಿಕೆಯಾಯಿತು. ವಿದ್ಯಾರ್ಥಿಗಳಿಗೆ ಯಾವಾಗಲೂ ಪುಸ್ತಕಗಳು ಸಿಗುವಂತೆ ಮಾಡುವುದರಿಂದ ಮಾತ್ರವೇ ಅವರಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಾಧ್ಯ ಎಂಬುದು ನನಗೆ ಸ್ಪಷ್ಟವಾಗಿತ್ತು. ಈ ಸಮಯದಲ್ಲಿ, ಅಜೀಮ್ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ನಡೆದ 'ನಿಪುಣ್ ಮೋಹನ್‌ಪುರಾ' ಅಭಿಯಾನದ ಸಭೆಯಲ್ಲಿ 'ರೀಡಿಂಗ್ ಕಾರ್ನರ್' ಪರಿಕಲ್ಪನೆಯನ್ನು ಪರಿಚಯಿಸಲಾಯಿತು. 'ರೀಡಿಂಗ್ ಕಾರ್ನರ್' ಎಂಬುದು ಕೇವಲ ಪುಸ್ತಕಗಳನ್ನು ಜೋಡಿಸಿಡುವ ಸ್ಥಳವಲ್ಲ; ಬದಲಾಗಿ ಅದು ಮಕ್ಕಳಿಗೆ ಆರಾಮದಾಯಕ, ಸುರಕ್ಷಿತ, ಸಂತಸದಾಯಕ ಮತ್ತು ಮುಕ್ತವಾಗಿ ಓದಲು ಅನುಕೂಲಕರವಾದ ವಾತಾವರಣವಾಗಿದೆ. ಅಲ್ಲಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ತಕ್ಕಂತೆ ತಮಗೆ ಬೇಕಾದ ಪುಸ್ತಕಗಳನ್ನು ತಾವೇ ಆಯ್ಕೆ ಮಾಡಿಕೊಂಡು ಓದಬಹುದು ಎಂಬ ವಿಷಯವನ್ನು ನಮಗೆ ಮನವರಿಕೆ ಮಾಡಿಕೊಡಲಾಯಿತು.

ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಶಾಲೆಯಲ್ಲಿ 'ರೀಡಿಂಗ್ ಕಾರ್ನರ್' ಅನ್ನು ಸ್ಥಾಪಿಸುವ ಕುರಿತು ನಾವು ಶಿಕ್ಷಕರೊಂದಿಗೆ ಸುದೀರ್ಘವಾಗಿ ಚರ್ಚಿಸಿದೆವು. ಇದಕ್ಕಾಗಿ, ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳುವ ಸೂಕ್ತ ವ್ಯವಸ್ಥೆ ಮಾಡಲು ಒಬ್ಬರು ಸಹಾಯ ಮಾಡಿದರೆ, ಮತ್ತೊಬ್ಬರು ಶಾಲಾ ವೇಳಾಪಟ್ಟಿಯಲ್ಲೇ 'ಓದುವ ಸಮಯ'ವನ್ನು ಪ್ರತ್ಯೇಕವಾಗಿ ಸೇರಿಸುವ ಸಲಹೆ ನೀಡಿದರು. ಇನ್ನೊಬ್ಬ ಶಿಕ್ಷಕರು ಗ್ರಂಥಾಲಯದ ಉಸ್ತುವಾರಿಯನ್ನು ವಹಿಸಿಕೊಂಡರು. ತರಗತಿವಾರು ಮಟ್ಟಕ್ಕೆ ಅನುಗುಣವಾಗಿ ಪುಸ್ತಕಗಳನ್ನು ವಿಂಗಡಿಸುವಲ್ಲಿ ಮತ್ತು ಅವುಗಳನ್ನು ರೀಡಿಂಗ್ ಕಾರ್ನರ್‌ನಲ್ಲಿ ಆಕರ್ಷಕವಾಗಿ ಜೋಡಿಸಿಡುವಲ್ಲಿ ಉಳಿದ ಸಹೋದ್ಯೋಗಿಗಳು ಸಕ್ರಿಯವಾಗಿ ಪಾಲ್ಗೊಂಡರು.

ಪುಸ್ತಕಗಳನ್ನು ತರಗತಿಗೆ ಕೊಂಡೊಯ್ಯಲು, ವಿರಾಮದ ವೇಳೆಯಲ್ಲಿ ಓದಲು ಮತ್ತು ಮನೆಗೂ ತೆಗೆದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಮುಕ್ತ ಅನುಮತಿ ನೀಡಲಾಯಿತು. ಶಿಕ್ಷಕರು ವಿದ್ಯಾರ್ಥಿಗಳಿಂದ ಪುಸ್ತಕದ ಪೂರ್ಣ ಸಾರಾಂಶವನ್ನು ಬರೆಯಬೇಕೆಂದು ನಿರೀಕ್ಷಿಸುವುದಿಲ್ಲ; ಬದಲಾಗಿ "ನೀನು ಏನು ಓದಿದೆ ಮತ್ತು ನಿನಗೆ ಅದರಲ್ಲಿ ಏನು ಇಷ್ಟವಾಯಿತು?" ಎಂದು ಸಹಜವಾಗಿ ಕೇಳುತ್ತಾರೆ. ಇದು ವಿದ್ಯಾರ್ಥಿಗಳ ಮನಸ್ಸಿನಲ್ಲಿದ್ದ ಹಿಂಜರಿಕೆಯನ್ನು ಕಡಿಮೆ ಮಾಡಿತು. ಇದರಿಂದ ಅವರ ಮೌಖಿಕ ಅಭಿವ್ಯಕ್ತಿ ಕೌಶಲ ಸುಧಾರಿಸಿತಲ್ಲದೆ, ಕ್ರಮೇಣ ಸ್ವಯಂ-ಓದಿನಲ್ಲಿ ಆಸಕ್ತಿ ಮೂಡಿ ಅವರ ಆತ್ಮವಿಶ್ವಾಸವೂ ಹೆಚ್ಚಾಯಿತು. ಇಂತಹ ಸಕಾರಾತ್ಮಕ ಶೈಕ್ಷಣಿಕ ವಾತಾವರಣದಿಂದಾಗಿ, ಇಂದು ವಿದ್ಯಾರ್ಥಿಗಳು ತಾವೇ ಅಲ್ಲಿ ಕುಳಿತು ಆಸಕ್ತಿಯಿಂದ ಓದುತ್ತಾರೆ.

**ಮನೀಶ್: ವಿದ್ಯಾರ್ಥಿಗಳು ಪುಸ್ತಕಗಳನ್ನು ಹರಿದು ಹಾಕುತ್ತಾರೆ ಅಥವಾ ಹಾಳು ಮಾಡುತ್ತಾರೆ ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಈ ಸಮಸ್ಯೆಯನ್ನು ನೀವು ಹೇಗೆ ಪರಿಹರಿಸಿದಿರಿ?**

**ಕವಿತಾ:** ನಾವು ದಿನನಿತ್ಯದ ಪ್ರಾರ್ಥನಾ ಸಭೆಯಲ್ಲಿ ಪುಸ್ತಕಗಳ ಮಹತ್ವ ಮತ್ತು ಅವುಗಳನ್ನು ಜೋಪಾನವಾಗಿ ಬಳಸುವ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ಚರ್ಚಿಸಿದೆವು. ಪುಸ್ತಕಗಳು ಜ್ಞಾನದ ಭಂಡಾರವಾಗಿದ್ದು, ನಾವು ಅವುಗಳನ್ನು ಮುಟ್ಟುವ ಮುನ್ನ ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು, ಪುಟಗಳನ್ನು ತಿರುಗಿಸಲು ಉಗುಳು ಹಚ್ಚಬಾರದು, ಪರಸ್ಪರ ಕಸಿದುಕೊಳ್ಳಬಾರದು, ಪುಟಗಳನ್ನು ಮಡಚಬಾರದು ಅಥವಾ ಹರಿಯಬಾರದು ಹಾಗೂ ಓದಿದ ನಂತರ ಅವುಗಳನ್ನು ನಿಗದಿತ ಸ್ಥಳದಲ್ಲೇ ಜೋಡಿಸಬೇಕು ಎಂದು ಹೇಳಿದೆವು.

ಇದರ ಜೊತೆಗೆ, ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸುವ ಜವಾಬ್ದಾರಿಯನ್ನೇ ವಿದ್ಯಾರ್ಥಿಗಳಿಗೆ ನೀಡಿದೆವು. ಉದಾಹರಣೆಗೆ- ಪುಸ್ತಕಗಳನ್ನು ನಿಯತವಾಗಿ ಲೆಕ್ಕವಿಟ್ಟು ಜಮೆ ಮಾಡುವುದು, ಎಣಿಸುವುದು ಹಾಗೂ ಹಾಳಾದ ಅಥವಾ ಹರಿದ ಪುಸ್ತಕಗಳಿಗೆ ಅಂಟು ಅಥವಾ ಗಮ್-ಟೇಪ್ ಹಚ್ಚಿ ಸರಿಪಡಿಸುವುದು ಮುಂತಾದ ಜವಾಬ್ದಾರಿಗಳನ್ನು ಮಕ್ಕಳಿಗೆ ವಹಿಸಲಾಯಿತು. ವಾರಕ್ಕೊಮ್ಮೆ 'ಪುಸ್ತಕಗಳ ಜೀರ್ಣೋದ್ಧಾರ'ಕ್ಕೆ ಸಂಬಂಧಿಸಿದ ವಿಶೇಷ ಚಟುವಟಿಕೆಗಳನ್ನೂ ಶಾಲೆಯಲ್ಲಿ ಸೇರಿಸಲಾಯಿತು.

**ಮನೀಶ್: ವಿದ್ಯಾರ್ಥಿಗಳಲ್ಲಿ ಓದುವ-ಬರೆಯುವ ಅಭ್ಯಾಸವನ್ನು ಬೆಳೆಸಲು ಯಾವ ಪ್ರಯತ್ನಗಳನ್ನು ಮಾಡಿದಿರಿ?**

**ಕವಿತಾ:** ಓದುವ ಮತ್ತು ಬರೆಯುವ ಅಭ್ಯಾಸವನ್ನು ಬೆಳೆಸುವಲ್ಲಿ ಗ್ರಂಥಾಲಯ ಮತ್ತು ರೀಡಿಂಗ್ ಕಾರ್ನರ್ ಪ್ರಮುಖ ಪಾತ್ರ ವಹಿಸುತ್ತವೆ. ಇದಕ್ಕಾಗಿ ಶಾಲೆಯಲ್ಲಿ ನಾಲ್ಕು ಅಂಶಗಳನ್ನು ಖಾತ್ರಿಪಡಿಸಲಾಯಿತು. ಮೊದಲನೆಯದಾಗಿ, ಉತ್ತಮ ಪುಸ್ತಕಗಳು ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಲಾಯಿತು. ಎರಡನೆಯದಾಗಿ, ಸ್ವಯಂ ಅಧ್ಯಯನಕ್ಕಾಗಿ ತಮ್ಮ ಆಸಕ್ತಿ ಮತ್ತು ಇಷ್ಟಕ್ಕೆ ಅನುಗುಣವಾಗಿ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಲಾಯಿತು. ಮೂರನೆಯದಾಗಿ, ವಿದ್ಯಾರ್ಥಿಗಳು ತಾವು ಓದಿದ್ದನ್ನು ತಮ್ಮ ಗೆಳೆಯ-ಗೆಳತಿಯರೊಂದಿಗೆ ಹಂಚಿಕೊಳ್ಳಲು ವೇದಿಕೆಗಳನ್ನು ಒದಗಿಸಲಾಯಿತು. ಮತ್ತು ನಾಲ್ಕನೆಯದಾಗಿ, ಓದಿದ ಆ ಪುಸ್ತಕದಿಂದ ಅವರು ಏನನ್ನು ಕಲಿತರು ಅಥವಾ ಅರ್ಥಮಾಡಿಕೊಂಡರು ಎಂಬುದನ್ನು ತಮ್ಮದೇ ಆದ ಭಾಷೆ ಮತ್ತು ಪದಗಳಲ್ಲಿ ಮೌಖಿಕವಾಗಿ ಹಾಗೂ ಲಿಖಿತವಾಗಿ ವ್ಯಕ್ತಪಡಿಸಲು ಅವಕಾಶ ನೀಡಲಾಯಿತು.

**ಮನೀಶ್: ರೀಡಿಂಗ್ ಕಾರ್ನರ್ ರಚಿಸುವ ಪ್ರಕ್ರಿಯೆ ಹೇಗಿತ್ತು? ಅದರ ತಯಾರಿಗಾಗಿ ನೀವು ಏನೇನು ಮಾಡಿದಿರಿ?**

**ಕವಿತಾ:** ಒಬ್ಬ ಶಿಕ್ಷಕಿಗೆ ಗ್ರಂಥಾಲಯದ ಉಸ್ತುವಾರಿ ವಹಿಸಲಾಯಿತು. ವಿದ್ಯಾರ್ಥಿಗಳ ವಯಸ್ಸು, ಭಾಷಾ ಮಟ್ಟ ಮತ್ತು ಆಸಕ್ತಿಯ ಆಧಾರದ ಮೇಲೆ ಪುಸ್ತಕಗಳನ್ನು ವರ್ಗೀಕರಿಸಲಾಯಿತು. 1 ಮತ್ತು 2, 3ರಿಂದ 5 ಹಾಗೂ 6ರಿಂದ 8ನೇ ತರಗತಿಗಳಿಗಾಗಿ ಬೇರೆ ಬೇರೆ ಪುಸ್ತಕಗಳನ್ನು ನಿಗದಿಪಡಿಸಲಾಯಿತು. ಪುಸ್ತಕಗಳನ್ನು ಆಯ್ಕೆ ಮಾಡುವಾಗ ಸರಳವಾದ ಭಾಷೆ, ಆಕರ್ಷಕ ಚಿತ್ರಗಳು, ರೋಚಕ ಕಥಾವಸ್ತು ಹಾಗೂ ಸ್ಥಳೀಯ ಮತ್ತು ವಿದ್ಯಾರ್ಥಿಗಳ ದೈನಂದಿನ ಜೀವನಕ್ಕೆ ಹತ್ತಿರವಿರುವ ವಿಷಯಗಳಿಗೆ ಆದ್ಯತೆ ನೀಡಲಾಯಿತು. ಶಿಕ್ಷಕರೆಲ್ಲರೂ ಸಾಮೂಹಿಕವಾಗಿ ಓದುವ ಮೂಲಕ ಸೂಕ್ತ ಪುಸ್ತಕಗಳನ್ನು ಆಯ್ಕೆ ಮಾಡಿದರು. ಅವುಗಳಲ್ಲಿ ಕೆಲವು ಉತ್ತಮ ಪುಸ್ತಕಗಳೆಂದರೆ: ಮಹಾಗಿರಿ, ನನ್ನೆ-ಮುನ್ನೆ ಗೀತ್, ತೀನ್ ಪೂಂಛ್ ವಾಲಾ ಚೂಹಾ, ಬಿಲ್ಲಿ ಕೆ ಗಲೆ ಮೇಂ ಘಂಟಿ ಕೌನ್ ಬಾಂಧೇಗಾ, ಬಸ್ ಕಿ ಸೈರ್ ಇತ್ಯಾದಿ. ದಿನದ ಎರಡನೇ ಅವಧಿಯನ್ನು 'ರೀಡಿಂಗ್ ಕಾರ್ನರ್ ಬೆಲ್' ಎಂದು ನಿಗದಿಪಡಿಸಲಾಯಿತು. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಪುಸ್ತಕಗಳನ್ನು ಓದಿದ ನಂತರ, ಅವರೊಂದಿಗೆ ಆ ಪುಸ್ತಕಗಳ ಕುರಿತು ಮಾತುಕತೆ ಮತ್ತು ವಿವಿಧ ವಿಷಯಾಧಾರಿತ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

**ಮನೀಶ್: ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು 'ರೀಡಿಂಗ್ ಕಾರ್ನರ್'ನೊಂದಿಗೆ ಬೆಸೆಯಲು ನೀವು ಯಾವ ತಂತ್ರಗಳನ್ನು ಅಳವಡಿಸಿಕೊಂಡಿರಿ?**

**ಕವಿತಾ:** ಶಿಕ್ಷಕರ ಸ್ಪಷ್ಟ ತಿಳಿವಳಿಕೆ ಮತ್ತು ಶಿಕ್ಷಣ ಇಲಾಖೆಯು ನಿರ್ದೇಶಿಸಿದ '*ಪ್ರಖರ್ ರಾಜಸ್ಥಾನ ಅಭಿಯಾನ*'ವು ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ರೀಡಿಂಗ್ ಕಾರ್ನರ್‌ನೊಂದಿಗೆ ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸಿತು. ವಿದ್ಯಾರ್ಥಿಗಳನ್ನು ಅವರ ಓದುವ ಸಾಮರ್ಥ್ಯಕ್ಕೆ ಅನುಗುಣವಾಗಿ – *ಬೀಜ್* (ಬೀಜ), *ಅಂಕುರ್* (ಮೊಳಕೆ), *ಪುಷ್ಪನ್* (ಹೂವು) ಮತ್ತು *ಫಲನ್* (ಹಣ್ಣು) ಎಂಬ ನಾಲ್ಕು ಉಪಗುಂಪುಗಳಾಗಿ ವಿಭಾಗಿಸಲಾಯಿತು. ಕೇವಲ ಚಿತ್ರಗಳಿರುವ ಪುಸ್ತಕಗಳು, ಸಣ್ಣ ಕಥೆಗಳು, ಕವಿತೆಗಳು ಮತ್ತು ಸರಳ ಭಾಷೆಯ ಪುಸ್ತಕಗಳನ್ನು ಪ್ರತಿಯೊಂದು ಮಟ್ಟದ ವಿದ್ಯಾರ್ಥಿಗಳಿಗಾಗಿ ಬೇರೆ ಬೇರೆ ಗುಂಪುಗಳಲ್ಲಿ ಇರಿಸಲಾಯಿತು. ಈ ವಿಭಾಗಗಳಿಂದ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಯಿತು. ಆರಂಭದಲ್ಲಿ, ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಕುಳಿತು ಪುಸ್ತಕಗಳನ್ನು ವೀಕ್ಷಿಸಿದರು, ಚಿತ್ರಗಳ ಕುರಿತು ಸಂವಾದ ನಡೆಸಿದರು ಹಾಗೂ ಕಥೆ-ಕವಿತೆಗಳನ್ನು ಗಟ್ಟಿಯಾಗಿ ಓದಿದರು. ಇದರಿಂದಾಗಿ ಕ್ರಮೇಣ ವಿದ್ಯಾರ್ಥಿಗಳು ಸ್ವತಂತ್ರವಾಗಿ ಓದಲು ಪ್ರೇರಣೆ ಪಡೆದರು.

ವಿವಿಧ ರೀತಿಯ ಪುಸ್ತಕಗಳೊಂದಿಗೆ ವಿದ್ಯಾರ್ಥಿಗಳ ಜೊತೆ ನಿರಂತರವಾಗಿ ಕೆಲಸ ಮಾಡಿದ್ದರಿಂದ, ಸ್ವಾಭಾವಿಕವಾಗಿಯೇ ಶಿಕ್ಷಕರಲ್ಲೂ ರೀಡಿಂಗ್ ಕಾರ್ನರ್ ಪುಸ್ತಕಗಳ ಕುರಿತು ಆಸಕ್ತಿ ಹೆಚ್ಚಾಯಿತು. ಈ ಪ್ರಕ್ರಿಯೆಯಿಂದ ಶಿಕ್ಷಕರು ಸಹ *ದಿವಾಸಪ್ನ*, *ಬಚ್ಚೆ ಕಿ ಭಾಷಾ ಔರ್ ಅಧ್ಯಾಪಕ್*, *ಬಚ್ಚೋಂ ಕೆ ಲಿಯೇ ಖೇಲ್ ಕ್ರಿಯಾಯೇಂ*, *ಟೊಟೊ-ಚಾನ್: ದಿ ಲಿಟಲ್ ಗರ್ಲ್ ಅಟ್ ದಿ ವಿಂಡೋ* ಅಂತಹ ಪುಸ್ತಕಗಳ ಜೊತೆಗೆ, ಮಕ್ಕಳು ವಿಶೇಷವಾಗಿ ಇಷ್ಟಪಡುವಂತಹ ಇನ್ನು ಹಲವು ಪುಸ್ತಕಗಳನ್ನು ಆಯ್ಕೆ ಮಾಡಿ ರೀಡಿಂಗ್ ಕಾರ್ನರ್‌ನಲ್ಲಿ ಸೇರಿಸಿದರು.

**ಮನೀಶ್: ಓದುವ-ಬರೆಯುವ ಅಭ್ಯಾಸವನ್ನು ಬೆಳೆಸಲು ಮಾಡಿದ ಪ್ರಯತ್ನಗಳಿಂದಾಗಿ ಶಿಕ್ಷಕರ ಬೋಧನೆಯಲ್ಲಿ ಮತ್ತು ವಿದ್ಯಾರ್ಥಿಗಳ ಕಲಿಕೆಯಲ್ಲಿ ಯಾವ ರೀತಿಯ ಬದಲಾವಣೆಗಳು ಕಂಡುಬಂದಿವೆ?**

**ಕವಿತಾ:** ಈ ಬದಲಾವಣೆಗಾಗಿ ಪುಸ್ತಕಗಳ ಆಯ್ಕೆಯ ಬಗ್ಗೆಯೂ ವಿಶೇಷ ಗಮನ ನೀಡಲಾಯಿತು. ಭಾಷಾ ಕೌಶಲದಲ್ಲಿ ಸುಧಾರಣೆ ತರಲು ಕಥೆ ಮತ್ತು ಕವಿತೆಗಳನ್ನು ಓದಿದ ನಂತರ, ಚಿಕ್ಕ ಚೊಕ್ಕ ಸಂವಾದಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆವು. ಕಥೆಯಲ್ಲಿ ನಿಮಗೆ ಏನು ಇಷ್ಟವಾಯಿತು, ಯಾವ ಪಾತ್ರ ಇಷ್ಟವಾಯಿತು ಮತ್ತು ಏಕೆ ಎಂದು ವಿದ್ಯಾರ್ಥಿಗಳನ್ನು ಕೇಳಿದೆವು. ಇದಕ್ಕೆ ಉತ್ತರವಾಗಿ ವಿದ್ಯಾರ್ಥಿಗಳು ಮುಕ್ತವಾಗಿ ಮಾತನಾಡಲು ಶುರು ಮಾಡಿದರು. ಕ್ರಮೇಣ ಇದರಿಂದ ಅವರ ಅಭಿವ್ಯಕ್ತಿ ಹೆಚ್ಚು ಸ್ಪಷ್ಟವಾಯಿತಲ್ಲದೇ, ಅವರ ಆತ್ಮವಿಶ್ವಾಸವೂ ಹೆಚ್ಚಾಯಿತು.

ಕಲ್ಪನೆ ಮತ್ತು ಸೃಜನಶೀಲತೆಯನ್ನು ಬೆಳೆಸಲು ಸರಳ ಚಟುವಟಿಕೆಗಳನ್ನು ಮಾಡಲಾಯಿತು. ಉದಾಹರಣೆಗೆ: ಕಥೆಗೆ ಹೊಸ ಅಂತ್ಯವನ್ನು ಸೃಷ್ಟಿಸುವುದು ಅಥವಾ ಹೊಸ ಶೀರ್ಷಿಕೆಯ ಬಗ್ಗೆ ಯೋಚಿಸುವುದು, ಓದಿದ ವಿಷಯದ ಕುರಿತು ಚಿತ್ರ ಬಿಡಿಸುವುದು, ಕಥೆಯಲ್ಲಿನ ಯಾವುದಾದರೂ ಒಂದು ಪಾತ್ರದಂತೆ ನಟಿಸಿ ಮಾತನಾಡುವುದು ಇತ್ಯಾದಿ. ಕೆಲವು ವಿದ್ಯಾರ್ಥಿಗಳಂತೂ ತಾವು ಓದಿದ ಕಥೆಗಳಿಂದ ಪ್ರೇರಿತರಾಗಿ ತಾವೇ ಸಣ್ಣ ಕವಿತೆಗಳನ್ನು ಮತ್ತು ಚಿಕ್ಕ ಕಥೆಗಳನ್ನು ಬರೆಯಲು ಹಾಗೂ ಬರೆದದ್ದನ್ನು ಓದಲು ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಅವರು ಕ್ರಮೇಣ ಸ್ವತಃ ಪುಸ್ತಕಗಳನ್ನು ಕೈಗೆತ್ತಿಕೊಳ್ಳಲು ಶುರು ಮಾಡಿದರು, ಅವುಗಳನ್ನು ಮನೆಗೆ ತೆಗೆದುಕೊಂಡು ಹೋಗುವ ಇಚ್ಛೆ ವ್ಯಕ್ತಪಡಿಸಿದರು ಮತ್ತು ಬಿಡುವಿನ ವೇಳೆಯಲ್ಲೂ ಓದಲು ತೊಡಗಿದರು. ಅವರಲ್ಲಿ ಸ್ವಯಂ ಅಧ್ಯಯನ, ಓದುವ ಕೌಶಲ, ಭಾಷಾ ಬಳಕೆ, ನಡವಳಿಕೆ ಮತ್ತು ಆತ್ಮವಿಶ್ವಾಸದಲ್ಲಿ ಪ್ರಗತಿ ಕಂಡುಬಂದಿತು. ಅನೇಕ ವಿದ್ಯಾರ್ಥಿಗಳು ತಮಗೆ ಇಂದು ಓದಲು ಸಮಯ ಬೇಕು ಎಂದು ತಾವಾಗಿಯೇ ಶಿಕ್ಷಕರಿಗೆ ನೆನಪಿಸುತ್ತಾರೆ.

ಇಷ್ಟೇ ಅಲ್ಲ, ಮಕ್ಕಳ ಹಾಗೂ ವಯಸ್ಕರ ಸಾಹಿತ್ಯವನ್ನು ಮತ್ತು ಶೈಕ್ಷಣಿಕವಾಗಿ ಉಪಯುಕ್ತ ಪುಸ್ತಕಗಳನ್ನು ನಿರಂತರವಾಗಿ ಓದುವ ಅಭ್ಯಾಸದಿಂದಾಗಿ, ರೀಡಿಂಗ್ ಕಾರ್ನರ್‌ನ ಸಂಗ್ರಹಕ್ಕೆ ಉತ್ತಮ ಪುಸ್ತಕಗಳನ್ನು ಆಯ್ಕೆ ಮಾಡುವ ಮತ್ತು ಬಳಸುವ ಶಿಕ್ಷಕರ ದೃಷ್ಟಿಕೋನವೂ ಸುಧಾರಿಸಿದೆ. ವಿಷಯಗಳನ್ನು ಕಲಿಸುವ ದೃಷ್ಟಿಕೋನದಲ್ಲಿ, ವಿದ್ಯಾರ್ಥಿಗಳೊಂದಿಗೆ ವರ್ತಿಸುವ ರೀತಿಯಲ್ಲಿ, ಅವರೊಂದಿಗೆ ಮಾತುಕತೆ-ಚರ್ಚೆ ನಡೆಸುವ ಹಾಗೂ ಪ್ರಶ್ನೆಗಳನ್ನು ಕೇಳುವ ಕಲೆಯಲ್ಲಿ ಶಿಕ್ಷಕರಲ್ಲಿ ಗಮನಾರ್ಹ ಸಕಾರಾತ್ಮಕ ಬದಲಾವಣೆಗಳಾಗಿವೆ.

**ಮನೀಶ್: ಈ ಪ್ರಯತ್ನಗಳಲ್ಲಿ ನೀವು ಯಾವ ರೀತಿಯ ಸವಾಲುಗಳನ್ನು ಎದುರಿಸಬೇಕಾಯಿತು?**

**ಕವಿತಾ:** ಆರಂಭದಲ್ಲಿ, ಕೆಲವು ವಿದ್ಯಾರ್ಥಿಗಳು ಪುಸ್ತಕಗಳನ್ನು ಆಯ್ಕೆ ಮಾಡಲು ಹಿಂಜರಿಯುತ್ತಿರುವುದನ್ನು ಗಮನಿಸಿದೆವು; ಕೆಲ ಶಿಕ್ಷಕರು 'ರೀಡಿಂಗ್ ಕಾರ್ನರ್' ಅನ್ನು ಹೆಚ್ಚುವರಿ ಚಟುವಟಿಕೆ ಎಂದು ಭಾವಿಸಿ, ಅದಕ್ಕಾಗಿ ನಿಯಮಿತ ಸಮಯವನ್ನು ನೀಡಲು ಸಾಧ್ಯವಾಗುತ್ತಿರಲಿಲ್ಲ. ಸೀಮಿತ ಸಂಪನ್ಮೂಲಗಳಿಂದಾಗಿ ಸಾಕಷ್ಟು ಸಂಖ್ಯೆಯ ಉತ್ತಮ ಪುಸ್ತಕಗಳ ಲಭ್ಯತೆ ಮತ್ತು ನಿರ್ವಹಣೆಯೂ ಸವಾಲಾಗಿತ್ತು. ಈ ಸವಾಲುಗಳ ಪರಿಹಾರಕ್ಕಾಗಿ ನಾವು ಶಾಲಾ ವೇಳಾಪಟ್ಟಿಯಲ್ಲಿ ನಮ್ಯತೆಯನ್ನು (flexibility)

ತಂದುಕೊಂಡೆವು. ಕೆಲವೊಮ್ಮೆ ಪ್ರಾರ್ಥನೆಯ ನಂತರ, ಕೆಲವೊಮ್ಮೆ ವಿರಾಮದ ಮೊದಲು ಅಥವಾ ತರಗತಿಯ ಕೊನೆಯಲ್ಲಿ 10ರಿಂದ 15 ನಿಮಿಷಗಳ 'ಓದುವ ಸಮಯ'ವನ್ನು ನಿಗದಿಪಡಿಸಿದೆವು. 'ರೀಡಿಂಗ್ ಕಾರ್ನರ್' ಎಂಬುದು ಹೆಚ್ಚುವರಿ ಕೆಲಸವಲ್ಲ, ಬದಲಾಗಿ ಮಕ್ಕಳ ಭಾಷೆ ಮತ್ತು ಗ್ರಹಿಕೆಯ ಬೆಳವಣಿಗೆಗೆ ಅತ್ಯಗತ್ಯವಾದ ಸ್ವಾಭಾವಿಕ ಮಾಧ್ಯಮವಾಗಿದೆ ಎಂಬುದನ್ನು ನಾವು ಶಿಕ್ಷಕರು ಸ್ಪಷ್ಟವಾಗಿ ಅರ್ಥೈಸಿಕೊಂಡೆವು.

**ಮನೀಶ್: ಶಿಕ್ಷಕರು ನಿಮ್ಮ ಪ್ರಯತ್ನಗಳಿಗೆ ಸುಲಭವಾಗಿ ಕೊಡುಗೆ ನೀಡುವಷ್ಟು ಸಕಾರಾತ್ಮಕ ವಾತಾವರಣವನ್ನು ನೀವು ಶಾಲೆಯಲ್ಲಿ ಹೇಗೆ ಸೃಷ್ಟಿಸಿದಿರಿ?**

**ಕವಿತಾ:** ಶಾಲೆಯಲ್ಲಿ ನಂಬಿಕೆ, ಸಂವಾದ ಮತ್ತು ಸಹಯೋಗದ ವಾತಾವರಣವನ್ನು ಹುಟ್ಟುಹಾಕಿದೆವು. ಪ್ರತಿಯೊಂದು ನಿರ್ಧಾರದಲ್ಲೂ ಶಿಕ್ಷಕರು ತಾವೂ ಭಾಗೀದಾರರಾಗಿದ್ದೇವೆ ಎಂಬ ಭಾವನೆ ಮೂಡಿಸುವ ಪ್ರಯತ್ನ ಮಾಡಲಾಯಿತು. ಪ್ರತಿಯೊಂದು ವಿಷಯದ ಬಗ್ಗೆಯೂ ಮುಕ್ತವಾಗಿ ಚರ್ಚಿಸಲು ಆರಂಭಿಸಿದೆವು. 'ರೀಡಿಂಗ್ ಕಾರ್ನರ್' ಅನ್ನು ಇನ್ನೂ ಹೇಗೆ ಉತ್ತಮಗೊಳಿಸಬಹುದು ಎಂದು ಎಲ್ಲಾ ಶಿಕ್ಷಕರ ಅಭಿಪ್ರಾಯವನ್ನು ಕೇಳಲಾಯಿತು. ಪುಸ್ತಕಗಳ ಮಟ್ಟವನ್ನು ನಿಗದಿಪಡಿಸಲು ಒಬ್ಬ ಶಿಕ್ಷಕರು ಸಲಹೆ ನೀಡಿದರೆ, ಮತ್ತೊಬ್ಬ ಶಿಕ್ಷಕರು ದಿನನಿತ್ಯದ ವೇಳಾಪಟ್ಟಿಯಲ್ಲಿ 15 ನಿಮಿಷಗಳ ಓದುವ ಚಟುವಟಿಕೆಯನ್ನು ಸೇರಿಸಲು ಸೂಚಿಸಿದರು. ಜವಾಬ್ದಾರಿಗಳನ್ನೂ ಸಹ ಪರಸ್ಪರ ಸಮ್ಮತಿಯಿಂದ ಹಂಚಿಕೊಳ್ಳಲಾಯಿತು. ಇದರಿಂದ "ಈ ಉಪಕ್ರಮವು ಯಾವುದೇ ಒಬ್ಬ ವ್ಯಕ್ತಿಯದ್ದಲ್ಲ, ಬದಲಾಗಿ ಇಡೀ ತಂಡದ್ದು" ಎಂಬ ಸ್ಪಷ್ಟ ಸಂದೇಶ ಶಿಕ್ಷಕರಿಗೆ ತಲುಪಿತು.

ಯಾವಾಗ ಯೋಜನೆಗಳನ್ನು ಶಿಕ್ಷಕರ ಸಮ್ಮತಿಯೊಂದಿಗೆ ರೂಪಿಸಲಾಯಿತೋ, ಆಗ ಸಹಜವಾಗಿಯೇ ಶಿಕ್ಷಕರಲ್ಲಿ ಜವಾಬ್ದಾರಿ ತೆಗೆದುಕೊಳ್ಳುವುದು ಮತ್ತು ತೊಡಗಿಸಿಕೊಳ್ಳುವಿಕೆಯು ಕಾಣಿಸಿತು. ಶಿಕ್ಷಕರ ಪ್ರಯತ್ನವನ್ನು ಕಾಲಕಾಲಕ್ಕೆ ಪ್ರಶಂಸಿಸಬೇಕು ಎಂದೂ ಸಹ ನಾವು ಯೋಜಿಸಿದೆವು. ಶಿಕ್ಷಕರು ತಮ್ಮ ಸಮಸ್ಯೆಗಳು, ಸವಾಲುಗಳು ಮತ್ತು ಅಗತ್ಯಗಳನ್ನು ಭಯ ಅಥವಾ ಹಿಂಜರಿಕೆಯಿಲ್ಲದೆ ಹಂಚಿಕೊಳ್ಳಲು ಸಾಧ್ಯವಾಗುವಂತಹ, ಸುರಕ್ಷಿತ ಮತ್ತು ವಿಶ್ವಾಸಾರ್ಹ ವಾತಾವರಣವನ್ನು ಸೃಷ್ಟಿಸುವೆಡೆ ನಾನು ವಿಶೇಷ ಗಮನ ಹರಿಸಿದೆ. ಹೀಗಾದಾಗಲೇ ಅವರಲ್ಲಿ ಭರವಸೆ ಬೆಳೆಯುತ್ತದೆ ಮತ್ತು ಮುನ್ನ ನಡೆಯುವ ಪ್ರಯತ್ನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬೆರೆಯುತ್ತಾರೆ.

---



**ಮನೀಶ್ ಕಿಶೋರ್** ಅವರು ರಾಜಸ್ಥಾನದ ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಆರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರು 'ಅಸೋಸಿಯೇಟ್ ಪ್ರೋಗ್ರಾಂ' ಮೂಲಕ ಅಜೀಮ್ ಪ್ರೇಮ್‌ಜಿ ಫೌಂಡೇಷನ್ ಸೇರಿದರು. ಪ್ರಾಥಮಿಕ ಶಾಲಾ ಮಟ್ಟದಲ್ಲಿ, ಅವರು ಹಿಂದಿ ಮತ್ತು ಗಣಿತ ವಿಷಯಗಳಲ್ಲಿ ಕೆಲಸ ಮಾಡುತ್ತಾರೆ. ಹಾಗೆಯೇ, ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಸಮಾಜ ವಿಜ್ಞಾನ ವಿಷಯದಲ್ಲೂ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** manish.kishor@azimpremjifoundation.org

ಅನುವಾದ: ಆಶಾ ಮಹೇಶ್ವರ ಸಿಂಗ್ | ಪರಿಶೀಲನೆ: ಅನುರೂಪ ರವೀಂದ್ರ



# ಪೇಡ್ ಕ ಪತಾ

**ವಿಮರ್ಶೆ: ಪ್ರಭಾತ್**

*"ಪೇಡ್ ಕಾ ಪತಾ"* ಪುಸ್ತಕದ ಲೇಖಕರಾದ ಸುಶೀಲ್ ಶುಕ್ಲಾ ಅವರು "ಭೂಮಿಯ ಮೇಲಿನ ಒಂದು ಮರವೇ ನನ್ನ ವಿಳಾಸ" ಎಂದು ಬರೆದಾಗ, ಆ ಮರದ ವಿಳಾಸವೇ ಭೂಮಿಯ ಮೇಲಿನ ಮಾನವರಾದ ನಮ್ಮ ವಿಳಾಸವೂ ಆಗಿದೆ ಎಂದೇ ಅರ್ಥ. ಏಕೆಂದರೆ, ಭೂಮಿಯ ಮೇಲಿಂದ ಮರದ ವಿಳಾಸ ಕಣ್ಮರೆಯಾದ ದಿನ, ಮಾನವರಾದ ನಮ್ಮ ವಿಳಾಸವೂ ಅಳಿಸಿಹೋಗುತ್ತದೆ.




ಲೇಖಕರು: ಸುಶೀಲ್ ಶುಕ್ಲಾ

ಚಿತ್ರಣಗಳು: ತಾಪೋಶಿ ಘೋಷಾಲ್

ಪುಟ ಸಂಖ್ಯೆ: 26

ಭಾಷೆ: ಹಿಂದಿ

ಪ್ರಕಾಶಕರು: ಜುಗನೂ ಪ್ರಕಾಶನ

ಕೇವಲ ಇಪ್ಪತ್ತಾರು ಪುಟಗಳ ಈ ಸಣ್ಣ ಪುಸ್ತಕದಲ್ಲಿ ಹತ್ತೊಂಬತ್ತು ಪುಟ್ಟ ಗದ್ಯಗಳಿವೆ. ಇಡೀ ಪುಸ್ತಕವನ್ನು ಒಂದಿಪ್ಪತ್ತು ಉಸಿರಿನಲ್ಲೇ ಓದಿ ಮುಗಿಸಿಬಿಡಬಹುದು! ಈ ಗದ್ಯದ ತುಣುಕುಗಳ ಮೇಲೆ ದಿನಾಂಕಗಳಷ್ಟೇ ಇದ್ದಿದ್ದರೆ, ಇದನ್ನು ಲೇಖಕರ 'ದಿನಚರಿ' ಎಂದೇ ಕರೆಯಬಹುದಿತ್ತು; ಏಕೆಂದರೆ ಇವುಗಳಲ್ಲಿ ಅಷ್ಟೊಂದು ಆಳವಾದ ಆತ್ಮಸಂವಾದ ಮತ್ತು ಆತ್ಮೀಯತೆಯಿದೆ. ಒಬ್ಬ ವ್ಯಕ್ತಿ ತನ್ನ ಸುತ್ತಮುತ್ತಲಿನ ಪರಿಸರವನ್ನು ಹೇಗೆ ನೋಡುತ್ತಾನೆ, ಹೇಗೆ ಅನುಭವಿಸುತ್ತಾನೆ ಮತ್ತು ಹಾಗೆ ಅನುಭವಿಸುತ್ತಿರುವಾಗ ಏನೆಲ್ಲಾ ಯೋಚಿಸುತ್ತಾನೆ ಎಂಬುದನ್ನೇ ಇಲ್ಲಿ ವಿವರಿಸಲಾಗಿದೆ. ಈ ಗದ್ಯಗಳನ್ನು ಓದುತ್ತಿದ್ದಂತೆ, "ಅಯ್ಯೋ! ನಾನೂ ಹೀಗೆಯೇ ಬರೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಎಂಬ ಆಸೆ ಓದುಗರ ಮನದಲ್ಲಿ ಮೂಡಬಹುದು.

ಪುಸ್ತಕದಲ್ಲಿರುವ ಪ್ರತಿಯೊಂದು ಗದ್ಯಕ್ಕೂ ಒಂದೊಂದು ವಿಶಿಷ್ಟ ಶೀರ್ಷಿಕೆಯಿದೆ—*ವೋಹ್ ತೀನ್ ಪೇಡ್, ಬಾದಲೊಂ ಸೆ ಪಾನಿ ಮಿಲಾ ತೋ..., ನೇಮ್ ಪ್ಲೇಟ್, ಕರಾಚಿ ಕಾ ಚೈಸಾ, ಗಾಯ್ ಕಿ ಡೈರಿ, ಏಕ್ ಭೂತ್ ಕಿ ಡೈರಿ, ಅಕೇಲಾ ಜೂತಾ, ಮೇಯ್ ಪ್ರಿಥ್ವಿ ಕೋ ಗಲೇ ಲಗಾನಾ ಚಾಹ್ತಾ ಹ್ಞೂಂ...* ಹೀಗೆ. ಈ ಶೀರ್ಷಿಕೆಗಳು ಎಷ್ಟೊಂದು ಆಕರ್ಷಕವಾಗಿವೆಯೆಂದರೆ, ಶಿಕ್ಷಕರು ಬಯಸಿದರೆ ತಮ್ಮ ತರಗತಿಯ ಪ್ರತಿ ಮಗುವಿಗೂ ಒಂದೊಂದು ಶೀರ್ಷಿಕೆಯ ಚೀಟಿಯನ್ನು ನೀಡಬಹುದು. ಅದನ್ನು ಓದಿ, ತಮ್ಮ ಮನಸ್ಸಿಗೆ ಅನಿಸಿದ್ದನ್ನು ಒಂದು ಅಥವಾ ಎರಡು ಪ್ಯಾರಾಗಳಲ್ಲಿ ಬರೆಯಲು ಹೇಳಬಹುದು. ನಂತರ, ಪ್ರತಿ ಮಗು ಬರೆದದ್ದನ್ನು ಇಡೀ ತರಗತಿಯೇ ಕೇಳಬಹುದು. ಅದಾದ ಮೇಲೆ, ಅದೇ ವಿಷಯದ ಬಗ್ಗೆ ಲೇಖಕರು ಸ್ವತಃ ಏನು ಬರೆದಿದ್ದಾರೆ ಎಂಬುದನ್ನು ಓದಿ ನೋಡಬಹುದು. ಹೀಗೆ ಮಾಡುವುದರಿಂದ ತರಗತಿಯ ಕಲಿಕೆಯಲ್ಲಿ ಅದ್ಭುತಗಳನ್ನೇ ಸೃಷ್ಟಿಸಬಹುದು!

ಇವು ಪ್ರಕೃತಿಯನ್ನು ನೋಡಿ ವಿಸ್ಮಯಗೊಂಡ ವ್ಯಕ್ತಿಯೊಬ್ಬರು ಬರೆದ ಗದ್ಯದ ಸುಂದರ ತುಣುಕುಗಳು. ಇವುಗಳನ್ನು ಓದುವಾಗ, ಸುಶೀಲ್ ಶುಕ್ಲಾ ಅವರು ಅಚ್ಚರಿಗೊಳ್ಳುತ್ತಾ ಗದ್ಯ ಮತ್ತು ಪದ್ಯಗಳ ನಡುವಿನ ಗೆರೆಯನ್ನು ಅಳಿಸಿಹಾಕುವಂತಹ ಅಪರೂಪದ ಭಾಷೆಯೊಂದನ್ನು ಸೃಷ್ಟಿಸಿರುವುದು ಎದ್ದು ಕಾಣುತ್ತದೆ.

"ಆ ಪೀಠೋಪಕರಣಗಳ ದೊಡ್ಡ ಅಂಗಡಿಯಿದ್ದ ಜಾಗದಲ್ಲೇ ಮೂರು ಮರಗಳಿದ್ದವು; ಎರಡು ಹುಣಸೆ ಮತ್ತು ಒಂದು ಬೇವು." ಒಂದು ದಿನ ಅವರು ಈ ನಾಲ್ಕು ಅಂತಸ್ತಿನ ಅಂಗಡಿಯ ಎರಡನೇ ಅಂತಸ್ತಿಗೆ ಹೋಗುತ್ತಾರೆ – ಹುಣಸೆ ಮರವನ್ನು ಹತ್ತಿದಂತೆ. ಆ ಅಂಗಡಿಯಿಂದ ಅವರಿಗೆ ಈ ಯೋಚನೆ ಬರುತ್ತದೆ: "ನಾನು ಸೂರ್ಯನಿಗೆ ಹಸಿರು ಬಣ್ಣ ಬಳಿದರೆ ಶಿಕ್ಷಕರು ನನ್ನನ್ನು ಗದರುತ್ತಾರೆ. ಆದರೆ ಯಾರಾದರೂ ಮರದಿಂದ ಫರ್ನಿಚರ್ ಅಂಗಡಿಯನ್ನೇ ಮಾಡಿದರೆ ಅವರನ್ನು ಯಾರೂ ಗದರುವುದಿಲ್ಲವಲ್ಲ! ಎಷ್ಟು ವಿಚಿತ್ರ..."

ಆ ಪೀಠೋಪಕರಣಗಳ ಅಂಗಡಿಯು ಕಳೆದುಹೋದ ಆ ಮೂರು ಮರಗಳ ವಿಳಾಸ. ಇಂದು ಕಾಡುಗಳನ್ನು ನಾಶಪಡಿಸಲಾಗುತ್ತಿದೆ, ಅಂದರೆ ಆ ಕಾಡುಗಳನ್ನೇ ನಂಬಿ ಬದುಕುತ್ತಿರುವ ಬುಡಕಟ್ಟು ಜನಾಂಗದವರನ್ನೂ ಸಹ ಭೂಮಿಯಿಂದ ಕಣ್ಮರೆ ಮಾಡಲಾಗುತ್ತಿದೆ ಎಂದರ್ಥ. ಒಂದೆಡೆ, ಎಲ್ಲರಿಗೂ ಬದುಕಲು ಸಮಾನ ಹಕ್ಕಿರುವ ಸಮಾನತೆಯ ಸಮಾಜವನ್ನು ಕಟ್ಟುವುದು ನಮ್ಮ ಕನಸಾಗಿದೆ; ಆದರೆ ಮತ್ತೊಂದೆಡೆ, ಕೆಲವರ ದುರಾಸೆಯ ಹೊಟ್ಟೆ ಎಂದಿಗೂ ತುಂಬುವುದೇ ಇಲ್ಲ. ಅದಕ್ಕಾಗಿ ಮರ, ಕಾಡು ಹಾಗೂ ಕಡೆಗೆ ಮನುಷ್ಯರನ್ನೇ ನಾಶಮಾಡಲು ಅವರು ಹಿಂಜರಿಯುವುದಿಲ್ಲ.

*'ಕರಾಚಿಯ ಚೈಸಾ, ಸೇರ್ ಮತ್ತು ಅವನ ಆಳು, ನೇಮ್ ಪ್ಲೇಟ್* ಮುಂತಾದ ಗದ್ಯಗಳು ಹುಟ್ಟುಹಾಕುವ ಆಳವಾದ ಪ್ರಶ್ನೆಗಳ ಕುರಿತು ತರಗತಿಯಲ್ಲಿ ವಿಚಾರ-ವಿಮರ್ಶೆ ನಡೆಸಬಹುದು. ಎರಡು ದೇಶಗಳ ನಡುವೆ ಇರಬೇಕಾದ ಮಾನವೀಯ ಸಂಬಂಧಗಳು, ಅಸಮಾನತೆ ಹಾಗೂ ವಲಸೆಯ ದುರಂತಗಳಂತಹ ಜ್ವಲಂತ ಸಮಸ್ಯೆಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸಬಹುದು.

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸುಶೀಲ್ ಶುಕ್ಲಾ ಅವರು ಕಲ್ಪನಾಲೋಕದ ಮಾಂತ್ರಿಕರಿದ್ದಂತೆ. ಅವರ ಈ ಕಲ್ಪನಾಶೀಲತೆಯ ಆಕರ್ಷಣೆಯಿಂದ ಭಾಷೆಯಾಗಲಿ ಅಥವಾ ಬದುಕಾಗಲಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಭಾಷೆಯು ಅವರಿಗೆ ಎಷ್ಟು ಕೊಡುತ್ತದೆಯೋ, ಅದಕ್ಕೆ ತಮ್ಮ ಸೃಜನಾತ್ಮಕ ಕಲ್ಪನೆಯ ಮೆರುಗು ನೀಡಿ, ಅದನ್ನಿನ್ನಷ್ಟು ಸುಂದರಗೊಳಿಸಿ ಭಾಷೆಗೆ ಮರಳಿ ಕೊಡುಗೆಯಾಗಿ ನೀಡುತ್ತಾರೆ. ಬದುಕು ಅವರಿಗೆ ಹೇಗೆ ಕಾಣಿಸುತ್ತದೆಯೋ, ಅದನ್ನು ತಮ್ಮ ಕಲ್ಪನಾಲೋಕದಲ್ಲಿ ಎಷ್ಟು ಸೊಗಸಾಗಿ ಅಭಿವ್ಯಕ್ತಗೊಳಿಸುತ್ತಾರೆಂದರೆ—ಬದುಕು ತನ್ನನ್ನು ತಾನು ಮತ್ತೊಮ್ಮೆ ನಿಂತು ನೋಡಿಕೊಳ್ಳುವಷ್ಟು ಮಂತ್ರಮುಗ್ಧವಾಗಿಬಿಡುತ್ತದೆ!

"ಮರದ ಮೇಲೆ ಹೂವು ಅರಳಿದಾಗ, ಮರದ ನೆರಳೂ ಕೂಡ ಹೂಬಿಡುತ್ತದೆ. ಮರದಲ್ಲಿ ಹಣ್ಣು ಬಿಟ್ಟಾಗ, ಅದರ ನೆರಳು ಕೂಡ ಹಣ್ಣು ಬಿಡುತ್ತದೆ. ಶರತ್ಕಾಲದಲ್ಲಿ ಎಲೆಗಳು ಉದುರಿದಾಗ, ಅವುಗಳ ನೆರಳುಗಳೂ ಅವುಗಳ ಜೊತೆಯಲ್ಲೇ ನೆಲಕ್ಕೆ ಬೀಳುತ್ತವೆ."

ಸುಶೀಲ್ ಶುಕ್ಲಾ ಅವರು ಕಲ್ಪನೆಗಳ ಆಳಕ್ಕಿಳಿದು ಎಷ್ಟು ಸೂಕ್ಷ್ಮವಾಗಿ ಯೋಚಿಸುತ್ತಾರೆಂದರೆ, ಅವರ ಸಾಲುಗಳ ಅರ್ಥಗರ್ಭವು ಓದುಗನ ಮನಸ್ಸನ್ನು ಒಂದು ಕ್ಷಣ ಹಿಡಿದು ಅಲುಗಾಡಿಸಿಬಿಡುತ್ತದೆ! ಕೆಡವಲಾದ ಮನೆಯೊಂದರ ನಾಮಫಲಕವನ್ನು ನೋಡುತ್ತಾ ಅವರು ಬರೆಯುತ್ತಾರೆ: "ಈ ಮನೆಯನ್ನು ಕೆಡವದೇ ಹೋಗಿದ್ದರೆ, ಅದು ಕನಿಷ್ಠ ಇನ್ನೊಂದು ಇಪ್ಪತ್ತೈದು ವರ್ಷಗಳ ಕಾಲ ಗಟ್ಟಿಯಾಗಿ ಇರುತ್ತಿತ್ತು." ಹಾಗೆಯೇ ಮುಂದುವರಿದು, "ನಾಮಫಲಕದ ಮೇಲೆ ಒಂದೇ ಹೆಸರು ಬರೆದಿದ್ದರೂ, ಆ ಮನೆಯಲ್ಲಿ ಎಷ್ಟೋ ಜನರು ವಾಸಿಸುತ್ತಿದ್ದಿರಬಹುದು..." ಎಂದು ಬರೆಯುವಾಗ ಅವರ ಸಾಲುಗಳು ಅತ್ಯಂತ ಮಾರ್ಮಿಕವಾಗಿ ಧ್ವನಿಸುತ್ತವೆ.

ಇಂದು ನಾವು ಯಾವ ಫ್ಯಾನಿನ ಕೆಳಗೆ ಕುಳಿತು ತಂಪಾದ ಗಾಳಿಯ ಆರಾಮ ಪಡೆಯುತ್ತಿದ್ದೇವೆಯೋ, ಆ ಫ್ಯಾನನ್ನು ನೋಡುತ್ತಾ ಸುಶೀಲ್ "ಈ ಫ್ಯಾನ್ ಅನ್ನು ನಡೆಸುತ್ತಿರುವವರು ಯಾರು?" ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಉತ್ತರ ಹುಡುಕುತ್ತಾ, ಗಣಿಯಲ್ಲಿ ಕಲ್ಲಿದ್ದಲು ತೆಗೆದು ವಿದ್ಯುತ್ ಉತ್ಪಾದಿಸುವ ನಿರಂತರ ಶ್ರಮಿಕ ಕಾರ್ಮಿಕನವರೆಗೆ ತಲುಪಿಬಿಡುತ್ತಾರೆ!

ಅಂತೆಯೇ, ವ್ಯಕ್ತಿಯೊಬ್ಬ ಗಾಳಿಯಲ್ಲಿ ತನ್ನ ಕೈಗಳನ್ನು ಚಾಚಿ ಖಾಲಿ ಜಾಗವೊಂದನ್ನು ಅಪ್ಪಿಕೊಳ್ಳುತ್ತಾನೆ. ಅದನ್ನು ಕಂಡು ಸುಶೀಲ್ ಹೇಳುತ್ತಾರೆ: "ಹಿಂದೆ ಅಲ್ಲೊಂದು ಮರವಿತ್ತು. ಇಂದು ಅದು ಇದ್ದಿದ್ದರೆ, ಅವನು ಆ ಮರವನ್ನೇ ಅಪ್ಪಿಕೊಳ್ಳುತ್ತಿದ್ದ. ಆಗ ಅವನನ್ನು ಯಾರೂ ಹುಚ್ಚ ಎಂದು ಕರೆಯುತ್ತಿರಲಿಲ್ಲ ಅಲ್ಲವೇ?"

ಪುಸ್ತಕದಲ್ಲಿ ತಾಪೋಶಿ ಘೋಷಾಲ್ ಅವರು ಬಿಡಿಸಿರುವ ಚಿತ್ರಗಳು ಸಹ ಅಷ್ಟೇ ಅನನ್ಯವಾಗಿವೆ. ಇಲ್ಲಿ ಪದಗಳ ಕುರಿತು ಏನು ಹೇಳಲಾಗಿದೆಯೋ, ಅದನ್ನು ಚಿತ್ರಗಳಿಗೂ ಅನ್ವಯಿಸಿ ಅರ್ಥೈಸಿಕೊಳ್ಳಬೇಕಾಗುತ್ತದೆ.

---

***ಪ್ರಭಾತ್*** *ಅವರು ಶಿಕ್ಷಣ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಮಕ್ಕಳಿಗಾಗಿ ಹಲವಾರು ಕವನ ಮತ್ತು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ ಕ್ಷೇತ್ರದ ಇವರ ಅನುಪಮ ಕೊಡುಗೆಗಾಗಿ ಅವರಿಗೆ ಹಲವಾರು ಪ್ರಶಸ್ತಿಗಳು ಸಂದಿವೆ.*

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆಶಾ ಮಹೇಶ್ವರ ಸಿಂಗ್

# ಜೈ ಭೀಮ್

## ವಿಮರ್ಶೆ: ದಿನೇಶ್ ಮಡಗಾಂವ್ಕರ್

'ಜೈ ಭೀಮ್' ಮಕ್ಕಳಿಗಾಗಿ ರಚಿಸಲಾದ ಅತ್ಯಂತ ವಿಶಿಷ್ಟವಾದ ಪುಸ್ತಕ. ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಒಬ್ಬ 'ಸೂಪರ್‌ಹೀರೋ' ಆಗಿ ಚಿತ್ರಿಸಿರುವ ಮೊದಲ ಪುಸ್ತಕ ಇದಾಗಿದೆ. ಇದು ಸಾಂಪ್ರದಾಯಿಕ ನಿರೂಪಣಾ ಶೈಲಿಯನ್ನು ಬದಿಗೊತ್ತಿ, ಹೊಸ ರೀತಿಯಲ್ಲಿ ಕಥೆಯನ್ನು ಪ್ರಸ್ತುತಪಡಿಸುತ್ತದೆ. ಮಕ್ಕಳ ಕಥಾಸರಣಿಗೆ ಸೇರುವ ಈ ಪುಸ್ತಕವು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಅತ್ಯಂತ ಪರಿಣಾಮಕಾರಿಯಾಗಿದೆ. ಸಾಂವಿಧಾನಿಕ ಮೌಲ್ಯಗಳನ್ನು ಶೌರ್ಯ ಮತ್ತು ನ್ಯಾಯದ ದೃಷ್ಟಿಕೋನದಲ್ಲಿ ತಲುಪಿಸಲು ಇದು ರೋಮಾಂಚಕ ಹಾಗೂ ಜೀವಂತಿಕೆಯಿಂದ ಕೂಡಿದ ಶೈಲಿಯನ್ನು ಬಳಸಿಕೊಳ್ಳುತ್ತದೆ.




ಲೇಖಕರು: ವಿಕಾಸ್ ಆರ್. ಮೌರ್ಯ

ಚಿತ್ರಗಳು : ಸುರೇಶ್ ಆರ್. ಅರ್ಕಸಾಲಿ

ವಯಸ್ಸು: 6-12 ವರ್ಷದವರಿಗೆ

ಪುಟಗಳ ಸಂಖ್ಯೆ: 20

ಭಾಷೆ: ಕನ್ನಡ

ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು

ಲೇಖಕ ವಿಕಾಸ್ ಆರ್. ಮೌರ್ಯ ಅವರು ಕಥೆ ಹೇಳಲು ಅತ್ಯಂತ ವಿಶಿಷ್ಟ ಶೈಲಿಯನ್ನು ಬಳಸಿದ್ದಾರೆ. ತಮ್ಮ ಸೃಜನಶೀಲತೆ ಮತ್ತು ಸಾಹಸಮಯ ನಿರೂಪಣೆಯಿಂದ ಅವರು ಅಂಬೇಡ್ಕರ್ ಅವರನ್ನು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾದ ಐತಿಹಾಸಿಕ ವ್ಯಕ್ತಿಯಾಗಿ ಉಳಿಸಿಲ್ಲ. ಬದಲಿಗೆ ನೀಲಿ ಉಡುಪು ಧರಿಸಿದ, ಕೈಯಲ್ಲಿ ಪೆನ್ನು ಹಿಡಿದ, ದುರ್ಬಲರನ್ನು ರಕ್ಷಿಸಲು ಸದಾ ಸಿದ್ಧರಿರುವ ಜೀವಂತ ಸೂಪರ್‌ಹೀರೋ ಆಗಿ ಚಿತ್ರಿಸಿದ್ದಾರೆ. ಸೂಪರ್‌ಮ್ಯಾನ್, ಸ್ಪೈಡರ್‌ಮ್ಯಾನ್‌ಗಳಂತಹ ಕಾಲ್ಪನಿಕ ನಾಯಕರ ಪಾತ್ರಗಳಿಂದ ಸುಲಭವಾಗಿ ಪ್ರಭಾವಿತರಾಗುವ ಮಕ್ಕಳಿಗೆ ಈ ಪರಿಕಲ್ಪನೆ ತುಂಬಾ ಇಷ್ಟವಾಗುತ್ತದೆ. ಪುಸ್ತಕದ ಇದೇ ಅಂಶವು ಮಕ್ಕಳನ್ನು ಅಂಬೇಡ್ಕರ್ ಅವರತ್ತ ಆಕರ್ಷಿಸುವುದಲ್ಲದೆ, ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಒಬ್ಬ ನೈಜ ನಾಯಕನನ್ನು ಪರಿಚಯಿಸುತ್ತದೆ.

ಸಂವಿಧಾನದ ಪೀಠಿಕೆಯಿಂದ ಆಯ್ದ 'ನಾವು, ಭಾರತದ ಜನರು' ಎಂಬ ವಾಕ್ಯದೊಂದಿಗೆ ಪ್ರಾರಂಭವಾಗುವ ಈ ಕಥೆಯು, ಪುಸ್ತಕದುದ್ದಕ್ಕೂ ನ್ಯಾಯ ಮತ್ತು ಸಮಾನತೆಯ ಸಾಂವಿಧಾನಿಕ ಆಶಯದೊಂದಿಗೆ ಬೆಸೆಯುವ ಮುಖ್ಯ ಘೋಷಣೆಯಾಗಿ ಸಾಗುತ್ತದೆ.

ಸುರೇಶ್ ಆರ್. ಅರ್ಕಸಾಲಿ ಅವರು ಬಿಡಿಸಿದ ಚಿತ್ರಗಳು ಅತ್ಯುತ್ತಮವಾಗಿದ್ದು, ಕಥೆಗೆ ಜೀವ ತುಂಬುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಪ್ರತಿಯೊಂದು ದೃಶ್ಯದ ಭಾವನೆ, ಶಕ್ತಿ ಮತ್ತು ಸಾಂಕೇತಿಕತೆಯನ್ನು ಈ ಚಿತ್ರಗಳು ಬಹು ಸುಂದರವಾಗಿ ವ್ಯಕ್ತಪಡಿಸುತ್ತವೆ.

ಚಿತ್ರಗಳಲ್ಲಿ ನೀಲಿ ಬಣ್ಣವು ಎದ್ದುಕಾಣುವಂತಿದ್ದು, ಇದು ಅಂಬೇಡ್ಕರ್ ಅವರನ್ನು ಮಹಾನ್ ನಾಯಕನಾಗಿ ಬಿಂಬಿಸುವುದರ ಜೊತೆಗೆ ನ್ಯಾಯದ ಆದರ್ಶಗಳನ್ನೂ ಪ್ರತಿನಿಧಿಸುತ್ತದೆ. ಅಲ್ಲಲ್ಲಿ ಬಳಸಿರುವ ಕೆಂಪು ಮತ್ತು ಕಂದು ಬಣ್ಣಗಳು, ಸಮಾಜದ ನಕಾರಾತ್ಮಕ ಶಕ್ತಿಗಳಿಂದ ಉಂಟಾಗುವ ಪ್ರಕ್ಷುಬ್ಧತೆ ಹಾಗೂ ಘರ್ಷಣೆಗಳನ್ನು ಸಾಂಕೇತಿಕವಾಗಿ ಚಿತ್ರಿಸುತ್ತವೆ. ಇವು ಘಟನೆಗಳಿಗೆ ಆಳ ಮತ್ತು ಭಾವನಾತ್ಮಕ ತೀವ್ರತೆಯನ್ನು ತಂದುಕೊಡುತ್ತವೆ. ಬಣ್ಣಗಳ ಈ ಆಯ್ಕೆಯು ಕಥೆಯ ಒಟ್ಟಾರೆ ಪ್ರಭಾವವನ್ನು ಹೆಚ್ಚಿಸುವುದಲ್ಲದೆ, ಅಸಮಾನತೆ, ಶೋಷಣೆ ಮತ್ತು ಪ್ರತಿರೋಧಗಳ ಸ್ವರೂಪ ಹಾಗೂ ತೀವ್ರತೆಯನ್ನು ಓದುಗರಿಗೆ ತಲುಪಿಸಲು ನೆರವಾಗುತ್ತದೆ.

ರೇಖಾಚಿತ್ರಗಳು ಕೇವಲ ಕಥೆಗೆ ಬೆಂಬಲವಾಗಿ ನಿಲ್ಲುವುದು ಮಾತ್ರವಲ್ಲ, ಅದರ ಆಶಯವನ್ನು ಮತ್ತಷ್ಟು ವಿಸ್ತರಿಸುತ್ತವೆ. ಈ ಪ್ರಬಲ ಚಿತ್ರಗಳು ಸಂಕೀರ್ಣ ಸಾಮಾಜಿಕ ವಾಸ್ತವಗಳನ್ನು ಮಕ್ಕಳು ತಕ್ಷಣವೇ ಗ್ರಹಿಸುವಂತೆ ಮಾಡಿಕೊಡುತ್ತವೆ. ಸಂವಿಧಾನದ ಸಹಾಯದಿಂದ ಮಕ್ಕಳನ್ನು ರಕ್ಷಿಸುವ ಅಂಬೇಡ್ಕರ್ ಅವರ ಚಿತ್ರಣವಿರಲಿ ಅಥವಾ ಅನ್ಯಾಯವನ್ನು ಎದುರಿಸುವ ಸನ್ನಿವೇಶವಿರಲಿ—ಪ್ರತಿಯೊಂದು ಚಿತ್ರವೂ ಸಬಲೀಕರಣ ಮತ್ತು ನ್ಯಾಯದ ಮೂಲ ಸಂದೇಶವನ್ನು ಬಲಪಡಿಸುತ್ತದೆ.

ಇಡೀ ನಿರೂಪಣೆಯು ಅರ್ಥಪೂರ್ಣ ಸಾಂಕೇತಿಕ ವಿವರಗಳಿಂದ ಸಮೃದ್ಧವಾಗಿದೆ. ಉದಾಹರಣೆಗೆ, ಖಾಸಗಿ ಶಾಲೆಯೊಂದು ಬಡ ಕುಟುಂಬಗಳ ಮಕ್ಕಳಿಗೆ ಪ್ರವೇಶ ನೀಡಲು ನಿರಾಕರಿಸಿದಾಗ, ಸೂಪರ್‌ಹೀರೋ ಬಂದು ಶಿಕ್ಷಣದ ಹಕ್ಕನ್ನು ರಕ್ಷಿಸುತ್ತಾರೆ. ಕಥೆಯ ಮತ್ತೊಂದು ಭಾಗದಲ್ಲಿ, ಶ್ರೀಮಂತ ಬಿಲ್ಡರ್ ನಡೆಸುತ್ತಿದ್ದ ಬುಲ್ಡೋಜರ್ ಅನ್ನು ಆ ನಾಯಕ ತಡೆದು ನಿಲ್ಲಿಸುತ್ತಾನೆ ಹಾಗೂ ಬೆಂಕಿ ಹೊತ್ತಿ ಉರಿಯುತ್ತಿದ್ದ ಗೋದಾಮಿನಿಂದ ಬಾಲಕಾರ್ಮಿಕರನ್ನು ರಕ್ಷಿಸುತ್ತಾನೆ. ಈ ಮೂಲಕ, ದುರ್ಬಲರನ್ನು ಶೋಷಿಸುವವರಿಗೆ ಅವನು ನೈತಿಕತೆಯ ತಕ್ಕ ಪಾಠ ಕಲಿಸುತ್ತಾನೆ. "ಬಡವರ ಮಕ್ಕಳು ನಿಮ್ಮ ಮನೆಯ ಆಸ್ತಿಯಲ್ಲ!" ಎಂಬ ಅವನ ಮಾತು ದೃಢತೆಯಿಂದ ಹಾಗೂ ಸ್ಪಷ್ಟತೆಯಿಂದ ಪ್ರತಿಧ್ವನಿಸುತ್ತಾ, ಶತಮಾನಗಳಿಂದ ನಡೆದುಕೊಂಡು ಬಂದಿರುವ ಅನ್ಯಾಯ ಮತ್ತು ಶೋಷಣೆಯ ವಿಶೇಷಾಧಿಕಾರಗಳಿಗೆ ನೇರ ಸವಾಲು ಹಾಕುತ್ತದೆ.

ಮುಂದೆ ಕಥೆಯಲ್ಲಿ ದುರಹಂಕಾರಿ ಶ್ರೀಮಂತನೊಬ್ಬ ತನ್ನ ಪೌರಾಣಿಕ 'ಮಾಯಾ ಕುದುರೆ'ಯನ್ನೇರಿ, "ನಿಮ್ಮಂತಹ ನೂರು ಜನರು ಹುಟ್ಟಿ ಬಂದರೂ ಸಹ, ನನ್ನ ಬುದ್ಧಿವಂತಿಕೆಯಿಂದ ಎಲ್ಲರನ್ನೂ ಸೋಲಿಸುತ್ತೇನೆ!" ಎಂದು ಅಪಹಾಸ್ಯ ಮಾಡುತ್ತಾನೆ. ಈ ಅಹಂಕಾರಕ್ಕೆ ಪ್ರತಿಸವಾಲಾಗಿ "ನಾವು, ಭಾರತದ ಜನರು!" ಎಂಬ ಏಕೀಕೃತ ಘೋಷಣೆ ಮೊಳಗುತ್ತದೆ. ಇದನ್ನು ಆ ದುರಹಂಕಾರಿ ವ್ಯಕ್ತಿ ತೀವ್ರವಾಗಿ ಪ್ರತಿರೋಧಿಸಿದಾಗ, ಮಕ್ಕಳು ಹಾಗೂ ದೊಡ್ಡವರೆಲ್ಲರೂ ಭಯದಿಂದ ಹಿಂದೆ ಸರಿಯುತ್ತಾರೆ. ಆದರೆ ಅದೇ ವೇಳೆಗೆ, ಅಂಬೇಡ್ಕರ್ ಮತ್ತು ಅವರ ಸಂಗಾತಿಗಳು ಹಿಡಿದಿರುವ ಅಗೋಚರ ಗುರಾಣಿ ತಮ್ಮನ್ನು ರಕ್ಷಿಸುತ್ತಿರುವುದನ್ನು ಅವರು ಕಂಡುಕೊಳ್ಳುತ್ತಾರೆ. ಆ ಗುರಾಣಿಯೇ 'ಸಂವಿಧಾನ'! ಈ ಎಲ್ಲ ಘರ್ಷಣೆಗಳ ನಡುವೆಯೂ 'ಜೈ ಭೀಮ್' ಎಂಬ ಘೋಷಣೆ ನಿರಂತರವಾಗಿ ಪ್ರತಿಧ್ವನಿಸುತ್ತಲೇ ಇರುತ್ತದೆ.

ಮಾರ್ಮಿಕವೂ ಸಾಂಕೇತಿಕವೂ ಆಗಿರುವ ಈ ಕಥೆಯ ಮೂಲಕ ಲೇಖಕರು ಒಂದು ಪ್ರಬಲ ಸತ್ಯವನ್ನು ನೆನಪಿಸುವಲ್ಲಿ ಯಶಸ್ವಿಯಾಗಿದ್ದಾರೆ: "ಸಂವಿಧಾನ ಎಂಬುದು ಕೇವಲ ಕಾನೂನುಗಳ ದಾಖಲೆಯಲ್ಲ; ಅದು ಜನರಿಗೆ, ಅದರಲ್ಲೂ ವಿಶೇಷವಾಗಿ ತುಳಿತಕ್ಕೊಳಗಾದವರ ಪರವಾಗಿ ನಿಲ್ಲುವ ಜೀವಂತ ಶಕ್ತಿ." ರೋಮಾಂಚನಕಾರಿ ದೃಶ್ಯಗಳು ಮತ್ತು ಜೀವಂತಿಕೆಯ ಪಾತ್ರಗಳ ಮೂಲಕ, ಅವರು ಮಕ್ಕಳಲ್ಲಿ ನ್ಯಾಯ, ಸಮಾನತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಆಳವಾದ ಗೌರವವನ್ನು ಮೂಡಿಸುತ್ತಾರೆ.

ಸಂವಿಧಾನದ ಮಹತ್ವ ಮತ್ತು ಅಂಬೇಡ್ಕರ್ ಅವರ ದೃಷ್ಟಿಕೋನವನ್ನು ಇಷ್ಟೊಂದು ಪರಿಣಾಮಕಾರಿಯಾಗಿ ತಿಳಿಸುವ ಮಕ್ಕಳ ಪುಸ್ತಕಗಳು ತೀರಾ ವಿರಳ. ಜೈ ಭೀಮ್ ಅಂತಹ ಅಪರೂಪದ ಪುಸ್ತಕ. ಇದನ್ನು ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳೊಂದಿಗೆ ಖಂಡಿತ ಓದಬೇಕು—ಕೇವಲ ಒಂದು ಸುಂದರ ಕಥೆಯಾಗಿ ಮಾತ್ರವಲ್ಲದೆ, ಅದು ಸಾರುವ ಧೈರ್ಯ, ಸಹಾನುಭೂತಿ ಮತ್ತು ಸಂವಿಧಾನಿಕ ಜಾಗೃತಿಯ ಸಂದೇಶಕ್ಕಾಗಿಯೂ ಇದನ್ನು ಓದುವುದು ಅಗತ್ಯ.

---

**ದಿನೇಶ್ ಮಡಗಾಂವ್ಕರ್** *ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಂವಹನ ತಂಡದ ಸದಸ್ಯರು. ಇವರು ಸಣ್ಣ ಕಥಾಸಂಕಲನವನ್ನು ಪ್ರಕಟಿಸಿದ್ದು, ಹಲವು ಮಕ್ಕಳ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಜೊತೆಗೆ, ಪ್ರಾದೇಶಿಕ ಭಾಷೆಯ ಕಾಪಿರೈಟರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.*

ಅನುವಾದ: ಆಶಾ ಮಹೇಶ್ವರ ಸಿಂಗ್ | ಪರಿಶೀಲನೆ: ಅನುರೂಪ ರವೀಂದ್ರ

# ಚಟುವಟಿಕೆ ಸಮಯ

## ನಿಮ್ಮ ಜೊತೆಗಾರರನ್ನು ಹುಡುಕಿ

ಈ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳು ಸಜೀವ ಮತ್ತು ನಿರ್ಜೀವ ವಸ್ತುಗಳ ನಡುವಿನ ವ್ಯತ್ಯಾಸವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಇದರಿಂದ ಅವರ ಅವಲೋಕನ ಶಕ್ತಿ, ವರ್ಗೀಕರಣ ಸಾಮರ್ಥ್ಯ ಮತ್ತು ತಾರ್ಕಿಕ ಚಿಂತನೆ ಬೆಳೆಯುತ್ತದೆ. ಈ ಚಟುವಟಿಕೆಯು 2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳಿಗೆ ಹೆಚ್ಚು ಸೂಕ್ತವಾಗಿದೆ.



ಚಿತ್ರ: ಶಿವೇಂದ್ರ ಪಾಂಡ್ಯ

**ಗುಂಪಿನ ಗಾತ್ರ:** 24 ವಿದ್ಯಾರ್ಥಿಗಳು (ಅಥವಾ ಯಾವುದೇ ಸಮ ಸಂಖ್ಯೆಯ ಗುಂಪು)

**ಅಗತ್ಯವಿರುವ ಸಾಮಗ್ರಿಗಳು:**

- ಸಜೀವ ವಸ್ತುಗಳ ಚಿತ್ರಗಳಿರುವ 12 ಕಾರ್ಡ್‌ಗಳು (ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ ಸಂಖ್ಯೆಯನ್ನು ಹೆಚ್ಚು ಅಥವಾ ಕಡಿಮೆ ಮಾಡಿಕೊಳ್ಳಬಹುದು).

- ನಿರ್ಜೀವ ವಸ್ತುಗಳ ಚಿತ್ರಗಳಿರುವ 12 ಕಾರ್ಡ್‌ಗಳು.

**ಸೂಚನೆ:** ಶಿಕ್ಷಕರು ಹಳೆಯ ದಿನಪತ್ರಿಕೆಗಳು ಅಥವಾ ನಿಯತಕಾಲಿಕೆಗಳಿಂದ ಚಿತ್ರಗಳನ್ನು ಕತ್ತರಿಸಿ, ಅವುಗಳನ್ನು ಈಗಾಗಲೇ ಬಳಸಿದ ಹಳೆಯ ಚಾರ್ಟ್ ಕಾಗದಗಳು ಅಥವಾ ಮನೆಯ ಸಾಮಗ್ರಿಗಳ ಪ್ಯಾಕೆಟ್‌ಗಳಿಂದ ತಯಾರಿಸಿದ ಕಾರ್ಡ್‌ಗಳ ಮೇಲೆ ಅಂಟಿಸಬಹುದು. ಅಥವಾ ನೀವೇ ಸ್ವತಃ ಚಿತ್ರಗಳನ್ನು ಬಿಡಿಸಬಹುದು ಮತ್ತು ಈ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ಸಹ ತೊಡಗಿಸಿಕೊಳ್ಳಬಹುದು.

**ಸಜೀವ ವಸ್ತುಗಳ ಪಟ್ಟಿಗೆ ಸಲಹೆಗಳು:** ಕೋಳಿ, ಹುಡುಗ, ಹುಡುಗಿ, ಕೋತಿ, ಗುಬ್ಬಚ್ಚಿ, ಕಪ್ಪೆ, ಆಲದ ಮರ, ಮಾವಿನ ಮರ, ಇರುವೆ, ಜೇಡ, ಹಲ್ಲಿ, ಲಿಚಿ ಮರ, ಗುಲಾಬಿ ಗಿಡ, ಮೇಕೆ, ಎಮ್ಮೆ, ಆನೆ, ಹಸು, ಗಿಳಿ, ನವಿಲು, ಪಾರಿವಾಳ, ಮೀನು, ಬೆಕ್ಕು, ಚಿಟ್ಟೆ, ಸಸಿ, ಕಬ್ಬು, ಒಂಟೆ, ಕಾಗೆ, ಗೆಳೆಯ, ಇತ್ಯಾದಿ.

**ನಿರ್ಜೀವ ವಸ್ತುಗಳ ಪಟ್ಟಿಗೆ ಸಲಹೆಗಳು:** ಮಣ್ಣಿನ ಪಾತ್ರೆ, ಶಾಲಾ ಚೀಲ, ಸೈಕಲ್, ಸೀಮೆಸುಣ್ಣ, ಕ್ರಿಕೆಟ್ ಬ್ಯಾಟ್, ಪುಸ್ತಕ, ರಿಕ್ಷಾ, ಫ್ಯಾನ್, ಸ್ಟೀಲ್ ತಟ್ಟೆ, ಮಂಚ, ಗಾಳಿಪಟ, ಕಲ್ಲು, ಲಾಟೀನು, ಬಾಗಿಲು, ಫೋನ್, ಚಪ್ಪಲಿ, ಚಮಚ, ಕರಿಹಲಗೆ, ಮೇಜು, ವಿದ್ಯುತ್ ಬಲ್ಬ್, ಬಸ್, ಸ್ಕೂಟರ್, ಇಟ್ಟಿಗೆ, ಕಿಟಕಿ, ಗೋಡೆ, ಛತ್ರಿ/ಕೊಡೆ, ಗೊಂಬೆ, ಗಂಟೆ, ಧ್ವಜ, ಗಡಿಯಾರ, ಕನ್ನಡಿ, ನೀರಿನ ಬಾಟಲಿ, ಇತ್ಯಾದಿ.

**ಸುಲಭದ ಹಂತ:** ನಿಮ್ಮ ಜೊತೆಗಾರರನ್ನು ಹುಡುಕಿ

ಪ್ರತಿಯೊಬ್ಬ ವಿದ್ಯಾರ್ಥಿಗೂ ಮಡಚಿದ ಒಂದು ಕಾರ್ಡ್ ನೀಡಬೇಕು ಮತ್ತು "ನಾನು ಸೂಚನೆ ನೀಡುವವರೆಗೂ ಯಾರೂ ಇದನ್ನು ತೆರೆಯಬಾರದು" ಎಂದು ತಿಳಿಸಬೇಕು.

- ಶಿಕ್ಷಕರು ಸೂಚನೆ ನೀಡಿದ ತಕ್ಷಣ (ಉದಾಹರಣೆಗೆ: "ರೆಡಿ, ಸ್ಟೆಡಿ, ಗೋ!"), ವಿದ್ಯಾರ್ಥಿಗಳು ತಮ್ಮ ಕಾರ್ಡ್‌ಗಳನ್ನು ತೆರೆದು ಚಿತ್ರವನ್ನು ನೋಡಬೇಕು.
- ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಕಾರ್ಡ್‌ನಲ್ಲಿರುವುದು ಸಜೀವ ವಸ್ತುವೋ ಅಥವಾ ನಿರ್ಜೀವ ವಸ್ತುವೋ ಎಂಬುದನ್ನು ಗುರುತಿಸಿ, ಅದೇ ವಿಭಾಗದ (ಸಜೀವ ಅಥವಾ ನಿರ್ಜೀವ) ಕಾರ್ಡ್ ಹೊಂದಿರುವ ಮತ್ತೊಬ್ಬ ಸಹಪಾಠಿಯನ್ನು ಹುಡುಕಬೇಕು.
- ತಮ್ಮ ಗುಂಪಿಗೆ ಸರಿಹೊಂದುವ ಜೊತೆಗಾರ ಸಿಕ್ಕಿದ ತಕ್ಷಣ, ಅವರಿಬ್ಬರೂ ಒಟ್ಟಿಗೆ ಒಂದು ಕಡೆ ಕುಳಿತುಕೊಳ್ಳಬೇಕು.

**ಮಧ್ಯಮ ಹಂತ: ಇಬ್ಬರು ಜೊತೆಗಾರರನ್ನು ಹುಡುಕಿ**

ಹಿಂದಿನ ಪ್ರಕ್ರಿಯೆಯನ್ನೇ ಪುನರಾವರ್ತಿಸಿ. ಆದರೆ ಈ ಬಾರಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಗುಂಪಿನ ಕಾರ್ಡ್ (ಸಜೀವ ಅಥವಾ ನಿರ್ಜೀವ) ಹೊಂದಿರುವ ಇನ್ನಿಬ್ಬರು ಸಹಪಾಠಿಗಳನ್ನು ಹುಡುಕಬೇಕು. ಉದಾಹರಣೆಗೆ, ಒಬ್ಬ ವಿದ್ಯಾರ್ಥಿಯ ಬಳಿ 'ನಿರ್ಜೀವ' ವಸ್ತುವಿನ ಕಾರ್ಡ್ ಇದ್ದರೆ, ಆತ ನಿರ್ಜೀವ ವಸ್ತುವಿನ ಕಾರ್ಡ್ ಹೊಂದಿರುವ ಮತ್ತಿಬ್ಬರು ವಿದ್ಯಾರ್ಥಿಗಳನ್ನು ಹುಡುಕಬೇಕು. ಈ ಬಾರಿ ಒಟ್ಟು ಮೂರು ಜನರ ಗುಂಪನ್ನು ರಚಿಸಬೇಕು.

**ಕಠಿಣ ಹಂತ: ಒಂದೇ ವಿಷಯದ (ಥೀಮ್) ಕಾರ್ಡ್‌ಗಳನ್ನು ಹೊಂದಿರುವ ಜೊತೆಗಾರರನ್ನು ಹುಡುಕಿ**

ಈ ಹಂತದಲ್ಲಿ ಒಂದೇ ವಿಷಯದ (ಥೀಮ್) ಕಾರ್ಡ್‌ಗಳನ್ನು ಹೊಂದಿರುವ ಸಹಪಾಠಿಗಳನ್ನು ಹುಡುಕಬೇಕು. ಇದನ್ನು ಹಿಂದಿನ ಕೆಲಸಕ್ಕಿಂತ ಕೊಂಚ ವಿಭಿನ್ನವಾಗಿ ಮಾಡಬೇಕಾಗುತ್ತದೆ. ಅಂದರೆ, ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಕಾರ್ಡ್‌ನ ಥೀಮ್‌ಗೆ ಸರಿಹೊಂದುವ ಕಾರ್ಡ್‌ಗಳಿರುವ ಇನ್ನಿಬ್ಬರು ಸಹಪಾಠಿಗಳನ್ನು ಹುಡುಕಬೇಕು. ಇಲ್ಲಿ ಶಿಕ್ಷಕರು 'ಥೀಮ್'ಗಳನ್ನು ಮೊದಲೇ ಸ್ಪಷ್ಟಪಡಿಸಿರಬೇಕಾಗುತ್ತದೆ. ಉದಾಹರಣೆಗೆ: ಒಬ್ಬ ವಿದ್ಯಾರ್ಥಿಯ ಬಳಿ ಪ್ರಾಣಿಯ (ಬೆಕ್ಕು) ಕಾರ್ಡ್ ಇದ್ದರೆ, ಅವರು ಕೋತಿ, ಹಸು ಅಥವಾ ಕುದುರೆಯಂತಹ ಇತರ ಪ್ರಾಣಿಗಳ ಕಾರ್ಡ್ ಹೊಂದಿರುವ ಇನ್ನಿಬ್ಬರು ಸಹಪಾಠಿಗಳನ್ನು ಹುಡುಕಬೇಕು. ಈ ಬಾರಿಯೂ ಮೂರು ಜನರ ತಂಡವನ್ನು ರಚಿಸಬೇಕು.

**ಶಿಕ್ಷಕರಿಗೆ ಸಲಹೆಗಳು:** ಪ್ರತಿ ಸುತ್ತಿನ ನಂತರ ಕಾರ್ಡ್‌ಗಳನ್ನು ಚೆನ್ನಾಗಿ ಬೆರೆಸಬೇಕು (Shuffle ಮಾಡಬೇಕು). ಮುಂದಿನ ಸುತ್ತುಗಳಲ್ಲಿ ಹೊಸ ಕಾರ್ಡ್‌ಗಳನ್ನು ಸೇರಿಸುತ್ತಾ ಹೋಗಬೇಕು; ಇದರಿಂದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಹೊಸ ಉದಾಹರಣೆಗಳ ಪರಿಚಯವಾಗುತ್ತದೆ.

## ನಿಶ್ಯಬ್ದ ರಸ್ತೆಗಳು

ಈ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳು ತಂಡವಾಗಿ ಆಟವಾಡುವುದನ್ನು ಆನಂದಿಸುತ್ತಾರೆ. ಜೊತೆಗೆ, ಯಾವುದೇ ಸಮಸ್ಯೆಯನ್ನು ಪರಿಹರಿಸಲು ಪರಸ್ಪರ ಸಹಕರಿಸುವುದು ಎಷ್ಟು ಅಗತ್ಯ ಎಂಬುದು ಇದರಿಂದ ಮನವರಿಕೆಯಾಗುತ್ತದೆ. ಈ ಆಟವನ್ನು 3ರಿಂದ 5ನೇ ತರಗತಿಯ ವಿದ್ಯಾರ್ಥಿಗಳು ಆಡಬಹುದು. ಇದಕ್ಕೆ ವಿಶಾಲವಾದ ಅಥವಾ ತೆರೆದ ಮೈದಾನ/ಸ್ಥಳದ ಅಗತ್ಯವಿರುತ್ತದೆ.

**ತಂಡದ ಗಾತ್ರ:** ಸಮ ಸಂಖ್ಯೆಯಲ್ಲಿ ಎಷ್ಟು ವಿದ್ಯಾರ್ಥಿಗಳಾದರೂ ಇರಬಹುದು.



*ಚಿತ್ರ: ಶಿವೇಂದ್ರ ಪಾಂಡ್ಯ*

**ಸುಲಭದ ಹಂತ**

ಹಂತ 1: ಜೋಡಿಗಳನ್ನು ಮಾಡಿ

- ವಿದ್ಯಾರ್ಥಿಗಳ ಜೋಡಿ ರಚನೆ ಮಾಡಿ. ಒಬ್ಬ ವಿದ್ಯಾರ್ಥಿ 'ವಾಹನ' ಆಗಬೇಕು ಮತ್ತು ಇನ್ನೊಬ್ಬ 'ಚಾಲಕ' ಆಗಬೇಕು.

ಹಂತ 2: ವಾಹನವಾಗಿರುವ ವಿದ್ಯಾರ್ಥಿಯ ಕಣ್ಣಿಗೆ ಬಟ್ಟೆಯ ಪಟ್ಟಿಯನ್ನು ಕಟ್ಟಿ.

ಹಂತ 3: ದಾರಿ ತೋರಿಸಲು ಮೌನ ಸಂಜ್ಞೆಗಳನ್ನು ರೂಪಿಸಿಕೊಳ್ಳಿ.

- ಚಾಲಕನು ವಾಹನವನ್ನು ನಿರ್ದೇಶಿಸಲು ಬಳಸಬಹುದಾದ ಮೌನ ಸಂಜ್ಞೆಗಳನ್ನು ಪ್ರತಿ ಜೋಡಿಯೂ ಸ್ವತಃ ನಿರ್ಣಯಿಸಬೇಕು. ಉದಾಹರಣೆಗೆ:
- ಬಲಗಡೆ ಹೆಗಲ ಮೇಲೆ ಒಮ್ಮೆ ತಟ್ಟಿದರೆ = ಬಲಕ್ಕೆ ತಿರುಗಿ.
- ಎಡಗಡೆ ಹೆಗಲ ಮೇಲೆ ಒಮ್ಮೆ ತಟ್ಟಿದರೆ = ಎಡಕ್ಕೆ ತಿರುಗಿ.
- ಬೆನ್ನಿನ ಮೇಲೆ ಎರಡು ಸಲ ತಟ್ಟಿದರೆ = ಮುಂದೆ ಹೋಗಿ.
- ಅಂಗಿ ತೋಳು ಹಿಡಿದು ಮೆಲ್ಲಗೆ ಎಳೆದರೆ = ಅಲ್ಲೇ ನಿಲ್ಲಿ.
- ಎರಡೂ ಹೆಗಲ ಮೇಲೆ ಮೆಲ್ಲಗೆ ತಟ್ಟಿದರೆ = ಹಿಂದಕ್ಕೆ ಬನ್ನಿ.

ಹಂತ 4: ಒಂದು ನೇರವಾದ ರಸ್ತೆಯ ಮೇಲೆ ಸಾಗಲು ಮಾರ್ಗದರ್ಶನ ನೀಡಿ.

- ಸೀಮೆಸುಣ್ಣವನ್ನು ಬಳಸಿ ನೆಲದ ಮೇಲೆ ಒಂದು ನೇರ ಮಾರ್ಗವನ್ನು ಬಿಡಿಸಿ.
- ಚಾಲಕ ಹಿಂದೆ ನಿಂತು, ಮೊದಲೇ ನಿರ್ಧರಿಸಿದ ಸಂಜ್ಞೆಗಳನ್ನು ಬಳಸಿ ತನ್ನ ವಾಹನಕ್ಕೆ ದಾರಿ ತೋರಿಸಬೇಕು.
- ಒಮ್ಮೆ ಆಟ ಮುಗಿದ ನಂತರ, ವಿದ್ಯಾರ್ಥಿಗಳಿಗೆ ತಮ್ಮ ಪಾತ್ರಗಳನ್ನು ಅದಲು-ಬದಲು ಮಾಡಲು ತಿಳಿಸಬೇಕು ಹಾಗೂ ಆಟವನ್ನು ಪುನರಾವರ್ತಿಸಬೇಕು. ಅಂದರೆ ಈಗ ಚಾಲಕ, ವಾಹನವಾಗುತ್ತಾನೆ ಮತ್ತು ವಾಹನ, ಚಾಲಕ ಆಗುತ್ತಾನೆ.

**ಕಠಿಣ ಹಂತ:**

- ಇದರಲ್ಲಿ ಸಮಯದ ಮಿತಿ ಇಡಬೇಕು ಅಥವಾ ದಾರಿಯಲ್ಲಿ ಯಾವುದಾದರೂ ಸಣ್ಣ ವಸ್ತುವನ್ನು ಎತ್ತಲು ಹೇಳಬೇಕು.
- ಪರಾಮರ್ಶೆಯನ್ನು ಪ್ರೋತ್ಸಾಹಿಸಬೇಕು: ನೀವು 'ವಾಹನ'ವಾಗಿದ್ದಾಗ ನಿಮಗೆ ಹೇಗನ್ನಿಸಿತು? ನಿಮ್ಮ ಸಂಜ್ಞೆಗಳು ಸ್ಪಷ್ಟವಾಗಿದ್ದವೇ? ನೋಡುವ ಅಥವಾ ಮಾತನಾಡುವ ಬದಲು ಕೇವಲ ಸ್ಪರ್ಶವನ್ನು ಅವಲಂಬಿಸಿದ್ದು ಹೇಗಿತ್ತು? ನಿಮ್ಮ ಸಹಪಾಠಿಯ ಮೇಲೆ ಭರವಸೆ ಇಡಲು ನಿಮಗೆ ಏನು ಸಹಾಯ ಮಾಡಿತು?

*ಈ ಎರಡು ಚಟುವಟಿಕೆಗಳನ್ನು ಸಿಲ್ವಾ ಸ್ಯಾಮ್ಯುಯೆಲ್ ಬಸ್ಸಿಯಾರ್ ಅವರು ಸಿದ್ಧಪಡಿಸಿಕೊಟ್ಟಿದ್ದಾರೆ. ಸಿಲ್ವಾ ಅವರು ಬೆಂಗಳೂರಿನ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿನ್ಯಾಸ (Design) ತಂಡದ ಭಾಗವಾಗಿದ್ದಾರೆ.*

## ಹಣ್ಣುಗಳು, ಹೂವುಗಳು ಮತ್ತು ತರಕಾರಿಗಳು

ಈ ಚಟುವಟಿಕೆಯನ್ನು 10ರಿಂದ 15 ಮಕ್ಕಳ ಗುಂಪಿನಲ್ಲಿ ಮಾಡಿಸಬಹುದು. ಈ ಆಟದಲ್ಲಿ ಯಾರೂ ಸೋಲುವುದಿಲ್ಲ ಅಥವಾ ಗೆಲ್ಲುವುದಿಲ್ಲ. ಪ್ರತಿಯೊಂದು ಮಗುವಿಗೂ ಆಡಲು ಸಮಾನ ಅವಕಾಶ ಸಿಗುತ್ತದೆ ಹಾಗೂ ಎಲ್ಲರೂ ತಮ್ಮ ಸರದಿ ಬಂದಾಗ ಸಕ್ರಿಯವಾಗಿ ಭಾಗವಹಿಸಬಹುದು.

**ಸುಲಭದ ಹಂತ:**

ಮೊದಲು ಯಾವುದಾದರೂ ಒಂದು ಮಗುವನ್ನು ಸ್ವಯಂಪ್ರೇರಿತವಾಗಿ ಮುಂದೆ ಬರಲು ಹೇಳಬೇಕು. ಆ ಮಗು ತನ್ನ ತಲೆಯ ಮೇಲೆ ಒಂದು ಬುಟ್ಟಿಯನ್ನು ಇಟ್ಟುಕೊಂಡಂತೆ ಅಭಿನಯಿಸುತ್ತಾ, ವೃತ್ತಾಕಾರದಲ್ಲಿ ನಿಂತಿರುವ ಮಕ್ಕಳ ಸುತ್ತಲೂ 'ಹಣ್ಣು, ಹೂವು, ತರಕಾರಿ' ಎಂದು ಕೂಗುತ್ತಾ ವೃತ್ತದ ಒಳಗಿನ ಭಾಗದಲ್ಲಿ ನಡೆಯಬೇಕು. ಹೀಗೆ ಸಾಗುತ್ತಾ ಯಾವುದಾದರೂ ಒಂದು ಮಗುವಿನ ಮುಂದೆ ನಿಂತು— ಹಣ್ಣು, ಹೂವು ಅಥವಾ ತರಕಾರಿ ಎಂಬ ಮೂರರಲ್ಲಿ ಒಂದನ್ನು ಹೇಳಬೇಕು. ಅವನು ಯಾವ ಪದವನ್ನು ಹೇಳುತ್ತಾನೋ, ಎದುರಿಗಿರುವ ಮಗು ತಕ್ಷಣವೇ ಅದಕ್ಕೆ ಸಂಬಂಧಿಸಿದ ಹೆಸರನ್ನು ಹೇಳಬೇಕು. ಉದಾಹರಣೆಗೆ: ಅವನು 'ಹೂವು' ಎಂದರೆ, ಎದುರಿಗಿನ ಮಗು ಯಾವುದಾದರೂ ಒಂದು ಹೂವಿನ ಹೆಸರನ್ನು (ಉದಾ: ಗುಲಾಬಿ) ಹೇಳಬೇಕು. ಒಂದು ವೇಳೆ ಅವನು 'ಹಣ್ಣು' ಎಂದು ಹೇಳಿದರೆ ಒಂದು ಹಣ್ಣಿನ ಹೆಸರನ್ನು ಹಾಗೂ 'ತರಕಾರಿ' ಎಂದು ಹೇಳಿದರೆ ಯಾವುದಾದರೊಂದು ತರಕಾರಿಯ ಹೆಸರನ್ನು ಹೇಳಬೇಕು. ಈ ಆಟವು ವೇಗವಾಗಿ ನಡೆಯಬೇಕು. ಈ ಮೂರರಲ್ಲಿ ಯಾವ ಪದ ಬೇಕಾದರೂ ಬರಬಹುದಾದ್ದರಿಂದ ಮಕ್ಕಳು ಅತ್ಯಂತ ಚುರುಕಾಗಿರಬೇಕು. ತಕ್ಷಣವೇ ಹೆಸರು ಹೇಳಲು ಸಾಧ್ಯವಾಗದಿದ್ದರೆ ಅಥವಾ ತಪ್ಪು ಹೆಸರು ಹೇಳಿದರೆ, ಬುಟ್ಟಿ ಆ ಮಗುವಿನ ತಲೆಗೆ ಬರುತ್ತದೆ; ನಂತರ ಆ ಮಗು ಆಟವನ್ನು ಮುಂದುವರಿಸಬೇಕಾಗುತ್ತದೆ.



ಚಿತ್ರ: ಶಿವೇಂದ್ರ ಪಾಂಡ್ಯ

**ಕಠಿಣತೆಯ ಮುಂದಿನ ಹಂತ:**

ಮೊದಲಿನಂತೆಯೇ ಆಟವನ್ನು ಪ್ರಾರಂಭಿಸಬೇಕು. ಆದರೆ ಈ ಬಾರಿ, ಸುತ್ತುವ ಮಗು ಇನ್ನೊಂದು ಮಗುವಿನ ಮುಂದೆ ನಿಂತು ಒಂದರ ಬದಲು ಎರಡು ಪದಗಳನ್ನು ಹೇಳಬಹುದು. ಉದಾಹರಣೆಗೆ: 'ಹಣ್ಣು-ಹೂವು'. ಆಗ ಎದುರಿಗಿರುವ ಮಗು ಒಂದು ಹಣ್ಣು ಮತ್ತು ಒಂದು ಹೂವಿನ ಹೆಸರನ್ನು ಹೇಳಬೇಕಾಗುತ್ತದೆ. ಒಂದು ವೇಳೆ 'ಹೂವು-ತರಕಾರಿ' ಎಂದು ಹೇಳಿದರೆ, ಆಗ ಆ ಮಗು ಒಂದು ಹೂವು ಮತ್ತು ಒಂದು ತರಕಾರಿಯ ಹೆಸರನ್ನು ತಿಳಿಸಬೇಕು.

ಕಠಿಣತೆಯನ್ನು ಇನ್ನೂ ಒಂದು ಹಂತಕ್ಕೆ ಹೆಚ್ಚಿಸಲು, ಮುಂದಿನ ಹಂತದಲ್ಲಿ ಮೂರೂ ಪದಗಳನ್ನು ಒಂದೇ ಬಾರಿಗೆ ಹೇಳಲು ಸೂಚಿಸಬಹುದು. ಆಗ ಎದುರಿಗಿರುವ ಮಗುವು ತಕ್ಷಣವೇ ಒಂದು ಹಣ್ಣು, ಒಂದು ಹೂವು ಹಾಗೂ ಒಂದು ತರಕಾರಿಯ ಹೆಸರನ್ನು ಹೇಳಬೇಕಾಗುತ್ತದೆ.

*(ಈ ಚಟುವಟಿಕೆಯನ್ನು ಭೋಪಾಲ್‌ನ ಅನಿಲ್ ಸಿಂಗ್ ಅವರು ಸೂಚಿಸಿದ್ದಾರೆ. ಇವರು ಟಾಟಾ ಟ್ರಸ್ಟ್‌ನ 'ಪರಾಗ್' ಇನಿಶಿಯೇಟಿವ್‌ನಲ್ಲಿ ಬಾಲ ಸಾಹಿತ್ಯ ಮತ್ತು ಗ್ರಂಥಾಲಯ ಸಂವರ್ಧನೆಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.)*

ಅನುವಾದ: ರಾಕೇಶ್ ಪೂಂಜಾ | ಪರಿಶೀಲನೆ: ಕಿರಣ್ ಮಂಜುನಾಥ್

# ಸಂಪಾದಕರಿಗೆ ಪತ್ರ



## ಅಂಗನವಾಡಿ ಕಾರ್ಯಕರ್ತೆಯರು ಮತ್ತು ಮೇಲ್ವಿಚಾರಕರು ಈ ಸಂಚಿಕೆಯನ್ನು ಓದಿದ್ದಾರೆ ಹಾಗೂ ಪ್ರಶಂಸಿದ್ದಾರೆ

ಈ ವಿಶೇಷ ಸಂಚಿಕೆಯಲ್ಲಿನ ಎಲ್ಲಾ ಲೇಖನಗಳು ಶಾಲಾ-ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ಎತ್ತಿ ತೋರಿಸುತ್ತವೆ. ಶ್ರೇಷ್ಠಾ ಮಿಶ್ರಾ ಮತ್ತು ರಜತ್ ಶರ್ಮಾ ಅವರ *ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಕ್ಷ್ಮ ಬೆಂಬಲ ವ್ಯವಸ್ಥೆ* ಲೇಖನವು, ಒಂದು ಕೇಂದ್ರ ಮತ್ತು ಅಂಗನವಾಡಿ ಕಾರ್ಯಕರ್ತೆಯ ಬೆಳವಣಿಗೆಯಲ್ಲಿ ಮೇಲ್ವಿಚಾರಕರ ಪಾತ್ರವನ್ನು ಅತ್ಯಂತ ಸಕಾರಾತ್ಮಕವಾಗಿ ಪ್ರಸ್ತುತಪಡಿಸುತ್ತದೆ.

ಮೇಲ್ವಿಚಾರಕರು ಅಂಗನವಾಡಿ ಕೇಂದ್ರದಲ್ಲಿ ಬದಲಾವಣೆಯ ಹರಿಕಾರರಾಗಿದ್ದು, ಅವರು ಮಾಡುವ ಸಣ್ಣ ಸಣ್ಣ ಪ್ರಯತ್ನಗಳು ಇಡೀ ಸೆಕ್ಟರ್‌ನಲ್ಲಿ ಶ್ಲಾಘನೀಯ ಬದಲಾವಣೆಗೆ ಕಾರಣವಾಗಬಲ್ಲವು ಎಂದು ಲೇಖಕರು ಹೇಳಿದ್ದಾರೆ. ಒಬ್ಬ ಮೇಲ್ವಿಚಾರಕರ ಪಾತ್ರವು ಅಂಗನವಾಡಿ ಕಾರ್ಯಕರ್ತೆಯ ವೃತ್ತಿಪರ ಬೆಳವಣಿಗೆಯಲ್ಲೂ ಸಹಕಾರಿಯಾಗಿರುತ್ತದೆ. ನಾನು ಈ ಸಂಚಿಕೆಯನ್ನು ಕೆಲವು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮೇಲ್ವಿಚಾರಕರೊಂದಿಗೆ ಹಂಚಿಕೊಂಡಿದ್ದೇನೆ. ಅವರು ಇದನ್ನು ಓದಿ ಮೆಚ್ಚುಗೆ ವ್ಯಕ್ತಪಡಿಸಿದರು.

*ರೂಪಾಲಿ ವರ್ಮಾ, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜಿ ಫೌಂಡೇಷನ್, ಉಧಮ್ ಸಿಂಗ್ ನಗರ, ಉತ್ತರಾಖಂಡ*

## ಮಕ್ಕಳು ಒಂದೇ ವೇಗದಲ್ಲಿ ಬೆಳೆಯುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕುತೂಹಲಕಾರಿಯಾಗಿತ್ತು

ಪಾಠಶಾಲಾದ 26ನೇ ಸಂಚಿಕೆಯನ್ನು ಓದಿದ ನಂತರ, ಆರಂಭಿಕ ಬಾಲ್ಯದ ಬೆಳವಣಿಗೆಯ ಅಂತಿಮ ಗುರಿ 'ಬೆಳವಣಿಗೆ ಹೊಂದುತ್ತಿರುವ ಮಗು' ಆಗಿರಬೇಕೇ ಹೊರತು 'ಪಠ್ಯ' ಅಲ್ಲ ಎಂಬ ತಿಳಿವಳಿಕೆ ಮೂಡಿತು. ನನ್ನ ಸುತ್ತಮುತ್ತಲೂ ಸಹ, ಯಾವಾಗಲೂ 'ಏನನ್ನು ಕಲಿಸಬೇಕು' ಎಂಬುದರ ಮೇಲೆಯೇ ಚರ್ಚೆಗಳು ಕೇಂದ್ರೀಕೃತವಾಗಿರುವುದನ್ನು ನಾನು ಗಮನಿಸುತ್ತೇನೆ; ಆದರೆ ಮಕ್ಕಳು 'ಹೇಗೆ ಕಲಿಯುತ್ತಾರೆ' ಅಥವಾ ಅವರ 'ಸ್ವಂತ ಆಲೋಚನಾ ಶಕ್ತಿ ಹೇಗೆ ಬೆಳೆಯುತ್ತದೆ' ಎಂಬುದರ ಬಗ್ಗೆ ಚರ್ಚೆಗಳು ನಡೆಯುವುದಿಲ್ಲ.

ಮಕ್ಕಳು ಒಂದೇ ವೇಗದಲ್ಲಿ ಬೆಳೆಯುವುದಿಲ್ಲ, ಮತ್ತು ಅವರ ಕಲಿಕೆಯ ಮಾದರಿಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ ಎಂಬ ವಿಷಯವನ್ನು ಈ ಸಂಚಿಕೆಯ ಮೂಲಕ ತಿಳಿಯುವುದು ಕುತೂಹಲಕಾರಿಯಾಗಿತ್ತು. ಅದರೊಂದಿಗೆ, ಮಕ್ಕಳ ಕಲಿಕೆಯಲ್ಲಿನ ವಿಳಂಬವನ್ನು ಸಕಾರಾತ್ಮಕವಾಗಿ ಹೇಗೆ ನೋಡಬೇಕು ಎಂಬುದು ತಿಳಿಯಿತು. ನಾನು ಇದುವರೆಗೆ ಅಂಗನವಾಡಿಗಳ ಹೆಸರನ್ನು ಮಾತ್ರ ಕೇಳಿದ್ದೆ, ಆದರೆ ಈಗ ನಾನು ಸ್ವತಃ ಅಲ್ಲಿಗೆ ಹೋಗಿ ಮಕ್ಕಳು ಅಲ್ಲಿ ಏನೇನನ್ನು ಮತ್ತು ಹೇಗೆ ಕಲಿಯುತ್ತಿದ್ದಾರೆ ಎಂಬುದನ್ನು ನೋಡಲು ಬಯಸುತ್ತೇನೆ.

*ಸಂಧ್ಯಾ ಸಿಂಗ್, ಶಿಕ್ಷಕರು, ನಗರ ನಿಗಮ ಪ್ರಾಥಮಿಕ ಬಾಲ ವಿದ್ಯಾಲಯ, ಮೆಹ್ರೌಲಿ ದರ್ಗಾ, ನವದೆಹಲಿ*

## ಈ ಲೇಖನವು ನಮಗೆ ಒಂದು ಮಾರ್ಗದರ್ಶಿಯಾಗಿದೆ

ಸುನಿಲ್ ಕುಮಾರ್ ಸಾಹ ಅವರ *ಅಂಗನವಾಡಿ ಕೇಂದ್ರಗಳ ಪರಿಸರವು ಸಂತೋಷದಾಯಕವಾಗಿರಬೇಕು* ಲೇಖನಲ್ಲಿ ಹೇಳಲಾದ ವಿಚಾರಕ್ಕೆ ನನ್ನ ಸಂಪೂರ್ಣ ಸಹಮತ ಇದೆ. ಅಂದರೆ, ಅಂಗನವಾಡಿ ಕೇಂದ್ರಗಳನ್ನು ಕೇವಲ ಪೌಷ್ಟಿಕಾಂಶ ಕೇಂದ್ರಗಳೆಂದು ಪರಿಗಣಿಸದೆ ಆನಂದದಾಯಕ ಕಲಿಕಾ ಕೇಂದ್ರಗಳನ್ನಾಗಿ ಮಾಡಬೇಕು. ನಾವು ಅದೆಷ್ಟೋ ಬಾರಿ ಕಠಿಣವಾದ ಕಲಿಕಾ ಸಿದ್ಧಾಂತಗಳ ಅಡಿ ಸಿಲುಕಿಕೊಳ್ಳುವುದರಿಂದ ಕೆಲಸದ ಆನಂದವೇ ನಾಶವಾಗುತ್ತದೆ ಎಂದು ಲೇಖಕರು ಸರಿಯಾಗಿಯೇ ಹೇಳಿದ್ದಾರೆ. ಬಣ್ಣಗಳೊಂದಿಗೆ ಆಟವಾಡುವುದು ಅಥವಾ ಸ್ಥಳೀಯ ಬೀಜಗಳನ್ನು ಬಳಸುವುದು ಮುಂತಾದ ಉದಾಹರಣೆಗಳಿಂದ, ಮಕ್ಕಳಿಗೆ ಕಲಿಸಲು ದುಬಾರಿ ಸಂಪನ್ಮೂಲಗಳ ಅಗತ್ಯವಿಲ್ಲ, ಬದಲಾಗಿ ಒಂದು ಸಕಾರಾತ್ಮಕ ವಾತಾವರಣದ ಅಗತ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ.

ನಾವು ಮಕ್ಕಳನ್ನು ಸಂತೋಷವಾಗಿಟ್ಟರೆ ಕಲಿಕೆಯು ತನ್ನಷ್ಟಕ್ಕೆ ತಾನೇ ನಡೆಯುತ್ತದೆ ಎಂದು ಈ ಲೇಖನವು ನೆನಪಿಸುತ್ತದೆ. ಈ ಲೇಖನವು ನಮಗೆ ಒಂದು ಮಾರ್ಗದರ್ಶಿಯಾಗಿದೆ.

*ಶಾಯಿಸ್ತಾ, ಅಂಗನವಾಡಿ ಕಾರ್ಯಕರ್ತೆ, ಕೇಂದ್ರ ಬಂಗ್ಲಾ ಪೂಠರಿ, ಬುಲಂದ್‌ಶಹರ್, ಉತ್ತರ ಪ್ರದೇಶ*

## ನಾಟಕದ ಮೂಲಕ ಕಲಿಯುವುದು ರಚನಾತ್ಮಕವೂ ಆನಂದದಾಯಕವೂ ಆಗಿರುತ್ತದೆ

ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ *ಆರಂಭಿಕ ಶಿಕ್ಷಣ ಮತ್ತು ನಾಟಕ* ಲೇಖನವು ನನಗೆ ಬಹಳ ಇಷ್ಟವಾಯಿತು. ಈ ವಿಷಯವು ಮಕ್ಕಳ ಸಹಜ ಕಲಿಕೆಯ ವಿಧಾನವನ್ನು ಆಧರಿಸಿದೆ. ನಾಟಕದಲ್ಲಿ ಮಕ್ಕಳು ಕಲ್ಪನೆಯ ಮೂಲಕ ಜಗತ್ತನ್ನು ಅರ್ಥಮಾಡಿಕೊಳ್ಳುತ್ತಾರೆ. ಇದು ಮಕ್ಕಳ ಸೃಜನಶೀಲತೆಯನ್ನು ಮುಕ್ತವಾಗಿ ಬೆಳೆಸುತ್ತದೆ. ಇದರಿಂದ ಮಕ್ಕಳ ಭಾಷೆ ಮತ್ತು ಸಂವಹನ ಸಾಮರ್ಥ್ಯವು ಸುಧಾರಿಸುತ್ತದೆ. ಅವರು ಆಟವಾಡುತ್ತಲೇ ಸಾಮಾಜಿಕ ಪಾತ್ರಗಳನ್ನು ಕಲಿಯುತ್ತಾರೆ ಮತ್ತು ತಮ್ಮ ಭಾವನೆಗಳನ್ನು ಸುರಕ್ಷಿತವಾಗಿ ವ್ಯಕ್ತಪಡಿಸಲು ಶಕ್ತರಾಗುತ್ತಾರೆ. ಇದು ಕಲಿಕೆಯನ್ನು ಹೊರೆಯಾಗಿಸದೆ ಆನಂದದಾಯಕವಾಗಿಸುತ್ತದೆ. ಈ ರೀತಿಯಾಗಿ, ನಾಟಕವು ಒಂದು ಪರಿಣಾಮಕಾರಿ ಬೋಧನಾ ಮಾಧ್ಯಮವಾಗುತ್ತದೆ. ಇದರಲ್ಲಿ ಯಾವುದೇ ಒತ್ತಡವಿಲ್ಲದೆ ಕಲಿಯುವುದಕ್ಕೆ ಒತ್ತು ನೀಡಲಾಗಿದೆ. ಇದು ಆರಂಭಿಕ ಶಿಕ್ಷಣದ ಉದ್ದೇಶದೊಂದಿಗೆ ತಾಳೆ ಹೊಂದುತ್ತದೆ.

*ಎಸ್. ಡಿ. ಫಾರೂಕ್, ಸರ್ಕಾರಿ ಮಾಧ್ಯಮಿಕ ಪಾಠಶಾಲೆ, ಗುನ್ನಳ್ಳಿ, ತಾಲ್ಲೂಕು, ಬೀದರ್, ಕರ್ನಾಟಕ*

## ನಾನು ಮಕ್ಕಳಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನೀಡಲು ಪ್ರಯತ್ನಿಸುತ್ತಿದ್ದೇನೆ

ಸಂಚಿಕೆ 24ರಲ್ಲಿ ಪ್ರಕಟವಾದ ಕಿಶನ್ ಲಾಲ್ ಸಾಲ್ವಿಯವರ *ಭಯವು ಕಲಿಕೆಗೆ ಅಡ್ಡಿಯಾಗುತ್ತದೆ* ಲೇಖನವು ಮಕ್ಕಳ ಕಲಿಕೆಗೆ ಹೊಡೆಯುವುದೇ ಮದ್ದು ಎಂದು ನಂಬುವ ಸಾಮಾಜಿಕ ಚಿಂತನೆಯನ್ನು ನೇರವಾಗಿ ಪ್ರಶ್ನಿಸುತ್ತದೆ. ಮತ್ತು ಈ ವಿಷಯವು ಸಾಮಾನ್ಯವಾಗಿ ಅನೇಕ ವೇದಿಕೆಗಳಲ್ಲಿ ಪದೇ ಪದೇ ಕೇಳಿಬರುತ್ತದೆ. ತರಗತಿಯಿಂದ ಬೆತ್ತವನ್ನು ತೆಗೆದುಹಾಕುವುದು, ಮಕ್ಕಳ ಬೋಧನೆಯಲ್ಲಿ ಅವರದ್ದೇ ಭಾಷೆಯನ್ನು ಬಳಸುವುದು, ಅವರಿಗೆ ಸ್ವತಂತ್ರವಾಗಿ ಅಭಿವ್ಯಕ್ತಿಗೊಳಿಸಲು ಅವಕಾಶ ನೀಡುವುದು, ಚಟುವಟಿಕೆ ಆಧಾರಿತ ಶಿಕ್ಷಣ, ನಿರ್ಬಂಧಗಳಿಲ್ಲದ ವಾತಾವರಣ ಮುಂತಾದ ಶಿಕ್ಷಕರ ಕ್ರಮಗಳು ಅತ್ಯಂತ ಅವಶ್ಯಕವಾಗಿವೆ. ಇಂತಹದ್ದೇ ಕೆಲವು ನನ್ನ ಸ್ವಂತ ಅನುಭವಗಳಿಂದ, ಮಕ್ಕಳಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನೀಡಲು ಪ್ರಯತ್ನಿಸಬೇಕು ಎಂದು ನನಗೆ ಅರ್ಥವಾಗಿದೆ. ಈ ಪ್ರಯತ್ನವನ್ನು ನಾನು ಕಳೆದ 15 ವರ್ಷಗಳಿಂದ ನನ್ನ ಬೋಧನೆಯಲ್ಲಿ ಮಾಡುತ್ತಿದ್ದೇನೆ.

*ಪ್ರಮೋದ್ ಕುಮಾರ್ ಧ್ರುವ, ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಶಾಲೆ, ಅರೌದ್, ಧಮ್ತರಿ, ಛತ್ತೀಸ್‌ಗಢ*

## ಮಕ್ಕಳು ಆಡುವಾಗ ಕಲಿಯುತ್ತಿರುತ್ತಾರೆ

ಆರಂಭಿಕ ಬಾಲ್ಯ ಶಿಕ್ಷಣದ ವಿಶೇಷ ಸಂಚಿಕೆಯು ಸಣ್ಣ ಮಕ್ಕಳ ಬಗ್ಗೆ ಸಾಕಷ್ಟು ಆಸಕ್ತಿದಾಯಕ ಮತ್ತು ನಿಖರವಾದ ಮಾಹಿತಿಯನ್ನು ನೀಡುತ್ತದೆ. ಇದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಶಿಕ್ಷಕರ ಜೊತೆಗೆ ಪೋಷಕರಿಗೂ ಸಹ ಅತ್ಯಂತ ಉಪಯುಕ್ತವಾಗಿದೆ. ಜಿಗಿಶಾ ಶಾಸ್ತ್ರಿ, ಅವರ *ಆರಂಭಿಕ ಬಾಲ್ಯದ ಶಿಕ್ಷಕರು ಪದೇ ಪದೇ ಕೇಳುವ ಪ್ರಶ್ನೆಗಳು* ಲೇಖನದಲ್ಲಿ ನೀಡಲಾದ ಉತ್ತರಗಳು, ಮಕ್ಕಳ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪೋಷಕರ ತಿಳಿವಳಿಕೆಯನ್ನು ಗಟ್ಟಿಗೊಳಿಸುತ್ತವೆ. ಮಕ್ಕಳು ಆಟವಾಡುತ್ತಿರುವಾಗ ವಾಸ್ತವವಾಗಿ ಅವರು ಕಲಿಯುತ್ತಿರುತ್ತಾರೆ ಎಂಬುದನ್ನು ಪೋಷಕರು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಸಣ್ಣ ಮಕ್ಕಳು ಒಂದೇ ಕಡೆ ಹೆಚ್ಚು ಹೊತ್ತು ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ ಎಂಬುದನ್ನು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪೋಷಕರು ಅರ್ಥಮಾಡಿಕೊಳ್ಳಬಹುದು. ಅವರು ಪದೇ ಪದೇ ಜಾಗವನ್ನು ಬದಲಾಯಿಸುತ್ತಾರೆ ಮತ್ತು ಆಟಿಕೆಗಳನ್ನು ಬದಲಾಯಿಸುತ್ತಲೇ ಇರುತ್ತಾರೆ. ಇದು ಅವರ ನಿರಂತರ ಕಲಿಕೆಯ ಪ್ರಕ್ರಿಯೆಯಾಗಿದೆ.

*ಧರ್ಮಪಾಲ್ ಗಂಗ್ವಾರ್, ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರಾಥಮಿಕ ಶಾಲೆ, ಹಲ್ದಿ ಪಚ್ಪೇಡಾ, ಖಟಿಮಾ, ಉಧಮ್ ಸಿಂಗ್ ನಗರ, ಉತ್ತರಾಖಂಡ*

## 'ಭರವಸೆ ಮೂಡಿಸುವ ಶಿಕ್ಷಕರು' ಅಂಕಣದಲ್ಲಿ ಅಂಗನವಾಡಿ ಕಾರ್ಯಕರ್ತೆಯೊಂದಿಗಿನ ಸಂಭಾಷಣೆ ಸ್ಫೂರ್ತಿದಾಯಕವಾಗಿತ್ತು

ಪಾಠಶಾಲಾದ 26ನೇ ಸಂಚಿಕೆಯಲ್ಲಿ 'ಭರವಸೆ ಮೂಡಿಸುವ ಶಿಕ್ಷಕರು' ಅಂಕಣಕ್ಕಾಗಿ ನಿವೇದಿತಾ ತಿವಾರಿ ಅವರು ಅಂಗನವಾಡಿ ಕಾರ್ಯಕರ್ತೆ ಸುನೀತಾ ಸಿಂಗ್ ಅವರೊಂದಿಗೆ ನಡೆಸಿದ ಮಾತುಕತೆ - ನನ್ನ ಅಂಗನವಾಡಿ ಕೇಂದ್ರದ ಬದಲಾವಣೆಯ ಕಥೆ - ಬಹಳ ಮಹತ್ವದ್ದಾಗಿದೆ. ಈ ಲೇಖನದಿಂದ ಪ್ರೇರಣೆ ಪಡೆದು ನಮ್ಮ ಸೆಕ್ಟರ್‌ನ ಎಲ್ಲಾ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತಮ್ಮ ಅಂಗನವಾಡಿ ಕೇಂದ್ರಕ್ಕೆ ಹೊಸ ರೂಪ ನೀಡಿ ಮಕ್ಕಳ ಸ್ನೇಹಿಯನ್ನಾಗಿ ಮಾಡಲು ಪ್ರಯತ್ನಿಸಲಿ ಎಂಬ ಉದ್ದೇಶದಿಂದ ನಾನು ಇದನ್ನು ಅವರೊಂದಿಗೆ ಹಂಚಿಕೊಂಡಿದ್ದೇನೆ. ಇದರಿಂದ ಶಾಲಾ-ಪೂರ್ವ ಶಿಕ್ಷಣ ಸೇವೆಯ ಅಡಿಯಲ್ಲಿ ಅಂಗನವಾಡಿಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಾಗಲು ಸಾಧ್ಯವಾಗುತ್ತದೆ.

*ಸಂಗೀತಾ ಜೈನ್, ಮಹಿಳಾ ಮೇಲ್ವಿಚಾರಕರು, ಜೈಪುರ, ರಾಜಸ್ಥಾನ*

## ಸಂಪಾದಕೀಯವು ವಿಶೇಷ ಸಂಚಿಕೆಯ ಲೇಖನಗಳನ್ನು ಓದಲು ಪ್ರೇರೇಪಿಸಿತು

ವಿಶೇಷ ಸಂಚಿಕೆಯಲ್ಲಿ ಲಭ್ಯವಿರುವ ವಿಚಾರಗಳು ಅಂಗನವಾಡಿ ಕೇಂದ್ರದ ಪ್ರತಿಯೊಬ್ಬ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಮೇಲ್ವಿಚಾರಕರಿಗೂ ಅತ್ಯಂತ ಪ್ರಯೋಜನಕಾರಿಯಾಗಿವೆ. ಈ ಹೊಸ ಕಲಿಕಾ ಯುಗದಲ್ಲಿ ಇಂತಹ ವಿಚಾರಗಳು ಆರಂಭಿಕ ಶಿಕ್ಷಣದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇಬ್ಬರಿಗೂ ಉಪಯುಕ್ತವಾಗಿವೆ, ಏಕೆಂದರೆ ಇಂದಿನ ಶಿಕ್ಷಣವು ಶಿಕ್ಷಕ ಕೇಂದ್ರಿತವಾಗಿರದೆ ವಿದ್ಯಾರ್ಥಿ ಕೇಂದ್ರಿತವಾಗಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಒಂದು ಸವಾಲಿನ ವಿಷಯವೆಂದು ಪರಿಗಣಿಸಲಾಗಿದೆ. ಯಾವ ಶಿಕ್ಷಕರು ವಿದ್ಯಾರ್ಥಿಯನ್ನು ಮೊದಲೇ ಅರ್ಥಮಾಡಿಕೊಳ್ಳುತ್ತಾರೋ ಅವರೇ ವಿದ್ಯಾರ್ಥಿಗಳಿಗೆ ಹೆಚ್ಚು ಇಷ್ಟವಾಗುತ್ತಾರೆ ಎನ್ನಲಾಗುತ್ತದೆ. ಈ ಸಂಚಿಕೆಯ ಸಂಪಾದಕೀಯವು ಪತ್ರಿಕೆಯ ಪ್ರತಿಯೊಂದು ಲೇಖನವನ್ನು ಓದಲು ಪ್ರೇರೇಪಿಸುತ್ತದೆ.

*ಶಶಿಧರ್ ಸಿಂಗ್, ಸರ್ಕಾರಿ ಕಾಲೇಜು, ಮಾಧ್ಯಮಿಕ ವಿಭಾಗ, ಹಾರನ ಹಳ್ಳಿ, ಕರ್ನಾಟಕ*

## ಮಾತುಕತೆಯನ್ನು ಬರೆಯುವುದರಿಂದ ಆತ್ಮವಿಶ್ವಾಸ, ಅಭಿವ್ಯಕ್ತಿ ಮತ್ತು ಸೃಜನಶೀಲತೆ ಹೆಚ್ಚುತ್ತದೆ

ಪಾಠಶಾಲಾದ 25ನೇ ಸಂಚಿಕೆಯಲ್ಲಿ ವಿನೀತಾ ಚೌಕ್ಸೆ ಅವರ *ತರಗತಿಯಲ್ಲಿ ಚರ್ಚೆಗಳು ಬಹಳ ಮುಖ್ಯ* ಲೇಖನವನ್ನು ಓದಿದೆ. ಸಾಮಾನ್ಯವಾಗಿ ನಾನು ಕೂಡ ಮಕ್ಕಳೊಂದಿಗೆ ಅವರ ಅನುಭವಗಳ ಬಗ್ಗೆ ಮಾತನಾಡುತ್ತೇನೆ, ಆದರೆ ಸಂಭಾಷಣೆಯ ಅಗತ್ಯ ಮತ್ತು ಅದರ ಬಳಕೆಯನ್ನು ಓದು-ಬರಹದಲ್ಲಿ ಅನ್ವಯಿಸುವುದನ್ನು ನಾನು ಅರ್ಥಮಾಡಿಕೊಂಡಿರಲಿಲ್ಲ. ಈ ಲೇಖನದಲ್ಲಿ ನೀಡಲಾದ ಮಕ್ಕಳೊಂದಿಗಿನ ಮಾತುಕತೆ ಉದಾಹರಣೆಗಳಿಂದ ನಾವು ಮಕ್ಕಳ ಮಾತುಗಳನ್ನು ಗಮನವಿಟ್ಟು ಕೇಳಬೇಕು, ಅವರ ಮಾತಿಗೆ ಗೌರವ ನೀಡಬೇಕು ಮತ್ತು ಅವರಿಗೆ ಮಾತನಾಡಲು ಸಾಕಷ್ಟು ಅವಕಾಶಗಳನ್ನು ನೀಡಬೇಕು ಎಂಬುದು ಅರ್ಥವಾಯಿತು. ಅದರೊಂದಿಗೆ, ಮಕ್ಕಳು ಸಂಭಾಷಣೆಯನ್ನು ಬರೆಯುವುದರಿಂದ ಅವರಲ್ಲಿ ಆತ್ಮವಿಶ್ವಾಸ, ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಸೃಜನಶೀಲತೆ ಬೆಳೆಯುತ್ತದೆ.

*ಪ್ರೀತಿ ಸಕ್ಸೇನಾ, ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಶಾಲೆ ಹೆಡ್ ಕ್ವಾರ್ಟರ್ ನಂ. 8, ಲೇಟಾ, ಜಾಲೋರ್, ರಾಜಸ್ಥಾನ*

## ಯಾವುದೇ ಮಗು ಕಲಿಕೆಯ ಪ್ರಕ್ರಿಯೆಯಿಂದ ಹೊರಗುಳಿಯಬಾರದು

26ನೇ ಸಂಚಿಕೆಯ *ಅಂಗನವಾಡಿ ಕೇಂದ್ರಗಳ ಪರಿಸರವು ಸಂತೋಷದಾಯಕವಾಗಿರಬೇಕು* ಲೇಖನದಲ್ಲಿ ಲೇಖಕರು ವಿವರಿಸುವಂತೆ, ಅವರು ಮಕ್ಕಳೊಂದಿಗೆ ಯಾವುದಾದರೂ ವಿಶೇಷ ವಿಷಯ ಅಥವಾ ಥೀಮ್ ಮೇಲೆ ಕೆಲಸ ಮಾಡುವಾಗ, ಆ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯ ವಸ್ತುಗಳನ್ನು ಮೊದಲೇ ಕೇಂದ್ರದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುತ್ತಾರೆ. ಇದರಿಂದ ಎಲ್ಲಾ ಮಕ್ಕಳು ಚಟುವಟಿಕೆಗಳಲ್ಲಿ ಸಮಾನವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. ಮಕ್ಕಳ ಕೌಟುಂಬಿಕ ಹಿನ್ನೆಲೆ ಎಂತಹದ್ದೇ ಇರಲಿ, ಯಾವುದೇ ಮಗು ಕಲಿಕೆ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಂಚಿತವಾಗದಂತೆ ಅವರು ಕಾಳಜಿ ವಹಿಸುತ್ತಾರೆ.

*ಜಿಯಾ ಅನ್ಸಾರಿ, ಗ್ರಂಥಾಲಯ ಪ್ರಭಾರಿ, ಅಜೀಂ ಪ್ರೇಮ್‌ಜಿ ಶಾಲೆ, ಉಧಮ್ ಸಿಂಗ್ ನಗರ, ಉತ್ತರಾಖಂಡ*

## ನಾಟಕವು ಒಂದು ಪ್ರತ್ಯೇಕ ಚಟುವಟಿಕೆಯಾಗದೆ, ದೈನಂದಿನ ಶೈಕ್ಷಣಿಕ ಪ್ರಕ್ರಿಯೆಯ ಭಾಗವಾಗಲಿ

ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಪಾರುಲ್ ಬಾತ್ರಾ ದುಗ್ಗಲ್ ಅವರ ಲೇಖನವು, ಅಂಗನವಾಡಿಯಲ್ಲಿ ನಾಟಕವನ್ನು ಶೈಕ್ಷಣಿಕ ಪ್ರಯೋಗವಾಗಿ ಅಳವಡಿಸಿಕೊಳ್ಳುವ ಪ್ರಕ್ರಿಯೆಯನ್ನು ಸ್ಪಷ್ಟ ಹಂತಗಳಲ್ಲಿ ವಿವರಿಸುತ್ತದೆ.

- ಮಕ್ಕಳ ಅನುಭವ ಅವರ ಕಲಿಕೆಯ ದಿಕ್ಕನ್ನು ನಿರ್ಧರಿಸುತ್ತವೆ ಎಂಬ ತಿಳಿವಳಿಕೆಯನ್ನು ಇದು ಮೂಡಿಸುತ್ತದೆ.

-ಅಂಗನವಾಡಿ ಕಾರ್ಯಕರ್ತೆಯ ಪಾತ್ರವನ್ನು ಲೇಖನದಲ್ಲಿ ನಿರ್ದೇಶಕ ಅಥವಾ ನಿಯಂತ್ರಕನ ಬದಲಾಗಿ ಸಹಾಯಕ ಮತ್ತು ವೀಕ್ಷಕನ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ. ಇದು ಒಂದು ಪ್ರಮುಖ ಶೈಕ್ಷಣಿಕ ಒಳನೋಟವಾಗಿದೆ.

-ಈ ಪ್ರಯೋಗವು ಯಾವುದೇ 'ವಿಶೇಷ ಚಟುವಟಿಕೆ' ಎಂದು ಸೀಮಿತವಾಗಿರದೆ, ಅಂಗನವಾಡಿಯ ದೈನಂದಿನ ಶೈಕ್ಷಣಿಕ ಪ್ರಕ್ರಿಯೆಯ ಭಾಗವಾಯಿತು. ಇದರಿಂದ ನಾಟಕವನ್ನು ಪ್ರತ್ಯೇಕವಾಗಿ 'ಮಾಡಿಸುವುದರ' ಬದಲಾಗಿ ಕಲಿಕೆಯೊಳಗೇ ಅದನ್ನು ಸಂಯೋಜಿಸುವ ಒಳನೋಟ ಇಲ್ಲಿ ಕಂಡುಬರುತ್ತದೆ.

-ಎಲ್ಲಾ ಮಕ್ಕಳೂ ಒಂದೇ ರೀತಿ ಭಾಗವಹಿಸದಿರುವುದು ಅಥವಾ ಫಲಿತಾಂಶವು ಮೊದಲೇ ಗೊತ್ತಿಲ್ಲದಿರುವಂತಹ ಈ ಪ್ರಯೋಗದ ಸವಾಲುಗಳನ್ನು ಇಲ್ಲಿ ಮುಚ್ಚಿಟ್ಟಿಲ್ಲ; ಇದು ಲೇಖನದ ಮೇಲಿನ ನಂಬಿಕೆಯನ್ನು ಹೆಚ್ಚಿಸುತ್ತದೆ ಮತ್ತು ಅದು ವಾಸ್ತವಕ್ಕೆ ಹತ್ತಿರವಾಗಿದೆ ಎಂದು ತೋರಿಸಿಕೊಡುತ್ತದೆ.

ಈ ಲೇಖನವು ಅಂಗನವಾಡಿ ಮಟ್ಟದಲ್ಲಿ ನಾಟಕವನ್ನು ಶೈಕ್ಷಣಿಕ ಪ್ರಯೋಗವಾಗಿ ಅರ್ಥಮಾಡಿಕೊಳ್ಳಲು ಮತ್ತು ಅಳವಡಿಸಿಕೊಳ್ಳಲು ಒಂದು ಗಂಭೀರವಾದ, ಅನುಭವಜನ್ಯ ಮತ್ತು ಚಿಂತನಶೀಲ ಪ್ರಸ್ತುತಿಯಾಗಿದೆ.

*ಭುವನ್ ತಿವಾರಿ, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜಿ ಫೌಂಡೇಷನ್, ಭೋಪಾಲ್, ಮಧ್ಯಪ್ರದೇಶ*

## ಮುಚ್ಚುತ್ತಿದ್ದ ಶಾಲೆಯ ಚಿತ್ರಣವನ್ನೇ ಬದಲಿಸಿದ ಸಮುದಾಯದ ಸಹಭಾಗಿತ್ವ ಮತ್ತು ಸೃಜನಶೀಲತೆ

*ಪಾಠಶಾಲಾ ಒಳಗೂ* ಮತ್ತು *ಹೊರಗೂ* ಸಂಚಿಕೆ 24ರ *ಒಂದು ಶಾಲೆಯ ಪರಿವರ್ತನೆ* ಲೇಖನದಲ್ಲಿ, ಸಂವೇದನಾಶೀಲ ಶಿಕ್ಷಕರ ಸಮರ್ಪಿತ ತಂಡವೊಂದು ಹೇಗೆ ಸಮುದಾಯ ಮತ್ತು ಶಾಲೆಯ ನಡುವಿನ ಕಂದಕವನ್ನು ಕಡಿಮೆ ಮಾಡಿತು ಎಂಬುದನ್ನು ತೋರಿಸಲಾಗಿದೆ. ಸಮರ್ಪಿತ ಶಿಕ್ಷಕರು ಮಕ್ಕಳ ಕಲಿಕೆಯನ್ನು ಸಮುದಾಯದ ಮುಂದೆ ಹಂಚಿಕೊಳ್ಳುವುದಕ್ಕೆ ವಿಶೇಷ ಮಹತ್ವ ನೀಡಿದರು. ಈ ಪ್ರಯತ್ನವು ಮುಚ್ಚುತ್ತಿದ್ದ ಶಾಲೆಗೆ ಆಶಾಕಿರಣವಾಯಿತು, ಇದರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಅವರು ಸಾಧಿಸಿದ ಸಾಧನೆಗಳು ಎಲ್ಲರ ಗಮನ ಸೆಳೆದವು. ಶಿಕ್ಷಕರು ಅಭಿವೃದ್ಧಿಪಡಿಸಿದ ಓದುವ ವಿಧಾನಗಳು ಬಹಳ ಆಸಕ್ತಿದಾಯಕವಾಗಿವೆ. ಇವುಗಳಲ್ಲಿ ಓದುವ ಹಬ್ಬದಲ್ಲಿನ ವಿವಿಧ ವಿಧಾನಗಳಾದ ಕನ್ನಡಿಯಲ್ಲಿ ಓದುವುದು, ದಿನಪತ್ರಿಕೆ ಓದುವುದು, ಪುಸ್ತಕವನ್ನು ಉಲ್ಟಾ ಹಿಡಿದು ಓದುವುದು, ನಾಟಕೀಯ ವಿನಿಮಯದ ಮೂಲಕ ಗಣಿತದ ಜ್ಞಾನ ಮತ್ತು ಜಿಗ್‌ಜಾಗ್ ಓದುವಿಕೆ ಸಾಕಷ್ಟು ಕುತೂಹಲಕಾರಿಯಾಗಿದ್ದವು. ಶಿಕ್ಷಕರು ನೀಡಿದ ಸವಾಲುಗಳಿಂದ ಏನನ್ನಾದರೂ ಕಲಿಯುತ್ತಾ ಮುನ್ನಡೆಯುವುದು ನನ್ನಲ್ಲಿ ಆಶಾವಾದವನ್ನು ಮೂಡಿಸಿತು.

*ದೀಪಾ, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜಿ ಫೌಂಡೇಷನ್, ಮಗರ್‌ಲೋಡ್, ಧಮ್ತರಿ, ಛತ್ತೀಸ್‌ಗಢ*

## ಆರಂಭಿಕ ಬಾಲ್ಯದ ಶಿಕ್ಷಣದ ವಿಶೇಷ ಸಂಚಿಕೆಯು ಸಾಮರ್ಥ್ಯ ವರ್ಧನೆಯ ಪ್ರಬಲ ಮಾಧ್ಯಮವಾಯಿತು

*ಪಾಠಶಾಲಾ ಒಳಗೂ* ಮತ್ತು *ಹೊರಗು* ಪತ್ರಿಕೆಯ ಈ ವಿಶೇಷ ಸಂಚಿಕೆಯು ಕೇವಲ ಪತ್ರಿಕೆಯಾಗಿರದೆ, ಕ್ಷೇತ್ರಕಾರ್ಯದೊಂದಿಗೆ ನಡೆಯುತ್ತಿರುವ ಸಂಭಾಷಣೆಯಂತೆ ಭಾಸವಾಯಿತು. ಈ ಸಂಚಿಕೆಯ ದೊಡ್ಡ ವೈಶಿಷ್ಟ್ಯವೆಂದರೆ ಇದರಲ್ಲಿ ಆರಂಭಿಕ ಬಾಲ್ಯ ಶಿಕ್ಷಣವನ್ನು ಯಾವುದೇ ಆದರ್ಶ ಅಥವಾ ಕಠಿಣವಾದ ನೀತಿ ನಿರೂಪಣೆಯ ಭಾಷೆಯಲ್ಲಿ ವಿವರಿಸದೆ, ಮಕ್ಕಳ ನೈಜ ಅನುಭವಗಳ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ಸಂಚಿಕೆಯನ್ನು ಸೆಕ್ಟರ್ ಸಭೆಗಳು, ಶಿಕ್ಷಕರ ಸಭೆಗಳು ಮತ್ತು ತರಬೇತಿ ಅವಧಿಗಳಲ್ಲಿ ನೇರವಾಗಿ ಆಕರ ವಸ್ತುವಾಗಿ ಬಳಸಬಹುದು. ಲೇಖನಗಳ ಭಾಗಗಳನ್ನು ಓದಿ ಅವುಗಳ ಬಗ್ಗೆ ಚರ್ಚೆ ನಡೆಸಬಹುದು, ಇದರಿಂದಾಗಿ ತರಬೇತಿಯು ಕೇವಲ 'ಹೇಳುವುದು' ಆಗಿರದೆ 'ಯೋಚಿಸುವ ಮತ್ತು ಅರ್ಥಮಾಡಿಕೊಳ್ಳುವ' ಪ್ರಕ್ರಿಯೆಯಾಗುತ್ತದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಜನರ ಸಾಮರ್ಥ್ಯ ವೃದ್ಧಿಗೆ ಈ ಪತ್ರಿಕೆಯು ಒಂದು ಪ್ರಬಲ ಮಾಧ್ಯಮವಾಗಬಲ್ಲದು. ಈ ಸಂಚಿಕೆಯು ಆರಂಭಿಕ ಬಾಲ್ಯದ ಶಿಕ್ಷಣದ ಕುರಿತು ಸಮತೋಲಿತ ಮತ್ತು ವಿಶ್ವಾಸಾರ್ಹ ದೃಷ್ಟಿಕೋನವನ್ನು ಪ್ರಸ್ತುತಪಡಿಸುತ್ತದೆ, ಇಲ್ಲಿ ಸಂಶೋಧನೆ, ಅನುಭವ ಮತ್ತು ವಾಸ್ತವದ ನೆಲೆಗಟ್ಟುಗಳು ಒಟ್ಟಾಗಿ ಕಾಣಿಸುತ್ತವೆ. ಈ ಪತ್ರಿಕೆಯು ಅಂಗನವಾಡಿ ಕಾರ್ಯಕರ್ತೆಯರಿಗೆ, ಶಾಲಾ-ಪೂರ್ವ ಶಿಕ್ಷಕರಿಗೆ, ತರಬೇತುದಾರರಿಗೆ ಮತ್ತು ನೀತಿ ನಿರೂಪಕರಿಗೆ ಉಪಯುಕ್ತವಾಗಲಿದೆ ಹಾಗೂ ಆರಂಭಿಕ ಬಾಲ್ಯ ಶಿಕ್ಷಣ ಕುರಿತಾದ ಚರ್ಚೆಯನ್ನು ಇನ್ನಷ್ಟು ಆಳಗೊಳಿಸಲಿದೆ ಎಂಬ ನಂಬಿಕೆ ನನಗಿದೆ.

*ಅನಾನಾಸ್ ಕುಮಾರ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಉಧಮ್ ಸಿಂಗ್ ನಗರ, ಉತ್ತರಾಖಂಡ*

## ಅಂಗನವಾಡಿಯ ಸಣ್ಣ ಮಕ್ಕಳೊಂದಿಗೆ ನಾಟಕದ ಮೇಲೆಯೂ ಕೆಲಸ ಮಾಡಬಹುದು

ವಿಶೇಷ ಸಂಚಿಕೆಯಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದ ಕುರಿತಾದ ಪಾರುಲ್ ಬಾತ್ರಾ ಅವರ ಲೇಖನವು ತುಂಬಾ ಚೆನ್ನಾಗಿತ್ತು. ಸಾಮಾನ್ಯವಾಗಿ ನಾಟಕ ಕಲೆಯನ್ನು ಶಾಲಾ ಮಟ್ಟದ ಮಕ್ಕಳೊಂದಿಗೆ ಮಾತ್ರ ಜೋಡಿಸಿ ನೋಡಲಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಶಿಕ್ಷಕರು ಕಥೆ-ಕವಿತೆಗಳನ್ನು ಭಾವಾಭಿನಯದೊಂದಿಗೆ ಮಾಡಿಸಲು ಮುಜುಗರಪಟ್ಟುಕೊಳ್ಳುತ್ತಾರೆ, ಇನ್ನು ನಾಟಕವು ಅದಕ್ಕಿಂತ ಒಂದು ಹಂತ ಮೇಲಿನ ವಿಷಯವಾಗಿದೆ. ನಾಟಕ ಮಾಡಿಸಲು ಒಂದು ಮಟ್ಟದ ಸಿದ್ಧತೆ ಮತ್ತು ಮಕ್ಕಳೊಂದಿಗೆ ಕೆಲಸ ಮಾಡುವ ಅಗತ್ಯವಿರುತ್ತದೆ. ಸರಿಯಾದ ರೀತಿಯಲ್ಲಿ ನಾಟಕದ ಮೇಲೆ ಕೆಲಸ ಮಾಡಿದರೆ, ಎಲ್ಲಾ ವಯಸ್ಸಿನ ಮಕ್ಕಳು ಆ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ ಮತ್ತು ಕಲಿಯುತ್ತಾರೆ. ಇಲ್ಲಿ ವಿಷಯ ವಯಸ್ಸಿನದ್ದಲ್ಲ, ಬದಲಾಗಿ ಸರಿಯಾದ ಕ್ರಮದಲ್ಲಿ ಅದರ ಮೇಲೆ ಕೆಲಸ ಮಾಡುವ ಅಗತ್ಯವಿದೆ.

*ಪ್ರೇರಣಾ, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜಿ ಫೌಂಡೇಷನ್, ದಮೋಹ್, ಮಧ್ಯಪ್ರದೇಶ*

## ಆಟಗಳ ಮೂಲಕ ಮಕ್ಕಳಿಗೆ ಕಲಿಸೋಣ

ಸಂಚಿಕೆ 26ರಲ್ಲಿ ಪ್ರಕಟವಾದ *ಆರಂಭಿಕ ವರ್ಷಗಳಲ್ಲಿನ ಶಿಕ್ಷಣ | ಒಂದು ಪರಿಕಲ್ಪನಾತ್ಮಕ ವಿಶ್ಲೇಷಣೆ* ಲೇಖನವನ್ನು ಕಿನ್ನರಿ ಪಾಂಡ್ಯ ಬರೆದಿದ್ದಾರೆ. ಇದರ ಮೊದಲ ಸಾಲು, "ಸಣ್ಣ ಮಕ್ಕಳಿಗೆ ಶಿಕ್ಷಣದ ಅರ್ಥವೆಂದರೆ ಅವರು ಜಗತ್ತಿನೊಂದಿಗೆ ಬೆರೆಯಲು ಸಹಾಯ ಮಾಡುವುದು", ಎಂಬುದು ನನ್ನನ್ನು ಜಾಗೃತಗೊಳಿಸಿತು. ಮಗುವಿನ ಆರಂಭಿಕ ಅವಧಿಯು ಜೀವನದ ಅತ್ಯಂತ ಪ್ರಭಾವಶಾಲಿ ಸಮಯ ಎಂದು ಲೇಖನದಲ್ಲಿ ತಿಳಿಸಲಾಗಿದೆ. ಆಟದಿಂದ ಮಕ್ಕಳ ದೈಹಿಕ ಬೆಳವಣಿಗೆಯಾಗುವುದರ ಜೊತೆಗೆ ಅವರು ತುಂಬಾ ಸಂತೋಷದಿಂದಿರುತ್ತಾರೆ ಎಂಬುದನ್ನು ನಾನು ಗಮನಿಸಿದ್ದೇನೆ. ಅತ್ಯಂತ ಮುಖ್ಯವಾದ ವಿಷಯವೆಂದರೆ, ಮಕ್ಕಳು ಸಂತೋಷದಿಂದ ಮತ್ತು ಸ್ವಯಂ ಪ್ರೇರಿತರಾಗಿ ಶಾಲೆಗೆ ಬಂದಾಗ ಅವರು ಕಲಿಯುತ್ತಾರೆ ಮತ್ತು ಉತ್ಸಾಹಿ ಓದುಗರಾಗುತ್ತಾರೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಈ ಲೇಖನವು ಬಹಳ ಉಪಯುಕ್ತವಾಗಿದೆ.

*ಮೀನು ನಯಾಲ್, ಶಿಕ್ಷಕಿ, ಸರ್ಕಾರಿ ಪ್ರಾಥಮಿಕ ಶಾಲೆ ಕುಮ್ರಾಹ್, ಖಟಿಮಾ, ಉಧಮ್ ಸಿಂಗ್ ನಗರ, ಉತ್ತರಾಖಂಡ*

## ಮಕ್ಕಳ ಸಮಗ್ರ ಬೆಳವಣಿಗೆಯ ಆಧಾರವೇ ಮಗು-ಕೇಂದ್ರಿತ ಶಿಕ್ಷಣದ ಆಧಾರ

ಡಿಸೆಂಬರ್ 2025ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಪಾರುಲ್ ಬಾತ್ರಾ ದುಗ್ಗಲ್ ಅವರ *ಆರಂಭಿಕ ಶಿಕ್ಷಣ ಮತ್ತು ನಾಟಕ* ಲೇಖನದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ನಾಟಕದ ಪಾತ್ರವನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಸರಳವಾಗಿ ವಿವರಿಸಲಾಗಿದೆ. ನಾಟಕವು ಮಕ್ಕಳಿಗೆ ಕಲಿಕೆಯ ಸಹಜ ಮತ್ತು ಆಕರ್ಷಕ ಮಾಧ್ಯಮ ಎಂಬ ವಿಷಯವು ನನಗೆ ಇಷ್ಟವಾಯಿತು. ನಾಟಕವು ಕೇವಲ ಮನೋರಂಜನೆಯಲ್ಲ, ಬದಲಾಗಿ ಇದು ಮಕ್ಕಳಿಗೆ ಅವರ ಸುತ್ತಮುತ್ತಲಿನ ವಾತಾವರಣ, ಸಹಪಾಠಿಗಳು ಮತ್ತು ದೈನಂದಿನ ಪರಿಸ್ಥಿತಿಗಳೊಂದಿಗೆ ಬೆರೆಯುವ ಅವಕಾಶವನ್ನು ನೀಡುತ್ತದೆ. ನಾಟಕವು ಮಕ್ಕಳಿಗೆ ತಮ್ಮ ಭಾವನೆ, ಆಲೋಚನೆ ಮತ್ತು ಕಲ್ಪನೆಗಳನ್ನು ವ್ಯಕ್ತಪಡಿಸಲು ಅವಕಾಶ ನೀಡುತ್ತದೆ ಎಂದು ಲೇಖಕರು ತಿಳಿಸಿದ್ದಾರೆ. ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಈ ಮಾಧ್ಯಮವು ಅತ್ಯಂತ ಪ್ರಮುಖವಾಗಿದೆ.

*ವಿವೇಕ್ ಸೋನಿ, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜಿ ಫೌಂಡೇಷನ್, ಉತ್ತರಾಖಂಡ*

## ಕಥೆಗಳು ಮಾನವೀಯ ಮೌಲ್ಯಗಳ ಬೆಳವಣಿಗೆಗೆ ಉತ್ತಮ ಅವಕಾಶಗಳನ್ನು ಸೃಷ್ಟಿಸುತ್ತವೆ

*ಪಾಠಶಾಲಾ*ದ 25ನೇ ಸಂಚಿಕೆಯ ಲೇಖನಗಳನ್ನು ಓದಿದಾಗ, ನಾವು ಮಕ್ಕಳನ್ನು ಅರ್ಥಮಾಡಿಕೊಂಡಾಗ ಮತ್ತು ಅವರ ಅಗತ್ಯಗಳಿಗೆ ಅನುಗುಣವಾಗಿ ಬೋಧನಾ ಚಟುವಟಿಕೆಗಳನ್ನು ನಡೆಸಿದಾಗ ಮಾತ್ರ ಮಕ್ಕಳ ಕಲಿಕೆ ಸರಿಯಾದ ಅರ್ಥದಲ್ಲಿ ನಡೆಯುತ್ತದೆ ಎಂಬುದು ತಿಳಿಯಿತು. ಎಸ್. ಕವಿತಾ ಅವರ *ಕಥೆ ಹೇಳುವ ಮೂಲಕ ಭಾವನಾತ್ಮಕ ಬೆಳವಣಿಗೆ* ಲೇಖನದಲ್ಲಿ, 4ನೇ ತರಗತಿಯಲ್ಲಿ ಕಥೆ ಹೇಳುವುದರ ಮೇಲೆ ಮಾಡಿದ ಪ್ರಯತ್ನಗಳನ್ನು ವಿವರಿಸಲಾಗಿದೆ. ಇದರಲ್ಲಿ ಕಥೆ ಹೇಳುವುದರ ಮೂಲಕ ಮಕ್ಕಳಲ್ಲಿ ಸಹಾನುಭೂತಿ, ದಯೆ, ಭಾವನಾತ್ಮಕ ಬುದ್ಧಿವಂತಿಕೆಯ ಮೌಲ್ಯಗಳನ್ನು ಬೆಳೆಸುವ ಉತ್ತಮ ಉದಾಹರಣೆಗಳು ಸಿಗುತ್ತವೆ. ಅಮ್ಮಾನ್ ಮದಾನ್ ಅವರ *ಭ್ರಾತೃತ್ವದ ಬೋಧನೆ* ಲೇಖನವು ಮಕ್ಕಳಲ್ಲಿ ಬೆಳೆಯುತ್ತಿರುವ ಸ್ಪರ್ಧಾತ್ಮಕ ಮನೋಭಾವವನ್ನು ದೂರ ಮಾಡಿ ಪರಸ್ಪರ ಸಹಕಾರದ ಭಾವನೆಯನ್ನು ಬೆಳೆಸುವ ಪ್ರಕ್ರಿಯೆಗಳ ಬಗ್ಗೆ ತಿಳಿವಳಿಕೆ ಮೂಡಿಸಿತು.

*ದೀಪಕ್ ಯಾದವ್, ಸಂಪನ್ಮೂಲ ವ್ಯಕ್ತಿ, ಅಜೀಂ ಪ್ರೇಮ್‌ಜಿ ಫೌಂಡೇಷನ್, ಜಾಲೋರ್, ರಾಜಸ್ಥಾನ*

## ಕಲಿಕೆಗೆ ವಾತಾವರಣವು ಆನಂದದಾಯಕವಾಗಿರುವುದು ಬಹಳ ಮುಖ್ಯ

*ಪಾಠಶಾಲಾ* ಪತ್ರಿಕೆಯು ಶಿಕ್ಷಣಕ್ಕೆ ಸಂಬಂಧಿಸಿದ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಮೀರಿ ಏನನ್ನಾದರೂ ಮಾಡಲು ಪ್ರೇರೇಪಿಸುತ್ತದೆ. ನಾನು ಇದನ್ನು ನಿಯತವಾಗಿ ಓದುತ್ತೇನೆ. ಪತ್ರಿಕೆಯ 'ಆರಂಭಿಕ ಬಾಲ್ಯ ಶಿಕ್ಷಣ' ವಿಶೇಷ ಸಂಚಿಕೆಯಲ್ಲಿ ಸುನಿಲ್ ಕುಮಾರ್ ಸಾಹ ಅವರ *ಅಂಗನವಾಡಿ ಕೇಂದ್ರಗಳ ಪರಿಸರವು ಸಂತೋಷದಾಯಕವಾಗಿರಬೇಕು* ಲೇಖನವನ್ನು ಓದಿದಾಗ, ಕಲಿಕೆಗೆ ವಾತಾವರಣವು ಆನಂದದಾಯಕವಾಗಿರುವುದು ಅತ್ಯಂತ ಅವಶ್ಯಕ ಎಂಬುದು ಅರ್ಥವಾಗುತ್ತದೆ. ಇದರಿಂದ ಸಣ್ಣ ಮಕ್ಕಳು ಕೂಡ ಕೇಂದ್ರದ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುತ್ತಾರೆ ಮತ್ತು ಅವರು ಅಲ್ಲಿ ಹೆಚ್ಚು ಸಮಯ ಕಳೆಯಲು ಸಾಧ್ಯವಾಗುತ್ತದೆ. ಇದರಿಂದ ಪುಟ್ಟ ಮಕ್ಕಳು ಸಣ್ಣ ಸಣ್ಣ ಕವಿತೆಗಳು, ಕಥೆಗಳು ಮತ್ತು ವಿವಿಧ ಆಟಗಳ ಮೂಲಕ ಖುಷಿಯಿಂದ ಕಲಿಯುವುದು ಸಾಧ್ಯವಾಗುತ್ತದೆ. ನನ್ನ ಮನೆಯ ಹತ್ತಿರವೂ ಒಂದು ಅಂಗನವಾಡಿ ಕೇಂದ್ರವಿದೆ. ನಾನು ಅಲ್ಲಿಗೆ ಹೋಗಿ ಅಂಗನವಾಡಿ ಮಕ್ಕಳೊಂದಿಗೆ ಕೆಲವು ವಿಷಯಗಳನ್ನು ನೋಡಲು, ಯೋಚಿಸಲು-ಅರ್ಥಮಾಡಿಕೊಳ್ಳಲು ಮತ್ತು ಏನನ್ನಾದರೂ ಮಾಡಲು ಪ್ರಯತ್ನಿಸುವೆ.

*ಸಂಗೀತಾ ಗುಪ್ತಾ, ಮುಖ್ಯೋಪಾಧ್ಯಾಯರು (ನಿವೃತ್ತ), ಸರ್ಕಾರಿ ಪ್ರಾಥಮಿಕ ಶಾಲೆ, ಪಂಡರಿ, ಉಧಮ್ ಸಿಂಗ್ ನಗರ, ಉತ್ತರಾಖಂಡ*

*ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ರಾಕೇಶ್ ಪೂಂಜಾ*

# ಲೇಖಕರ ಗಮನಕ್ಕೆ

1. ಮುದ್ರಣದಲ್ಲಿ ಲೇಖನದ ಶೀರ್ಷಿಕೆಯ ಕೆಳಗೆ ನಿಮ್ಮ ಹೆಸರು ಹೇಗೆ ಇರಬೇಕೋ ಹಾಗೆ ನಿಮ್ಮ ಹೆಸರನ್ನು ಬರೆಯಿರಿ.
2. ನೀವು ನಿಮ್ಮ ಲೇಖನವನ್ನು ವರ್ಡ್ ಡಾಕ್ಯುಮೆಂಟ್ ರೂಪದಲ್ಲಿ ಕಳಿಸಿ. ಅದರಲ್ಲಿ ಯಾವುದೇ ರೀತಿಯ ಬಾಕ್ಸ್, ಬಾರ್ಡರ್ ಮುಂತಾದವುಗಳು ಇರಬಾರದು. ಲೇಖನವನ್ನು ಪಿಡಿಎಫ್ ರೂಪದಲ್ಲಿ ಕಳಿಸಬೇಡಿ.
3. ಲೇಖನಕ್ಕೆ ಸಂಬಂಧಿಸಿದ ಚಿತ್ರಗಳು ಉತ್ತಮ ಗುಣಮಟ್ಟದ್ದಾಗಿರಬೇಕು (ಹೈ ರೆಸಲ್ಯೂಶನ್ ಫೋಟೋಗಳು). ಚಿತ್ರಗಳನ್ನು ವರ್ಡ್ ಡಾಕ್ಯುಮೆಂಟ್‌ನಲ್ಲಿ ಸೇರಿಸದೇ, ಪ್ರತ್ಯೇಕವಾಗಿ ಈಮೇಲ್‌ಗೆ ಲಗತ್ತಿಸಿ ಕಳಿಸಿ.
4. ಮೂರು ಅಥವಾ ನಾಲ್ಕಕ್ಕಿಂತ ಹೆಚ್ಚು ಚಿತ್ರಗಳನ್ನು ಕಳಿಸಬೇಡಿ. ಪ್ರತಿಯೊಂದು ಚಿತ್ರದ ಫೈಲಿಗೂ ಚಿತ್ರ 1, ಚಿತ್ರ 2 - ಹೀಗೆ ಹೆಸರು ಕೊಡಿ. ಲೇಖನದಲ್ಲಿ ಯಾವ ಚಿತ್ರವು ಎಲ್ಲಿ ಬರಬೇಕೆಂದು ಸೂಚಿಸಿ ಅಲ್ಲಿ ಆ ಚಿತ್ರದ ಶೀರ್ಷಿಕೆಯನ್ನು ಕೊಡಿ. ಚಿತ್ರದ ಬಳಕೆಯ ವಿಚಾರದಲ್ಲಿ ಸಂಪಾದಕರ ನಿರ್ಧಾರವು ಅಂತಿಮವಾಗಿರುತ್ತದೆ.
5. ಚಿತ್ರದ ಕೆಳಗೆ ಚಿತ್ರದ ಆಕರವನ್ನು ತಪ್ಪದೆ ನಮೂದಿಸಿ. ಎಲ್ಲ ಚಿತ್ರಗಳೂ ಕಾಪಿರೈಟ್ ಫ್ರೀ ಆಗಿರಬೇಕು.
6. ಫೋಟೋ ಅನ್ನು ನೀವೇ ತೆಗೆದಿದ್ದರೆ, ಅದನ್ನು ನಮ್ಮ ಪ್ರಕಟಣೆಯಲ್ಲಿ ಬಳಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಯ (ಶಿಕ್ಷಕರು ಅಥವಾ ಶಾಲೆ) ಅನುಮತಿ ಪಡೆದುಕೊಳ್ಳಿ.
7. ಮಕ್ಕಳ ಕ್ಲೋಸ್‌ಅಪ್ ಫೋಟೋಗಳನ್ನು ಮತ್ತು ಮಕ್ಕಳ ಮುಖಗಳು ಸ್ಪಷ್ಟವಾಗಿ ಕಾಣುವಂತಹ ಫೋಟೋಗಳನ್ನು ತೆಗೆಯುವುದನ್ನು ತಪ್ಪಿಸಿ.
8. ನಿಮ್ಮ ಲೇಖನದಲ್ಲಿ ಬೇರೆ ಪುಸ್ತಕ ಅಥವಾ ಲೇಖನದಿಂದ ಆಯ್ದ ಭಾಗವನ್ನು ಬಳಸಿದಾಗ ಅಥವಾ ವ್ಯಕ್ತಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿದಾಗ, ಅವರ ಸಂಪೂರ್ಣ ಹೆಸರುಗಳು ಮತ್ತು ಉಲ್ಲೇಖಗಳನ್ನು ಸೇರಿಸುವ ಮೂಲಕ ಇದನ್ನು ಸ್ಪಷ್ಟವಾಗಿ ನಮೂದಿಸಿ.
9. ಲೇಖನವನ್ನು ನಮಗೆ ಕಳಿಸುವ ಮೊದಲು ಎರಡು ಬಾರಿ ಓದಿ. ಹೀಗೆ ಮಾಡುವುದರಿಂದ, ಲೇಖನದಲ್ಲಿ ಕಾಗುಣಿತದ ದೋಷಗಳನ್ನು ತಿದ್ದುವುದೂ ಸೇರಿದಂತೆ ಹಲವು ಗಣನೀಯ ತಿದ್ದುಪಡಿಗಳನ್ನು ಮಾಡಬಹುದು.
10. ನಿಮ್ಮ ಲೇಖನದೊಂದಿಗೆ ನಿಮ್ಮ ಸಂಕ್ಷಿಪ್ತ ಪರಿಚಯ, ಸ್ಪಷ್ಟವಾದ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ನಿಮ್ಮ ಇಮೇಲ್ ವಿಳಾಸ, ಸಂಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸೇರಿಸಿ.
11. ನೀವು ಸಲ್ಲಿಸುತ್ತಿರುವ ಲೇಖನವು ನೀವೇ ಬರೆದಿರುವ ಲೇಖನವಾಗಿರಬೇಕು. ಸಲ್ಲಿಸುವ ಸಂದರ್ಭದಲ್ಲಿ ಅದು ಎಲ್ಲಿಯೂ ಪ್ರಕಟವಾಗಿರಬಾರದು ಮತ್ತು ಅದನ್ನು ನೀವು ಬೇರೆ ಯಾವ ಪತ್ರಿಕೆಯಲ್ಲೂ ಪ್ರಕಟಣೆಗೆ (ಪ್ರಿಂಟ್ ಅಥವಾ ಆನ್‌ಲೈನ್) ಸಲ್ಲಿಸಿರಬಾರದು ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರಬಾರದು.
12. ಲೇಖನವು ನಮ್ಮನ್ನು ತಲುಪಿದ ತಕ್ಷಣ ಅದರ ಸ್ವೀಕೃತಿಯ ಬಗ್ಗೆ ನಿಮಗೆ ತಿಳಿಸುತ್ತೇವೆ. ಲೇಖನವನ್ನು ಸ್ವೀಕರಿಸಿದ 45 ದಿನಗಳೊಳಗೆ, ಅದು ಪ್ರಕಟಣೆಗೆ ಆಯ್ಕೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸುತ್ತೇವೆ. ಆಯ್ಕೆಯಾಗಿದ್ದರೆ, ಸಂಪಾದಕೀಯ ತಂಡದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ನಾವು ನಿಮಗೆ ಕಳುಹಿಸುತ್ತೇವೆ.
13. ಪತ್ರಿಕೆಯಲ್ಲಿ 2000, 1500 ಮತ್ತು 700 ಪದಗಳ ಲೇಖನಗಳಿರುತ್ತವೆ. ಬರೆಯುವ ಮೊದಲು, ನೀವು ಎಷ್ಟು ಪದಗಳ ಲೇಖನವನ್ನು ಬರೆಯಲು ಇಚ್ಛಿಸುತ್ತೀರಿ ಎಂಬುದನ್ನು ನಮ್ಮೊಂದಿಗೆ ಚರ್ಚಿಸಿ ಮತ್ತು ಲೇಖನವು ಪದ ಮಿತಿಯ ಒಳಗೇ ಇರುವುದನ್ನು ಖಚಿತಪಡಿಸಿ.
14. ಸಂಪಾದಕೀಯ ತಂಡವು ಲೇಖನವನ್ನು ಪರಿಷ್ಕರಿಸುವ ಹಕ್ಕನ್ನು ಹೊಂದಿದೆ. ಪರಿಷ್ಕರಿಸಿದ ಲೇಖನವನ್ನು ಪ್ರಕಟಣೆಗೆ ಮೊದಲು ನಿಮಗೆ ಕಳಿಸಲಾಗುವುದು.
15. 'ಪಾಠಶಾಲೆ' ಪತ್ರಿಕೆಯು ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತದೆ. ನೀವು ಈ ಯಾವುದೇ ಭಾಷೆಗಳಲ್ಲಿ ನಿಮ್ಮ ಲೇಖನವನ್ನು ಕಳುಹಿಸಬಹುದು.
16. ನೀವು ಯಾವುದೇ ಭಾಷೆಯಲ್ಲಿ ಲೇಖನವನ್ನು ಸಲ್ಲಿಸಿದರೂ, ಅದನ್ನು ಅನುವಾದಿಸಿ ಮೂರೂ ಭಾಷೆಗಳಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಇವರನ್ನು ಸಂರ್ಕಿಸಬಹುದು:

ಪ್ರತಿಭಾ (ಹಿಂದಿ): katiyar@azimpremjifoundation.org

ಶೆಫಾಲೀ (ಇಂಗ್ಲಿಷ್): shefali.mehta@apu.edu.in

ರಾಘವೇಂದ್ರ ಹೇರ್ಳೆ (ಕನ್ನಡ) : Raghavendra.herle@azimpremjifoundation.org

ಮುದ್ರಣ ಮತ್ತು ಪ್ರಕಟಣೆ: ರಿಷಿಕೇಶ್ ಬಿ.ಎಸ್., ಕುಲಸಚಿವರು, ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪರವಾಗಿ,

ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಪ್ರಕಟಣೆ: ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ, ಸರ್ವೇ ನಂ. 66, ಬೂರುಗುಂಟೆ ಗ್ರಾಮ, ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ, ಬೆಂಗಳೂರು, ಕರ್ನಾಟಕ 562 125.

ಪ್ರಧಾನ ಸಂಪಾದಕರು: ಪ್ರತಿಭಾ ಕಟಿಯಾರ್

Azim Premji University

# Anuvada Sampada

# ಅನುವಾದ ಸಂಪದ

## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಪನ್ಮೂಲಗಳ ಸಂಗ್ರಹ

ಇಂಗ್ಲಿಷ್‌ನಿಂದ ಕನ್ನಡ ಮತ್ತು ಹಿಂದಿ ಭಾಷೆಗಳಿಗೆ ಅನುವಾದಗೊಂಡಿರುವ 2000ಕ್ಕೂ ಹೆಚ್ಚು ಉನ್ನತ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಮುಕ್ತ ಮತ್ತು ವಿನೂತನವಾದ ಆನ್‌ಲೈನ್ ಸಂಪದ. ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಮಾನವಿಕ, ಶಿಕ್ಷಣ ಮತ್ತು ಭಾಷಾ ವಿಷಯಗಳ ಪರಿಕಲ್ಪನೆಗಳು ಮತ್ತು ಚಿಂತನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪಾಲಿನ ಕಣಜ.







ಕನ್ನಡ ಮತ್ತು ಹಿಂದಿಯಲ್ಲಿ ಉಚಿತವಾಗಿ ಹಾಗೂ ಮುಕ್ತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ವೆಬ್‌ಸೈಟ್.

- ಪುಸ್ತಕಗಳು ಮತ್ತು ಪುಸ್ತಕದ ಅಧ್ಯಾಯಗಳು
- ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು ಮತ್ತು ಲೇಖನಗಳು
- ಸಂಪಾದಿತ ವಾಚಿಕೆಗಳು ಮತ್ತು ವಿಚಾರಗೋಷ್ಠಿಗಳ ಬರಹಗಳು


**ಅನುವಾದ ಸಂಪದಕ್ಕೆ ಭೇಟಿ ಕೊಡಿ:**
**https://anuvadasampada.azimpremjiuniversity.edu.in/**


# ಅಜೀಮ್ ಪ್ರೇಮ್‌ಜಿ ಯೂನಿವರ್ಸಿಟಿ ಪತ್ರಿಕೆಗಳು














ನಮ್ಮ ಇತರ ಪ್ರಕಟಣೆಗಳ ಬಗ್ಗೆ
ಇನ್ನಷ್ಟು ತಿಳಿಯಲು,
publications@apu.edu.in ಗೆ
ಬರೆಯಿರಿ

**ಪಾಠಶಾಲಾ ಪತ್ರಿಕೆಗೆ ಉಚಿತವಾಗಿ ಚಂದಾದಾರರಾಗಲು ಇಲ್ಲಿ ಸ್ಕ್ಯಾನ್ ಮಾಡಿ!**

**ಅಜೀಮ್ ಪ್ರೇಮ್‌ಜಿ ಯೂನಿವರ್ಸಿಟಿ**
**ಬೆಂಗಳೂರು | ಭೋಪಾಲ್ | ರಾಂಚಿ**

**ವೆಬ್‌ಸೈಟ್:** azimpremjiuniversity.edu.in **ಫೇಸ್‌ಬುಕ್:** /azimpremjiuniversity
**ಯುಟ್ಯೂಬ್:** @azimpremjiuniversity **ಇನ್‌ಸ್ಟಾಗ್ರಾಮ್:** @azimpremjiuniv **X:** @azimpremjiuniv

**ವಿಳಾಸ:** ಸರ್ವೆ ನಂ. 66, ಬೂರುಗುಂಟೆ ಗ್ರಾಮ, ಬಿಕ್ಕನಹಳ್ಳಿ ಮುಖ್ಯ ರಸ್ತೆ, ಬೆಂಗಳೂರು – 562125